ಬುಧವಾರ, ಜೂನ್ 1, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮದ ಸೆಲ್ಫಿ

ಚೆನ್ನೈನಲ್ಲಿ ಮಂಗಳವಾರ ಲಿಂಗತ್ವ ಅಲ್ಪಸಂಖ್ಯಾತರ ಉಚಿತ ನೃತ್ಯ ಶಾಲೆಯ ಉದ್ಘಾಟನಾ ಸಮಾರಂಭದಲ್ಲಿ ಕಲಾವಿದೆಯರಿಬ್ಬರು ಸೆಲ್ಫಿ ತೆಗೆದುಕೊಂಡರು

ಪಿಯುಸಿ: ಮೌಲ್ಯಮಾಪಕರ ಭತ್ಯೆ ಶೇ 20ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ ಮತ್ತು ಉತ್ತರಪತ್ರಿಕೆ ಮೌಲ್ಯಮಾಪನ ಕಾರ್ಯದಲ್ಲಿ ಭಾಗಿಯಾದ ಸಿಬ್ಬಂದಿಗೆ ನೀಡಲಾಗುವ ಸಂಭಾವನೆ ಮತ್ತು ಭತ್ಯೆಯನ್ನು ಶೇ 20ರಷ್ಟು ಹೆಚ್ಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಪರಿಷ್ಕರಿಸಿದ ಭತ್ಯೆ ಮೂರು ವರ್ಷಗಳವರೆಗೆ ಜಾರಿಯಲ್ಲಿ ಇರಲಿದೆ.

ಉತ್ತರಪತ್ರಿಕೆಗಳ ಮೌಲ್ಯಮಾಪನ ಮಾಡುವ ಮುಖ್ಯ ಪರೀಕ್ಷಕರಿಗೆ ಇನ್ನು ಮುಂದೆ ದಿನವೊಂದಕ್ಕೆ ₹ 1,051 (ಈಗ ₹ 876), ಉಪ ಮುಖ್ಯ ಪರೀಕ್ಷಕರಿಗೆ ₹ 979 (ಈಗ ₹ 816) ಸಂಭಾವನೆ ಸಿಗಲಿದೆ. ಸಹಾಯಕ ಮೌಲ್ಯಮಾಪಕರ ಮೂರು ಗಂಟೆ ಅವಧಿಯ ಉತ್ತರ ಪತ್ರಿಕೆಯ ಮೌಲ್ಯಮಾಪನಕ್ಕೆ ₹ 36 (ಈಗ ₹ 30), ಬೆಂಗಳೂರು ನಗರವೂ ಸೇರಿದಂತೆ ಶಿಬಿರಾಧಿಕಾರಿಗಳಿಗೆ, ಶಿಬಿರ ಮೇಲ್ವಿಚಾರಕರು ಮತ್ತು ಮೌಲ್ಯಮಾಪಕರಿಗೆ ನೀಡಲಾಗುವ ಭತ್ಯೆಯನ್ನು ₹ 979 (ಈಗ ₹ 816) ಆಗಿ ಪರಿಷ್ಕರಿಸಲಾಗಿದೆ.

ಸ್ಥಳೀಯ ಮೌಲ್ಯಮಾಪಕರಿಗೆ ದಿನವೊಂದಕ್ಕೆ ನೀಡಲಾಗುವ ಸ್ಥಳೀಯ ಸಾರಿಗೆ ಭತ್ಯೆಯನ್ನು ಬೆಂಗಳೂರು ನಗರದಲ್ಲಿ ₹ 288 (ಈಗ ₹ 240), ಇತರ ಸ್ಥಳಗಳಲ್ಲಿ ₹ 194 (ಪ್ರಸ್ತುತ ₹ 162) ಆಗಿ ಹೆಚ್ಚಳ ಮಾಡಲಾಗಿದೆ. ಅದೇ ರೀತಿ, ಮೌಲ್ಯಮಾಪನ ಕೇಂದ್ರಗಳ ಮೇಲ್ವಿಚಾರಕರು ಮತ್ತು ಇತರ ಸಿಬ್ಬಂದಿಯ ಸಂಭಾವನೆಯನ್ನೂ ಪರಿಷ್ಕರಿಸಲಾಗಿದೆ.

ಮೌಲ್ಯಮಾಪನ ಕಾರ್ಯದ ವೇಳಾಪಟ್ಟಿ, ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ, ಮೌಲ್ಯಮಾಪಕರ ಸಂಖ್ಯೆ ಪರಿಗಣಿಸಿ, ಸಂಭಾವನೆ ಮತ್ತು ಭತ್ಯೆ ನೀಡುವ ಗರಿಷ್ಠ ಮಿತಿಯನ್ನು ಮೌಲ್ಯಮಾಪನ ಮುಗಿಯುವವರೆಗೆ ಅಥವಾ ಗರಿಷ್ಠ 20 ದಿನಗಳವರೆಗೆ ನೀಡುವಂತೆ ಆದೇಶದಲ್ಲಿ ವಿವರಿಸಲಾಗಿದೆ.

ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣ

ಡಿಕೆಶಿ ಸೇರಿ ಐವರಿಗೆ ಸಮನ್ಸ್ ಜಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಐವರು ಆರೋಪಿಗಳಿಗೆ ಇಲ್ಲಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು, ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಮಂಗಳವಾರ ಸಮನ್ಸ್ ಜಾರಿ ಮಾಡಿದೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ದಾಖಲಾಗಿರುವ ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್‌ನಲ್ಲಿ ಸೂಚಿಸಲಾಗಿದೆ.

ಜುಲೈ 1ರಂದು ವಿಚಾರಣೆ ನಿಗದಿಪಡಿಸಿರುವ ನ್ಯಾಯಾಧೀಶ ವಿಕಾಸ್ ಧುಲ್ ನೇತೃತ್ವದ ಏಕಸದಸ್ಯ ಪೀಠ, ಖುದ್ದಾಗಿ ವಿಚಾರಣೆಗೆ ಹಾಜರಾಗುವಂತೆ ಡಿ.ಕೆ. ಶಿವಕುಮಾರ್, ಪ್ರಕರಣದ ಇತರ ಆರೋಪಿಗಳಾದ ಸಚಿನ್ ನಾರಾಯಣ್, ಸುನೀಲ್ ಕುಮಾರ್ ಶರ್ಮಾ, ರಾಜೇಂದ್ರ ಹಾಗೂ ದೆಹಲಿ ಕರ್ನಾಟಕ ಭವನದ ನೌಕರ ಆಂಜನೇಯ ಹನುಮಂತಯ್ಯ ಅವರಿಗೆ ತಿಳಿಸಿದೆ.

ಹಣ ಅಕ್ರಮ ವರ್ಗಾವಣೆ ಆರೋಪದಲ್ಲಿ 2019ರ ಸೆಪ್ಟೆಂಬರ್‌ನಲ್ಲಿ ಬಂಧನಕ್ಕೆ ಒಳಗಾಗಿ ಜಾಮೀನು ಪಡೆದಿರುವ ಶಿವಕುಮಾರ್ ವಿರುದ್ಧ ಕಳೆದ ವಾರ ಇ.ಡಿ. ಅಧಿಕಾರಿಗಳು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಕಳೆದ ಶುಕ್ರವಾರ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡಿದ್ದ ಪೀಠವು, ಆರ್ಥಿಕ ಅಪರಾಧದ ಪಿತೂರಿಯಲ್ಲಿ ಭಾಗಿಯಾಗಿರುವ ಆರೋಪದಲ್ಲಿ ಐಪಿಸಿ ಸೆಕ್ಷನ್ 120 'ಬಿ' ಅಡಿ ದಾಖಲಿಸಿರುವ ಪ್ರತ್ಯೇಕ ಪ್ರಕರಣವು ಈ ನ್ಯಾಯಾಲಯದ ವ್ಯಾಪ್ತಿಗೆ ಬರಲಿದೆಯೇ ಎಂಬ ಕುರಿತು ಪರಿಶೀಲಿಸುವುದಾಗಿ ತಿಳಿಸಿ, ವಿಚಾರಣೆಯನ್ನು ಮಂಗಳವಾರಕ್ಕೆ ನಿಗದಿಪಡಿಸಿತ್ತು.

ದೆಹಲಿಯ ಸಫ್ದರ್‌ಜಂಗ್ ಎನ್‌ಕ್ಲೇವ್‌ನಲ್ಲಿರುವ ಶಿವಕುಮಾರ್ ಒಡೆತನದ ನಿವಾಸದಲ್ಲಿ ₹ 8.59 ಕೋಟಿ ನಗದು ದೊರೆತಿದ್ದರಿಂದ, ಐಪಿಸಿಯ ಸೆಕ್ಷನ್ 120 'ಬಿ' ಅಡಿ ಪ್ರಕರಣ ದಾಖಲಿಸಲಾಗಿದೆ ಎಂದೂ ಇ.ಡಿ. ಪರ ವಕೀಲರು ನ್ಯಾಯಪೀಠಕ್ಕೆ ವಿವರಿಸಿದ್ದರು.

ಅಧಿಕಾರ ಸ್ವೀಕರಿಸಿದ ವಂದಿತಾ ಶರ್ಮ

ಬೆಂಗಳೂರು: ರಾಜ್ಯ ಸರ್ಕಾರದ ನೂತನ ಮುಖ್ಯ ಕಾರ್ಯದರ್ಶಿಯಾಗಿ ರಾಜ್ಯದ ಹಿರಿಯ ಐಎಎಸ್ ಅಧಿಕಾರಿ ವಂದಿತಾ ಶರ್ಮ ಮಂಗಳ ವಾರ ಅಧಿಕಾರ ಸ್ವೀಕರಿಸಿದರು. ಇವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹುದ್ದೆಗೇರಿರುವ ನಾಲ್ಕನೇ ಮಹಿಳೆ.

1986ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ವಂದಿತಾ, ರಾಜ್ಯ ಸರ್ಕಾರದ 39ನೇ ಮುಖ್ಯ ಕಾರ್ಯದರ್ಶಿಯಾಗಿದ್ದಾರೆ. 2023ರ ನವೆಂಬರ್ 30ರವರೆಗೂ ಅವರ ಅಧಿಕಾರದ ಅವಧಿ ಇದೆ.

2000ನೇ ಇಸವಿಯಲ್ಲಿ ತೆರೇಸಾ ಭಟ್ಟಾಚಾರ್ಯ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದರು. 2006ರಲ್ಲಿ ಮಾಲತಿ ದಾಸ್ ಮತ್ತು 2017ರಲ್ಲಿ ಕೆ. ರತ್ನಪ್ರಭಾ ಮುಖ್ಯ ಕಾರ್ಯದರ್ಶಿಯಾಗಿದ್ದರು. ರತ್ನಪ್ರಭಾ ಅವರ ಅವಧಿಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕರ (ನೀಲಮಣಿ ಎನ್. ರಾಜು) ಹುದ್ದೆಗಳಲ್ಲಿ ಮಹಿಳೆಯರೇ ಇದ್ದರು.

ಈಗ ಸಿಎಸ್, ವಿಧಾನಸಭೆಯ ಕಾರ್ಯದರ್ಶಿ, ವಿಧಾನ ಪರಿಷತ್‌ನ ಕಾರ್ಯದರ್ಶಿ ಮೂವರೂ ಮಹಿಳೆಯರೇ ಆಗಿರುವುದು ವಿಶೇಷ.

ಮಾರ್ಚ್ ತ್ರೈಮಾಸಿಕ: ಕೋವಿಡ್ ಪರಿಣಾಮ

ಶೇ 4.1ರಷ್ಟು ಆರ್ಥಿಕ ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಅರ್ಥ ವ್ಯವಸ್ಥೆಯು ಜನವರಿ–ಮಾರ್ಚ್ ಅವಧಿಯಲ್ಲಿ ಶೇಕಡ 4.1ರಷ್ಟು ಬೆಳವಣಿಗೆ ಕಂಡಿದೆ. ಇದರಿಂದಾಗಿ 2021–22ನೆಯ ಆರ್ಥಿಕ ವರ್ಷದಲ್ಲಿ ಆರ್ಥಿಕ ಬೆಳವಣಿಗೆ ದರವು ಶೇ 8.7ರಷ್ಟು ಆದಂತಾಗಿದೆ.

ಮಾರ್ಚ್ ತ್ರೈಮಾಸಿಕದಲ್ಲಿನ ಜಿಡಿಪಿ ಬೆಳವಣಿಗೆಯು ಕಡಿಮೆ ಆಗಲು ಕೋವಿಡ್‌ನ ಮೂರನೆಯ ಅಲೆ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯೂ ಕಾರಣ ಎಂದು ತಜ್ಞರು ಹೇಳಿದ್ದಾರೆ. ಮಾರ್ಚ್ ತ್ರೈಮಾಸಿಕದಲ್ಲಿ ಚೀನಾದ ಅರ್ಥ ವ್ಯವಸ್ಥೆಯು ಶೇ 4.8ರಷ್ಟು ಬೆಳವಣಿಗೆ ಕಂಡಿದೆ.

2021–22ರಲ್ಲಿ ವಿಶ್ವದ ದೊಡ್ಡ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆಯನ್ನು ಭಾರತ ಕಂಡಿದೆ. ತಯಾರಿಕೆ, ಗಣಿಗಾರಿಕೆ ಮತ್ತು ನಿರ್ಮಾಣ ವಲಯಗಳಲ್ಲಿ ಉತ್ತಮ ಬೆಳವಣಿಗೆ ದಾಖಲಾಗಿದೆ.

ಕೋವಿಡ್ ಸಾಂಕ್ರಾಮಿಕವು ಆರ್ಥಿಕ ಚಟುವಟಿಕೆಗಳ ಮೇಲೆ ಭಾರಿ ಏಟು ನೀಡಿದ್ದ ಕಾರಣ, 2020–21ರಲ್ಲಿ ಅರ್ಥ ವ್ಯವಸ್ಥೆಯು ಶೇ (–) 6.6ರಷ್ಟು ಕುಸಿತ ಕಂಡಿತ್ತು.

ಜನವರಿ–ಮಾರ್ಚ್ ಅವಧಿಯ ಶೇ 4.1ರ ಬೆಳವಣಿಗೆಯು 2021–22ರ ಅತಿ ಕಡಿಮೆ ತ್ರೈಮಾಸಿಕ ಬೆಳವಣಿಗೆ ದರ. ಹಿಂದಿನ ವರ್ಷದ ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಅರ್ಥ ವ್ಯವಸ್ಥೆಯು ಶೇ 2.5ರಷ್ಟು ಬೆಳವಣಿಗೆ ಸಾಧಿಸಿತ್ತು.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು, 2021–22ರಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರ ಶೇ 8.9ರಷ್ಟು ಇರಲಿದೆ ಎಂದು ಫೆಬ್ರುವರಿಯಲ್ಲಿ ಅಂದಾಜು ಮಾಡಿತ್ತು. ಆದರೆ, ಅದು ಶೇ 8.7ರಷ್ಟು ಆಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ (2022–23) ಆರ್ಥಿಕ ಬೆಳವಣಿಗೆ ದರವು ಶೇ 8ರಿಂದ ಶೇ 8.5ರ ಮಟ್ಟದಲ್ಲಿ ಇರಲಿದೆ ಎಂದು ಆರ್ಥಿಕ ಸಮೀಕ್ಷೆ ವರದಿಯಲ್ಲಿ ಅಂದಾಜು ಮಾಡಲಾಗಿದೆ.

2021–22ರಲ್ಲಿ ತಯಾರಿಕಾ ವಲಯದಲ್ಲಿ ಶೇ 9.9ರಷ್ಟು ಬೆಳವಣಿಗೆ ಆಗಿದೆ, ಗಣಿಗಾರಿಕೆ ಮತ್ತು ನಿರ್ಮಾಣ ವಲಯಗಳಲ್ಲಿ ಶೇ 11.5ರಷ್ಟು ಬೆಳವಣಿಗೆ ಆಗಿದೆ.

2020–21ರಲ್ಲಿ ಕುಸಿತ ದಾಖಲಾಗಿತ್ತು. 2021–22ರಲ್ಲಿ ಕೃಷಿ ಚಟುವಟಿಕೆಗಳ ಬೆಳವಣಿಗೆ ಪ್ರಮಾಣವು ಶೇ 3ಕ್ಕೆ ಕುಸಿದಿದೆ (ಹಿಂದಿನ ವರ್ಷದಲ್ಲಿ ಇದು ಶೇ 3.3ರಷ್ಟಿತ್ತು).

ಅಂಕಿ-ಅಂಶಗಳು

₹147.36 ಲಕ್ಷ ಕೋಟಿ
2021–22ರಲ್ಲಿ ದೇಶದಲ್ಲಿನ ಜಿಡಿಪಿ ಮೊತ್ತ

₹135.58 ಲಕ್ಷ ಕೋಟಿ
2020–21ರಲ್ಲಿ ದೇಶದ ಜಿಡಿಪಿ ಮೊತ್ತ

2021–22ನೆಯ ಸಾಲಿನ ತ್ರೈಮಾಸಿಕ ಬೆಳವಣಿಗೆ ದರ



ಮಾಹಿತಿ: ರಾಷ್ಟ್ರೀಯ ಸಾಂಖ್ಯಿಕ ಕಚೇರಿ

ಮತ್ತೊಂದು ಸುದ್ದಿ | 4

ನಿರ್ಮಲಾ ಆಸ್ತಿ ₹2.50 ಕೋಟಿ, ಕುಪೇಂದ್ರ ₹817 ಕೋಟಿ ಒಡೆಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆ ಚುನಾವಣೆಗೆ ಮಂಗಳವಾರ ನಾಮಪತ್ರ ಸಲ್ಲಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ₹2.50 ಕೋಟಿ ಆಸ್ತಿ ಹೊಂದಿದ್ದರೆ, ಜೆಡಿಎಸ್‌ನಿಂದ ನಾಮಪತ್ರ ಸಲ್ಲಿಸಿರುವ ಡಿ.ಕುಪೇಂದ್ರ ರೆಡ್ಡಿ ₹817 ಕೋಟಿ ಆಸ್ತಿ ಹೊಂದಿದ್ದಾರೆ.

2016ರಲ್ಲಿ ನಾಮಪತ್ರ ಸಲ್ಲಿಸುವಾಗ ನಿರ್ಮಲಾ ಅವರ ಆಸ್ತಿ ₹1.35 ಕೋಟಿ ಇತ್ತು. ನಿರ್ಮಲಾ ಬಳಿ 2001 ರ ಮಾಡೆಲ್ ಬಜಾಜ್ ಚೇತಕ್ ಸ್ಕೂಟರ್ ಇದೆ. ಸ್ವಂತಕ್ಕೆ ಕಾರು ಇಲ್ಲ. 315 ಗ್ರಾಂ ಚಿನ್ನ, 2 ಕೆ.ಜಿ. ಬೆಳ್ಳಿ ಹೊಂದಿದ್ದಾರೆ. ಆಂಧ್ರದ ರಂಗಾರೆಡ್ಡಿ ಜಿಲ್ಲೆಯ ಕುಂಟಲೂರಿನಲ್ಲಿ 4,806 ಚದರಡಿ ಕೃಷಿಯೇತರ ಜಮೀನು ಹೊಂದಿರುವುದಾಗಿ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಕುಪೇಂದ್ರ ರೆಡ್ಡಿ ಅವರ ಆಸ್ತಿ ಕಳೆದ ಎಂಟು ವರ್ಷಗಳಲ್ಲಿ ಶೇ 76ರಷ್ಟು ಹೆಚ್ಚಳವಾಗಿದೆ. ಹಿಂದೆ ₹462 ಕೋಟಿ ಇತ್ತು. ಈಗ ₹817 ಕೋಟಿಗೆ ಏರಿಕೆಯಾಗಿದೆ. ರೆಡ್ಡಿ ಕುಟುಂಬ ₹417 ಕೋಟಿ ಚರಾಸ್ತಿ, ₹399 ಕೋಟಿ ಸ್ಥಿರಾಸ್ತಿಯನ್ನು ಹೊಂದಿದೆ. ಮೂಲಸೌಕರ್ಯ ಅಭಿವೃದ್ಧಿಗಾರ ಎಂದು ಹೇಳಿಕೊಂಡಿದ್ದಾರೆ. ಈ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪೈಕಿ ಕುಪೇಂದ್ರ ರೆಡ್ಡಿ ಅತಿ ಹೆಚ್ಚು ಶ್ರೀಮಂತ ಅಭ್ಯರ್ಥಿ.

ಡಿ.ಕುಪೇಂದ್ರ ರೆಡ್ಡಿ	
ಚರಾಸ್ತಿ	₹417 ಕೋಟಿ
ಸ್ಥಿರಾಸ್ತಿ	₹399 ಕೋಟಿ
ಸಾಲ	₹109 ಕೋಟಿ
ನಿರ್ಮಲಾ ಸೀತಾರಾಮನ್	
ಚರಾಸ್ತಿ	₹63.39 ಲಕ್ಷ
ಸ್ಥಿರಾಸ್ತಿ	₹1.87 ಕೋಟಿ
ಸಾಲ	₹30.44 ಲಕ್ಷ
ಲಹರ್ ಸಿಂಗ್ ಸಿರೋಯಾ	
ಚರಾಸ್ತಿ	₹24.30 ಕೋಟಿ
ಸ್ಥಿರಾಸ್ತಿ	₹30.34 ಕೋಟಿ
ಸಾಲ	₹93 ಲಕ್ಷ
ಜಗ್ಗೇಶ್	
ಚರಾಸ್ತಿ	₹5.06 ಕೋಟಿ
ಸ್ಥಿರಾಸ್ತಿ	₹17.75 ಕೋಟಿ
ಸಾಲ	₹2.95 ಕೋಟಿ

ರಾಜ್ಯ ಚಿಂತನ ಶಿಬಿರಕ್ಕೆ 'ಕೈ' ಸಿದ್ಧತೆ

ಬೆಂಗಳೂರು: 'ರಾಜಸ್ಥಾನದ ಉದಯಪುರದಲ್ಲಿ ನಡೆದ ಚಿಂತನ ಶಿಬಿರದ ನಿರ್ಣಯಗಳ ಜಾರಿ ಹಾಗೂ ಗುರುವಾರದಿಂದ (ಜೂನ್ 2) ಎರಡು ದಿನ ನಗರದಲ್ಲಿ ನಡೆಯಲಿರುವ ಪಕ್ಷದ 'ರಾಜ್ಯ ಚಿಂತನ ಶಿಬಿರ'ದ ಹಿನ್ನೆಲೆಯಲ್ಲಿ ರಚಿಸಲಾಗಿರುವ ಸಮಿತಿಗಳ ಪದಾಧಿಕಾರಿಗಳ ಜತೆ ರಾಜ್ಯ 'ಕೈ' ನಾಯಕರು ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಚರ್ಚೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ರಾಷ್ಟ್ರೀಯ ಶಿಕ್ಷಣ ನೀತಿಯೂ ಸೇರಿದಂತೆ ಹಲವು ವಿಚಾರಗಳನ್ನು ಆರೆಸ್ಸೆಸ್ ಅಣತಿಯಂತೆ ಬಿಜೆಪಿ ಸರ್ಕಾರ ಜಾರಿಗೆ ತರುತ್ತಿದೆ. ರಹಸ್ಯ ಕಾರ್ಯಸೂಚಿಯ ಜಾರಿಗೆ ಮುಂದಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಮಾತನಾಡಿ, 'ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಅಧ್ಯಕ್ಷರನ್ನು ವಜಾ ಮಾಡಬೇಕು. ಪರಿಣಿತರಿಂದ ಪಠ್ಯಗಳನ್ನು ಪರಿಷ್ಕರಿಸಬೇಕು' ಎಂದು ಆಗ್ರಹಿಸಿದರು.

'ವೀರಶೈವ ನಿರ್ಧಾರದಿಂದ ಲಿಂಗಾಯತ ಪ್ರತ್ಯೇಕ ಧರ್ಮ ಆಗಲಿಲ್ಲ' ಎಂಬ ತೋಂಟದಾರ್ಯ ಶ್ರೀಗಳ ಹೇಳಿಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, 'ಈ ವಿಚಾರದಲ್ಲಿ ಮಾತನಾಡಬಾರದು ಎಂದು ನಿರ್ಧರಿಸಿದ್ದೇನೆ. ಈ ಕಡೆ ಸ್ವಾಮೀಜಿ, ಆ ಕಡೆ ಸ್ವಾಮೀಜಿಗಳಿದ್ದಾರೆ. ಅವರು ನಿರ್ಧರಿಸುತ್ತಾರೆ' ಎಂದರು.

ಪಠ್ಯಪುಸ್ತಕ ಪರಿಷ್ಕರಣೆಗೆ ಆಕ್ಷೇಪ ವ್ಯಕ್ತಪಡಿಸಿ ಸಾಣೇಹಳ್ಳಿ ಶ್ರೀಗಳು ಮುಖ್ಯಮಂತ್ರಿಗೆ ಬರೆದ ಪತ್ರಕ್ಕೆ ಪ್ರತಿಕ್ರಿಯಿಸಿದ ಎಚ್‌.ಸಿ. ಮಹದೇವಪ್ಪ, 'ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ನೈತಿಕತೆ ಕೆದಕುವ ಪ್ರಯತ್ನ ನಡೆಯುತ್ತಿದೆ' ಎಂದರು.

' ಇತಿಹಾಸ ತಿರುಚುವ ಕೆಲಸದಿಂದ ಹಿಂದೆಸರಿಯದಿದ್ದರೆ ದೊಡ್ಡಮಟ್ಟದ ಬೆಲೆ ತೆರಬೇಕಾಗುತ್ತದೆ' ಎಂದು ಈಶ್ವರ ಖಂಡ್ರೆ ಎಚ್ಚರಿಸಿದರು. ಡಿ. ಕೆ ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಸಲೀಂ ಅಹ್ಮದ್, ಜಿ. ಪರಮೇಶ್ವರ, ವೀರಪ್ಪ ಮೊಯಿಲಿ, ಕೆ. ರೆಹಮಾನ್ ಖಾನ್, ಆರ್.ವಿ. ದೇಶಪಾಂಡೆ ಸಭೆಯಲ್ಲಿದ್ದರು.

ಸುವರ್ಣ ಸೌಧ ಮೆಟ್ಟಿಲಲ್ಲಿ ಶಾವಿಗೆ

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನಸೌಧದ ಮೆಟ್ಟಿಲುಗಳನ್ನು ಶಾವಿಗೆ ಒಣಗಿಸಲು ಮಹಿಳಾ ಕಾರ್ಮಿಕರೊಬ್ಬರು ಬಳಸಿದ್ದು, ಆ ದೃಶ್ಯದ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಮಂಗಳವಾರ ವೈರಲ್ ಆಗಿವೆ.

ಬಿಜೆಪಿಗೆ ₹477.5 ಕೋಟಿ ದೇಣಿಗೆ

ನವದೆಹಲಿ (ಪಿಟಿಐ): 2020–21ನೇ ಹಣಕಾಸು ವರ್ಷದಲ್ಲಿ ಬಿಜೆಪಿಗೆ ₹477.5 ಕೋಟಿಗೂ ಅಧಿಕ ಹಣ ದೇಣಿಗೆಯಾಗಿ ಬಂದಿದೆ. ಇದೇ ಅವಧಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ₹74.50 ಕೋಟಿ ದೇಣಿಗೆ ಬಂದಿದೆ.

ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಪಕ್ಷಗಳ ದೇಣಿಗೆ ವರದಿಯ ಪ್ರಕಾರ, ಬಿಜೆಪಿಗೆ ವಿವಿಧ ಸಂಸ್ಥೆಗಳು, ಟ್ರಸ್ಟ್‌ಗಳು, ವ್ಯಕ್ತಿಗಳಿಂದ ದೊರೆತಿರುವ ಒಟ್ಟು ದೇಣಿಗೆ ₹4,77,54,50,077 ಆಗಿದೆ. ಬಿಜೆಪಿಯು ಮಾರ್ಚ್ 14ರಂದು ಚುನಾವಣಾ ಸಮಿತಿಗೆ 2020–21ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿ ದೇಣಿಗೆ ಸ್ವೀಕೃತಿ ವರದಿ ಸಲ್ಲಿಸಿದೆ.

ಕಾಂಗ್ರೆಸ್ ಪಕ್ಷದ ವರದಿ ಪ್ರಕಾರ, ಪಕ್ಷಕ್ಕೆ ವಿವಿಧ ಸಂಸ್ಥೆಗಳು, ವ್ಯಕ್ತಿಗಳಿಂದ ₹ 74,50,49,731 ದೇಣಿಗೆ ಬಂದಿದೆ. ಚುನಾವಣಾ ಕಾಯ್ದೆ ಪ್ರಕಾರ ₹20,000 ಮೀರಿ ದೇಣಿಗೆ ಪಡೆದಲ್ಲಿ ಆ ಕುರಿತು ಪಕ್ಷಗಳು ವರದಿ ಸಲ್ಲಿಸಬೇಕಾಗಿದೆ.

ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಜತೆ ಎಚ್‌.ಡಿ. ದೇವೇಗೌಡ ಮಾತುಕತೆ

ಕಾಂಗ್ರೆಸ್ ಬೆಂಬಲ ಯಾಚಿಸಿದ ಜೆಡಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗತ್ಯ ಸಂಖ್ಯೆಯ ಮತಗಳ ಕೊರತೆಯ ನಡುವೆಯೂ ರಾಜ್ಯಸಭೆ ಚುನಾವಣೆಗೆ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವ ಜೆಡಿಎಸ್, ಕಾಂಗ್ರೆಸ್ ಬಳಿ ಬೆಂಬಲ ಯಾಚಿಸಿದೆ.

ಪಕ್ಷದ ಅಭ್ಯರ್ಥಿಯಾಗಿರುವ ರಾಜ್ಯಸಭೆಯ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ ಅವರಿಗೆ ಕಾಂಗ್ರೆಸ್ ಬಳಿ ಇರುವ ಹೆಚ್ಚುವರಿ ಮತಗಳನ್ನು ನೀಡುವಂತೆ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಅವರು ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಮನವಿ ಮಾಡಿದ್ದಾರೆ.

ಕುಪೇಂದ್ರ ರೆಡ್ಡಿ ಅವರ ನಾಮಪತ್ರ ಸಲ್ಲಿಕೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಮತ್ತು ಶಾಸಕ ಎಚ್‌.ಡಿ. ರೇವಣ್ಣ, 'ಸೋನಿಯಾ ಗಾಂಧಿ ಮತ್ತು ಇತರ ಹಿರಿಯ ಕಾಂಗ್ರೆಸ್ ನಾಯಕರಿಂದ ಬೆಂಬಲದ ಭರವಸೆ ಬಂದ ಬಳಿಕವೇ ನಮ್ಮ ಪಕ್ಷ ಅಭ್ಯರ್ಥಿಯನ್ನು ಅಂತಿಮಗೊಳಿಸಿದೆ' ಎಂದರು.

ಎರಡನೇ ಅಭ್ಯರ್ಥಿಯ ಗೆಲುವಿಗೆ ಮತಗಳ ಕೊರತೆ ಇದ್ದರೂ ಮನ್ಸೂರ್ ಅಲಿ ಖಾನ್ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಜಾತ್ಯತೀತ ಸಿದ್ಧಾಂತಕ್ಕೆ ಬದ್ಧವಾಗಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಬೆಂಬಲ ನೀಡಲೇಬೇಕಾದ ಇಕ್ಕಟ್ಟಿಗೆ ಜೆಡಿಎಸ್ ಪಕ್ಷವನ್ನು ಸಿಲುಕಿಸಲು ಕಾಂಗ್ರೆಸ್ ಈ ತಂತ್ರ ಹೆಣೆದಿದೆ ಎಂಬ ಚರ್ಚೆ ನಡೆಯುತ್ತಿದೆ. ಆ ಬಳಿಕವೂ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವ ಜೆಡಿಎಸ್, ಕಾಂಗ್ರೆಸ್ ಪಕ್ಷದ ಬೆಂಬಲವನ್ನು ಎದುರು ನೋಡುತ್ತಿದೆ.

'ಕೋಮುವಾದಿ ಪಕ್ಷವನ್ನು ಸೋಲಿಸಬೇಕೆಂಬ ಮಾತಿಗೆ ಕಾಂಗ್ರೆಸ್ ಪಕ್ಷ ಬದ್ಧವಾಗಿದ್ದರೆ ಕುಪೇಂದ್ರ ರೆಡ್ಡಿ ಅವರಿಗೆ ಬೆಂಬಲ ನೀಡಲಿ' ಎಂದು ರೇವಣ್ಣ ಸವಾಲು ಹಾಕಿದರು.

ದೇವೇಗೌಡರು ಸೋನಿಯಾ ಗಾಂಧಿ ಜತೆ ಮಾತನಾಡಿ, ಬೆಂಬಲ ಕೋರಿದ್ದಾರೆ. ಎಚ್‌.ಡಿ. ಕುಮಾರಸ್ವಾಮಿ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಜತೆ ಚರ್ಚಿಸಿದ್ದಾರೆ. ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಶಾಸಕ ಆರ್‌.ವಿ. ದೇಶಪಾಂಡೆ ಸೇರಿದಂತೆ ಹಲವು ಮುಖಂಡರ ಜತೆ ಜೆಡಿಎಸ್ ಪ್ರಮುಖರು ಮಾತುಕತೆ ನಡೆಸಿದ್ದಾರೆ. ಸಂಪೂರ್ಣ ಭರವಸೆ ಸಿಕ್ಕ ಬಳಿಕವೇ ಕುಪೇಂದ್ರ ರೆಡ್ಡಿ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಲಾಗಿದೆ ಎಂದರು.

ಕುಪೇಂದ್ರ ರೆಡ್ಡಿ ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆಮಾಡುವ ವಿಚಾರದಲ್ಲಿ ದೇವೇಗೌಡ ಮತ್ತು ಕುಮಾರಸ್ವಾಮಿ ನಡುವೆ ಸಹಮತ ಇರಲಿಲ್ಲ ಎಂಬ ಮಾತು ಪಕ್ಷದೊಳಗೆ ಕೇಳಿಬರುತ್ತಿದೆ. ಆದರೆ, ಅದನ್ನು ನಿರಾಕರಿಸಿದ ಇಬ್ರಾಹಿಂ, 'ಒಮ್ಮತದಿಂದಲೇ ಅಭ್ಯರ್ಥಿಯ ಆಯ್ಕೆ ನಡೆದಿದೆ' ಎಂದರು.

'ಸೋಲಿಸುವುದಕ್ಕಾಗಿಯೇ ಮುಸ್ಲಿಂ ಅಭ್ಯರ್ಥಿ'

ಬೆಂಗಳೂರು: 'ಮುಸ್ಲಿಂ ರಾಜಕೀಯ ನಾಯಕರ ಮೂಲೋತ್ಪಾಟನೆಯ ಕೆಲಸ ಮಾಡುತ್ತಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭೆ ಚುನಾವಣೆಯಲ್ಲಿ ಸೋಲಿಸುವುದಕ್ಕಾಗಿಯೇ ಮನ್ಸೂರ್ ಅಲಿ ಖಾನ್ ಅವರನ್ನು ಕಾಂಗ್ರೆಸ್ ಅಭ್ಯರ್ಥಿ ಮಾಡಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಮಂಗಳವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಇಕ್ಬಾಲ್ ಅಹಮ್ಮದ್ ಸರಡಗಿ, ಜಾಫರ್ ಷರೀಫ್ ಅವರ ಮೊಮ್ಮಗ ರೆಹಮಾನ್ ಷರೀಫ್ ಅವರನ್ನು ಸೋಲಿಸಿದ್ದು ಆಯಿತು. ರೋಷನ್ ಬೇಗ್ ಕತೆಯನ್ನು ಮುಗಿಸಿದಿರಿ. ತನ್ವೀರ್ ಸೇಠ್ ಕೂಡ ನಿಮ್ಮ ಪಟ್ಟಿಯಲ್ಲಿದ್ದಾರೆ. ಸತ್ಯ ಹೇಳಿದ ಸಲೀಂ ಅವರ ಬಾಯಿ ಮುಚ್ಚಿಸಲಾಗಿದೆ' ಎಂದು ಟೀಕಿಸಿದ್ದಾರೆ.

'ಅಲ್ಪಸಂಖ್ಯಾತರ ಬಗ್ಗೆ ಕಾಳಜಿ ಇದ್ದಿದ್ದರೆ ಮನ್ಸೂರ್ ಅವರನ್ನೇ ಮೊದಲ ಅಭ್ಯರ್ಥಿಯನ್ನಾಗಿ ಮಾಡಬೇಕಿತ್ತು. ಸೋಲು ಖಚಿತ ಎಂದು ಗೊತ್ತಿದ್ದರೂ ಮನ್ಸೂರ್ ಅವರನ್ನು 'ಬಲಿಪೀಠ'ದ ಮುಂದೆ ನಿಲ್ಲಿಸಲಾಗಿದೆ. ಜೈರಾಂ ರಮೇಶ್ ಹೆಚ್ಚೋ, ಮನ್ಸೂರ್ ಅಲಿ ಖಾನ್ ಹೆಚ್ಚೋ ಅಥವಾ ಬಿಜೆಪಿಯ ಮೂರನೇ ಅಭ್ಯರ್ಥಿ ಹೆಚ್ಚೋ' ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

'ಆಪರೇಷನ್ ಕಮಲ'ದ ಮೂಲಕ ಬಿಜೆಪಿ ಸರ್ಕಾರ ಬರಲು ನೆರವಾದ ಸಿದ್ದರಾಮಯ್ಯ ಈಗಲೂ 'ಬಿಜೆಪಿ ಬಿ ತಂಡ'ದ 'ಕ್ಯಾಪ್ಟನ್' ಎಂದು ಟೀಕಿಸಿದ್ದಾರೆ.

ನಾಡಗೀತೆಗೆ ಅವಮಾನ: ಶಿಕ್ಷೆಗೆ ಆಗ್ರಹ

ಬೆಂಗಳೂರು: 'ನಾಡಗೀತೆ ಹಾಗೂ ಕವಿ ಕುವೆಂಪು ಅವರಿಗೆ ಅವಮಾನ ಮಾಡಿದವರನ್ನು ಕೂಡಲೇ ಪಕ್ಷಾತೀತವಾಗಿ ಗುರುತಿಸಿ, ತಕ್ಕ ಶಿಕ್ಷೆಗೆ ಗುರಿಪಡಿಸಬೇಕು' ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತು ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಆಗ್ರಹಿಸಿದ್ದಾರೆ.

'ಕನ್ನಡದ ಅಸ್ಮಿತೆಯ ನಾಡಗೀತೆ ಪದೇ ಪದೇ ವಿವಾದಕ್ಕೆ ಈಡಾಗುತ್ತಿರುವುದು ಈ ನಾಡಿನ ದುರಂತವೇ ಸರಿ. ಸಾರ್ವಕಾಲಿಕ ಶ್ರೇಷ್ಠ ಕವಿ, ದಾರ್ಶನಿಕ, ವಿಶ್ವಮಾನವ ಕುವೆಂಪು ಅವರಿಗೆ ಮಾಡುತ್ತಿರುವ ಮಹಾ ಅವಮಾನ. ನಾಡಗೀತೆ ಘೋಷಣೆಯಾಗಿ ಸುಮಾರು 20 ವರ್ಷಗಳು ಸಮೀಪಿಸುತ್ತಿರುವಾಗ ಈ ಗೊಂದಲ ಬೇಕೆ? ಆಳುವ ಸರ್ಕಾರಗಳ ಇಚ್ಛಾಶಕ್ತಿ ಕೊರತೆಯೆ ಇದಕ್ಕೆ ಕಾರಣ' ಎಂದು ತಿಳಿಸಿದ್ದಾರೆ.

'ನಾಡಗೀತೆ ಧಾಟಿ ಬಗ್ಗೆ ಅಧಿಕೃತವಾಗಿ ಇನ್ನೂ ಆದೇಶ ಹೊರಬಂದಿಲ್ಲ. ನಾಡಗೀತೆಗೆ ಅಗೌರವ ತೋರುತ್ತಿರುವವರನ್ನು ಶಿಕ್ಷೆಗೆ ಒಳಪಡಿಸಬೇಕು. ಕನ್ನಡದ ಅಸ್ಮಿತೆಯ ಘನತೆಯನ್ನು ಉಳಿಸಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಠ್ಯಪುಸ್ತಕ ಕೇಸರೀಕರಣ ಮತ್ತು ಶಿಕ್ಷಣದ ಕೋಮುವಾದೀಕರಣ ವಿರೋಧಿಸಿ ಪ್ರತಿಭಟನೆ

'ಪಠ್ಯಪುಸ್ತಕ ಸಮಿತಿ: ಬೌದ್ಧಿಕತೆಯ ಪಳೆಯುಳಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಠ್ಯಪುಸ್ತಕ ಮರು ಪರಿಷ್ಕರಣೆ ಸಮಿತಿಯಲ್ಲಿ ಇರುವ ಸದಸ್ಯರು ಬೌದ್ಧಿಕತೆಯ ಪಳೆಯುಳಿಕೆಗಳು. ಅವರ ಮನಸುಗಳು ಸಾವಿರ ವರ್ಷ ಹಳೆಯವು' ಎಂದು ಸಾಹಿತಿ ಜಿ.ರಾಮಕೃಷ್ಣ ಲೇವಡಿ ಮಾಡಿದರು.

ಪಠ್ಯಪುಸ್ತಕ ಕೇಸರೀಕರಣ ಮತ್ತು ಶಿಕ್ಷಣದ ಕೋಮುವಾದೀಕರಣ ವಿರೋಧಿಸಿ ಬೆಂಗಳೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟ, ವಿದ್ಯಾರ್ಥಿ ಸಂಘಟನೆಗಳ ಜಂಟಿ ವೇದಿಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸಿದ ಧರಣಿ ಉದ್ಘಾಟಿಸಿ ಅವರು ಮಾತನಾಡಿದರು.

'ಸಮಿತಿಯಲ್ಲಿ ಇರುವವರು ಯುವಕರಾಗಿದ್ದರೂ, ಅವರ ಮನಸುಗಳು ಸಾವಿರ ವರ್ಷ ಹಳೆಯದಾಗಿವೆ. ಯಜ್ಞದ ಬಗ್ಗೆ ಪಾಠವನ್ನು ಪುಸ್ತಕದಲ್ಲಿ ಸೇರಿಸಿದ್ದಾರೆ ಎಂದರೆ ಅವರ ಮನಸ್ಥಿತಿ ಏನು ಎಂಬುದು ಅರ್ಥವಾಗುತ್ತದೆ. ಸಮಕಾಲೀನ ವಿದ್ಯಮಾನಗಳನ್ನು ಹೇಗೆ ವಿಶ್ಲೇಷಣೆ ಮಾಡಬೇಕು ಎಂಬುದನ್ನು ಮಕ್ಕಳು ತಿಳಿದುಕೊಳ್ಳಬೇಕೆ ವಿನಾ ಯಜ್ಞದ ಬಗ್ಗೆಯಲ್ಲ' ಎಂದರು.

'ಭಗತ್ ಸಿಂಗ್ ಬಗ್ಗೆ ಮಕ್ಕಳು ತಿಳಿದುಕೊಳ್ಳುವುದು ಬೇಡವೇ? ಅದನ್ನು ಬಿಟ್ಟು ಶುಕನಾಸನ ಉಪದೇಶ ಹೇಳಲು ಹೊರಟಿದ್ದಾರೆ. ಪಠ್ಯಪುಸ್ತಕ ಪರಿಷ್ಕರಣೆ ಹೆಸರಿನಲ್ಲಿ ಮಕ್ಕಳ ತಲೆಗೆ ವಿಷ ತುಂಬಲು ಸರ್ಕಾರ ಹೊರಟಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಯಲ್ಲಿ ಲೇಖಕ ಜಿ.ರಾಮಕೃಷ್ಣ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಸಮಿತಿ ರದ್ದುಪಡಿಸಿ: ಸಿಎಂಗೆ ಡಿಕೆಶಿ ಪತ್ರ

ಬೆಂಗಳೂರು: 'ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ತಕ್ಷಣ ರದ್ದುಪಡಿಸಬೇಕು. ಹೊಸ ಪಠ್ಯಪುಸ್ತಕಗಳನ್ನು ಹಿಂಪಡೆಯಬೇಕು ಮತ್ತು ಹಳೆ ಪಠ್ಯಪುಸ್ತಕಗಳನ್ನೇ ಮುಂದುವರಿಸಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದಾರೆ.

ಸಮಿತಿಯು ಪ್ರಮುಖ ದಾರ್ಶನಿಕರು ಮತ್ತು ದೇಶಭಕ್ತರ ಕುರಿತ ಪಠ್ಯಗಳನ್ನು ಕೈಬಿಟ್ಟಿರುವ, ತಿರುಚಿರುವ, ರಾಜ್ಯದ ಸಾಹಿತಿಗಳ ಹಾಗೂ ನಮ್ಮ ಬಹುತ್ವದ ಸಂಸ್ಕೃತಿಗೆ ಪೂರಕವಾದ ಲೇಖನಗಳನ್ನು ಕೈಬಿಟ್ಟು, ಸಂಕುಚಿತ ವಾದವನ್ನು ಬೆಂಬಲಿಸುವ, ಮತೀಯವಾದವನ್ನು ಪ್ರಚೋದಿಸುವ ವ್ಯಕ್ತಿಗಳ ಲೇಖನಗಳನ್ನು ಸೇರಿಸಿದ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಕನ್ನಡಿಗರು, ಹೆತ್ತವರು ಮತ್ತು ವಿದ್ಯಾರ್ಥಿಗಳು ಇದರಿಂದ ಚಿಂತಿತರಾಗಿದ್ದಾರೆ' ಎಂದೂ ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

ಬರಹಗಾರ ಶಿವಸುಂದರ್ ಮಾತನಾಡಿ, 'ನರೇಂದ್ರ ಮೋದಿ ಪ್ರಧಾನಿ ಆಗುತ್ತಾರೆ, ಅಮಿತ್ ಶಾ ಗೃಹ ಮಂತ್ರಿ ಆಗುತ್ತಾರೆ ಎಂದರೆ ರೋಹಿತ್ ಚಕ್ರತೀರ್ಥ ಪಠ್ಯಪುಸ್ತಕ ಸಮಿತಿ ಅಧ್ಯಕ್ಷ ಆಗುವುದರಲ್ಲಿ ಆಶ್ಚರ್ಯ ಏನೂ ಇಲ್ಲ. ಇಂತಹ ಸಮಿತಿಯಿಂದ ನಾವು ಇನ್ನೇನನ್ನು ನಿರೀಕ್ಷಿಸಲು ಸಾಧ್ಯ' ರಾಮಕೃಷ್ಣ ಅವರು ಬಿಜೆಪಿ ನೇತೃತ್ವದ ಸರ್ಕಾರವನ್ನು ಕುಟುಕಿದರು.

'66 ಪುಟದ ರಾಷ್ಟ್ರೀಯ ಶಿಕ್ಷಣ ನೀತಿ ಓದಿದರೆ ನೀತಿಯ ಹೂರಣ ಅರ್ಥವಾಗುತ್ತದೆ. ಈ ನೀತಿಯಲ್ಲಿ 'ಸಂವಿಧಾನ' ಎಂಬ ಪದ ಕೇವಲ 35 ಬಾರಿ ಇದ್ದರೆ, 'ಸಂಪ್ರದಾಯ' ಎಂಬ ಪದ 65 ಬಾರಿ ಇದೆ. ಜಾತ್ಯತೀತ, ಸಾಮಾಜಿಕ ನ್ಯಾಯ ಎಂಬ ಪದಗಳೇ ಇಲ್ಲ' ಎಂದರು.

ಸುದ್ದಿ 2 ನಿಮಿಷ

'ಪಠ್ಯದಿಂದಲೇ ಮಕ್ಕಳಿಗೆ ವಿಷಪ್ರಾಶನ'

ಬೆಂಗಳೂರು: 'ತಾವು ಉಂಡ ನಂಜು ಮುಂದಿನ ಜನಾಂಗಕ್ಕೂ ಉಣಿಸಬೇಕೆಂದು ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಪ್ರಾಥಮಿಕ ಹಂತದ ಪಠ್ಯಪುಸ್ತಕದಲ್ಲಿಯೇ ವಿಷಪ್ರಾಶನ ಮಾಡಲು ಹೊರಟಿದೆ. ಚಕ್ರತೀರ್ಥರಿಗೆ, ಚಕ್ರವರ್ತಿಗಳಿಗೆ, ಪ್ರತಾಪಸಿಂಹರುಗಳಿಗೆ ಜಗತ್ತಿನ ಇತಿಹಾಸದ ಅರಿವು ಇದೆಯೋ ಇಲ್ಲವೋ ಗೊತ್ತಿಲ್ಲ' ಎಂದು ಕಾಂಗ್ರೆಸ್ ಶಾಸಕ ಕೆ.ಆರ್. ರಮೇಶ್ ಕುಮಾರ್ ಕಿಡಿಕಾರಿದ್ದಾರೆ.

'ಪಠ್ಯಪುಸ್ತಕ ಮರು ಪರಿಷ್ಕರಣೆ ವಿಚಾರದಲ್ಲಿ ಸರ್ಕಾರ ತರಾತುರಿಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳು ರಾಜ್ಯದ ನಾಗರಿಕರ ಪ್ರಜ್ಞೆಯನ್ನು ತೀವ್ರವಾಗಿ ನೋಯಿಸಿದೆ. ಈ ವಿಚಾರದ ಗೊಂದಲಗಳಿಗೆ ಮುಖ್ಯಮಂತ್ರಿ ತಕ್ಷಣ ಇತಿಶ್ರೀ ಹಾಡಬೇಕು' ಎಂದು ಆಗ್ರಹಿಸಿದ್ದಾರೆ.

'ನಾಡಿನ ಸಾಕ್ಷಿಪ್ರಜ್ಞೆಗಳಾದ ದೇವನೂರ ಮಹಾದೇವ ಮತ್ತು ಬರಗೂರು ರಾಮಚಂದ್ರಪ್ಪ ಅವರ ಅಭಿಪ್ರಾಯಗಳನ್ನೂ ಧಿಕ್ಕರಿಸಿ ಅವರ ಬಗ್ಗೆಯೂ ಹಗುರವಾಗಿ ಮಾತನಾಡುವುದು ಅಕ್ಷಮ್ಯ ಅಪರಾಧ. ಬರಗೂರು ಅಧ್ಯಕ್ಷತೆಯಲ್ಲಿ ರಚಿತವಾದ ಪಠ್ಯಪುಸ್ತಕಗಳ ಪುನರ್‌ಪರಿಷ್ಕರಣೆ ಮಾಡುವ ವೇಳೆಯಲ್ಲಿ ಸರ್ಕಾರ ತನ್ನ ವಿವೇಚನೆ ತೋರಿಸಬೇಕಾಗಿತ್ತು.

ಪುನರ್‌ರಚಿತ ಸಮಿತಿಯಲ್ಲಿರುವ ಸದಸ್ಯರು ಬ್ರಾಹ್ಮಣರು, ಬುದ್ಧ, ಬಸವ, ಅಂಬೇಡ್ಕರ್‌ರವರ ಆಲೋಚನೆಗಳನ್ನು ವಿರೋಧಿಸುವವರೇ ಆಗಿರುತ್ತಾರೆ. ಚಕ್ರತೀರ್ಥ ಅವರು ಕುವೆಂಪು ಬಗ್ಗೆ ಅಗೌರವ ತೋರಿಸುವ ಕುತ್ಸಿತ ಕ್ರಿಮಿಗಳು ವಿರಾಜಮಾನರಾಗುತ್ತಿದ್ದಾರೆ. ಇದು ನೋವಿನ ಸಂಗತಿ' ಎಂದು ಹೇಳಿದರು.



'ಮೌಲ್ಯಯುತ ಪಠ್ಯಪುಸ್ತಕ ಮಕ್ಕಳಿಗೆ ದೊರೆಯಲಿ'

ಬೆಂಗಳೂರು: 'ನಾಡಿನ ಕೂಡಿ ಬಾಳುವ ಪರಂಪರೆಗೆ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳ ಉಳಿವಿಗೆ ಯಾವುದು ಸೂಕ್ತವೋ ಅಂತಹ ಪಠ್ಯಪುಸ್ತಕಗಳು ಮಕ್ಕಳಿಗೆ ದೊರಕುವಂತಾಗಬೇಕು' ಎಂದು ಬೆಂಗಳೂರು ವಿಶ್ವವಿದ್ಯಾಲಯ ಕಾಲೇಜು ಕನ್ನಡ ಅಧ್ಯಾಪರ ಸಂಘ ಒತ್ತಾಯಿಸಿದೆ.

'ಪಠ್ಯಗಳನ್ನು ಕುರಿತ ಚರ್ಚೆಗಳು ಆರೋಗ್ಯಕರ ನೆಲೆಯಲ್ಲಿ ನಡೆದು, ವಿದ್ಯಾರ್ಥಿಗಳ ಜ್ಞಾನವಿಕಾಸಕ್ಕೆ ಕಾರಣವಾಗಬೇಕು. ಆದರೆ, ಚರ್ಚೆಗಳು ಸೈದ್ಧಾಂತಿಕ ದ್ವೇಷ, ವೈಯಕ್ತಿಕ ನಿಂದನೆಯ ಮಟ್ಟಕ್ಕೆ ತಲುಪಿರುವುದು ಆಘಾತಕಾರಿ ಬೆಳವಣಿಗೆ. ಅದರಲ್ಲೂ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ನಿಕಟಪೂರ್ವ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ ಅವರ ಬಗ್ಗೆ ಕೆಲವರು ಮಾಡುತ್ತಿರುವ ಟೀಕೆಗಳು, ಬಳಸುತ್ತಿರುವ ಭಾಷೆ ಸಜ್ಜನ ಸಂಸ್ಕೃತಿಯದ್ದಲ್ಲ' ಎಂದು ಸಂಘದ ಅಧ್ಯಕ್ಷ ಆರ್. ಅಮರೇಂದ್ರ ಶೆಟ್ಟಿ ತಿಳಿಸಿದ್ದಾರೆ.

'ಹದಗೆಡುತ್ತಿರುವ ಸಾಂಸ್ಕೃತಿಕ ಪರಿಸರದಲ್ಲಿನ ಅಸಹನೆ, ಅಗೌರವ, ದ್ವೇಷ ಭಾವಗಳು ಕನ್ನಡದ ಮನಃಸಾಕ್ಷಿಯಂತಿರುವ ರಾಷ್ಟ್ರಕವಿ ಕುವೆಂಪು ಹಾಗೂ ನಾಡಗೀತೆಯನ್ನು ಅವಹೇಳನ ಮಾಡುವ ಮಟ್ಟಕ್ಕೆ ತಲುಪಿದೆ. ಇದು ಅತ್ಯಂತ ಅಪಾಯಕಾರಿ ಸ್ಥಿತಿ. ಕನ್ನಡದ ಸಂವಾದ, ಸೌಹಾರ್ದ ಸಂಸ್ಕೃತಿಗೆ ಇದು ತಕ್ಕುದಲ್ಲ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆರೋಗ್ಯಕರ ಚರ್ಚೆಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಅವಕಾಶವಿರುವಾಗ, ನಾಡಿನ ಕವಿಗಳು, ಚಿಂತಕರನ್ನು ನಾಡಗೀತೆಯ ಜಗಳಕ್ಕೆ ಎಳೆದು, ಮನಸೋ ಇಚ್ಛೆ ಮಾತನಾಡುವ ಅನಾರೋಗ್ಯಕರ ವಾತಾವರಣ ಕೊನೆಗೊಳ್ಳಬೇಕು' ಎಂದು ಹೇಳಿದ್ದಾರೆ.

ಸ್ನೇಹಿತನ ಮೇಲೆ ಆ್ಯಸಿಡ್ ದಾಳಿ: ಆರೋಪಿ ಬಂಧನ

ಬೆಂಗಳೂರು: ಹಲಸೂರು ಗೇಟ್ ಠಾಣೆ ವ್ಯಾಪ್ತಿಯಲ್ಲಿ ಮದ್ಯ ಕುಡಿದ ಮತ್ತಿನಲ್ಲಿ ಸ್ನೇಹಿತರಿಬ್ಬರ ನಡುವೆ ಜಗಳವಾಗಿದ್ದು, ಮಂಟೂ ಸಂತ್ರಾ (32) ಎಂಬುವರ ಮೇಲೆ ಆ್ಯಸಿಡ್ ಎರಚಲಾಗಿದೆ.

'ಪಶ್ಚಿಮ ಬಂಗಾಳದ ಮಂಟೂ, ಕಬ್ಬನ್ ಪೇಟೆಯ 10ನೇ ಅಡ್ಡರಸ್ತೆಯಲ್ಲಿರುವ ಬೆಳ್ಳಿ ಸಾಮಗ್ರಿ ತಯಾರಿಕೆ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ಮೇಲೆ ಆ್ಯಸಿಡ್ ಎರಚಿದ್ದ ಆರೋಪದಡಿ ಸ್ನೇಹಿತ ಜನತಾ ಅಡಕ್ (30) ಎಂಬಾತನನ್ನು ಬಂಧಿಸಲಾಗಿದೆ. ಸದ್ಯ ಆತ ನ್ಯಾಯಾಂಗ ಬಂಧನಲ್ಲಿದ್ದಾನೆ' ಎಂದು ಹಲಸೂರು ಗೇಟ್ ಪೊಲೀಸರು ಹೇಳಿದರು.

'ಆರೋಪಿ ಜನತಾ ಸಹ ಪಶ್ಚಿಮ ಬಂಗಾಳ ನಿವಾಸಿ. ಒಂದೇ ಊರಿನವರಾಗಿದ್ದ ಜನತಾ ಹಾಗೂ ಮಂಟೂ, ಕೆಲಸ ಹುಡುಕಿಕೊಂಡು ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಬೆಳ್ಳಿ ಸಾಮಗ್ರಿ ತಯಾರಿಕೆ ಬಗ್ಗೆ ತಿಳಿದಿದ್ದ ಇಬ್ಬರೂ ಒಂದೇ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು' ಎಂದೂ ತಿಳಿಸಿದರು.

ಸ್ಕೂಟಿ–ಬೈಕ್ ಡಿಕ್ಕಿ; ಸವಾರ ಸಾವು

ವಿಜಯನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಹಾಗೂ ಸ್ಕೂಟಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಸವಾರ ಮಿಥುನ್ ಎಂಬುವರು ಮೃತಪಟ್ಟಿದ್ದಾರೆ.

'ಸ್ಥಳೀಯ ಪಟ್ಟೆಗಾರಪಾಳ್ಯದ ಮಿಥುನ್, ದಿನಪತ್ರಿಕೆಗಳ ವಿತರಣೆ ಕೆಲಸ ಮಾಡುತ್ತಿದ್ದರು. ಮೇ 30ರಂದು ಸ್ನೇಹಿತನ ಜೊತೆ ಸ್ಕೂಟಿಯಲ್ಲಿ ಹೊರಟಿದ್ದಾಗ, ಎದುರಿಗೆ ಬಂದ ಬೈಕ್ ಡಿಕ್ಕಿ ಹೊಡೆದು ಅವಘಡ ಸಂಭವಿಸಿತ್ತು. ಈ ದೃಶ್ಯ ಸಿ.ಸಿ.ಟಿ.ವಿಯಲ್ಲಿ ಸೆರೆಯಾಗಿದೆ' ಎಂದು ಪೊಲೀಸರು ಹೇಳಿದರು.

ವಿದ್ಯಾರ್ಥಿಗಳಿಂದ ಧರಣಿ ವಾಪಸ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮಂಗಳವಾರ ಧರಣಿ ವಾಪಸ್ ಪಡೆದಿದ್ದಾರೆ. 'ವಿದ್ಯಾರ್ಥಿಗಳ ವಿರುದ್ಧ ಜ್ಞಾನ ಭಾರತಿ ಪೊಲೀಸ್ ಠಾಣೆಗೆ ಹಣಕಾಸು ಅಧಿಕಾರಿ (ಪ್ರಭಾರ) ಆರ್. ಜಯಲಕ್ಷ್ಮಿ ಅವರು ನೀಡಿದ್ದ ದೂರು ವಾಪಸ್ ಪಡೆದಿದ್ದರಿಂದ ಧರಣಿಯನ್ನು ವಾಪಸ್ ಪಡೆದಿದ್ದೇವೆ' ಎಂದು ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿ ಎನ್. ಲೋಕೇಶ್ ತಿಳಿಸಿದರು.

ರಾಜ್ಯದೆಲ್ಲೆಡೆ ಕರ್ನಾಟಕ ರಕ್ಷಣಾ ವೇದಿಕೆ ಹೋರಾಟ

'ರೋಹಿತ್ ವಜಾ ಆಗದಿದ್ದರೆ ಹೋರಾಟ ಸ್ವರೂಪ ಬದಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಧ್ವಜ ಮತ್ತು ರಾಷ್ಟ್ರಕವಿ ಕುವೆಂಪು ಅವರಿಗೆ ಅವಮಾನ ಮಾಡಿರುವ ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಮರುಪರಿಷ್ಕರಣಾ ಸಮಿತಿಯಿಂದ ವಜಾಗೊಳಿಸಬೇಕು' ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡ ಬಣ) ಕಾರ್ಯಕರ್ತರು ರಾಜ್ಯದಾದ್ಯಂತ ಮಂಗಳವಾರ ಪ್ರತಿಭಟನೆ ನಡೆಸಿದರು. ಸಮಿತಿ ವಿಸರ್ಜಿಸಿ ರೋಹಿತ್ ಚಕ್ರತೀರ್ಥ ಅವರನ್ನು ಜೈಲಿಗೆ ಕಳುಹಿಸದಿದ್ದರೆ ಪ್ರತಿಭಟನೆ ಬೇರೆ ರೂಪ ಪಡೆಯಲಿದೆ ಎಂದು ಎಚ್ಚರಿಕೆ ನೀಡಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರವೇ ಅಧ್ಯಕ್ಷ ಟಿ.ಎ.ನಾರಾಯಣಗೌಡ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಯಿತು. ಅದೇ ರೀತಿ ಎಲ್ಲ ಜಿಲ್ಲೆಗಳಲ್ಲೂ ಕರವೇ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ರೋಹಿತ್ ಚಕ್ರತೀರ್ಥ ಅವರನ್ನು ಬಂಧಿಸಿ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

'ರಾಷ್ಟ್ರಗೀತೆಗೆ ಅವಮಾನ ಮಾಡುವುದು ಮತ್ತು ನಾಡಗೀತೆಗೆ ಅವಮಾನ ಮಾಡುವುದು ಎರಡೂ ಒಂದೇ. ನಾಡಧ್ವಜವನ್ನು ಒಳ ಉಡುಪಿಗೆ ಹೋಲಿಸುವಷ್ಟು ಕೆಟ್ಟ ಮನಸ್ಥಿತಿಯ ವ್ಯಕ್ತಿಯನ್ನು ಸರ್ಕಾರ ಪಠ್ಯಪುಸ್ತಕ ಮರು ಪರಿಷ್ಕರಣಾ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿರುವುದು ಕನ್ನಡಿಗರಿಗೆ ಮಾಡಿರುವ ಅವಮಾನ' ಎಂದು ನಾರಾಯಣಗೌಡ ಆಕ್ರೋಶ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಟಿ.ಎ.ನಾರಾಯಣಗೌಡ ನೇತೃತ್ವದಲ್ಲಿ ಮಂಗಳವಾರ ಧರಣಿ ನಡೆಸಿದರು – ಪ್ರಜಾವಾಣಿ ಚಿತ್ರ

'ಕುವೆಂಪು ಅವರಿಗೆ ಅವಮಾನ ಮಾಡಿದವನಿಗೆ ಸ್ಥಾನಮಾನ ಸಿಗುತ್ತದೆ ಎಂದರೆ ರಾಜ್ಯದ ದುರಂತ. ಮರು ಪರಿಷ್ಕರಣೆಗೊಂಡು ಮಕ್ಕಳಿಗೆ ವಿತರಿಸಿರುವ ಪುಸ್ತಕಗಳನ್ನು ವಾಪಸ್ ಪಡೆಯಬೇಕು. ಸರ್ಕಾರಕ್ಕೆ ಮರ್ಯಾದೆ ಇದ್ದರೆ ಸಮಿತಿಯನ್ನು ತಕ್ಷಣವೇ ವಿಸರ್ಜನೆ ಮಾಡಬೇಕು. ಈ ಸಂಬಂಧ ಮುಖ್ಯಮಂತ್ರಿಗೆ ಮೇ 31ರ ಗಡುವು ನೀಡಿದ್ದೆವು. ಅದು ಈಗ ಮುಗಿದಿದೆ. ಸರ್ಕಾರ ಇದೇ ರೀತಿ ಜಾಣಮೌನ ವಹಿಸಿದರೆ ಹೋರಾಟದ ಸ್ವರೂಪ ಬದಲಾಗಲಿದೆ' ಎಂದು ಎಚ್ಚರಿಸಿದರು.

'ವಿಕೃತ ಮನಸಿನ ರೋಹಿತ್ ಚಕ್ರತೀರ್ಥ ಜೈಲಿನಲ್ಲೂ ಬೇರೆಯವರ ಮನಸು ಕೆಡಿಸುವ ಸಾಧ್ಯತೆ ಇದೆ. ಆದ್ದರಿಂದ ಅವರನ್ನು ಅಲ್ಲಿಯೂ ಪ್ರತ್ಯೇಕವಾಗಿ ಇರಿಸಬೇಕು' ಎಂದು ಕರವ ಪ್ರತಿಭಟನಕಾರರು ಒತ್ತಾಯಿಸಿದರು.

ಖ್ಯಾತ ಗಾಯಕ ಕೆಕೆ ನಿಧನ

ಕೋಲ್ಕತ್ತ (ಪಿಟಿಐ): ಕನ್ನಡ, ಹಿಂದಿ ಸಹಿತ ವಿವಿಧ ಭಾಷೆಗಳಲ್ಲಿ ನೂರಾರು ಹಾಡುಗಳನ್ನು ಹಾಡಿರುವ ಖ್ಯಾತ ಗಾಯಕ ಕೃಷ್ಣಕುಮಾರ್ ಕುನ್ನತ್ (53) ಅವರು ಮಂಗಳವಾರ ರಾತ್ರಿ ಇಲ್ಲಿ ಅನಾರೋಗ್ಯದಿಂದ ನಿಧನರಾದರು. ಅವರು 'ಕೆಕೆ' ಎಂದೇ ಖ್ಯಾತರಾಗಿದ್ದರು.

'ಕೋಲ್ಕತ್ತದಲ್ಲಿ ಆಯೋಜಿಸಲಾಗಿದ್ದ ಸಂಗೀತ ಕಾರ್ಯಕ್ರಮದಲ್ಲಿ ಕೆಕೆ ಅವರು ಸುಮಾರು ಒಂದು ಗಂಟೆ ಕಾಲ ಹಾಡಿದ್ದರು. ಆದರೆ, ಹೋಟೆಲ್ ತಲುಪಿದ ಬಳಿಕ ಅವರ ಆರೋಗ್ಯದಲ್ಲಿ ಏರುಪೇರಾಗಿದೆ. ಅವರನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅವರು ಆಸ್ಪತ್ರೆಗೆ ತಲುಪುವ ಮೊದಲೇ ಮೃತಪಟ್ಟಿದ್ದರು' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೃಷ್ಣಕುಮಾರ್ ಕುನ್ನತ್

ಕೃಷ್ಣಕುಮಾರ್ ಕುನ್ನತ್ ಅವರು ತಮಿಳು, ತೆಲುಗು, ಮಲಯಾಳ, ಮರಾಠಿ, ಬೆಂಗಾಲಿ ಭಾಷೆಗಳಲ್ಲೂ ಹಾಡಿದ್ದಾರೆ.

ನಿರ್ಮಾಣ ಹಂತದ ಸೇತುವೆ ಕುಸಿತ

ಸೇಂಟ್ ಮಾರ್ಥಾಸ್ ಆಸ್ಪತ್ರೆ ಹಳೆಯ ಕಟ್ಟಡಕ್ಕೆ ಜೋಡಣೆ • ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೃಪತುಂಗ ರಸ್ತೆಯಲ್ಲಿರುವ ಸೇಂಟ್ ಮಾರ್ಥಾಸ್ ಆಸ್ಪತ್ರೆ ಹಳೆಯ ಕಟ್ಟಡಕ್ಕೆ ಹೊಂದಿಕೊಂಡು ನಿರ್ಮಿಸಲಾಗುತ್ತಿದ್ದ ಸೇತುವೆ ಕುಸಿದಿದ್ದು, ಕಾರ್ಮಿಕ ಬಸವರಾಜ್ (24) ಎಂಬುವವರು ಮೃತಪಟ್ಟಿದ್ದಾರೆ. ಮೂವರು ಕಾರ್ಮಿಕರು ತೀವ್ರವಾಗಿ ಗಾಯಗೊಂಡಿದ್ದು, ಸೇಂಟ್ ಮಾರ್ಥಾಸ್ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಮಂಗಳವಾರ ಬೆಳಿಗ್ಗೆ 6.15ರ ಸುಮಾರಿಗೆ ಸೇತುವೆ ಕುಸಿದಿತ್ತು. ಅವಶೇಷಗಳಡಿ ಕಾರ್ಮಿಕರು ಸಿಲುಕಿಕೊಂಡಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ನಾಲ್ವರು ಕಾರ್ಮಿಕರನ್ನು ಹೊರಗೆ ತೆಗೆದಿದ್ದರು' ಎಂದು ಹಲಸೂರು ಗೇಟ್ ಪೊಲೀಸರು ಹೇಳಿದರು.

'ತೀವ್ರವಾಗಿ ಗಾಯಗೊಂಡಿದ್ದ ಬಸವರಾಜ್, ಚಿಕಿತ್ಸೆಗೆ ಸ್ಪಂದಿಸದೇ ಅಸುನೀಗಿದ್ದಾರೆ. ಕಾರ್ಮಿಕರಾದ ಚಾಂದಪಾಷಾ, ಮೊಹಿನುದ್ದೀನ್ ಹಾಗೂ ಮಹಮ್ಮದ್ ರಫೀ ಅವರಿಗೂ ತೀವ್ರ ಗಾಯವಾಗಿದೆ. ಮೂವರೂ ಸೇಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದೂ ತಿಳಿಸಿದರು.

'ಕೆಲಸದ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಂಡಿರಲಿಲ್ಲ. ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಎಂಜಿನಿಯರ್, ಗುತ್ತಿಗೆದಾರ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದೂ ಹೇಳಿದರು.

ನಗರದ ನೃಪತುಂಗ ರಸ್ತೆಯಲ್ಲಿರುವ ಸೇಂಟ್ ಮಾರ್ಥಾಸ್ ಆಸ್ಪತ್ರೆ ಹಳೆಯ ಕಟ್ಟಡಕ್ಕೆ ಹೊಂದಿಕೊಂಡು ನಿರ್ಮಿಸಲಾಗುತ್ತಿದ್ದ ಸೇತುವೆ ಕುಸಿದಿರುವುದು – ಪ್ರಜಾವಾಣಿ ಚಿತ್ರ

'ರಾಯಚೂರಿನ ಮಸ್ಕಿ ಸ್ನೇಹಿತರು'

'ಮೃತ ಬಸವರಾಜ್ ಹಾಗೂ ಗಾಯಾಳು ಕಾರ್ಮಿಕರು, ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನವರು. ಸ್ನೇಹಿತರಾಗಿದ್ದ ಅವರು, ಕೆಲ ತಿಂಗಳ ಹಿಂದೆಯಷ್ಟೇ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ನಿರ್ಮಾಣ ಹಂತದ ಕಟ್ಟಡಗಳಲ್ಲಿ ವಾಟರ್ ಪ್ರೂಫಿಂಗ್ ಕೆಲಸ ಮಾಡಲಾರಂಭಿಸಿದ್ದರು. ಗುತ್ತಿಗೆದಾರರೊಬ್ಬರ ಸೂಚನೆಯಂತೆ ಸೇಂಟ್ ಮಾರ್ಥಾಸ್ ಆಸ್ಪತ್ರೆಯ ಸೇತುವೆಯಲ್ಲಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಸೇತುವೆ ಕುಸಿದ ಸುದ್ದಿ ತಿಳಿಯುತ್ತಿದ್ದಂತೆ ಕಾರ್ಮಿಕರ ಕುಟುಂಬದ ಸದಸ್ಯರು ಸ್ಥಳಕ್ಕೆ ಬಂದಿದ್ದರು. ಅವಶೇಷಗಳಡಿ ಸಿಲುಕಿದ್ದ ಕಾರ್ಮಿಕರನ್ನು ನೆನೆದು ಕಣ್ಣೀರಿಟ್ಟರು. ಅವರ ಆಕ್ರಂದನ ಮುಗಿಲುಮುಟ್ಟಿತ್ತು.

1, 2ನೇ ಮಹಡಿಗೆ ಸಂಪರ್ಕ ಕಲ್ಪಿಸಲು ಸೇತುವೆ: 'ಸೇಂಟ್ ಮಾರ್ಥಾಸ್ ಆಸ್ಪತ್ರೆಯ ಕಟ್ಟಡ ಹಳೆಯದಾಗಿದೆ. ಆಸ್ಪತ್ರೆಗೆ ಬರುವ ಸಾರ್ವಜನಿಕರು, ನೆಲ ಮಹಡಿ ಮೂಲಕ ಒಂದು ಹಾಗೂ ಎರಡನೇ ಮಹಡಿಗೆ ಹೋಗುತ್ತಿದ್ದಾರೆ. ಇದರಿಂದಾಗಿ ನೆಲ ಮಹಡಿಯಲ್ಲಿ ಜನ ಸಂದಣಿ ಹೆಚ್ಚಾಗುತ್ತಿದೆ. ಇದಕ್ಕೆ ಪರಿಹಾರವಾಗಿ, ಒಂದು ಹಾಗೂ ಎರಡನೇ ಮಹಡಿಗೆ ನೇರವಾಗಿ ಸಂಪರ್ಕ ಕಲ್ಪಿಸಲು ಸೇತುವೆ ನಿರ್ಮಿಸಲಾಗುತ್ತಿತ್ತು' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಹೇಳಿದರು.

'ನೆಲದಿಂದ ಮೊದಲ ಮಹಡಿಗೆ ಹೊಂದಿಕೊಂಡು ಸೇತುವೆ ನಿರ್ಮಿಸುವ ಕೆಲಸ ಎರಡು ತಿಂಗಳಿನಿಂದ ನಡೆಯುತ್ತಿತ್ತು. ಸೇತುವೆಯಲ್ಲಿ ನೀರು ಸೋರದಂತೆ ತಡೆಯುವ 'ವಾಟರ್ ಪ್ರೂಫಿಂಗ್' ಕೆಲಸದಲ್ಲಿ ಕಾರ್ಮಿಕರು ನಿರತರಾಗಿದ್ದರು. ಇದೇ ಸಂದರ್ಭದಲ್ಲೇ ಸೇತುವೆ ಕುಸಿದಿದೆ' ಎಂದೂ ತಿಳಿಸಿದರು.

'ಹಳೆಯ ಕಟ್ಟಡವನ್ನೇ ಆಧಾರವಾಗಿಟ್ಟುಕೊಂಡು ಸಣ್ಣ ಕಂಬಗಳನ್ನು ನಿರ್ಮಿಸಿ ಕಬ್ಬಿಣದ ಗ್ರಿಲ್ ಅಳವಡಿಸಿ, ಅದರ ಮೇಲೆ ಕಾಂಕ್ರಿಟ್ ಹಾಕಿದ್ದಾರೆ. ಈ ಕೆಲಸ ಅವೈಜ್ಞಾನಿಕವಾಗಿದ್ದು, ಭಾರ ಹೆಚ್ಚಾಗಿದ್ದರಿಂದ ಸೇತುವೆ ಕುಸಿದಿರುವುದಾಗಿ ತಜ್ಞರು ಹೇಳುತ್ತಿದ್ದಾರೆ. ಸೇತುವೆ ನಿರ್ಮಾಣಕ್ಕೆ ಯಾರು ಅನುಮತಿ ನೀಡಿದ್ದಾರೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದೂ ಹೇಳಿದರು.

ನಾರಾಯಣ ಗೌಡ ವಿರುದ್ಧದ ಪ್ರಕರಣ ರದ್ದು: ಪುನರ್ ವಿಚಾರಣೆಗೆ ಆದೇಶ

ಬೆಂಗಳೂರು: ಕಳೆದ ಲೋಕಸಭೆ ಚುನಾವಣೆ ಮೇಳೆ ಮತದಾರರ ಮೇಲೆ ಪ್ರಭಾವ ಬೀರಿದ ಆರೋಪಕ್ಕೆ ಸಂಬಂಧಿಸಿದಂತೆ ಸಚಿವ ಕೆ.ಸಿ. ನಾರಾಯಣ ಗೌಡ ವಿರುದ್ಧ ಕೆ.ಆರ್. ಪೇಟೆ ಠಾಣೆ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಮತ್ತು ಪ್ರಕರಣ ಕುರಿತ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ವಿಚಾರಣೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ಕೆ.ಸಿ.ನಾರಾಯಣ ಗೌಡ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಪ್ರಕರಣವನ್ನು ಪುನಃ ವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಲಾಗುತ್ತದೆ. ಮಾಹಿತಿದಾರರು ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹಾಜರಾಗಿ ತನಿಖೆಗೆ ಅನುಮತಿ ನೀಡುವಂತೆ ಕೋರುವ ಹಂತದಿಂದ ಪ್ರಕರಣವನ್ನು ಹೊಸದಾಗಿ ಕಾನೂನು ಪ್ರಕಾರ ಪರಿಗಣಿಸಿ ಮುಂದಿನ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಡ್ರಗ್ಸ್ ಮಾರುತ್ತಿದ್ದ ನೈಜೀರಿಯಾ ಪ್ರಜೆ ಬಂಧನ

ಬೆಂಗಳೂರು: ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆ ಒಕೊಯ್ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ವ್ಯವಹಾರ ವೀಸಾದಡಿ ನಗರಕ್ಕೆ ಬಂದಿದ್ದ ಆರೋಪಿ, ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಈತನಿಂದ ₹8 ಲಕ್ಷ ಮೌಲ್ಯದ 60 ಗ್ರಾಂ ಎಂಡಿಎಂಎ ಮಾತ್ರೆಗಳು, 6 ಗ್ರಾಂ ಕೊಕೇನ್ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ. ಮುಂಬೈನಲ್ಲಿ ನೆಲೆಸಿರುವ ಆಫ್ರಿಕಾ ಪ್ರಜೆ ಜೊತೆ ಒಡನಾಟ ಹೊಂದಿರುವ ಆರೋಪಿ, ನಗರಕ್ಕೆ ಡ್ರಗ್ಸ್ ತರಿಸುತ್ತಿದ್ದ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಅಸ್ವಾಭಾವಿಕ ಲೈಂಗಿಕ ಕ್ರಿಯೆಗೆ ಒತ್ತಾಯಿಸಿದ ಆರೋಪ: ಹೆಚ್ಚಿನ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯನ್ನು ಅಸ್ವಾಭಾವಿಕ ಲೈಂಗಿಕ ಕ್ರಿಯೆಗೆ ಒತ್ತಾಯಿಸಿ ಅಶ್ಲೀಲ ಫೋಟೊ ತೆಗೆದು ಆಕೆಯ ತಂದೆ ಮತ್ತು ಕೆಲವು ಸ್ನೇಹಿತರಿಗೆ ಕಳುಹಿಸಿ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಸಾಫ್ಟ್‌ವೇರ್ ಉದ್ಯೋಗಿಯ ವಿರುದ್ಧ ಹೆಚ್ಚಿನ ತನಿಖೆ ನಡೆಸುವಂತೆ ಹೈಕೋರ್ಟ್ ಆದೇಶಿಸಿದೆ.

'ಪೊಲೀಸರು ನಡೆಸಿರುವ ತನಿಖೆ ಸಮರ್ಪಕವಾಗಿಲ್ಲ. ಹಾಗಾಗಿ, ಹೆಚ್ಚಿನ ತನಿಖೆ ನಡೆಸಲು ನಿರ್ದೇಶಿಸಬೇಕು' ಎಂದು ಕೋರಿ ಮಹಿಳೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ವಿವೇಕನಗರ ಠಾಣೆ ಪೊಲೀಸರು 2019ರಲ್ಲಿ ನಡೆಸಿದ ತನಿಖೆ ಕಳಪೆಯಾಗಿದೆ. ಪೊಲೀಸರು ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ಬಲವಂತದ ಅಸ್ವಾಭಾವಿಕ ಲೈಂಗಿಕತೆ ಮತ್ತು ಅಶ್ಲೀಲ ಚಿತ್ರಗಳ ಗಂಭೀರ ಆರೋಪಗಳ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಇಂತಹ ಕಳಪೆ ತನಿಖೆ ನಡೆಸುವ ಅಧಿಕಾರಿಗಳ ವಿರುದ್ಧ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಅಥವಾ ನಗರ ಪೊಲೀಸ್ ಆಯುಕ್ತರು ಕ್ರಮ ಕೈಗೊಳ್ಳಬೇಕು' ಎಂದ ನ್ಯಾಯಪೀಠ ನಿರ್ದೇಶಿಸಿದೆ.

ಪ್ರಕರಣವೇನು?: ಬೆಂಗಳೂರಿನ ನಿವಾಸಿಯಾದ ಪತಿ ಮತ್ತು ಛತ್ತೀಸ್‌ಗಢದ ಪತ್ನಿ 2013ರಲ್ಲಿ ಮುಂಬೈನ ಐಐಟಿಯಲ್ಲಿ ಪಿಎಚ್.ಡಿ ಮಾಡುತ್ತಿದ್ದಾಗ ಪರಸ್ಪರ ಪ್ರೀತಿಸಿ, ನಂತರ 2015ರಲ್ಲಿ ಬೆಂಗಳೂರಿನಲ್ಲಿ ವಿವಾಹವಾದರು.

ಮದುವೆಯಾದ ಮೂರು ತಿಂಗಳ ನಂತರ, 'ಪತಿ ನನ್ನನ್ನು ನಿಂದಿಸುತ್ತಾರೆ. ಅಸ್ವಾಭಾವಿಕ ಲೈಂಗಿಕತೆಗೆ ಒತ್ತಾಯಿಸುತ್ತಾರೆ' ಎಂದು ಪತ್ನಿ ಪೋಷಕರ ಮನೆ ಸೇರಿದ್ದರು. ಬಳಿಕ ಉತ್ತಮ ನಡವಳಿಕೆಯಿಂದ ವರ್ತಿಸುವುದಾಗಿ ಪತಿ ನೀಡಿದ್ದ ಭರವಸೆಯ ಮೇರೆಗೆ ಪುನಃ ಗಂಡನ ಮನೆಗೆ ಮರಳಿದ್ದರು. ಆದರೆ ಪತಿಯ ವರ್ತನೆಯಲ್ಲಿ ಯಾವುದೇ ಬದಲಾವಣೆ ಕಾಣದ ಕಾರಣ 2016ರಲ್ಲಿ ಕಾಯಮ್ಮಾಗಿ ಪತಿಯನ್ನು ತೊರೆದಿದ್ದರು.

ಇದಾದ ನಂತರ ಪತಿಯ ಬೆದರಿಕೆ ಹಿನ್ನೆಲೆಯಲ್ಲಿ ಮಹಿಳೆ, ಛತ್ತೀಸ್‌ಗಢ ಪೊಲೀಸರಿಗೆ ದೂರು ನೀಡಿದ್ದರು. ಪತಿ ಬೆಂಗಳೂರಿನಲ್ಲಿ ನೆಲೆಸಿದ್ದ ಕಾರಣ ಪೊಲೀಸರು ತನಿಖೆಯನ್ನು ನಗರ ಪೊಲೀಸರಿಗೆ ವರ್ಗಾವಣೆ ಮಾಡಿದ್ದರು.

ಸ್ವಾಮೀಜಿ ಸಾವು: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಳದ ಮಠ ಮಹಾಸಂಸ್ಥಾನದ ಪೀಠಾಧ್ಯಕ್ಷ ಶಾಂತವೀರ ಸ್ವಾಮೀಜಿ (80) ಸಾವು ಸಂಶಯಾಸ್ಪದವಾಗಿದ್ದು, ಈ ಬಗ್ಗೆ ವಿಶೇಷ ತಂಡ ರಚಿಸಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು' ಎಂದು ಸ್ವಾಮೀಜಿಯವರ ಪೂರ್ವಾಶ್ರಮದ ಕೆಲ ಸಂಬಂಧಿಕರು ಒತ್ತಾಯಿಸಿದ್ದಾರೆ.

'ಕೊಳದ ಮಠ ಮಹಾಸಂಸ್ಥಾನ' ಲೆಟರ್ ಹೆಡ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರಿಗೆ ದೂರು ನೀಡಿರುವ ಸಂಬಂಧಿಕರು, 'ನೂರಾರು ಕೋಟಿ ಬೆಲೆಬಾಳುವ 11 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಮಠವಿದೆ. ಚಿನ್ನಾಭರಣವೂ ಅಪಾರ ಪ್ರಮಾಣವಿದೆ. ಇದನ್ನೆಲ್ಲ ಕಬಳಿಸುವ ಉದ್ದೇಶದಿಂದ ಲಾಭಕ್ಕಾಗಿ ಸ್ವಾಮೀಜಿ ಅವರನ್ನು ಕೊಲೆ ಮಾಡಿರುವ ಅನುಮಾನ ನಮಗಿದೆ' ಎಂದೂ ದೂರಿನಲ್ಲಿ ಆಗ್ರಹಿಸಲಾಗಿದೆ.

'ಮಠಕ್ಕೆ ಆಡಳಿತಾಧಿಕಾರಿ ನೇಮಿಸಿ, ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡಿಸಬೇಕು' ಎಂದೂ ಅವರು ಆಗ್ರಹಿಸಿದ್ದಾರೆ. ದೂರು ಸ್ವೀಕರಿಸಿರುವ ಕಮಿಷನರ್, ಪರಿಶೀಲನೆಗಾಗಿ ಸಂಬಂಧಪಟ್ಟ ಠಾಣೆ ಪೊಲೀಸರಿಗೆ ಸೂಚನೆ ನೀಡಿದ್ದಾರೆ.

ಮರಣೋತ್ತರ ಪರೀಕ್ಷೆ ತಪ್ಪಿಸಿ ಸಾಕ್ಷ್ಯ ನಾಶ: 'ಏಪ್ರಿಲ್ 30ರಂದು ಮಠದ ಹಾಲ್‌ನಲ್ಲಿ ಮಲಗಿದ್ದ ಸ್ಥಿತಿಯಲ್ಲಿ ಸ್ವಾಮೀಜಿ ನಿಧನರಾದ ಬಗ್ಗೆ ನಮಗೆ ಸುದ್ದಿ ಬಂದಿತ್ತು. ಆದರೆ, ಅವರು ನಿತ್ಯವೂ ಕೊಠಡಿಯೊಳಗೆ ಮಲಗುತ್ತಿದ್ದರು. ಯಾವತ್ತು ಹಾಲ್‌ನಲ್ಲಿ ಮಲಗುತ್ತಿರಲಿಲ್ಲ. ಜೊತೆಗೆ, ಬಾಗಿಲನ್ನು ಒಳಗಿನಿಂದ ಲಾಕ್ ಮಾಡಲಾಗಿತ್ತೆಂದು ಹೇಳಲಾಗುತ್ತಿದೆ. ಇದು ಅನುಮಾನ ಮೂಡಿಸಿದೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

'ಸ್ವಾಮೀಜಿ ಹೃದಯಾಘಾತದಿಂದ ಮೃತಪಟ್ಟಿದ್ದಾಗಿ ಹೇಳಲಾಗುತ್ತಿದೆ. ಸಾವಿನ ಬಗ್ಗೆ ಸಂಶಯವಿದ್ದರೂ ಮರಣೋತ್ತರ ಪರೀಕ್ಷೆ ಮಾಡಿಸಿಲ್ಲ. ಈ ಬಗ್ಗೆ ಒತ್ತಾಯಿಸಿದ್ದಕ್ಕೆ ಸಂಬಂಧಿಕರ ವಿರುದ್ಧವೇ ಪೊಲೀಸರಿಗೆ ದೂರು ನೀಡಲಾಗಿದೆ. ಮರಣೋತ್ತರ ಪರೀಕ್ಷೆ ತಪ್ಪಿಸಿ ಸಾಕ್ಷ್ಯ ನಾಶಕ್ಕೆ ಯತ್ನಿಸಲಾಗಿದೆ. ಸ್ವಾಮೀಜಿಗೆ ₹5 ಕೋಟಿ ವಂಚಿಸಿದ್ದ ವೈದ್ಯನಿಂದಲೇ ಸ್ವಾಮೀಜಿ ಸಾವಿನ ಬಗ್ಗೆ ಪ್ರಮಾಣೀಕರಿಸಲಾಗಿದೆ. ಜೊತೆಗೆ, ಮಠದ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳು ಹಾಗೂ ಚಿನ್ನಾಭರಣಗಳು ನಾಪತ್ತೆಯಾಗಿವೆ. ಸ್ವಾಮೀಜಿ ಅವರ ಆರೋಗ್ಯವೂ ಚೆನ್ನಾಗಿತ್ತು. ಅವರ ದಿಢೀರ್ ಸಾವು ನಂಬಲಾಗುತ್ತಿಲ್ಲ. ಕೆಲ ವರ್ಷಗಳಿಂದ ಸ್ವಾಮೀಜಿ ಸುತ್ತಲೂ ದುಷ್ಟಕೂಟ ಸಕ್ರಿಯವಾಗಿತ್ತು. ಸ್ವಾಮೀಜಿಗೆ ಕಿರುಕುಳ ನೀಡುತ್ತಿತ್ತು. ಈ ಬಗ್ಗೆ ಸ್ವಾಮೀಜಿಯೇ ನಮಗೆ ಕರೆ ಮಾಡಿ ತಿಳಿಸಿದ್ದರು' ಎಂದು ದೂರಿದ್ದಾರೆ.

ರಾಕೇಶ್ ಟಿಕಾಯತ್ ಮೇಲೆ ಹಲ್ಲೆ ಪ್ರಕರಣ: ಆರೋಪಿಗಳು 6 ದಿನ ಪೊಲೀಸ್ ಕಸ್ಟಡಿಗೆ

ಸನ್ನಡತೆ ಮೇಲೆ ಬಿಡುಗಡೆಯಾಗಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಕಿಸಾನ್ ಒಕ್ಕೂಟದ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್ (55) ಮೇಲೆ ಮೈಕ್‌ನಿಂದ ಹಲ್ಲೆ ಮಾಡಿದ ಆರೋಪದಡಿ ಬಂಧಿಸಲಾಗಿರುವ ಶಿವಕುಮಾರ್ (50), ಕೊಲೆ ಪ್ರಕರಣದಲ್ಲಿ ಜೈಲು ಸೇರಿ ಸನ್ನಡತೆ ಆಧಾರದಲ್ಲಿ ಬಿಡುಗಡೆಯಾಗಿದ್ದ ಸಂಗತಿ ಪೊಲೀಸರ ತನಿಖೆಯಿಂದ ಗೊತ್ತಾಗಿದೆ

ನಗರದ ಗಾಂಧಿಭವನ ಸಭಾಭವನದಲ್ಲಿ ಸೋಮವಾರ (ಮೇ 30) ಆಯೋಜಿಸಿದ್ದ ರೈತ ಮುಖಂಡರ ಪತ್ರಿಕಾಗೋಷ್ಠಿಯಲ್ಲಿ ರಾಕೇಶ್ ಮೇಲೆ ಹಲ್ಲೆ ಮಾಡಿ, ಕಪ್ಪು ಮಸಿ ಎರಚಿ 'ಮೋದಿ... ಮೋದಿ...' ಘೋಷಣೆ ಕೂಗಲಾಗಿತ್ತು. ಈ ಕೃತ್ಯ ಎಸಗಿದ್ದ ಆರೋಪದಡಿ ಭಾರತ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಭರತ್ ಶೆಟ್ಟಿ, ಶಿವಕುಮಾರ್ ಹಾಗೂ ಪ್ರದೀಪ್ ಎಂಬುವರನ್ನು ಹೈಗ್ರೌಂಡ್ಸ್ ಪೊಲೀಸರು ಬಂಧಿಸಿದ್ದರು.

'ಮೂವರು ಆರೋಪಿಗಳನ್ನು ನ್ಯಾಯಾಲಯಕ್ಕೆ ಮಂಗಳವಾರ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ 6 ದಿನ ಕಸ್ಟಡಿಗೆ ಪಡೆಯಲಾಗಿದೆ. ಅವರ ಪೂರ್ವಾಪರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಹಾಸನದಲ್ಲಿ ಕೊಲೆ: 'ಪತ್ರಿಕಾಗೋಷ್ಠಿ ವೇಳೆ ವೇದಿಕೆಗೆ ನುಗ್ಗಿದ್ದ ಆರೋಪಿ ಶಿವಕುಮಾರ್, ರಾಕೇಶ್ ಅವರ ಮೇಲೆ ಹಲ್ಲೆ ಮಾಡಿದ್ದ. ಕೃತ್ಯ ತಡೆದಿದ್ದ ರೈತ ಸಂಘಟನೆ ಕಾರ್ಯಕರ್ತರಿಗೂ ಕುರ್ಚಿಯಿಂದ ಹೊಡೆದಿದ್ದ. ಇದರಿಂದಾಗಿ ಪರಸ್ಪರ ಮಾರಾಮಾರಿ ನಡೆದಿತ್ತು. ಆರೋಪಿ ಶಿವಕುಮಾರ್, ಹಾಸನದಲ್ಲಿ ನಡೆದಿದ್ದ ವ್ಯಕ್ತಿಯೊಬ್ಬರ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ. ಆರೋಪ ಸಾಬೀತಾಗಿದ್ದರಿಂದ ಈತನಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಕೆಲ ವರ್ಷ ಜೈಲಿನಲ್ಲಿದ್ದ ಆರೋಪಿ, ಸನ್ನಡತೆ ಆಧಾರದಲ್ಲಿ 2015ರಲ್ಲಿ ಬಿಡುಗಡೆಯಾಗಿದ್ದ.' ಎಂದು ಪೊಲೀಸರು ತಿಳಿಸಿದರು.

'ಜೈಲಿನಿಂದ ಹೊರಬಂದ ನಂತರ ಸಹೋದರಿ ಜೊತೆ ಸಂಘಟನೆಯೊಂದರಲ್ಲಿ ಸಕ್ರಿಯನಾಗಿದ್ದ. ಭರತ್ ಶೆಟ್ಟಿ ಹಾಗೂ ಇತರರ ಜೊತೆ ಒಡನಾಟ ಹೊಂದಿ, ಹಲವು ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಿದ್ದ. ಈತ ಮತ್ತಷ್ಟು ಅಪರಾಧ ಕೃತ್ಯದಲ್ಲಿ ಭಾಗಿಯಾಗಿದ್ದ ಮಾಹಿತಿ ಇದ್ದು, ಈ ಬಗ್ಗೆ ತನಿಖೆ ಮುಂದುವರಿಸಲಾಗಿದ. 'ಇನ್ನೊಬ್ಬ ಆರೋಪಿ ಪ್ರದೀಪ್, ಕ್ಯಾಬ್ ಚಾಲಕ. ಸಂಘಟನೆಯೊಂದರಲ್ಲಿ ಸಕ್ರಿಯನಾಗಿದ್ದ. ಆತನೇ ರಾಕೇಶ್ ಹಾಗೂ ಇತರರಿಗೆ ಮಸಿ ಎರಚಿದ್ದ. ಆರೋಪಿಗಳ ಜೊತೆಯಲ್ಲಿ ಕೆಲ ಮಹಿಳೆಯರು ಇದ್ದರು. ಅವರೆಲ್ಲ ತಲೆಮರೆಸಿಕೊಂಡಿದ್ದಾರೆ' ಎಂದರು.

'ಕನ್ನಡ ಮಾತನಾಡಲಿಲ್ಲವೆಂಬ ಕಾರಣಕ್ಕೆ ಹಲ್ಲೆ ಮಾಡಿ, ಮಸಿ ಎರಚಿದೆವು' ಎಂಬುದಾಗಿ ಆರೋಪಿಗಳು ಹೇಳಿಕೆ ನೀಡಿದ್ದಾರೆ. ಆದರೆ, ಇದು ದಿಕ್ಕು ತಪ್ಪಿಸುವ ಹೇಳಿಕೆ' ಎಂದು ಪೊಲೀಸರು ತಿಳಿಸಿದರು.

'ಕಾಂಗ್ರೆಸ್ ಮುಖಂಡರ ಜೊತೆಗೂ ಫೋಟೊ'

'ಬಿಜೆಪಿ ಮುಖಂಡರು ಮಾತ್ರವಲ್ಲದೇ, ಕಾಂಗ್ರೆಸ್ ಮುಖಂಡರ ಜೊತೆಗೂ ಆರೋಪಿ ಭರತ್ ಶೆಟ್ಟಿ ಫೋಟೊ ತೆಗೆಸಿಕೊಂಡಿದ್ದಾನೆ. ಈ ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಫೋಟೊ ತೆಗೆಸಿಕೊಂಡ ಮಾತ್ರಕ್ಕೆ ಮುಖಂಡರ ಜೊತೆ ಆರೋಪಿ ಒಡನಾಟ ಹೊಂದಿದ್ದನೆಂದು ಹೇಳಲಾಗದು' ಎಂದು ಪೊಲೀಸರು ತಿಳಿಸಿದರು.

'ಕನ್ನಡ ಮಾತನಾಡಲಿಲ್ಲವೆಂಬ ಕಾರಣಕ್ಕೆ ಹಲ್ಲೆ ಮಾಡಿ, ಮಸಿ ಎರಚಿದೆವು' ಎಂಬುದಾಗಿ ಆರೋಪಿಗಳು ಹೇಳಿಕೆ ನೀಡಿದ್ದಾರೆ. ಆದರೆ, ಇದು ದಿಕ್ಕು ತಪ್ಪಿಸುವ ಹೇಳಿಕೆ. ವ್ಯವಸ್ಥಿತ ಸಂಚು ರೂಪಿಸಿ ಕೃತ್ಯ ಎಸಗಿರುವುದಕ್ಕೆ ಪುರಾವೆಗಳು ಸಿಕ್ಕಿವೆ' ಎಂದು ಪೊಲೀಸರು ತಿಳಿಸಿದರು.

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಈ ಭೂಮಿಯ ಮೇಲೆ ಇಲ್ಲದ, ಬೇರೆ ಗ್ರಹದಲ್ಲೂ ಇಲ್ಲದ, ಕಣ್ಣಿಗೆ ಕಾಣದೆಯೇ ಇರುವ ಸೈಟುಗಳ ಬಗ್ಗೆ ಮಾತನಾಡುವಂತಾದರೆ ಹೇಗಿರುತ್ತದೆ?

ಆಳ-ಅಗಲ: ಸ್ತ್ರೀಶಕ್ತಿಗೆ 26 ದೇಶಗಳ ಚುಕ್ಕಾಣಿ

ಬಸವಣ್ಣ ವಿಚಾರ ಕೈಬಿಟ್ಟಿಲ್ಲ: ನಾಗೇಶ್ 4

‘ಕೈ’ ಗೆಲುವು ತಡೆಗೆ ‘ಕಮಲ’ ತಂತ್ರ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,566 ▼	16,584 ▼	₹52,850 (ಬೆಂಗಳೂರು) ▲	₹63,300 (ಬೆಂಗಳೂರು) ▼	77.71 ▼

EXAM DH ಪ್ರಜಾವಾಣಿ MASTERMIND™

UPSC ಆಕಾಂಕ್ಷಿಗಳಿಗೆ

ಆನ್‌ಲೈನ್ ಮಾಕ್ ಟೆಸ್ಟ್

UPSC ಪ್ರಿಲಿಮ್ಸ್ ಪರೀಕ್ಷೆಯ ನಿಮ್ಮ ಸಿದ್ಧತೆಯನ್ನು ಉಚಿತ ಮಾಸ್ಟರ್‌ಮೈಂಡ್ ಮಾಕ್ ಟೆಸ್ಟ್ (GS-1) ತೆಗೆದುಕೊಳ್ಳುವ ಮೂಲಕ ಪರೀಕ್ಷಿಸಿ.

ಪರೀಕ್ಷೆ ತೆಗೆದುಕೊಳ್ಳಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/EMMMT22ಗೆ ಭೇಟಿ ನೀಡಿ

ಸೂಚನೆ: ಈ ಮಾಕ್ ಟೆಸ್ಟ್ GS-1 ಪತ್ರಿಕೆಗೆ ಸಂಬಂಧಿಸಿದೆ ಹಾಗೂ ಎಲ್ಲಾ ಪ್ರಶ್ನೆಗಳು ಇಂಗ್ಲಿಷ್‌ನಲ್ಲಿರುತ್ತವೆ.

‘ಕನ್ನಡ ಪರಂಪರೆ ಕುಬ್ಜಗೊಳಿಸುವ ಯತ್ನ’

ಬೆಂಗಳೂರು: ‘ಕರ್ನಾಟಕ ಸರ್ಕಾರವು ಪಠ್ಯಪುಸ್ತಕಗಳ ಪರಿಷ್ಕರಣೆಗೆ ಸಮಿತಿ ರಚಿಸಿ, ಶಾಲಾ ಪಠ್ಯಗಳನ್ನು ಕೇಸರೀ-ಕರಣಗೊಳಿಸುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿರುವ ಏಳು ಜನ ಸಾಹಿತಿಗಳು ಮತ್ತು ಲೇಖಕರು ತಮ್ಮ ಪಠ್ಯದ ಬೋಧನೆಗೆ ನೀಡಿದ್ದ ಅನುಮತಿಯನ್ನು ವಾಪಸ್ ಪಡೆದಿದ್ದಾರೆ. 4

ಬಸವಣ್ಣ ಕುರಿತ ಪಠ್ಯ ಪರಿಷ್ಕರಣೆಗೆ ಸ್ವಾಮೀಜಿಗಳ ಆಕ್ರೋಶ

‘ಇತಿಹಾಸ ತಿರುಚಿ ಅಪಮಾನ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ/ಹುಬ್ಬಳ್ಳಿ: ಕಳೆದ ಕೆಲವು ಸಮಯದಿಂದ ಚರ್ಚೆಯಲ್ಲಿರುವ ಪಠ್ಯಪುಸ್ತಕ ಪರಿಷ್ಕರಣೆ ವಿವಾದ ಮತ್ತಷ್ಟು ತೀವ್ರಗೊಂಡಿದೆ. ‘9ನೇ ತರಗತಿ ಪರಿಷ್ಕೃತ ಸಮಾಜವಿಜ್ಞಾನ ಪಠ್ಯದಲ್ಲಿ ಬಸವಣ್ಣ ಅವರ ಇತಿಹಾಸ ತಿರುಚಲಾಗಿದೆ’ ಎಂದು ಇಬ್ಬರು ಸ್ವಾಮೀಜಿಗಳು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಬಸವದಳವೂ ಇದಕ್ಕೆ ದನಿಗೂಡಿಸಿದ್ದು, ಪರಿಷ್ಕೃತ ಪಠ್ಯವನ್ನು ಕೈಬಿಡಲು ಆಗ್ರಹಿಸಿದೆ.

‘ಬಸವಣ್ಣ ಕುರಿತಾದ ತಪ್ಪುಮಾಹಿತಿಯುಳ್ಳ ಪಠ್ಯ ಹಿಂಪಡೆದು ಪರಿಷ್ಕರಿಸಿ, ಇಲ್ಲ ಹಿಂದಿನ ಪಠ್ಯವನ್ನೇ ಮುಂದುವರಿಸಿ. ಇಲ್ಲದಿದ್ದರೆ ನಾಡಿನಾದ್ಯಂತ ಹೋರಾಟ ನಡೆಸುವುದು ಅನಿವಾರ್ಯ’ ಎಂದು ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಎಚ್ಚರಿಕೆ ನೀಡಿದ್ದಾರೆ.

4ನೇ ಪುಟ ನೋಡಿ

ಪರಿಷ್ಕೃತ ಪಠ್ಯದಲ್ಲಿರುವಂತೆ ‘ವಚನಕಾರರು ವೀರಶೈವ ಮತ ಸುಧಾರಿಸಿದರು’ ಎಂಬುದು ಶುದ್ಧ ಸುಳ್ಳು. ಅವರು ‘ಲಿಂಗಾಯತ ಧರ್ಮವನ್ನು ಜಾರಿಗೆ ತಂದರು’ ಎಂದಾಗಬೇಕಿತ್ತು.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಣೇಹಳ್ಳಿ

ಪಠ್ಯಪುಸ್ತಕ ಪರಿಷ್ಕರಣೆ ಮೂಲಕ ಕುವೆಂಪು, ಬಸವಣ್ಣ ಅವರ ತತ್ವಕ್ಕೆ ಅಪಚಾರವಾಗುವ ಕೆಲಸ ನಡೆಯುತ್ತಿದೆ. ಸೈದ್ಧಾಂತಿಕ ವಿಚಾರಗಳಿಗೆ ಯಾರೂ ಕೈ ಹಾಕಬಾರದು

ಬಸವ ಜಯಮೃತ್ಯುಂಜಯ ಸ್ವಾಮೀಜಿ

ಕೂಡಲಸಂಗಮ ಪಂಚಮಸಾಲಿ ಪೀಠ

ಬಸವಣ್ಣ ಪರಿಚಯದಲ್ಲೇನಿದೆ?

ಬಸವೇಶ್ವರರು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ಮಾದರಸ ಮತ್ತು ಮಾದಲಾಂಬಿಕೆಯ ಪುತ್ರ. ಸಂಸ್ಕೃತ ಮತ್ತು ಕನ್ನಡವನ್ನು ಕಲಿತು ತಮ್ಮ ಉಪನಯನದ ನಂತರ ಕೂಡಲ ಸಂಗಮಕ್ಕೆ ನಡೆದರು. ಅಲ್ಲಿ ಶೈವ ಗುರುಗಳ ಸಾನ್ನಿಧ್ಯದಲ್ಲಿ ಲಿಂಗದೀಕ್ಷೆ ಪಡೆದು ಧ್ಯಾನ ಸಾಧನೆ ಮಾಡಿದರು. ಇವರು ವೀರಶೈವ ಮತವನ್ನು ಅಭಿವೃದ್ಧಿ ಪಡಿಸಿದರು. ಧಾರ್ಮಿಕ, ಸಾಮಾಜಿಕ ಚಳವಳಿಯನ್ನು ಮಂಗಳವೇಡೆಯಲ್ಲಿ ಆರಂಭಿಸಿದರು.(ಪರಿಷ್ಕೃತ ಪಠ್ಯದ ಭಾಗ)

ವರದಿ ಆಧರಿಸಿ ಕ್ರಮ: ಬೊಮ್ಮಾಯಿ

ಮಂಗಳೂರು: ‘ಪಠ್ಯಪುಸ್ತಕ ಪರಿಷ್ಕರಣೆ ಕುರಿತ ವಿವಾದದ ಬಗ್ಗೆ ವರದಿ ನೀಡಲು ಶಿಕ್ಷಣ ಸಚಿವ ನಾಗೇಶ್ ಅವರಿಗೆ ಸೂಚಿಸಿದ್ದು, ವರದಿ ಆಧರಿಸಿ ಕ್ರಮಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ವಿವಾದದ ಎಲ್ಲ ಆಯಾಮಗಳ ಬಗ್ಗೆ ವರದಿ ನೀಡುವುದಾಗಿ ಶಿಕ್ಷಣ ಸಚಿವರು ತಿಳಿಸಿದ್ದಾರೆ. ಈಗಾಗಲೇ ಅವರು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿಮಾಡಿದ್ದಾರೆ. ದಾಖಲೆ ಸಹಿತವಾಗಿ ವಿವರಗಳನ್ನು ನೀಡುವುದಾಗಿ ಹೇಳಿದ್ದಾರೆ’ ಎಂದು ತಿಳಿಸಿದರು.

‘ಬೆಂಗಳೂರಿಗೆ ಮರಳುತ್ತಿದ್ದಂತೆಯೇ ಈ ವರದಿಯನ್ನು ಗಮನಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ’ ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಾಜ್ಯಸಭೆ: ನಾಲ್ಕನೇ ಸ್ಥಾನಕ್ಕೆ ತೀವ್ರ ಹಣಾಹಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೂನ್ 10 ರಂದು ನಡೆಯುವ ರಾಜ್ಯಸಭಾ ಚುನಾವಣೆಯಲ್ಲಿ ನಾಲ್ಕನೇ ಸ್ಥಾನಕ್ಕೆ ಮೂರು ಪಕ್ಷಗಳೂ ತಲಾ ಒಬ್ಬ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿರುವುದರಿಂದ ತೀವ್ರ ಹಣಾಹಣಿ ಏರ್ಪಟ್ಟಿದೆ.

ಒಟ್ಟು ನಾಲ್ಕು ಸ್ಥಾನಗಳಲ್ಲಿ ಬಿಜೆಪಿ 2 ಮತ್ತು ಕಾಂಗ್ರೆಸ್ 1 ಸ್ಥಾನವನ್ನು ಅನಾಯಾಸವಾಗಿ ಗೆದ್ದುಕೊಳ್ಳುವ ಸಾಧ್ಯತೆ ಇದೆ. ನಾಲ್ಕನೇ ಸ್ಥಾನಕ್ಕೆ ಮೂವರು ಅಭ್ಯರ್ಥಿಗಳು ಕಣದಲ್ಲಿ ಇರುವುದರಿಂದ, ನಾಮಪತ್ರ ಹಿಂದಕ್ಕೆ ಪಡೆಯದೇ ಇದ್ದರೆ ಮತದಾನ ಅನಿವಾರ್ಯವಾಗಲಿದೆ.

ಬಿಜೆಪಿಯಲ್ಲಿ ಇಬ್ಬರು ಅಭ್ಯರ್ಥಿಗಳಿಗೆ ತಲಾ 45 ಮತಗಳನ್ನು ಚಲಾಯಿಸಿದ (ಒಟ್ಟು 90 ಮತಗಳು) ನಂತರ 32 ಮತಗಳು ಹೆಚ್ಚುವರಿಯಾಗಿ ಉಳಿಯುತ್ತವೆ. ಕಾಂಗ್ರೆಸ್‌ನ ಒಬ್ಬ ಅಭ್ಯರ್ಥಿಗೆ 45 ಮತಗಳನ್ನು ನೀಡಿದ ನಂತರ 25 ಹೆಚ್ಚುವರಿ ಮತಗಳು ಉಳಿಯುತ್ತವೆ. ಜೆಡಿಎಸ್ ಬಳಿ 32 ಮತಗಳು ಮಾತ್ರ ಇವೆ. ಆಂಗ್ಲೊ ಇಂಡಿಯನ್ ಸದಸ್ಯೆಗೆ ಮತದಾನದ ಹಕ್ಕು ಇಲ್ಲ. ನಾಲ್ಕನೇ ಅಭ್ಯರ್ಥಿಯ ಗೆಲುವಿಗೆ ಎಷ್ಟು ಮತ ಅಗತ್ಯ ಎಂಬುದನ್ನು ಮತಗಳ ಚಲಾವಣೆ ಬಳಿಕ ತೀರ್ಮಾನಿಸಲಾಗುತ್ತದೆ.

ಬಿಜೆಪಿಯಿಂದ ಲಹರ್ ಸಿಂಗ್ ಸಿರೋಯಾ, ಕಾಂಗ್ರೆಸ್‌ನಿಂದ ಮನ್ಸೂರ್ ಅಲಿ ಖಾನ್ ಮತ್ತು ಜೆಡಿಎಸ್‌ನಿಂದ ಕುಪೇಂದ್ರರೆಡ್ಡಿ ನಾಲ್ಕನೇ ಅಭ್ಯರ್ಥಿಯಾಗಿ ಆಯ್ಕೆಯಾಗಲು ಜಿದ್ದಾಜಿದ್ದಿನ ಪೈಪೋಟಿ ನಡೆಸಿದ್ದಾರೆ. ಬಿಜೆಪಿ ಮತ್ತು ಕಾಂಗ್ರೆಸ್ ಎರಡನೇ ಪ್ರಾಶಸ್ತ್ಯದ ಮತಗಳನ್ನು ಚಲಾಯಿಸಬಹುದು.

ಕಾಂಗ್ರೆಸ್ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿ ಜೆಡಿಎಸ್‌ನ ಜಾತ್ಯತೀತ ನಿಲುವಿಗೆ ಸವಾಲು ಹಾಕಿತ್ತು. ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದೇ ಮುಸ್ಲಿಂ ಅಭ್ಯರ್ಥಿಯನ್ನು ಬೆಂಬಲಿಸಬೇಕು. ಒಂದು ವೇಳೆ ಬಿಜೆಪಿಯ ಅಭ್ಯರ್ಥಿಯನ್ನು ಬೆಂಬಲಿಸಿದರೆ, ಬಿಜೆಪಿಯ ‘ಬಿ’ ಟೀಂ ಎಂದು ಬಿಂಬಿಸಲು ಸಿದ್ದರಾಮಯ್ಯ ಬಣ ರಣತಂತ್ರ ಹೆಣೆದಿತ್ತು. ಇದಕ್ಕಾಗಿ ಡಿ.ಕೆ.ಶಿವಕುಮಾರ್ ಒಪ್ಪಿಗೆ ಪಡೆದೇ ಮನ್ಸೂರ್ ಖಾನ್ ಅವರನ್ನು ಕಣಕ್ಕೆ ಇಳಿಸಿತ್ತು ಎಂದು ಮೂಲಗಳು ಹೇಳಿವೆ.

ಆದರೆ, ಜೆಡಿಎಸ್ ಬೇರೆಯದೇ ಲೆಕ್ಕಾಚಾರ ಹಾಕಿ ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕೆ ಇಳಿಸಲು ತೀರ್ಮಾನಿಸಿದೆ. ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕೆ ಇಳಿಸಲು ಎಚ್‌.ಡಿ.ದೇವೇಗೌಡರೇ ಹೆಚ್ಚಿನ ಉತ್ಸಾಹ ತೋರಿದ್ದರು. ಈ ಸಂಬಂಧ ದೆಹಲಿಯಲ್ಲಿರುವ ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರ ಬೆಂಬಲವನ್ನೂ ಕೋರಿದ್ದರು ಎನ್ನಲಾಗಿದೆ. ಆದರೆ, ಸ್ಥಳೀಯ ಕಾಂಗ್ರೆಸ್ ನಾಯಕರು ಬೇರೆಯದೇ ತಂತ್ರ ಹೆಣೆದು ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದರು. ಇದರಿಂದ ಜೆಡಿಎಸ್ ಅಭ್ಯರ್ಥಿ ಯಾವ ತಂತ್ರ ಅನುಸರಿಸುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

4ನೇ ಪುಟ ನೋಡಿ

ಕುಲಪತಿ ಹುದ್ದೆ: ಮೂವರ ಹೆಸರು ಶಿಫಾರಸು

ತುಮಕೂರು: ತುಮಕೂರು ವಿಶ್ವವಿದ್ಯಾಲಯದ ಕುಲಪತಿ ನೇಮಕ ಶೋಧನಾ ಸಮಿತಿ ಮೂವರ ಹೆಸರನ್ನು ಸರ್ಕಾರಕ್ಕೆ ಶಿಫಾರಸು ಮಾಡಿದೆ. ಬೆಂಗಳೂರು ಯುವಿಸಿಇ ಪ್ರಾಂಶುಪಾಲ ಪ್ರೊ.ರಮೇಶ್, ಮೈಸೂರು ವಿವಿ ಮನೋವಿಜ್ಞಾನ ವಿಭಾಗದ ಪ್ರೊ.ಪ್ರಸನ್ನ ಕುಮಾರ್, ಬೆಂಗಳೂರು ವಿವಿ ಪತ್ರಿಕೋದ್ಯಮ ವಿಭಾಗದ ಪ್ರೊ.ಬಿ.ಕೆ.ರವಿ ಹೆಸರನ್ನು ಶಿಫಾರಸು ಮಾಡಲಾಗಿದೆ.

TDR REQUIRED

Puravankara Limited requires TDR with clear title for immediate purchase. Revalidated/New TDR can also be considered subject to establishing guideline value.

Interested parties may contact
D S Patil: 9880035001
M G Sandeep: 9611268269
sandeep.mg@puravankara.com

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101
ದೂರವಾಣಿ ಸಂಖ್ಯೆ: ಕಛೇರಿ: 08156-270427
ಫ್ಯಾಕ್ಸ್: 08156 – 270427 ಇಮೇಲ್ – eemidcbpura@gmail.com

ಸಂಖ್ಯೆ :ಕಾ.ಪಾ.ಇಂ/ಸ.ನೀ ಮತ್ತು ಅ.ಅ.ವಿ/ಚಿಕ್ಕ/ತಾಂ-ಸ/ಸ.ಇಂ-2/ಟೆಂಡರ್ ಮುಂದೂಡಿಕೆ ವಿ.ವ್ಯಾಲಿ/970/2022-23, ದಿನಾಂಕ :30-05-2022

ಅನಿರ್ದಿಷ್ಟಾವಧಿ ಟೆಂಡರ್ ಮುಂದೂಡಿಕೆ

ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 04/2022-23 ದಿನಾಂಕ: 25-05-2022 ರಲ್ಲಿ ಆಹ್ವಾನಿಸಲಾಗಿದ್ದ ವೃಷಭಾವತಿ ವ್ಯಾಲಿ (ವಿ ವ್ಯಾಲಿ) ಯೋಜನೆಯ ಮೊದಲನೇ ಹಂತದಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಯ ಟೆಂಡರನ್ನು ಕೆಲವು ತಾಂತ್ರಿಕ ಕಾರಣಾಂತರಗಳಿಂದ ಅನಿರ್ದಿಷ್ಟಾವಧಿ ಮುಂದೂಡಿಕೆ ಮಾಡಲಾಗಿರುತ್ತದೆ. ಮುಂದಿನ ದಿನಾಂಕಗಳನ್ನು ಜಾಹಿರಾತಿನ ಮೂಲಕ ತಿಳಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ರಸ್ತೆ ಗುಂಡಿ ಮುಚ್ಚುವ ಯಂತ್ರದ ಮೊತ್ತ ಎಷ್ಟು: ಹೈಕೋರ್ಟ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಬಳಸಲಾಗುತ್ತಿರುವ ಪೈಥಾನ್ ಯಂತ್ರಕ್ಕೆ ಪ್ರತಿ ಗಂಟೆಗೆ ಎಷ್ಟು ಹಣ ಪಾವತಿಸಲಾಗುತ್ತದೆ ಎಂಬ ಬಗ್ಗೆ ಪರಿಶೀಲಿಸಿ ಜೂನ್ 6 ರಂದು ವರದಿ ಸಲ್ಲಿಸಿ' ಎಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಹೈಕೋರ್ಟ್ ನಿರ್ದೇಶಿಸಿದೆ.

'ನಗರ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಲು ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ವಿಜಯನ್ ಮೆನನ್ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, 'ಬಿಬಿಎಂಪಿ ಮುಖ್ಯ ಆಯುಕ್ತರು ಪೈಥಾನ್ ಯಂತ್ರಕ್ಕೆ ಪ್ರತಿ ಗಂಟೆಗೆ ಎಷ್ಟು ಹಣ ಪಾವತಿಸಲಾಗುತ್ತದೆ ಎಂಬ ಬಗ್ಗೆ ವೈಯಕ್ತಿಕವಾಗಿ ಪರಿಶೀಲನೆ ನಡೆಸಿ ನಿರ್ಧರಿಸಲು ಉದ್ದೇಶಿಸಿದ್ದಾರೆ. ಅಲ್ಲದೆ, ಪೈಥಾನ್ ಯಂತ್ರ ಬಳಸಿ ಗುಂಡಿ ಮುಚ್ಚುವ ಕಾರ್ಯದ ಗುತ್ತಿಗೆ ಪಡೆದಿರುವ ಅಮೆರಿಕ್ ರೋಡ್ ಟೆಕ್ನಾಲಜೀಸ್ ಸಲ್ಯೂಷನ್ಸ್‌ಗೆ (ಎಆರ್‌ಟಿಎಸ್) ಬಾಕಿ ಹಣ ಪಾವತಿಸುವುದಕ್ಕೂ ಕ್ರಮ ಕೈಗೊಳ್ಳಲಾಗುವುದು. ಅದಕ್ಕಾಗಿ ಕಾಲಾವಕಾಶ ನೀಡಬೇಕು' ಎಂಬ ಕೋರಿದರು.

ಇದಕ್ಕೂ ಮುನ್ನ ಎಆರ್‌ಟಿಎಸ್ ಪರ ಹಿರಿಯ ವಕೀಲೆ ಜಯ್ನಾ ಕೊಠಾರಿ, 'ರಸ್ತೆ ಗುಂಡಿ ಮುಚ್ಚಲು ಪೈಥಾನ್ ಯಂತ್ರ ಬಳಸುವುದಕ್ಕೆ ಲೋಕೋಪಯೋಗಿ ಇಲಾಖೆ ನಿಗದಿಪಡಿಸಿರುವ ಪ್ರತಿ ಗಂಟೆಗೆ ₹1,249 ನೀಡುವಂತೆ ಎಆರ್‌ಟಿಎಸ್ ಕೋರಿದೆ. ಆದರೆ, ಬಿಬಿಎಂಪಿ ಕಡಿಮೆ ಹಣ ಪಾವತಿಸಲು ಮುಂದಾಗಿದೆ. ಇದೇ ವಿಚಾರವಾಗಿ ಸಮಾಲೋಚಿಸಲು ಮೇ 27ರಂದು ಕರೆದಿದ್ದ ಸಭೆಯಲ್ಲಿ ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್, ಎಆರ್‌ಟಿಎಸ್ ಕಂಪನಿಯ ವ್ಯವಸ್ಥಾಪಕಿಯ ಪತಿಯ ಮೇಲೆ ಹಲ್ಲೆ ನಡೆಸಿದ್ದಾರೆ. ಹಲ್ಲೆಗೊಳಗಾದವರು ಕಂಪನಿಯ ನಿರ್ದೇಶಕರಾಗಿದ್ದಾರೆ. ಈ ಸಂಬಂಧ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪ್ರಹ್ಲಾದ್ ವಿರುದ್ಧ ಲಿಖಿತ ದೂರು ನೀಡಿದ್ದಾರೆ' ಎಂದು ವಿವರಿಸಿದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, 'ಪ್ರಹ್ಲಾದ್ ವಿರುದ್ಧದ ದೂರಿನ ಬಗ್ಗೆ ಮುಖ್ಯ ಆಯುಕ್ತರು ಕೈಗೊಂಡಿರುವ ಕ್ರಮಗಳ ಕುರಿತು ಮುಂದಿನ ವಿಚಾರಣೆ ವೇಳೆ ವರದಿ ಸಲ್ಲಿಸಬೇಕು' ಎಂದು ಸೂಚಿಸಿತು. ವಿಚಾರಣೆಯನ್ನು ಜೂನ್ 6ಕ್ಕೆ ಮುಂದೂಡಲಾಗಿದೆ.

ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸುವ ಎಚ್ಚರಿಕೆ

'ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಈ ಹಿಂದೆ ನೀಡಿರುವ ನಿರ್ದೇಶನಗಳ ಅನುಪಾಲನಾ ವರದಿ ಸಲ್ಲಿಸಲು ಎರಡು ದಿನ ಕಾಲಾವಕಾಶ ನೀಡಬೇಕು' ಎಂಬ ಬಿಬಿಎಂಪಿ ಪರ ವಕೀಲರ ಮನವಿಗೆ ನ್ಯಾಯಪೀಠ ಗರಂ ಆಯಿತು.

'ನಿಮ್ಮ ಸಮಸ್ಯೆ ಏನಾದರೂ ಇರಬಹುದು. ಅದು ನ್ಯಾಯಾಲಯಕ್ಕೆ ಬೇಕಿಲ್ಲ. ರಸ್ತೆ ರಿಪೇರಿಯಾಗಬೇಕಷ್ಟೆ. ನ್ಯಾಯಾಲಯದ ಆದೇಶಗಳನ್ನು ಬಿಬಿಎಂಪಿ ಪಾಲಿಸುತ್ತಿಲ್ಲ. ಜೂನ್ 2ರಿಂದ ರಾಜ್ಯಕ್ಕೆ ಮುಂಗಾರು ಪ್ರವೇಶಿಸಲಿದೆ ಎಂದು ಅಂದಾಜಿಸಲಾಗಿದ್ದರೂ ಯಾವುದೇ ಕೆಲಸವಾಗಿಲ್ಲ. ಈಗ ನೋಡಿದರೆ ಕಚೇರಿಯಲ್ಲಿ ಕೈಕೈ ಮಿಲಾಯಿಸಿಕೊಳ್ಳುತ್ತಿದ್ದೀರಿ. ಪಾಲಿಕೆ ಸೂಕ್ತ ಪರಿಹಾರಗಳೊಂದಿಗೆ ಬರದೇ ಹೋದಲ್ಲಿ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ಎಚ್ಚರಿಸಿತು.

ಸುದ್ದಿ 2 ನಿಮಿಷ

ವಾರ್ಡ್‌ಗಳ ಪುನರ್ ವಿಂಗಡಣೆ ವರದಿ: ಸಮಯಾವಕಾಶ ಕೋರಿದ ಬಿಬಿಎಂಪಿ

ಬೆಂಗಳೂರು: ಬಿಬಿಎಂಪಿ ವಾರ್ಡ್‌ಗಳ ಪುನರ್ ವಿಂಗಡಣೆ ವರದಿ ಸಲ್ಲಿಸಲು ಇನ್ನೆರಡು ದಿನಗಳ ಕಾಲಾವಕಾಶ ನೀಡುವಂತೆ ಬಿಬಿಎಂಪಿ ನಗರಾಭಿವೃದ್ಧಿ ಇಲಾಖೆಯನ್ನು ಕೋರಿದೆ.

ಪುನರ್ ವಿಂಗಡಣೆಯ ಕರಡು ಪ್ರತಿ ಸಿದ್ಧವಾಗಿದೆ. ಆದರೆ, ಮುಖ್ಯಮಂತ್ರಿ ಅವರ ಗಮನಕ್ಕೆ ತಂದ ಬಳಿಕವೇ ವರದಿ ಸಲ್ಲಿಸಲು ಬಿಬಿಎಂಪಿ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಪುನರ್ ವಿಂಗಡಣೆ ವರದಿಯನ್ನು ತಕ್ಷಣವೇ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆಯು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಮೇ22ರಂದು ಸೂಚಿಸಿತ್ತು.

ಅಹಲ್ಯಾ ಬಾಯಿ ಹೋಳ್ಕರ್ ಜನ್ಮದಿನಾಚರಣೆ

ಬೆಂಗಳೂರು: ಶಿಕ್ಷಣ ಒಂದು ಜಾತಿಯವರಿಗಷ್ಟೇ ಸೀಮಿತವಾದುದು ಎಂಬ ಮನೋಭಾವವನ್ನು ಸಮಾಜದಲ್ಲಿ ಬೇರುಸಮೇತ ಕಿತ್ತು ಹಾಕಬೇಕು. ಪರಿಶಿಷ್ಟರು, ಹಿಂದುಳಿದ ವರ್ಗಗಳು, ಮಹಿಳೆಯರು ಸೇರಿದಂತೆ ಸಮಾಜದ ಎಲ್ಲ ಜನರೂ ಶಿಕ್ಷಣದ ಮೂಲಕವೇ ಅಭಿವೃದ್ಧಿ ಸಾಧಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ರಾಜ್ಯ ಅಹಲ್ಯಾ ಬಾಯಿ ಹೋಳ್ಕರ್ ಮಹಿಳಾ ಸಂಘದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಅಹಲ್ಯಾ ಬಾಯಿ ಹೋಳ್ಕರ್ ಅವರ 297ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಶಿಕ್ಷಣ ಪಡೆದರೆ ಮಾತ್ರ ನಾವು ಸ್ವಾಭಿಮಾನದಿಂದ ಬದುಕಲು ಸಾಧ್ಯ ಎಂಬುದನ್ನು ಅರಿತುಕೊಳ್ಳಬೇಕು. ಜಾತಿ, ಧರ್ಮ, ಲಿಂಗಗಳ ತಾರತಮ್ಯ ಇಲ್ಲದೆ ಎಲ್ಲರೂ ಉತ್ತಮ ಶಿಕ್ಷಣ ಪಡೆದರೆ ಸಮಾಜಕ್ಕೆ ಹೊರೆಯಾಗದಂತೆ ಬದುಕಲು ಸಾಧ್ಯ' ಎಂದರು.

ಆಂಧ್ರಪ್ರದೇಶದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಉಷಾಶ್ರೀ ಚರಣ್ ಮಾತನಾಡಿ, 'ಅಹಲ್ಯಾ ಬಾಯಿ ಹೋಳ್ಕರ್ ಅವರು ಮಹಿಳಾ ಸಬಲೀಕರಣಕ್ಕೆ ಶ್ರಮಿಸಿದ ಧೀಮಂತ ಮಹಿಳೆ. ಮೂಢನಂಬಿಕೆಯ ವಿರುದ್ಧದ ಹೋರಾಟದ ಮೂಲಕವೂ ಮಹಿಳೆಯರಿಗೆ ಶಕ್ತಿ ತುಂಬಿದ್ದರು' ಎಂದರು. ಸಾಹಿತಿ ಮಲ್ಲಿಕಾ ಘಂಟಿ ಅವರು ಅಹಲ್ಯಾಬಾಯಿ ಹೋಳ್ಕರ್ ಕುರಿತು ಉಪನ್ಯಾಸ ನೀಡಿದರು. ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ, ಕರ್ನಾಟಕ ಪ್ರದೇಶ ಕುರುಬರ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಪ್ರಭಾವತಿ ಕೆ. ಆರ್., ಗುಜರಾತಿನ ಕುರುಬ ಸಮಾಜದ ಧಾರ್ಮಿಕ ಮುಖಂಡ ಅರ್ಜುನ್ ಬಾಯಿ ಬುವಾಜಿ, ಅಹಲ್ಯಾಬಾಯಿ ಹೋಳ್ಕರ್ ಮಹಿಳಾ ಸಂಘದ ಅಧ್ಯಕ್ಷೆ ಕೆ.ಆರ್. ವಚನಾ ಪ್ರಸನ್ನಕುಮಾರ್ ಇದ್ದರು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ CENTUM

CIN: L85110KA1993PLC013869
ನೋಂದಾಯಿತ ಕಛೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂ ಟೌನ್, ಬೆಂಗಳೂರು – 560 106
Tel: 080 - 4143 6000 Fax: 080 - 4143 6005
Email: investors@centumelectronics.com Website: www.centumelectronics.com

ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ಇಕ್ವಿಟಿ ಷೇರುಗಳ ವರ್ಗಾವಣೆ ಕುರಿತು ಇಕ್ವಿಟಿ ಷೇರುದಾರರಿಗೆ ಸೂಚನೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 124ರ ನಿಯಮಗಳನ್ನು ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ (ಅಕೌಂಟಿಂಗ್, ಆಡಿಟ್, ಟ್ರಾನ್ಸ್‌ಫರ್ & ರಿಫಂಡ್) ನಿಯಮಗಳು, 2016 ರೊಂದಿಗೆ ಮತ್ತು ಅದಕ್ಕೆ ಮಾಡಲಾದ ತಿದ್ದುಪಡಿಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳನುಸಾರ, ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ (ಐಇಪಿಎಫ್) ಇವರಲ್ಲಿ ಕ್ಲೇಮ್ ಆಗದಿರುವ ಡಿವಿಡೆಂಡ್‌ಗೆ ಸಂಬಂಧಿತ ಕಂಪನಿಯ ಇಕ್ವಿಟಿ ಷೇರುಗಳ ವರ್ಗಾವಣೆ ಕುರಿತು ಇಕ್ವಿಟಿ ಷೇರುದಾರರಿಗೆ ಈ ಮಾಹಿತಿ.

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 125ರ ನಿಯಮಗಳು ಮತ್ತು ಮೇಲೆ ತಿಳಿಸಲಾಗಿರುವ ನಿಯಮಾವಳಿಗಳ ಪ್ರಕಾರ, ನಿರಂತರವಾಗಿ ಏಳು ವರ್ಷಗಳಿಂದ ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳಿಂದ ಡಿವಿಡಂಡ್ ಕ್ಲೇಮ್ ಆಗದಿರುವ ಎಲ್ಲಾ ಷೇರುಗಳನ್ನು ಐಇಪಿಎಫ್ ಪ್ರಾಧಿಕಾರದ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆ ಮಾಡಬೇಕಾಗುತ್ತದೆ. ಕಂಪನಿಯು ತನ್ನ ಹಣಕಾಸು ವರ್ಷ 2014-15ನೇ ಸಾಲಿಗೆ ಘೋಷಿಸಿರುವ ಅಂತಿಮ ಡಿವಿಡೆಂಡ್‌ಗೆ ಸಂಬಂಧಿಸಿದಂತೆ, ಕಾಯ್ದೆ ಮತ್ತು ಐಇಪಿಎಫ್ ನಿಯಮಾವಳಿಗಳ ಪ್ರಕಾರ ಷೇರುಗಳ ವರ್ಗಾವಣೆಗೆ ಅಂತಿಮ ದಿನಾಂಕ 31ನೇ ಆಗಸ್ಟ್, 2022 ಆಗಿರುತ್ತದೆ. ಐಇಪಿಎಫ್ ನಿಯಮಾವಳಿಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಪ್ರಕಾರ, ಹೀಗೆ ಕ್ಲೇಮ್ ಆಗದಿರುವ ಡಿವಿಡಂಡ್‌ಗೆ ಸಂಬಂಧಿತ ಅನುಕ್ರಮ ಷೇರುಗಳನ್ನು ಕೂಡ ವರ್ಗಾವಣೆ ಮಾಡಲಾಗುತ್ತದೆ.

ಡಿವಿಡಂಡ್‌ನ ಕ್ಲೇಮ್‌ಗಾಗಿ ಸೂಕ್ತ ಕ್ರಮ ಕೈಗೊಳ್ಳಲೆಂದು, ಯಾರ ಷೇರುಗಳ ವರ್ಗಾವಣೆಗೊಳ್ಳುವ ಸಾಧ್ಯತೆ ಇದೆಯೊ ಅಂತಹ ಷೇರುದಾರರಿಗೆ ಕಂಪನಿಯು ವೈಯಕ್ತಿಕವಾಗಿ ಮಾಹಿತಿ ರವಾನಿಸಿದೆ. ಕಂಪನಿಯು ಇಂತಹ ಷೇರುದಾರರ ಸಂಪೂರ್ಣ ವಿವರವನ್ನು ತನ್ನ ವೆಬ್‌ಸೈಟ್ https://www.centumelectronics.com/ unclaimed-dividends/ ನಲ್ಲಿ ಕೂಡ ಪ್ರಕಟಿಸಿರುತ್ತದೆ.

ನಿರಂತರವಾಗಿ 7 ವರ್ಷಗಳ ಅವಧಿಗೆ ಕ್ಲೇಮ್ ಆಗದಿರುವ ಡಿವಿಡಂಡ್‌ಗೆ ಸಂಬಂಧಿತ ಷೇರುಗಳು:

- ಡಿಮ್ಯಾಟ್ ರೂಪದ ಷೇರುಗಳಾಗಿದ್ದಲ್ಲಿ, ಅಂತಹವುಗಳನ್ನು ನೇರವಾಗಿ ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಇವರೊಂದಿಗೆ ನಿರ್ವಹಿಸಲಾಗುತ್ತಿರುವ ಐಇಪಿಎಫ್ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆ ಮಾಡಲಾಗುತ್ತದೆ.
- ಭೌತಿಕ ರೂಪದ ಷೇರುಗಳು ಯಾವುದಾದರೂ ಇದ್ದಲ್ಲಿ, ಅಂತಹ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸಲು ಮೂಲ ಷೇರು ಪ್ರಮಾಣಪತ್ರಗಳು ರದ್ದುಗೊಳಿಸುವ ಜೊತೆಗೆ ಹೊಸ ಫೋಲಿಯೊ ಮತ್ತು ಪ್ರಮಾಣಪತ್ರ ಸಂಖ್ಯೆಗಳನ್ನು ನೀಡಲಾಗುತ್ತದೆ. ಸದರಿ ಷೇರುಗಳನ್ನು ಡಿಮ್ಯಾಟ್ ರೂಪದಲ್ಲಿ ಮಾರ್ಪಡಿಸಲು ಮತ್ತು ಐಇಪಿಎಫ್ ಪರವಾಗಿ ವರ್ಗಾಯಿಸಲು ವ್ಯವಹಾರಿಕ ಕ್ರಮ ಕೈಗೊಳ್ಳುವ ಮೂಲಕ ಕಂಪನಿಯು ಎನ್‌ಎಸ್‌ಡಿಎಲ್ ಇವರಿಗೆ ಮಾಹಿತಿ ನೀಡಬಹುದಾಗಿರುತ್ತದೆ.

ಒಂದು ವೇಳೆ ಸಂಬಂಧಿತ ಷೇರುದಾರರಿಂದ ಕಂಪನಿಗೆ 25ನೇ ಆಗಸ್ಟ್, 2022 ರೊಳಗೆ ಯಾವುದೇ ರೀತಿಯ ಪ್ರತಿಕ್ರಿಯೆ ಲಭಿಸದಿದ್ದಲ್ಲಿ, ಐಇಪಿಎಫ್ ನಿಯಮಗಳ ಪ್ರಕಾರ ಕಂಪನಿಯಿಂದ ಅಂತಹ ಕ್ಲೇಮ್ ಆಗದಿರುವ ಡಿವಿಡಂಡ್‌ನ್ನು ನಿಗದಿತ ದಿನಾಂಕದಂದು ಅಥವಾ ಮೊದಲು ವರ್ಗಾವಣೆ ಮಾಡಲಾಗುತ್ತದೆ. ಅನುಕ್ರಮವಾದ ಷೇರುಗಳನ್ನು ಕೂಡ ಷೇರುದಾರರಿಗೆ ಯಾವುದೇ ಮುನ್ಸೂಚನೆ ನೀಡದೆಯೇ ವರ್ಗಾವಣೆ ಮಾಡಲಾಗುತ್ತದೆ.

ಮೇಲೆ ತಿಳಿಸಿರುವಂತೆ, ಕಂಪನಿಯಿಂದ ಒಂದು ಬಾರಿ ಡಿವಿಡಂಡ್ ಮತ್ತು ಇಕ್ವಿಟಿ ಷೇರುಗಳನ್ನು ವರ್ಗಾವಣೆ ಮಾಡಿದ ನಂತರ, ಷೇರುದಾರರು ತಮ್ಮ ಕ್ಲೇಮ್ ಆಗದಿರುವ ಡಿವಿಡೆಂಡ್ ಅನ್ನು ಮತ್ತು ಇಕ್ವಿಟಿ ಷೇರುಗಳನ್ನು ಐಇಪಿಎಫ್ ನಿಯಮಾವಳಿಗಳ ಪ್ರಕಾರ ಐಇಪಿಎಫ್ ಪ್ರಾಧಿಕಾರಿಯಿಂದ ಮಾತ್ರ ಕ್ಲೇಮ್ ಮಾಡಿಕೊಳ್ಳಬಹುದಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಂಪನಿಗೆ ಪ್ರತಿಯಾಗಿ ಯಾವುದೇ ಕ್ಲೇಮ್ ಮಾಡಲು ಅವಕಾಶವಿರುವುದಿಲ್ಲ ಎಂಬುದು ದಯವಿಟ್ಟು ಗಮನದಲ್ಲಿರಲಿ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಷೇರುದಾರರಿಗೆ ಯಾವುದೇ ವಿಚಾರಣೆಗಳಿದ್ದಲ್ಲಿ, ನಮ್ಮ ರಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ಸ್ ಕೇಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಇವರನ್ನು ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಬೇಕೆಂದು ಕೋರಲಾಗಿದೆ:

ಘಟಕ: ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
ಸೆಲೆನಿಯಮ್ ಟವರ್ ಬಿ, ಪ್ಲಾಟ್ ಸಂಖ್ಯೆ 31 ಮತ್ತು 32,
ಹಣಕಾಸು ಜಿಲ್ಲೆ, ನಾನಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ್,
ಹೈದರಾಬಾದ್ - 500 032, ಫೋನ್ ಸಂಖ್ಯೆ: +91 40 6716 2222,
ಇಮೇಲ್: einward.ris@kfintech.com

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಇಂದು ಎಚ್ ಎಸ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಾಯೆನ್ಸ್ ಆಫೀಸರ್

ಬೆಂಗಳೂರು
31ನೇ ಮೇ, 2022

ಗಾಂಧಿ ಬಜಾರ್ ನವೀಕರಣ ವಿನ್ಯಾಸ ಪ್ರದರ್ಶನ

ನವೀಕರಣ: ಪರ–ವಿರೋಧ

ಪ್ರಜಾವಾಣಿ ವಾರ್ತೆ

ಶಾಸಕ ಉದಯ ಗರುಡಾಚಾರ್ ಅವರ ಬಳಿ ವರ್ತಕರು ಸಮಸ್ಯೆ ಹೇಳಿಕೊಂಡರು

ಬೆಂಗಳೂರು: ಗಾಂಧಿ ಬಜಾರ್ ರಸ್ತೆ ನವೀಕರಣಕ್ಕೆ ನಗರ ಭೂ ಸಾರಿಗೆ ನಿರ್ದೇಶನಾಲಯ(ಡಲ್ಟ್) ಯೋಜನೆ ರೂಪಿಸಿದ್ದು, ಇದು ಇಲ್ಲಿನ ಅಂಗಡಿಗಳ ವರ್ತಕರ ವಿರೋಧಕ್ಕೆ ಕಾರಣವಾಗಿದೆ.

ಚರ್ಚ್ ಸ್ಟ್ರೀಟ್ ಮಾದರಿಯಲ್ಲಿ ಅಭಿವೃದ್ಧಿಪಡಿಸಿ ವಾಹನ ಸಂಚಾರ ನಿರ್ಬಂಧಿಸಲು ಯೋಜನೆ ರೂಪಿಸಲಾಗಿತ್ತು. ಅದಕ್ಕೆ ವಿರೋಧ ವ್ಯಕ್ತವಾದ ಬಳಿಕ ಈಗ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲು ಉದ್ದೇಶಿಸಿದೆ. ಆದರೆ, ರಸ್ತೆಯನ್ನು ಕಿರಿದುಗೊಳಿಸಿ ವಿಶಾಲವಾದ ಪಾದಚಾರಿ ಮಾರ್ಗ ನಿರ್ಮಿಸಲು ಯೋಜಿಸಲಾಗಿದೆ. ಆಂಬುಲೆನ್ಸ್, ಅಗ್ನಿಶಾಮಕ ಮತ್ತು ಬಿಎಂಟಿಸಿ ಬಸ್‌ಗಳ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲು ಉದ್ದೇಶಿಸಿದೆ. ಬೀದಿಬದಿ ವ್ಯಾಪಾರಕ್ಕೆ ಶೆಲ್ಟರ್‌ಗಳನ್ನು ನಿರ್ಮಿಸಿಕೊಡುವ ಪ್ರಸ್ತಾಪವನ್ನೂ ಯೋಜನೆ ಒಳಗೊಂಡಿದೆ.

ಯೋಜನೆಯ ಸಂಪೂರ್ಣ ವಿವರ ವನ್ನು ಟಾಗೋರ್ ಪಾರ್ಕ್ ಸಭಾ ಮಂಟ ಪದಲ್ಲಿ ಮಂಗಳವಾರ ಪ್ರದರ್ಶಿಸಲಾಯಿತು. ಬೀದಿ ಬದಿ ವ್ಯಾಪಾರಕ್ಕೆ ತಲಾ 4/6 ಅಡಿ ಜಾಗ ನೀಡಿದರೆ ಸಾಕಾಗುವುದಿಲ್ಲ. ಇನ್ನೂ ಹೆಚ್ಚಿನ ಜಾಗ ನೀಡಬೇಕು ಮತ್ತು ಎಲ್ಲಾ ಬೀದಿಬದಿ ವ್ಯಾಪಾರಿಗಳಿಗೂ ಅವಕಾಶ ಸಿಗುವಂತೆ ನೋಡಿಕೊಳ್ಳಬೇಕು ಎಂದು ವ್ಯಾಪಾರಿಗಳು ಮನವಿ ಮಾಡಿದರು.

'ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಿ ನಮ್ಮ ಈ ಬೇಡಿಕೆಗಳಿಗೆ ಸಮ್ಮತಿಸಿದರೆ ನಮ್ಮ ವಿರೋಧ ಇಲ್ಲ' ಎಂದು ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷೆ ವನಜಾ ಸ್ಪಷ್ಟಪಡಿಸಿದರು.

ಆದರೆ, ಅಗಲವಾಗಿರುವ ರಸ್ತೆಯನ್ನು ಕಿರಿದು ಮಾಡುವ ಪ್ರಸ್ತಾಪಕ್ಕೆ ಗಾಂಧಿ ಬಜಾರ್ ಅಂಗಡಿಗಳ ವರ್ತಕರು ವಿರೋಧ ವ್ಯಕ್ತಪಡಿಸಿದರು. ವಾಹನಗಳ ದಟ್ಟಣೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಕಿರಿದು ಮಾಡಿದರೆ ಇನ್ನಷ್ಟು ಸಮಸ್ಯೆಯಾಗಲಿದೆ ಎಂದರು.

'ವಾಹನಗಳನ್ನು ಬೇರೆಡೆ ನಿಲ್ಲಿಸಿ ನಡೆದುಕೊಂಡು ಬರಲು ಜನ ಒಪ್ಪುವುದಿಲ್ಲ. ಆಗ ಈ ರಸ್ತೆಯಲ್ಲಿನ ಅಂಗಡಿ ಮುಂಗಟ್ಟುಗಳಿಗೆ ಗ್ರಾಹಕರು ಇಲ್ಲವಾಗುತ್ತಾರೆ. ಕಚೇರಿ ಮತ್ತು ಮನೆಗಳಿಗೆ ಹೋಗುವವರಿಗೂ ತೊಂದರೆ ಆಗಲಿದೆ' ಎಂದು ಗಾಂಧಿ ಬಜಾರ್ ವರ್ತಕರ ಸಂಘದ ಅಧ್ಯಕ್ಷ ವೆಂಕಟೇಶ್ ಹೇಳಿದರು.

ಸ್ಥಳಕ್ಕೆ ಬಂದ ಶಾಸಕ ಉದಯ ಗರುಡಾಚಾರ್, 'ವಾಹನಗಳ ಸಂಚಾರ ನಿರ್ಬಂಧಿಸಿದರೆ ತೊಂದರೆ ಆಗಲಿದೆ. ಅದಕ್ಕೆ ಅವಕಾಶ ನೀಡುವುದಿಲ್ಲ' ಎಂದು ಭರವಸೆ ನೀಡಿದರು.

'ರಸ್ತೆ ಅಗಲ ಕುಗ್ಗಿಸಬಾರದು'

'ರಸ್ತೆ ವಿಸ್ತರಣೆ ಮಾಡಬೇಕೆ ಹೊರತು ಕುಗ್ಗಿಸಬಾರದು. ಅಂಗಡಿ–ಮುಂಗಟ್ಟುಗಳಿಗೆ ಸರಕು ಹೊತ್ತು ಬರುವ ವಾಹನಗಳಿಗೆ ರಾತ್ರಿ 9ರಿಂದ ಬೆಳಿಗ್ಗೆ 7ರ ತನಕ ಅವಕಾಶ ನೀಡುವುದಾಗಿ ಹೇಳುತ್ತಿದ್ದಾರೆ. ಇದರಿಂದ ವರ್ತಕರು ತೊಂದರೆ ಅನುಭವಿಸಬೇಕಾಗುತ್ತದೆ. ವಾಹನ ಸಂಚಾರ ನಿರ್ಬಂಧಿಸಿದರೆ ಅಕ್ಕ–ಪಕ್ಕದ ರಸ್ತೆಗಳ ಮೇಲೆ ಒತ್ತಡ ಹೆಚ್ಚಾಗುತ್ತದೆ' ಎಂದು ವರ್ತಕರ ಸಂಘದ ಅಧ್ಯಕ್ಷ ವೆಂಕಟೇಶ್ ಹೇಳಿದರು.

'ಗಾಂಧಿ ಬಜಾರ್ ರಸ್ತೆಯಲ್ಲಿ ಏನೆಲ್ಲಾ ವೈಶಿಷ್ಟ್ಯಗಳಿವೆ. ಎಷ್ಟು ಮನೆ ಮತ್ತು ಕಚೇರಿಗಳಿವೆ ಎಂಬ ಮಾಹಿತಿಯೇ ಡಲ್ಟ್ ಅಧಿಕಾರಿಗಳಿಗೆ ಇಲ್ಲ. ಸ್ಥಳೀಯರ ಅಭಿಪ್ರಾಯ ಪಡೆಯದೆ, ಸರ್ವೆಯನ್ನೂ ಮಾಡದೆ ಯೋಜನೆ ರೂಪಿಸಿದ್ದಾರೆ. ಇದಕ್ಕೆ ನಮ್ಮ ವಿರೋಧ ಇದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಗಾಂಧಿ ಬಜಾರ್ ವ್ಯಾಪಾರಿಗಳೇ ಸ್ಥಳೀಯ ಎಂಜಿನಿಯರ್‌ಗಳಿಂದ ಯೋಜನೆ ರೂಪಿಸಿದ್ದೇವೆ. ಅದನ್ನು ಪರಿಶೀಲಿಸಿ ಡಲ್ಟ್ ಒಪ್ಪಿಕೊಳ್ಳಬೇಕು' ಎಂದು ಮನವಿ ಮಾಡಿದರು. 'ವರ್ತಕರು ಮತ್ತು ಬೀದಿಬದಿ ವ್ಯಾಪಾರಿಗಳು ಹಲವು ಸಲಹೆಗಳನ್ನು ನೀಡಿದ್ದಾರೆ. ನಾವು ಅವರಿಗೆ ಉತ್ತರ ನೀಡಿ ದ್ದೇವೆ. ಬುಧವಾರ ಪ್ರದರ್ಶನ ಕೊನೆಗೊಳ್ಳಲಿದೆ. ಸಲಹೆ ಆಧರಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದು ಡಲ್ಟ್ ಆಯುಕ್ತೆ ವಿ.ಮಂಜುಳಾ ಸ್ಪಷ್ಟಪಡಿಸಿದರು.

ಸಂಕ್ಷಿಪ್ತ ಸುದ್ದಿ

6 ಸಾವಿರ ರಸ್ತೆ ಗುಂಡಿ

ಬೆಂಗಳೂರು: 'ನಗರದಲ್ಲಿ ಮುಚ್ಚಲು ಬಾಕಿ ಇರುವ 6,084 ರಸ್ತೆ ಗುಂಡಿಗಳಿವೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಯೋಜನೆ) ಎನ್.ಪಿ. ರವೀಂದ್ರ ತಿಳಿಸಿದರು. ಒಟ್ಟಾರೆ ನಗರದ ರಸ್ತೆಗಳಲ್ಲಿ 10,608 ಗುಂಡಿಗಳಿವೆ ಎಂದು ಗುರುತಿಸಲಾಗಿದೆ. ಅವುಗಳಲ್ಲಿ 4,526 ಗುಂಡಿ ಮುಚ್ಚಲಾಗಿದೆ. ಪಾಲಿಕೆಯ ಬಿಸಿ ಡಾಂಬರು ಜಲ್ಲಿ ಮಿಶ್ರಣ ಘಟಕದಿಂದಲೇ ಎಲ್ಲೆಡೆಗೂ ಡಾಂಬರ್ ಮಿಶ್ರಣ ಸಾಗಿಸಬೇಕಿದೆ. ಆದ್ದರಿಂದ ವಿಳಂಬವಾಗುತ್ತಿದೆ ಎಂದರು.

ಮತ್ತೊಮ್ಮೆ ಮೇಲ್ಸೇತುವೆ ಗುಣಮಟ್ಟ ಪರಿಶೀಲನೆ

ಬೆಂಗಳೂರು: ನಗರದ ಮೇಲ್ಸೇತುವೆಗಳ ಗುಣಮಟ್ಟ ಪರಿಶೀಲನೆಯನ್ನು ಮತ್ತೊಮ್ಮೆ ನಡೆಸಲು ಬಿಬಿಎಂಪಿ ಮುಂದಾಗಿದೆ.

'2019-20ರಲ್ಲಿ ಇನ್‌ಫ್ರಾ ಸಪೋರ್ಟ್ ಸಂಸ್ಥೆಯಿಂದ ಗುಣಮಟ್ಟ ಪರಿಶೀಲನೆ ನಡೆಸಲಾಗಿತ್ತು. ಸೇತುವೆಗಳು ಸಮರ್ಥವಾಗಿವೆ ಎಂದು ಕಳೆದ ಸೆಪ್ಟೆಂಬರ್‌ನಲ್ಲಿ ವರದಿ ಬಂದಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಈಗ ಮತ್ತೊಮ್ಮೆ ಪರಿಶೀಲನೆ ನಡೆಸಲಾಗುವುದು' ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಯೋಜನೆ) ಎನ್.ಬಿ. ರವೀಂದ್ರ ತಿಳಿಸಿದರು.

ಪಿಡಿಒ ಪರಾರಿ

ಕುಣಿಗಲ್: ಬಂಧನದ ಭೀತಿಯಿಂದ ತಾಲ್ಲೂಕಿನ ಭಕ್ತರಹಳ್ಳಿ ಮತ್ತು ತರದಕುಪ್ಪೆ ಗ್ರಾಮ ಪಂಚಾಯಿತಿ ಪಿಡಿಒ ಸುದರ್ಶನ್, ಲೋಕಾಯುಕ್ತ ಅಧಿಕಾರಿಗಳ ಸಭೆಯಲ್ಲಿ ಪೊಲೀಸರ ಕಣ್ಣುತಪ್ಪಿಸಿ ಪರಾರಿಯಾದ ಘಟನೆ ಮಂಗಳವಾರ ನಡೆದಿದೆ.

COFFEE DAY ENTERPRISES LTD.

Coffee Day — Brewing new possibilities.

Registered and Corporate Office: 23/2, Coffee Day Square, Vittal Mallya Road, Bengaluru - 560 001, Karnataka, India
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the Quarter/Year ended 31st March, 2022

(₹ in Crores except per share data)

Particulars	Quarter ended 31st March, 2022 (Audited)	Year ended 31st March, 2022 (Audited)	Quarter ended 31st March, 2021 (Audited)	Year ended 31st March, 2021 (Audited)
Total income from operations (net)	226.79	657.88	178.48	981.23
Net Profit from ordinary activities after tax	58.67	(130.73)	(272.09)	(652.10)
Net Profit for the period after tax (after Extraordinary items)	58.67	(130.73)	(272.09)	(652.10)
Equity Share Capital	211.25	211.25	211.25	211.25
Reserves (excluding Revaluation Reserve as shown in the Balance Sheet of previous year)	-	-	-	-
Earnings Per Share (before Extraordinary items) (of ₹ 10/- each)				
Basic :	2.48	(5.71)	(12.42)	(27.64)
Diluted :	2.48	(5.71)	(12.42)	(27.64)
Earnings Per Share (after Extraordinary items) (of ₹ 10/- each)				
Basic :	2.48	(5.71)	(12.42)	(27.64)
Diluted :	2.48	(5.71)	(12.42)	(27.64)

Notes:

1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 30th May, 2022 and have been subjected to Audit by the Statutory Auditors of the Company.
3. **Audited Financial Results of Coffee Day Enterprises Limited (Standalone Information)**

(₹ in Crores)

Particulars	Quarter ended 31st March, 2022 (Audited)	Year ended 31st March, 2022 (Audited)	Quarter ended 31st March, 2021 (Audited)	Year ended 31st March, 2021 (Audited)
Total income from operations (net)	4.05	13.72	4.20	10.18
Loss before tax and exceptional items	(1.17)	(3.49)	(14.99)	(117.50)
Profit/ (Loss) after tax and exceptional items	(1.17)	(3.49)	(0.28)	(102.78)

For and on behalf of Board of Directors
S.V Ranganath
Interim Chairman and Independent Director

Place : Bengaluru
Date : 30th May, 2022

ಸೂಲೂರು ಗ್ರಾಮ ಪಂಚಾಯಿತಿ, ಕಾರ್ಯಾಲಯ

ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ.
ಕ್ರಸಂ: 01.2021-22 ದಿನಾಂಕ 31.05.2022

ಬಹಿರಂಗ ಹರಾಜು ಪ್ರಕಟಣೆ

ಕೋಲಾರ ತಾಲ್ಲೂಕು, ಸೂಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಎಲ್ಲಾ ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಯ ಮೋಟಾರು ಪಂಪುಗಳು ಮತ್ತು ಪ್ಯಾನಲ್ ಬೋರ್ಡ್‌ಗಳು ದುರಸ್ಥಿ ಮಾಡಲು (ಒಟ್ಟು 23) ಬಹಿರಂಗ ಹರಾಜು ನಡೆಸಲು ದಿನಾಂಕ : 17.06.2022ರ ಶುಕ್ರವಾರ ಬೆಳಿಗ್ಗೆ 11-00 ಗಂಟೆಗೆ ಸಮಯವನ್ನು ನಿಗದಿಗೊಳಿಸಿದ್ದು ಈ ಸಂಬಂಧ 01 ವರ್ಷ ಅವಧಿಗೆ 17.06.2022 ರಿಂದ 16.06.2023 ರವರೆಗೆ ಇರುತ್ತದೆ. ಈ ಸಂಬಂಧ ಬಹಿರಂಗ ಹರಾಜು ಪ್ರಕ್ರಿಯೆಲ್ಲಿ ಭಾಗವಹಿಸಲು ದಿನಾಂಕ: 17.06.2022 ರಂದು ಬೆಳಿಗ್ಗೆ 11.00 ಗಂಟೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದ್ಯಸರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಮ್ಮುಖದಲ್ಲಿ ಬಹಿರಂಗ ಹರಾಜು ಪ್ರಕ್ರಿಯೆ ನಡೆಸಲಾಗುವುದು. ಇಷ್ಟವುಳ್ಳವರು ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/–
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸೂಲೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು.

ನಗರದಲ್ಲಿ ಇಂದು

ವಿಶ್ವ ಕ್ಷೀರ ದಿನ: ಉದ್ಘಾಟನೆ: ಅಮಿತ್ ರಾಯ್, ಅತಿಥಿಗಳು:ಸಿ.ಪಿ ಚಾರ್ಲ್ಸ್, ಎ.ಆರ್. ಶಿವಕುಮಾರ, ಬಿ.ಎನ್. ಶಶಿಕುಮಾರ ಅಧ್ಯಕ್ಷತೆ: ರಾಘವೇಂದ್ರ ಭಟ್ಟ, ಆಯೋಜಕರು: ಭಾರತೀಯ ಗುಣಮಟ್ಟ ಮಾನಕ ಬ್ಯೂರೊ ಮತ್ತು ಹೈನುಗಾರಿಕೆ ಅಭಿವೃದ್ಧಿ ಮಂಡಳಿ, ಸ್ಥಳ: ಐಸಿಎಆರ್–ಎನ್‌ಐಎಎನ್‌ಪಿ ಹೊಸೂರು ರಸ್ತೆ, ಆಡುಗೋಡಿ ಬೆಳಿಗ್ಗೆ 9.30

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 27ನೇ ಸಂಸ್ಥಾಪನಾ ದಿನಾಚರಣೆ: ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ಡಾ.ಎಂ.ಕೆ ರಮೇಶ್, ಉಪಸ್ಥಿತಿ: ಡಾ.ಎಸ್ ಕಾಂತಾ, ಡಾ.ಶಿವರತ್ನ.ಸಿ.ಸಾವಡಿ ಸ್ಥಳ: ಧನ್ವಂತರಿ ಸಭಾಂಗಣ, ಜಯನಗರ ಬೆಳಿಗ್ಗೆ 11

ಅಭಿನಂದನಾ ಸಮಾರಂಭ: ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್. ಮುಖ್ಯ ಅತಿಥಿಗಳು: ಎಂ.ಕೊಟ್ರೇಶ್, ಜೆ.ಟಿ ದೇವರಾಜ್, ಜಯಲಕ್ಷ್ಮಿ, ಆಯೋಜಕರು: ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಕೇತರ ನೌಕರರ ಸಂಘ. ಸ್ಥಳ: ಎಚ್.ಎನ್.ಸಭಾಂಗಣ ಜ್ಞಾನಭಾರತಿ ಆವರಣ. ಬೆಳಿಗ್ಗೆ 11.30

ಭವಿಷ್ಯದ ಬಾಹ್ಯಾಕಾಶ ಶೋಧದ ಕುರಿತು ಉಪನ್ಯಾಸ: ನಾಸಾ ವಿಜ್ಞಾನಿ ಡಾ.ಡಾ ಥಾಮಸ್ ಜುರ್ಬುಚೆನ್ ಅವರಿಂದ ಉಪನ್ಯಾಸ, ಆಯೋಜಕರು: ಭಾರತೀಯ ವಿಜ್ಞಾನ ಸಂಸ್ಥೆ, ಸ್ಥಳ: ಐಐಎಸ್ಸಿ, ಮಧ್ಯಾಹ್ನ 3

ಜಲಗಂಗಮ್ಮ ದೇವಿಯ ಜಾತ್ರೆ(ಗಂಗಾ ಕೊಲುವು): ಬೆಳಿಗ್ಗೆ 7ಕ್ಕೆ ಮಹಾಭಿಷೇಕ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನದಾನ, 3ಕ್ಕೆ ಪೊಂಗುಪಾಲು, 4.30ಕ್ಕೆ ಅಗ್ನಿಕೊಂಡ. ಅತಿಥಿಗಳು: ಡಿ.ವಿ ಸದಾನಂದಗೌಡ, ಬಿ.ಕೆ ಹರಿಪ್ರಸಾದ್, ಸಿ.ಎನ್ ಅಶ್ವತ್ಥನಾರಾಯಣ, ಮುನಿರತ್ನ, ಎಂ.ಆರ್ ಸೀತಾರಾಮ್, ಬಿ.ಕೆ.ಶಿವರಾಮ್ ಆಯೋಜಕರು: ಜಲಗಂಗಮ್ಮ ದೇವಸ್ಥಾನ ಸೇವಾ ಸಮಿತಿ, ಸ್ಥಳ: ಜೆ.ಡಿ.ಪಾರ್ಕ್ ವೈಯ್ಯಾಲಿಕಾವಲ್

ಡಾ.ಎಚ್. ನರಸಿಂಹಯ್ಯ ನೆನಪಿನ ಸಾಂಸ್ಕೃತಿಕ ಉತ್ಸವ: ಉದ್ಘಾಟನೆ: ಡಾ.ಎಸ್.ಸಿ ಶರ್ಮಾ, ಗಾಯನ: ಡಾ.ವಿದ್ಯಾಭೂಷಣ, ಪಿಟೀಲು: ಪ್ರಾದೇಶಾಚಾರ್, ಮೃದಂಗ: ಎಚ್. ಎಸ್. ಸುಧೀಂದ್ರ, ಘಟ: ರಘುನಂದನ್, ಆಯೋಜಕರು: ಲಲಿತಕಲಾ ಪರಿಷತ್ ಮತ್ತು ರಾಮಸುಧಾ ಚಾರಿಟಬಲ್ ಟ್ರಸ್ಟ್, ಸ್ಥಳ: ಡಾ.ಎಚ್.ಎನ್. ಕಲಾಕ್ಷೇತ್ರ 7ನೇ ಬ್ಲಾಕ್ ಜಯನಗರ ಸಂಜೆ: 6.30

ಸುಫಾರಿ ಕೊಲೆ ನಾಟಕ ಪ್ರದರ್ಶನ: ನಿರ್ದೇಶನ: ಚಂದ್ರಾ ಕೀರ್ತಿ, ನಾಟಕಕಾರ: ಶಿವಕುಮಾರ ಮಾವಳಿ, ಆಯೋಜಕರು: ಥಿಯೇಟರ್ ಆರ್ಟ್‌ಸ್ಟ್ರೀ ಸಾಂಸ್ಕೃತಿಕ ಸಂಘ, ಸ್ಥಳ: ರಂಗಶಂಕರ ರಾತ್ರಿ 7.30

ತಲಾ ಆದಾಯ: ಕೋವಿಡ್ ಪೂರ್ವಕ್ಕಿಂತ ಕಡಿಮೆ

ನವದೆಹಲಿ (ಪಿಟಿಐ): ಭಾರತದ ವಾರ್ಷಿಕ ತಲಾ ಆದಾಯವು ಕೋವಿಡ್ ಪೂರ್ವ ಅವಧಿಗಿಂತಲೂ ಕಡಿಮೆ ಇದೆ ಎಂದು ದತ್ತಾಂಶಗಳು ಹೇಳಿವೆ. 2021–22ರಲ್ಲಿ ₹91,481 ವಾರ್ಷಿಕ ತಲಾ ಆದಾಯ ದಾಖಲಾಗಿದೆ. ಇದು 2019–20ರಲ್ಲಿ ₹94,270 ಇತ್ತು. 2020–21ರಲ್ಲಿ ಕೋವಿಡ್ ಹಾಗೂ ಅದರಿಂದ ವಿಧಿಸಲಾದ ಲಾಕ್‌ಡೌನ್ ಕಾರಣದಿಂದ ತಲಾದಾಯವು ₹85,110ಕ್ಕೆ ಇಳಿಕೆಯಾಗಿತ್ತು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/12/2022–23/467 ದಿನಾಂಕ: 30–05–2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಸಿ.ಹರೀಶ್‌ಕುಮಾರ್ ಬಿನ್ ಎಂ. ಚನ್ನಪ್ಪ	ದೇವನಹಳ್ಳಿ	ಕುಂದಾಣ	ಲಿಂಗಧೀರಗೊಲ್ಲಹಳ್ಳಿ	6/2	1–4.08	ವ್ಯವಸಾಯ	ವಾಣಿಜ್ಯ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ/ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನಿನ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ. ಅಲ್ಲದೇ, ಪ್ರಸ್ತಾಪಿತ ಜಮೀನಿನಲ್ಲಿ ವಾಣಿಜ್ಯ ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ' ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ವಾಸಾಸಂಇ/ಸಿಪಿ/ಅಡ್ವರ್ಟೊ706/2022–23

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ಯುಪಿಎಸ್‌ಸಿ: ಪಿಇಎಸ್‌ನ ಮೂವರು ಹಳೆಯ ವಿದ್ಯಾರ್ಥಿಗಳು ಆಯ್ಕೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗವು ನಡೆಸಿದ 2021ನೇ ಸಾಲಿನ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಪಿಇಎಸ್ ವಿಶ್ವವಿದ್ಯಾಲಯದ ಮೂವರು ಹಳೆ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ನಿಖಿಲ್ ಬಸವರಾಜ್ ಪಾಟೀಲ (139ನೇ ರ‍್ಯಾಂಕ್), ಸವಿತಾ ಗೋಟ್ಯಾಳ (479ನೇ ರ‍್ಯಾಂಕ್) ಮತ್ತು ಮೊಹ್ಮದ ಸಿದ್ದೀಕ್ ಷರೀಫ್(516ನೇ ರ‍್ಯಾಂಕ್) ಪಡೆದಿದ್ದಾರೆ ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಎಂ.ಆರ್. ದೊರೆಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಇಎಸ್ ಸಂಸ್ಥಾಪನೆಯಾದ ಬಳಿಕ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಾಗರಿಕ ಸೇವಾ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾರೆ. ಜತೆಗೆ, ಕೆಎಎಸ್ ಮತ್ತು ಕೆಎಸ್‌ಪಿಗೂ ಆಯ್ಕೆಯಾಗಿದ್ದಾರೆ ಎಂದು ಅವರು ಹೇಳಿದ್ದಾರೆ.

ಕೆಎಸ್‌ಎಫ್: ಮುಖುಲ್ ಆಯ್ಕೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗವು ನಡೆಸಿದ 2021ನೇ ಸಾಲಿನ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಕೃಷಿಕ್ ಸರ್ವೋದಯ ಫೌಂಡೇಷನ್ (ಕೆಎಸ್‌ಎಫ್) ಸ್ಪರ್ಧಾತ್ಮಕ ಪರೀಕ್ಷೆಗಳ ಸಂಸ್ಥೆಯಲ್ಲಿ ತರಬೇತಿ ಪಡೆದ ಮುಖುಲ್ ಬೆನಿವಾಲ್ ಆಯ್ಕೆಯಾಗಿದ್ದಾರೆ. ಮುಖುಲ್ ಬೆನಿವಾಲ್ ಅವರು 460ನೇ ರ‍್ಯಾಂಕ್ ಪಡೆದಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ವೈ.ಕೆ. ಪುಟ್ಟಸೋಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಕೇಶ್ ಟಿಕಾಯತ್ ಮೇಲಿನ ಹಲ್ಲೆ ಖಂಡಿಸಿ ಪ್ರತಿಭಟನೆ

‘ರೈತರ ಮೇಲೆ ಸೇಡು ತೀರಿಸಿಕೊಳ್ಳುವ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೆಹಲಿಯಲ್ಲಿ ರೈತರು ನಡೆಸಿದ ಹೋರಾಟಕ್ಕೆ ಮುಂಡಿಯೂರಿದ್ದ ಬಿಜೆಪಿ ಸರ್ಕಾರ, ಸೇಡು ತೀರಿಸಿಕೊಳ್ಳಲು ಹೋರಾಟಗಾರ ರಾಕೇಶ್ ಟಿಕಾಯತ್ ಅವರ ಮೇಲೆ ಮಸಿ ಬಳಿಸಿದೆ’ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ರೈತ ಹೋರಾಟಗಾರ ರಾಕೇಶ್ ಟಿಕಾಯತ್ ಅವರ ಮೇಲಿನ ಹಲ್ಲೆ ಖಂಡಿಸಿ ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆಸಿದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

‘ರೈತರ ಹೋರಾಟ ಮುಗಿಸಲು ಬಿಜೆಪಿ ವ್ಯವಸ್ಥಿತ ಸಂಚು ರೂಪಿಸುತ್ತಿದೆ. ಟಿಕಾಯತ್ ಮೇಲಿನ ಮಸಿ ದಾಳಿ ಅದರ ಒಂದು ಭಾಗ. ಬಿಜೆಪಿ ಸಂಚಿಗೆ ರೈತ ಹೋರಾಟ ಬಗ್ಗುವುದಿಲ್ಲ’ ಎಂದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಚುಕ್ಕಿ ನಂಜುಂಡಸ್ವಾಮಿ, ಎಸ್‌.ಆರ್‌.ಹಿರೇಮಠ, ಬಡಗಲಪುರ ನಾಗೇಂದ್ರ, ಬಯ್ಯಾರೆಡ್ಡಿ, ಗುರುಪ್ರಸಾದ್ ಕೆರಗೋಡು, ಬಿ.ಆರ್‌.ಪಾಟೀಲ ಪಾಲ್ಗೊಂಡಿದ್ದರು

ರೈತ ನಾಯಕಿ ಕವಿತಾ ಕುರುಗಂಟಿ ಮಾತನಾಡಿ, ‘ಕಿಡಿಗೇಡಿ ದಾಳಿಗಳ ಮೂಲಕ ರೈತ ಹೋರಾಟವನ್ನು ಕುಗ್ಗಿಸಬಹುದು ಎಂದು ಬಿಜೆಪಿ ಭಾವಿಸಿದ್ದರೆ ಅದು ಭ್ರಮೆಯಷ್ಟೆ. ರೈತ ಹೋರಾಟ ಶೀಘ್ರದಲ್ಲೇ ರಾಜಕೀಯ ಶಕ್ತಿಯಾಗಿ ರೂಪುಗೊಳ್ಳಲಿದೆ. ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅದರ ಪರಿಣಾಮ ಅನುಭವಿಸಲಿದೆ’ ಎಂದು ಹೇಳಿದರು.

‘ಟಿಕಾಯತ್ ಮುಖಕ್ಕೆ ಮಸಿ ಬಳಿಯಲು ಹೋಗಿ ರಾಜ್ಯ ಬಿಜೆಪಿ ಸರ್ಕಾರ ತನ್ನ ಮುಖಕ್ಕೆ ತಾನೇ ಮಸಿ ಬಳಿದುಕೊಂಡಿದೆ’ ಎಂದು ಕೃಷಿ ಆರ್ಥಿಕತೆಯ ತಜ್ಞ ಪ್ರಕಾಶ್ ಕಮ್ಮರಡಿ ಆಕ್ರೋಶ ವ್ಯಕ್ತಪಡಿಸಿದರು.

‘ಪ್ರಧಾನಿ ನರೇಂದ್ರ ಮೋದಿ ಯಾರ ಮಾತಿಗೂ ಮಣಿಯುವುದಿಲ್ಲ ಎನ್ನುವ ಮಾತಿತ್ತು. ರೈತರು ಒಟ್ಟಾಗಿ ಮೋದಿಯನ್ನು ಮಣಿಸಿದ್ದರು. ಈ ಹೋರಾಟ ಮುನ್ನಡೆಸಿದ ನಾಯಕರ ಮೇಲೆ ಮಸಿ ದಾಳಿ ಮಾಡುವ ಮೂಲಕ ಬಿಜೆಪಿ ಸರ್ಕಾರ ತನ್ನ ಮುಖಕ್ಕೆ ತಾನೇ ಮಸಿ ಎರಚಿಕೊಂಡಿದೆ’ ಎಂದರು.



ವಿಶ್ವ ಕ್ಷೀರ ದಿನಾಚರಣೆ

ಪ್ರೆಸ್ಟೀಜ್‌ನಲ್ಲಿ ಕೊಡುಗೆಗಳು

ಬೆಂಗಳೂರು: ಟಿಟಿಕೆ ಪ್ರೆಸ್ಟೀಜ್ ಕಂಪನಿಯು ಹಳೆಯ ಪಾತ್ರೆಗಳನ್ನು ಬದಲಾಯಿಸಿಕೊಳ್ಳುವ ಕೊಡುಗೆ ನೀಡಿದೆ. ಇದು ಜುಲೈ 31ರವರೆಗೆ ಜಾರಿಯಲ್ಲಿ ಇರಲಿದೆ.

ಗ್ರಾಹಕರು ತಮ್ಮ ಹಳೆಯ ಪಾತ್ರೆಗಳು ಹಾಗೂ ಅಡುಗೆ ಸಲಕರಣೆಗಳನ್ನು ಹೊಸ ಪಾತ್ರೆಗಳೊಂದಿಗೆ ಬದಲಾವಣೆ ಮಾಡಿಕೊಳ್ಳಬಹುದು. ಹೀಗೆ ಬದಲಾಯಿಸಿಕೊಳ್ಳುವಾಗ ಶೇಕಡ 25ರಿಂದ ಶೇ 60ರವರೆಗೆ ರಿಯಾಯಿತಿ ಸಿಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಗೃಹಿಣಿಯರು ಹಳೆಯ ಪ್ರೆಷರ್ ಕುಕ್ಕರ್‌ಗಳನ್ನು ಹೊಸ ಸ್ವಚ್ಛ್ ಸರಣಿಯ ಕುಕ್ಕರ್‌ಗಳಿಗೆ ಬದಲಾಯಿಸಿಕೊಳ್ಳಬಹುದು. ಗ್ಯಾಸ್ ಒಲೆಗಳ ಮೇಲೆ ಶೇ 33ರಿಂದ ಶೇ 45ರವರೆಗೆ ರಿಯಾಯಿತಿ ಇರಲಿದೆ.

ಜೂ.4ರಿಂದ ಯೋಗ ಕಾರ್ಯಕ್ರಮ

ಬೆಂಗಳೂರು: ಸ್ವಾಮಿ ವಿವೇಕಾನಂದ ಯೋಗ ರಿಸರ್ಚ್ ಆ್ಯಂಡ್ ಹೋಲಿಸ್ಟಿಕ್ ಹೆಲ್ತ್ ಟ್ರಸ್ಟ್ ಜೂನ್ 4ರಿಂದ 12ರವರೆಗೆ ಅಲ್ಲಾಳಸಂದ್ರದಲ್ಲಿರುವ ತನ್ನ ಕೇಂದ್ರದಲ್ಲಿ ಉಚಿತ ‘ಆತ್ಮದರ್ಶನ ಯೋಗ’ ಕಾರ್ಯಕ್ರಮ ಹಮ್ಮಿಕೊಂಡಿದೆ.

ಪ್ರತಿ ದಿನ ಸಂಜೆ 6ರಿಂದ ರಾತ್ರಿ 9 ಗಂಟೆಯವರೆಗೆ ಹಾಗೂ ಭಾನುವಾರ ಬೆಳಿಗ್ಗೆ 6ರಿಂದ 9 ಗಂಟೆಯವರೆಗೆ ಈ ಶಿಬಿರ ನಡೆಯಲಿದೆ. ಮಧುಮೇಹ, ಅಧಿಕ ರಕ್ತದೊತ್ತಡ, ಬೆನ್ನು–ಮಂಡಿ ನೋವು ಸೇರಿದಂತೆ ಜೀವನಶೈಲಿ ಆಧಾರಿತ ವಿವಿಧ ಸಮಸ್ಯೆ ಎದುರಿಸುತ್ತಿರುವವರು, ಆತ್ಮಹತ್ಯೆಗೆ ಯತ್ನಿಸಿದವರು, ಮಾನಸಿಕ ಒತ್ತಡಕ್ಕೆ ಒಳಗಾದವರು ಸೇರಿದಂತೆ ವಿವಿಧ ವೈಯಕ್ತಿಕ ಸಮಸ್ಯೆ ಎದುರಿಸುತ್ತಿರುವವರು, ಕುಟುಂಬದ ಸದಸ್ಯರು ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಐಕಿಯಾ ಮಳಿಗೆ 22ರಂದು ಆರಂಭ

ಬೆಂಗಳೂರು: ಗೃಹಬಳಕೆಯ ಪೀಠೋಪಕರಣಗಳ ಮಾರಾಟ ಮಳಿಗೆ ‘ಐಕಿಯಾ’ ನಗರದಲ್ಲಿ ತನ್ನ ಮಳಿಗೆಯನ್ನು ಜೂನ್ 22ರಂದು ಆರಂಭಿಸಲಿದೆ. ಈ ಮಳಿಗೆಯು ನಾಗಸಂದ್ರ ಮೆಟ್ರೊ ನಿಲ್ದಾಣಕ್ಕೆ ಹೊಂದಿಕೊಂಡು ಇದೆ ಎಂದು ಪ್ರಕಟಣೆ ತಿಳಿಸಿದೆ.

ಆ್ಯಂಜೆ ಹೀಮ್ ಅವರು ಕರ್ನಾಟಕದ ಮಾರುಕಟ್ಟೆ ವ್ಯವಸ್ಥಾಪರಾಗಿ ಕರ್ತವ್ಯ ನಿರ್ವಹಿಸಲಿದ್ದಾರೆ. 12.2 ಎಕರೆ ವಿಸ್ತೀರ್ಣದಲ್ಲಿ, 4.60 ಲಕ್ಷ ಚದರ ಅಡಿಯ ಮಳಿಗೆಯು ಏಳು ಸಾವಿರಕ್ಕೂ ಹೆಚ್ಚಿನ ಉತ್ಪನ್ನಗಳನ್ನು ಮಾರಾಟ ಮಾಡಲಿದೆ.

ಮೈಸೂರು ರೇಸ್

ಲಿಯೋಪಾರ್ಡ್ ಗೆಲ್ಲುವ ನಿರೀಕ್ಷೆ

ಮೈಸೂರು ಸಿಟಿ ಕಾರ್ಪೊರೇಷನ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಲಿಯೋಪಾರ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮ್ಯಾಜಿಕ್ ಸರ್ಕಲ್ 2, ಟಿಯಾ ಮೇರಿಯಾ 1, ಮನಿ ಮೂನ್ಸ್ 3
2ನೇ ರೇಸ್: ಏರ್ ವೆಲಾಸಿಟಿ 2, ಸ್ಕಾರ್ಲೆಟ್ ಪ್ರಿನ್ಸೆಸ್ 6, ಕಂಟ್ರೆಸ್ ಡಿಲೈಟ್ 5
3ನೇ ರೇಸ್: ಫ್ಲೈಯಿಂಗ್ ಫಾಲ್ಕನ್ 1, ಸ್ವಿಸ್ ಬೇ 8, ಮಿಸ್ ಚೈನಾ 10
4ನೇ ರೇಸ್: ರಾಯಲ್ ಡಿಸ್ಟೈನ್ 6, ಬ್ರೇಕಿಂಗ್ ನ್ಯೂಸ್ 9, ಸ್ವಿಸ್ ಟೈಗ್ರೆಸ್ 4
5ನೇ ರೇಸ್: ಲಿಯೋಪಾರ್ಡ್ 9, ಟ್ರೆಸರ್ ಬುಲ್ಲೆಟ್ 5, ಜಂಗ್‌ಫ್ರಾಜೊರ್ಕ್ 3
6ನೇ ರೇಸ್: ಚಾರ್ಶ್ನಿ 4, ಟ್ರಸ್ಟ್ ಬಾಂಡ್ 3, ರೈಸಿಂಗ್ ಸನ್ 6
7ನೇ ರೇಸ್: ಎನ್.ಆರ್.ಐ ಪ್ಲಾನ್ 7, ವಿಂಡ್ ವಿಸ್ಲರ್ 3, ಆಲ್ ಗ್ರೇಟ್ ಫ್ರೆಂಡ್ಸ್ 8

ಉತ್ತಮ ಬೆಟ್: ಎನ್.ಆರ್.ಐ ಪ್ಲಾನ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5,6,7

ಕಾಂಗ್ರೆಸ್‌ಗೂ ಮೊಘಲರಿಗೂ ಏನು ಸಂಬಂಧ?

ಚಿಕ್ಕಮಗಳೂರು: 'ಆರ್‌ಎಸ್‌ಎಸ್, ಬಿಜೆಪಿ ನಡುವೆ ವೈಚಾರಿಕ ಹಾಗೂ ಸಾಂಸ್ಕೃತಿಕ ಸಂಬಂಧ ಇದೆ. ಆದರೆ, ಕಾಂಗ್ರೆಸ್‌ನವರಿಗೆ ಟಿಪ್ಪು ಸುಲ್ತಾನ್, ಮೊಘಲರ ಜೊತೆ ಏನು ಸಂಬಂಧ?' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರಶ್ನಿಸಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದಅವರು,'ಟಿಪ್ಪುಸುಲ್ತಾನ್, ಮೊಘಲರನ್ನು ಟೀಕಿಸಿದರೆ ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಏಕೆ ಎದೆ ಬಡಿದುಕೊಳ್ಳುತ್ತಾರೆ? ಟಿಪ್ಪು ಅತ್ಯಾಚಾರಿ, ಕನ್ನಡ ವಿರೋಧಿ ಎಂದರೆ ಕಾಂಗ್ರೆಸ್‌ಗೆ ಏಕೆ ಸಿಟ್ಟು' ಎಂದರು.

'ನಾಡಗೀತೆ, ರೈತ ಗೀತೆ ಹಾಡುವುದನ್ನು ಕಡ್ಡಾಯ ಮಾಡಿದ್ದೇ ಬಿಜೆಪಿ ಸರ್ಕಾರ. ಅಂತಹ ಸರ್ಕಾರ ಕುವೆಂಪು ವಿರುದ್ಧ ಹೋಗುತ್ತಾ?' ಎಂದು ಪಠ್ಯ ಪುಸ್ತಕ ಪರಿಷ್ಕರಣೆ ಕುರಿತ ವಿವಾದದ ಬಗ್ಗೆ ಪ್ರತಿಕ್ರಿಯಿಸಿದರು.

ರೈತ ಮುಖಂಡ ರಾಕೇಶ್ ಟಿಕಾಯತ್ ಮತ್ತು ಯದುವೀರ್‌ಸಿಂಗ್ ಅವರಿಗೆ ಮಸಿ ಬಳಿದಿರುವುದು ಸರಿಯಲ್ಲ ಎಂದರು.

ಜಯದೇವ: ಆಂಜಿಯೋಪ್ಲಾಸ್ಟಿ ಕಾರ್ಯಾಗಾರ 24ರಿಂದ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವತಿಯಿಂದ 150 ಮಂದಿಗೆ ಉಚಿತ ಸ್ಟೆಂಟ್ ಅಳವಡಿಸುವ ಆಂಜಿಯೋಪ್ಲಾಸ್ಟಿ ಕಾರ್ಯಾಗಾರವನ್ನು ಜೂನ್ 24ರಿಂದ 26 ರವರೆಗೆ ಹಮ್ಮಿಕೊಳ್ಳಲಾಗಿದೆ.

ಡಾ. ಗೋವಿಂದರಾಜು ಸುಬ್ರಮಣಿ ಹಾರ್ಟ್ ಫೌಂಡೇಷನ್ ಹಾಗೂ ಅಮೆರಿಕದ ಮೆಡ್‌ಟ್ರಾನಿಕ್ಸ್, ವಿಸ್ಕಿನ್‌ಸನ್ ಸಂಸ್ಥೆಗಳ ಸಹಯೋಗದಲ್ಲಿ ಈ ಕಾರ್ಯಾಗಾರ ಸಂಸ್ಥೆಯಲ್ಲಿ ನಡೆಯಲಿದೆ.

'ಬಡರೋಗಿಗಳು ಹಾಗೂ ಬಿಪಿಎಲ್ ಕುಟುಂಬದ ಹಿರಿಯ ನಾಗರಿಕರಿಗಾಗಿ ಈ ಕಾರ್ಯಾಗಾರ ಆಯೋಜಿಸಲಾಗಿದೆ. ಪ್ರತಿ ರೋಗಿಗೂ ಉನ್ನತಮಟ್ಟದ ಸ್ಟೆಂಟ್‌ಗಳನ್ನು ಉಚಿತವಾಗಿ ಅಳವಡಿಸಲಾಗುತ್ತದೆ. ಈಗಾಗಲೇ ಆ್ಯಂಜಿಯೋಗ್ರಾಂ ತಪಾಸಣೆಗೆ ಒಳಪಟ್ಟ ರೋಗಿಗಳು ಈ ಸೌಲಭ್ಯ ಪಡೆಯಬಹುದು. ರೋಗಿಗಳು ದಾಖಲಾತಿ ಸಂದರ್ಭದಲ್ಲಿ ಬಿಪಿಎಲ್ ಕಾರ್ಡ್ ಅಥವಾ ಆದಾಯ ಪ್ರಮಾಣ ಪತ್ರ ಹೊಂದಿರಬೇಕು. ಆಸಕ್ತರು ಜೂನ್ 20ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: ನಿರ್ದೇಶಕರ ಕಚೇರಿ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಜಯನಗರ 9ನೇ ಬ್ಲಾಕ್, ಮೊ. 9480827888 ಅಥವಾ 080 22977433

ಎಸ್ಸೆಸ್ಸೆಲ್ಸಿ ಸಾಧಕರು

ಪರ್ಣಿಕಾ ವೈ.ಕೆ. (625 ಅಂಕಗಳು) ಬ್ಲೂಬೆಲ್ ಪಬ್ಲಿಕ್ ಹೈಸ್ಕೂಲ್, ಬ್ಯಾಡರಹಳ್ಳಿ

ನಮ್ರತಾ ಕೆ.ಬಿ. (613 ಅಂಕಗಳು) ಬ್ಲೂಬೆಲ್ ಪಬ್ಲಿಕ್ ಹೈಸ್ಕೂಲ್, ಬ್ಯಾಡರಹಳ್ಳಿ

ಪಿಯು ಪ್ರವೇಶ ಮಿತಿ ಹೆಚ್ಚಳ

ಬೆಂಗಳೂರು: 2022-23ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯು ತರಗತಿಗಳಿಗೆ ಪ್ರವೇಶ ದಾಖಲಾತಿ ಮಿತಿ 80ರಿಂದ 100ಕ್ಕೆ ಹೆಚ್ಚಿಸಲಾಗಿದೆ.

ರಾಜ್ಯದ ಖಾಸಗಿ ಅನುದಾನಿತ ಮತ್ತು ಶಾಶ್ವತ ಅನುದಾನರಹಿತ ಪದವಿಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ತರಗತಿ ದಾಖಲಾತಿಗೆ ಸಂಬಂಧಿಸಿದಂತೆ ಒಂದು ವಿಭಾಗಕ್ಕೆ 20 ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಹುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಆದರೆ, ಅಗತ್ಯ ಮೂಲಸೌಕರ್ಯಗಳು ಇರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

2022–23ನೇ ಸಾಲಿಗೆ ಮಾತ್ರ ಈ ಸೂಚನೆ ಅನ್ವಯವಾಗಲಿದೆ ಎಂದು ತಿಳಿಸಲಾಗಿದೆ.

ಹೊಸ ಭಾಷೆ, ಹೊಸ ಸಂಯೋಜನೆ ಹಾಗೂ ಹೆಚ್ಚುವರಿ ವಿಭಾಗಗಳ ಮಂಜೂರಾತಿಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಜೂನ್ 5ರವರೆಗೆ ವಿಸ್ತರಿಸಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸುತ್ತೋಲೆ ಹೊರಡಿಸಿದೆ.

ಬನ್ನಿ ವಾಣಿಜ್ಯ ಮಳಿಗೆಯನ್ನು ನಿಮ್ಮದಾಗಿಸಿಕೊಳ್ಳಿ ಬಿಡಿಎ

ಇ-ಹರಾಜು ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹಲಗೇವಡೇರಹಳ್ಳಿ ಸರ್ವೆ ನಂ. 250/ಪಿ, ವಸತಿ ಸಮುಚ್ಚಯ ಆವರಣ ಮತ್ತು ವಲಗೇರಹಳ್ಳಿ ಕೆಂಗೇರಿ ಹೋಬಳಿಯಲ್ಲಿ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣ ಕಟ್ಟಡಗಳ ಮಳಿಗೆಗಳನ್ನು 30 ವರ್ಷಗಳ ಗುತ್ತಿಗೆ ಅವಧಿಗೆ ಒಂದುಬಾರಿ ಪಾವತಿಸಬೇಕಾದ ಹಿಂತಿರುಗಿಸಲಾಗದ ಶೇವಣಿ ಆಧಾರದಲ್ಲಿ ಇ-ಹರಾಜು

ಇ-ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ ಮತ್ತು ಸಮಯ : 02.06.2022 ಬೆಳಗ್ಗೆ 11.00 ಗಂಟೆಗೆ

ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ : 13.06.2022 ಸಂಜೆ 6.00 ಗಂಟೆಗೆ

ಇ-ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ : 14.06.2022 ಸಂಜೆ 6.00 ಗಂಟೆಗೆ

ಬಿಡ್‌ದಾರರು ಕನಿಷ್ಠ ಏರಿಕೆ ರೂ. 5000/- ಗಳ ಗುಣಕಗಳಲ್ಲಿ ಬಿಡ್ಡು ಮಾಡತಕ್ಕದ್ದು

ಹಲಗೇವಡೇರಹಳ್ಳಿ ವಾಣಿಜ್ಯ ಸಂಕೀರ್ಣ ಕಟ್ಟಡ (ರಾಜರಾಜೇಶ್ವರಿನಗರ)

ಕ್ರ. ಸಂ.	ಮಳಿಗೆ ಸಂಖ್ಯೆ	ವಿಸ್ತೀರ್ಣ ಚ.ಅಡಿಗಳಲ್ಲಿ	ಮೊತ್ತ ರೂ. ಗಳಲ್ಲಿ
ನೆಲ ಮಹಡಿ			
1	6	179.90	1169350.00
2	8	174.20	1132300.00
3	13	173.88	1130220.00
4	14	173.88	1130220.00
5	15	179.04	1163760.00
ಮೊದಲನೇ ಮಹಡಿ			
1	1	181.95	1091700.00
2	2	148.38	890280.00
3	3	183.99	1103940.00
4	4	196.26	1177560.00
5	5	126.45	758700.00
6	6	192.17	1153020.00
7	7	181.95	1091700.00
8	8	174.85	1049100.00
9	9	175.38	1052280.00
10	10	173.77	1042620.00
11	11	194.54	1167240.00
12	12	178.07	1063420.00
13	13	175.28	1051680.00

ಕ್ರ. ಸಂ.	ಮಳಿಗೆ ಸಂಖ್ಯೆ	ವಿಸ್ತೀರ್ಣ ಚ.ಅಡಿಗಳಲ್ಲಿ	ಮೊತ್ತ ರೂ.ಗಳಲ್ಲಿ
14	14	177.00	1062000.00
15	15	188.30	1129800.00
16	16	188.73	1132380.00
17	17	188.73	1132380.00
18	18	187.43	1124580.00
ಎರಡನೇ ಮಹಡಿ			
1	1	1104.72	6075960.00
2	2	836.69	4601795.00
3	3	846.27	4654485.00
4	4	832.60	4579300.00
5	5	1164.66	6405630.00
6	6	781.17	4296435.00
7	7	993.68	5465240.00
ಮೂರನೆ ಮಹಡಿಯಲ್ಲಿ			
1	1	1109.57	5547850.00
2	2	838.95	4194750.00
3	3	860.58	4302900.00
4	4	827.22	4136100.00
5	5	1161.21	5806050.00
6	6	772.99	3864950.00
7	7	979.16	4895800.00

ವಲಗೇರಹಳ್ಳಿ ವಾಣಿಜ್ಯ ಸಂಕೀರ್ಣ ಕಟ್ಟಡ (ಕೆಂಗೇರಿ ಮೆಟ್ರೊ ನಿಲ್ದಾಣದ ಹತ್ತಿರ)

ಕ್ರ. ಸಂ.	ಮಳಿಗೆ ಸಂಖ್ಯೆ	ವಿಸ್ತೀರ್ಣ ಚ.ಅಡಿಗಳಲ್ಲಿ	ಮೊತ್ತ ರೂ.ಗಳಲ್ಲಿ
ವಾಣಿಜ್ಯ ಸಂಕೀರ್ಣ ಕಟ್ಟಡ, ನೆಲ ಮಹಡಿ			
1	ಆ್ಯಂಕರ್ ಮಳಿಗೆ–1	1837.31	1,59,23,135.00
ಮೊದಲನೇ ಮಹಡಿ			
1	1, 2 ಮತ್ತು 4	142.03	11,36,240.00/–each
2	5 ರಿಂದ 7	132.02	10,56,160.00/–each
3	ಆ್ಯಂಕರ್ ಮಳಿಗೆ 1	3635.26	2,90,82,080.00
4	ಆ್ಯಂಕರ್ ಮಳಿಗೆ 2	1958.32	1,56,66,580.00
5	ಆ್ಯಂಕರ್ ಮಳಿಗೆ 3	2427.99	1,94,23,920.00
ಎರಡನೇ ಮಹಡಿ			
1	2 ರಿಂದ 4	142.03	10,65,225.00/–each
2	ಹಾಲ್ – 1	2031.48	1,52,36,100.00
3	ಹಾಲ್ – 2	3550.80	2,66,31,000.00
4	ಹಾಲ್ – 3	5057.20	3,79,29,000.00

ಸಮುದಾಯ ವಾಣಿಜ್ಯ ಸಂಕೀರ್ಣ ಕಟ್ಟಡ

ಕ್ರ. ಸಂ.	ಮಳಿಗೆ ಸಂಖ್ಯೆ	ವಿಸ್ತೀರ್ಣ ಚ.ಅಡಿಗಳಲ್ಲಿ	ಮೊತ್ತ ರೂ.ಗಳಲ್ಲಿ
ಮೊದಲನೇ ಮಹಡಿ			
1	ಹಾಲ್ – 1	2698.61	13493050.00
	ಹೊಂದಿಕೊಂಡಿರುವ ಕೊಠಡಿ	75.32	376600.00
2	ಹಾಲ್ – 2	2546.89	12734450.00
	ಹೊಂದಿಕೊಂಡಿರುವ ಕೊಠಡಿ	268.03	1340150.00
3	ಹಾಲ್ – 3	1079.23	5396150.00
4	ಕೊಠಡಿ–4	285.14	1425700.0

ಕ್ರ. ಸಂ	ಮಳಿಗೆ ಸಂಖ್ಯೆ	ವಿಸ್ತೀರ್ಣ ಚ.ಅಡಿಗಳಲ್ಲಿ	ಮೊತ್ತ ರೂ.ಗಳಲ್ಲಿ
ಸಮುದಾಯ ವಾಣಿಜ್ಯ ಸಂಕೀರ್ಣ ಕಟ್ಟಡ ನೆಲಮಹಡಿ			
1	01	156.24	859320.00
2	02	156.24	859320.00
3	05	156.24	859320.00
4	08	156.24	859320.00
5	11	159.79	878845.00
6	12	159.79	878845.00
7	13	159.79	878845.00
8	14	159.79	878845.00
9	15	159.79	878845.00
10	16	159.79	878845.00
11	17	211.00	1160500.00
12	18	139.34	766370.00
13	19	139.45	766975.00
14	20	337.00	1853500.00
15	21	337.00	1853500.00
16	22	337.00	1853500.00
17	23	337.00	1853500.00
18	24	337.00	1853500.00
19	25	337.00	1853500.00
20	ಹೋಟೆಲ್	2490.87	13699785.00

ಇ-ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳು

1. ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು,
2. ವಿಳಾಸದ ಸಾಬೀತಿಗಾಗಿ ಕೆಳಕಂಡ ಯಾವುದಾದರು ಒಂದು ದಾಖಲೆಯನ್ನು ಇ–ಹರಾಜಿನ ಪೋರ್ಟಲ್ ನಲ್ಲಿ Upload ಮಾಡಬೇಕು (ಗೆಜೆಟೆಡ್ ಅಧಿಕಾರಿ / ನೋಟರಿಯಿಂದ / ಅನಿವಾಸಿ ಭಾರತೀಯ ಪ್ರಜೆಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರುಬೇಕು). ಅ) ಮತದಾರರ ಗುರುತಿನ ಚೀಟಿ, ಆ) ವಾಹನ ಚಾಲನೆಯ ಪರವಾನಿಗಿ, ಇ) ಪಾಸ್ ಪೋರ್ಟ್, ಈ) ವಿಶಿಷ್ಟ ಗುರುತಿನ ಸಂಖ್ಯೆ:
3. ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು (ಗಜೆಟೆಡ್ ಅಧಿಕಾರಿ / ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು).
4. ಸಹಿ ಭಾವಚಿತ್ರದ ಗುರುತನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು. ಇದಕ್ಕೆ ನಿಗದಿಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು (ಗಜೆಟೆಡ್ ಅಧಿಕಾರಿ / ನೋಟರಿಯಿಂದ / ಅನಿವಾಸಿ ಭಾರತೀಯ ಪ್ರಜೆಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು).
5. ಹರಾಜು ಖರೀದಿದಾರರು ಸರಿಯಾದ ಇ–ಮೇಲ್ ವಿಳಾಸ, ಮೊಬೈಲ್ ಸಂಖ್ಯೆ ಮತ್ತೆ ಸ್ಥಿರ ದೂರವಾಣಿಯನ್ನು (ಲ್ಯಾಂಡ್ ಲೈನ್) ಇ–ಹರಾಜಿನಲ್ಲಿ ಭಾಗವಹಿಸುವಾಗ ನಮೂದಿಸಬೇಕು, ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರು ನೋಂದಾಯಿಸಿರುವ ಬಿಡ್‌ದಾರರು ಅಂತಿಮವಾಗಿರುತ್ತಾರೆ. ಮತ್ತು ಮಳಿಗೆಗಳನ್ನು ಬೇರೆ ಯಾವುದೇ ಹೆಸರಿಗೆ ವರ್ಗಾಯಿಸುವಂತಿಲ್ಲ.
6. **ಅಪ್ರಾಪ್ತ ವಯಸ್ಕರು / ಗಣಕಯಂತ್ರ ಜ್ಞಾನ (COMPUTER KNOWLEDGE) ಇಲ್ಲದೇ ತಮ್ಮ ಪಾಲಕರ / ಹತ್ತಿರದ ಸ್ನೇಹಿತರ ಮೂಲಕ ಇ–ಹರಾಜಿನಲಿ ಭಾಗವಹಿಸಬಹುದು, ಇ–ಹರಾಜಿನಲ್ಲಿ ಭಾಗವಹಿಸವಾಗ ಯಾರು ಮಳಿಗೆಗಳನ್ನು ಖರೀದಿಸುತ್ತಾರೆಯೋ ಅವರ ಹೆಸರನ್ನು ಮಾತ್ರ ನಮೂದಿಸಿ, ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು /ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು.**
7. ಇ–ಹರಾಜಿನ ಮೂಲಕ ಮಳಿಗೆಗಳನ್ನು ಖರೀದಿಸುವವರು ತಮ್ಮ ಹೆಸರಿನೊಂದಿಗೆ ಜಂಟಿ ನೋಂದಣಿಗಾಗಿ ಹೆಸರನ್ನು ಸೇರ್ಪಡೆ ಮಾಡಲು ಇಚ್ಚಿಸುವವರು ಕೇವಲ ರಕ್ತ ಸಂಬಂಧಿಗಳನ್ನು ಮಾತ್ರ" (ಗಂಡ ಹೆಂಡತಿ, ಗಂಡು ಮಕ್ಕಳು, ಅವಿವಾಹಿತ ಹೆಣ್ಣು ಮಕ್ಕಳು) ಸೇರಿಸಬಹುದು. ಜಂಟಿ ನೋಂದಣಿಗಾಗಿ ಸೇರ್ಪಡೆ ಮಾಡುತ್ತಿರುವ ಹೆಸರಿನವರು ತಮಗೆ ಏನಾಗಬೇಕು .
8. ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ, ಹೀಗೆ ಭಾಗವಹಿಸುವ ಪಾಲುದಾರರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸುವ ಮುನ್ನ ತನ್ನ ಸಂಸ್ಥೆಯ ನೋಂದಾಣೆಯನ್ನು ಭಾರತ ದೇಶದಲ್ಲಿ ಮಾಡಿಕೊಂಡಿರಬೇಕು.
9. ಪ್ರತಿ ಮಳಿಗೆ ಇ.ಎಂ.ಡಿ ಮೊತ್ತ 1.00 ಲಕ್ಷಗಳನ್ನು ಹರಾಜಿನ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿರುವಂತೆ ಪಾವತಿ ಮಾಡಬೇಕು ಆದರೆ ಸದರಿ ಮೊತ್ತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಖಾತೆಗೆ ಪಾವತಿಸಬಾರದು.
10. ಹರಾಜು ಮಳಿಗೆಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಬೆಂಗಳೂರಿನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವೆ.
11. ಇ–ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ ಐದು ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ.
12. ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹರಾಜಿಗೆ ಪ್ರಕಟಿಸಿದ ಮಳಿಗೆಗಳನ್ನು ಹಿಂಪಡೆಯುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
13. ಯಾವುದೇ ಕಾರಣ ನೀಡದೇ ಯಶಸ್ವಿ ಬಿಡ್ಡುದಾರರ ಬಿಡ್ ನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
14. ಯಾವುದೇ ಬಿಡ್ಡುದಾರರಿಗೆ /ಅತಿ ಹೆಚ್ಚಿನ ಬಿಡ್ಡುದಾರರಿಗೆ ಮಳಿಗೆಯ ಒಟ್ಟು ಮೌಲ್ಯದಲ್ಲಿ 25% ಮೊತ್ತವನ್ನು ಇ.ಎಂ.ಡಿ ಮೊತ್ತ ರೂ. 1.00 ಲಕ್ಷ ಕಡಿತಗೊಳಿಸಿ ಬಾಕಿ ಮೌಲ್ಯವನ್ನು ಇ–ಹರಾಜು ಮುಕ್ತಾಯಗೊಂಡ ಅವಧಿಯ 72 ಘಂಟೆಗೊಳಗೆ (ಬ್ಯಾಂಕ್ ರಜೆಗಳನ್ನು ಹೊರತು ಪಡಿಸಿ) ಕೆಳಕಂಡ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬ್ಯಾಂಕ್ ಖಾತೆಗೂ ಪಾವತಿ ಮಾಡಿ, ಚಲನ್ ಅನ್ನು ಆರ್ಥಿಕ ಶಾಖೆಯ ಲೆಕ್ಕಾಧಿಕಾರಿಯವರ ವಿಭಾಗಕ್ಕೆ (ಡಿ ಬ್ಲಾಕ್, 2ನೇ ಮಹಡಿ, ರೂಮ್ ನಂ. 308) **ನೀಡುವಂತೆ ಇ–ಮೇಲ್ ಮುಖಾಂತರ ಸೂಚನಾ ಪತ್ರವನ್ನು** (ADVICE LETTER) ಕಳುಹಿಸಲಾಗುವುದು. ಒಂದು ವೇಳೆ ಸೂಚನಾ ಪತ್ರವು (ADVICE LETTER) ತಲುಪದೇ ಇದ್ದಲ್ಲಿ, ಹರಾಜು ಮಳಿಗೆದಾರರೇ ಶೇ.25 ರಷ್ಟು ಮೌಲ್ಯವನ್ನು ಲೆಕ್ಕಾಚಾರ ಮಾಡಿ, ಮೇಲ್ಕಂಡಂತ ನಿಗಧಿತ ಅವಧಿಯೊಳಗೆ ಪಾವತಿಸಬೇಕು ಅಥವಾ ಪ್ರಾಧಿಕಾರದ ಕೇಂದ್ರ ಕಛೇರಿಗೆ ಬಂದು **ಸೂಚನಾ ಮೇಲ್ಕಂಡಂತೆ ನಿಗಧಿತ ಅವಧಿಯೊಳಗೆ ಪಾವತಿಸಬೇಕು. ಬ್ಯಾಂಕ್‌ನ ಹೆಸರು : ಕೆನರಾ ಬ್ಯಾಂಕ್, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು–560020 ಉಳಿತಾಯ ಖಾತೆಯ ಹೆಸರು: ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ , ಬೆಂಗಳೂರು ಉಳಿತಾಯ ಖಾತೆಯ ಸಂಖ್ಯೆ: 2828101053014 ಐ.ಎಫ್.ಎಸ್.ಸಿ. ಕೋಡ್ : CNRB0002828 ಪಾವತಿಯ ವಿಧಾನ : ಆರ್.ಜಿ.ಎಸ್ /ಎನ್. ಇ.ಎಫ್.ಟಿ**
15. ಯಶಸ್ವಿ ಬಿಡ್ಡುದರಾರರು ಶೇ.25 ರಷ್ಟು ಬಿಡ್ ಹಣವನ್ನು ಪಾವತಿಸಿದ ಬಳಿಕ ಉಳಿದ ಹಣ ಶೇ.75 ಹಣವನ್ನು ಬಿ.ಡಿ.ಎ ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದ್ದು ಹಾಗೂ ಬಿಡ್‌ನ ಮೊತ್ತಕ್ಕೆ 18% GST ಸಹ ಪಾವವತಿಸತಕ್ಕದ್ದು
16. ಯಶಸ್ವಿಯಾಗದ ಬಿಡ್ಡುದಾರರಿಗೆ EMD ಹಣ **1 ಲಕ್ಷ ರೂ.** ಗಳನ್ನು ಒಂದು ತಿಂಗಳ ಒಳಗಾಗಿ ಅವರ ಖಾತೆಗೆ ಹಿಂತಿರುಗಿಸಲಾಗುವುದು,
17. **ಯಶಸ್ವಿ ಬಿಡ್ಡುದಾರರು /ಅತಿ ಹೆಚ್ಚಿನ ಬಿಡ್ಡುದಾರರು ಇ–ಹರಾಜು ಮುಕ್ತಾಯಗೊಂಡ ಅವಧಿಯ ನಿಗಧಿತ 72 ಘಂಟೆಯೊಳಗೆ ಮಳಿಗೆಯ ಒಟ್ಟು ಮೌಲ್ಯದ ಪ್ರತಿ ಶೇ.25 ರಷ್ಟು ಮೌಲ್ಯವನ್ನು ಪ್ರಾಧಿಕಾರದ ಖಾತೆಗೆ ಪಾವತಿ ಮಾಡದೇ ಇದ್ದಲ್ಲಿ ಅಥವಾ ನಿಗಧಿತ ಅವಧಿಯ ನಂತರ ಅಂದರೆ ತಡವಾಗಿ ಪಾವತಿಸಿದ್ದಲ್ಲಿ ಇ.ಎಂ.ಡಿ. ಮೊತ್ತವಾದ ರೂ. 1.00 ಲಕ್ಷಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**
18. ಆದಾಯ ತೆರಿಗೆ ಕಾಯ್ದೆ 1961 ರ ಕಲಂ 194 ಐಎ ಪ್ರಕಾರ ಹರಾಜು ಮಳಿಗೆಗಳ ಒಟ್ಟು ಮೌಲ್ಯವು ರೂ. 50.00 ಲಕ್ಷ ಮೀರಿದ ಪ್ರಕರಣಗಳಲ್ಲಿ, ಹರಾಜು ಖರೀದಿದಾರರು ಮಳಿಗೆಗಳ ಒಟ್ಟು ಮೌಲ್ಯದಲ್ಲಿ ಶೇ. 1 ರಷ್ಟು ಮೌಲ್ಯವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆಗೆ ಪಾವತಿಸತಕ್ಕದ್ದು.
19. ಒಂದು ವೇಳೆ ಮಳಿಗೆಯ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ/ಹೆಚ್ಚು) ಮೊದಲು ಇ–ಹರಾಜು ಅಧಿಸೂಚನೆ / ಹರಾಜು ಮಳಿಗೆಗಳ ಸ್ಥಿರೀಕರಣ ಪತ್ರದನ್ವಯ ಮಳಿಗೆಗಳ ಪೂರ್ಣ ಮೌಲ್ಯವನ್ನು (TDS ಹೊರತುಪಡಿಸಿ) ನಿಗಧಿತ ಅವಧಿಯೊಳಗೆ ಪಾವತಿಸಬೇಕು, ನಿಗಧಿತ ಅವಧಿಯೊಳಗೆ ಪಾವತಿಸದೇ ಇದ್ದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ಮಳಿಗೆಗಳ ವಿಲೇವಾರಿ ನಿಯಮ 1984 ರನ್ವಯ ಕ್ರಮಕೈಗೊಳ್ಳಲಾಗುವುದು.
20. ಬಿಡ್ಡುದಾರರು ಹರಾಜು ಖರೀದಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ಮಳಿಗೆಗ ವಿಲೇವಾರಿ) ನಿಯಮ 1984 ನ್ನು ಪಾಲಿಸಬೇಕಾಗುತ್ತದೆ, (ಇ–ಹರಾಜಿನ ದಾಖಲೆಯ ಭಾಗವಾಗಿ ಈ ದಾಖಲೆಯನ್ನು ಲಗತ್ತಿಸಿದೆ).
21. ಇ–ಹರಾಜಿನಲ್ಲಿ ಭಾಗವಹಿಸುವ ವಿಧಾನಗಳನ್ನು ತಿಳಿಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಚೇರಿಯನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಹರಾಜಿನ ವಿಧಾನ ತಿಳಿಸುವ ಸಮಯದಲ್ಲಿ ಬಿಡಿಎ, ಬಿಡ್ಡುದಾರರ ಪರವಾಗಿ ಬಿಡ್ ಮಾಡುವುದಿಲ್ಲ.
22. ಇನ್ನಿತರ ಸಾಮಾನ್ಯ ಷರತ್ತು ಮತ್ತು ನಿಯಮ–ನಿಬಂಧನೆಗಳಗೆ ನಮ್ಮ ವೆಬ್‌ಸೈಟ್: www.bdabangalore.org ಗೆ ಭೇಟಿ ನೀಡಿ.
23. ಇ–ಹರಾಜಿನಲ್ಲಿ ಪಾಲ್ಗೊಳ್ಳುವ ಬಿಡ್‌ದಾರರು, ಪ್ರಾಧಿಕಾರವು ನಿಗಧಿಪಡಿಸಿರುವ ಮೂಲ ದರದಲ್ಲಿ ಶೇ. 10ರಷ್ಟು ಹೆಚ್ಚುವರಿ ಬಿಡ್ ಮಾಡಿರಬೇಕು, ಆದಾಗ್ಯೂ ಯಾವುದೇ ಕಾರಣ ನೀಡದೇ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
24. 45 ದಿನಗಳಲ್ಲಿ 75% ಮೊತ್ತವನ್ನು ಕಟ್ಟದಿದ್ದಲ್ಲಿ ಮೊದಲಿನ 25% ಮೊತ್ತವನ್ನು ಮುಟ್ಟುಗೋಲು ಮಾಡಿಕೊಳಲಾಗುವುದು.

ಮಳಿಗೆಗಳ ಸ್ಥಳ ಮತ್ತು ಇತರೆ ಮಾಹಿತಿಗಳಿಗೆ ನಮ್ಮ ವೆಬ್ ಸೈಟ್ : www.bdabangalore.orgಗೆ ಭೇಟಿ ನೀಡಿ.

ನಂ. ಬೆಂಅಪ್ರಾ /ಅಸ/ಹರಾಜು/ಟಿ–02/2022-23 ದಿನಾಂಕ : 31.05.2022

ಸಹಿ/ – ಅಭಿಯಂತರ ಸದಸ್ಯರು

ಬಿಡಿಎ ಮಳಿಗೆಗಳ ವಿವರಗಳಿಗೆ ಸಂಬಂಧಿಸಿದಂತೆ 080–23368435 / 23368036 ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ 080–46010000 / 22631200

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560 020.

ಸಾಹಿತಿಗಳ ಆಕ್ರೋಶ • ಮತ್ತಷ್ಟು ಲೇಖಕರಿಂದ ಪ್ರತಿರೋಧ; ಕವಿತೆ, ಕತೆ ವಾಪಸ್

‘ಕನ್ನಡ ಪರಂಪರೆ ಕುಬ್ಜಗೊಳಿಸುವ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಸರ್ಕಾರವು ಪಠ್ಯ ಪುಸ್ತಕಗಳ ಪರಿಷ್ಕರಣೆಗೆ ಸಮಿತಿ ರಚಿಸಿ, ಶಾಲಾ ಪಠ್ಯಗಳನ್ನು ಕೇಸರೀಕರಣಗೊಳಿಸುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿರುವ ಏಳು ಜನ ಸಾಹಿತಿಗಳು, ಲೇಖಕರು ತಮ್ಮ ಪಠ್ಯದ ಬೋಧನೆಗೆ ನೀಡಿದ್ದ ಅನುಮತಿಯನ್ನು ವಾಪಸ್ ಪಡೆದಿದ್ದಾರೆ.

ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಪತ್ರ ಬರೆದಿರುವ ಮೂಡ್ನಾಕೂಡು ಚಿನ್ನಸ್ವಾಮಿ, ‘ಪಠ್ಯಗಳನ್ನು ಕೇಸರೀಕರಣಗೊಳಿಸುತ್ತಿರುವ ಬಗ್ಗೆ ಕನ್ನಡ ಸಾರಸ್ವತ ಲೋಕ ವಿಚಲಿತಗೊಂಡಿದೆ. ಬಸವಣ್ಣನವರ ಬಗ್ಗೆ ತಪ್ಪು ಮಾಹಿತಿ, ಕುವೆಂಪು ಅವರನ್ನು ಅವಮಾನಿಸುವುದು ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಮಾಡುವ ಅಪಚಾರ. ಸ್ವಸ್ಥ ಸಮಾಜಕ್ಕಾಗಿ ಮುಂದಿನ ಪೀಳಿಗೆಯನ್ನು ತಯಾರು ಮಾಡುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಕ್ಷೇತ್ರ ಅನವಶ್ಯಕ ವಿದ್ಯಮಾನಗಳಿಂದ ದಾಳಿಗೆ ಒಳಗಾಗಿರುವುದು ವಿಷಾದನೀಯ. ಪ್ರಗತಿಪರತೆಯನ್ನು ಪ್ರತಿಪಾದಿಸುವವರನ್ನು ಎಡಪಂಥೀಯರು ಎಂದು ದೂರುವುದು ಆರೋಗ್ಯಕರ ಸಮಾಜದ ಲಕ್ಷಣವಲ್ಲ. ಈ ಹಿನ್ನೆಲೆಯೊಳಗೆ ಐದನೇ ತರಗತಿಗೆ ಪಠ್ಯವಾಗಿರುವ ‘ನನ್ನ ಕವಿತೆಗೆ’ ಎಂಬ ಪದ್ಯಕ್ಕೆ ನೀಡಿರುವ ಅನುಮತಿ ವಾಪಸ್ ಪಡೆಯುತ್ತಿದ್ದೇನೆ’ ಎಂದು ಪ್ರತಿಪಾದಿಸಿದ್ದಾರೆ.

ಮೂಡ್ನಾಕೂಡು ಚಿನ್ನಸ್ವಾಮಿ

‘ಇತ್ತೀಚೆಗೆ ನಡೆಯುತ್ತಿರುವ ಅನಾರೋಗ್ಯಕರ ಬೆಳವಣಿಗೆಯಿಂದ ತೀವ್ರ ಅಸಮಾಧಾನವಾಗಿದೆ. ಈ ಕಾರಣಕ್ಕೆ 10ನೇ ತರಗತಿಯ ನುಡಿಕನ್ನಡ ತೃತೀಯ ಭಾಷಾ ಕನ್ನಡ ಪಠ್ಯಪುಸ್ತಕದಲ್ಲಿರುವ ‘ಹೀಗೊಂದು ಟಾಪ್ ಪ್ರಯಾಣ’ ಎಂಬ ಲಲಿತ ಪ್ರಬಂಧಕ್ಕೆ ನೀಡಿದ ಅನುಮತಿ ವಾಪಸ್ ಪಡೆಯುತ್ತಿದ್ದೇನೆ’ ಎಂದು ಲೇಖಕ ಈರಪ್ಪ ಎಂ. ಕಂಬಳಿ ಅವರು ಸಚಿವ ನಾಗೇಶ್‌ಗೆ ಪತ್ರ ಬರೆದಿದ್ದಾರೆ.

‘ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಯು ಬಸವಣ್ಣ, ಕುವೆಂಪುರವರ ಘನತೆಯನ್ನು ಕುಗ್ಗಿಸಿ ಅವಮಾನಿಸಿದೆ. ಈ ಸಂಕುಚಿತ ಧೋರಣೆಯ ಸಮಿತಿಯನ್ನು ರದ್ದುಪಡಿಸಬೇಕು. ಇಲ್ಲದಿದ್ದರೆ 8ನೇ ತರಗತಿಯ ಕನ್ನಡ ಪಠ್ಯದಲ್ಲಿರುವ ‘ಬಿಳಿದಾಳೆಯ ಆನೆಗಳು’ ಎಂಬ ನನ್ನ ಬರಹವನ್ನು ಪರಿಷ್ಕೃತಿ ಪಠ್ಯದಲ್ಲಿ ಸೇರಿಸಲು ಒಪ್ಪಿಗೆ ನೀಡುವುದಿಲ್ಲ’ ಎಂದು ಪತ್ರಕರ್ತ ಪಾರ್ವತೀಶ ಬಿಳಿದಾಳೆ ಅವರು ಸಚಿವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

‘ಪರಿಷ್ಕರಣೆ ಸಮಿತಿ ಅಧ್ಯಕ್ಷರು ಕುವೆಂಪು ಅವರನ್ನು ಗೇಲಿ ಮಾಡಿದ್ದಾರೆ’ ಎಂದಿರುವ ನಿವೃತ್ತ ಪ್ರಾಂಶುಪಾಲ ಕೆ.ಎಸ್. ಮಧುಸೂದನ್, ಒಂಬತ್ತನೆ ತರಗತಿಯ ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕತೆ ಹಿಂಪಡೆದ ಬೊಳುವಾರು



‘ಐದನೇ ತರಗತಿಯ ಪರಿಷ್ಕೃತ ಪಠ್ಯಪುಸ್ತಕದಲ್ಲಿ ‘ಸುಳ್ಳು ಹೇಳಬಾರದು’ ಎಂಬ ನನ್ನ ಕತೆ ಇದೆ. ಪರಿಷ್ಕೃತಗೊಳ್ಳಲಿರುವ ಇತರೆ ಕೆಲವು ಪಠ್ಯದಲ್ಲಿರುವ ಆಶಯಗಳು ನನ್ನ ಕತೆಯ ಆಶಯಕ್ಕೆ ಸರಿಹೊಂದದಿರುವ ಸಾಧ್ಯತೆಗಳಿವೆ. ಇದರಿಂದ ನಮ್ಮ ಪುಟ್ಟಮಕ್ಕಳು ಗೊಂದಲಕ್ಕೆ ಒಳಗಾಗುವ ಸಾಧ್ಯತೆಗಳುಂಟು. ನನ್ನ ಕತೆಯನ್ನು ಕಿತ್ತುಹಾಕಿ, ಪರಿಷ್ಕೃತ ಪಠ್ಯದ ಆಶಯಗಳಿಗೆ ಸರಿಹೊಂದುವ ಬೇರೊಂದು ಪಠ್ಯವನ್ನು ಸೇರಿಸಿಕೊಳ್ಳಿ’ ಎಂದು ಸಾಹಿತಿ ಬೊಳುವಾರು ಮಹಮ್ಮದ್ ಕುಂಞಿ ಅವರು ಸಚಿವ ಬಿ.ಸಿ. ನಾಗೇಶ್ ಅವರಲ್ಲಿ ಮನವಿ ಮಾಡಿದ್ದಾರೆ.

ಕವಿತೆ ವಾಪಸ್ ಪಡೆದ ಸರಜೂ ಕಾಟ್ಕರ್

ಈಗಿನ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಹಾಗೂ ಅದರ ನಿಲುವುಗಳ ಸಾಕಷ್ಟು ಚರ್ಚೆ ಆಗುತ್ತಿದ್ದು, ಇದರಿಂದ ವಿದ್ಯಾರ್ಥಿಗಳು ಮತ್ತು ಜನಸಮೂಹದಲ್ಲಿ ಗೊಂದಲ ಮೂಡಿದೆ. ಹೀಗಾಗಿ ಒಂಬತ್ತನೇ ತರಗತಿ ಕನ್ನಡ ತೃತೀಯ ಭಾಷೆ ಪಠ್ಯದಲ್ಲಿ ‘ಶಬ್ದಗಳು’ ಎಂಬ ನನ್ನ ಕವಿತೆ ಇತ್ತು. ನನ್ನ ನಂಬುಗೆ ಹಾಗೂ ಇಷ್ಟು ವರ್ಷದ ಬದ್ಧತೆಯ ಕಾರಣಕ್ಕೆ ನನ್ನ ಕವಿತೆಗೆ ನೀಡಿದ್ದ ಒಪ್ಪಿಗೆಯನ್ನು ಹಿಂಪಡೆಯುತ್ತಿದ್ದೇನೆ ಎಂದು ಕವಿ, ಪತ್ರಕರ್ತ ಸರಜೂ ಕಾಟ್ಕರ್ ಅವರು ಸಚಿವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಒಂದು ಸೋಜಿಗದ ಪದ್ಯ ಕೈಬಿಡಿ: ತಾಳ್ಯ

‘ಶಿಕ್ಷಣ ಕ್ಷೇತ್ರದ ಮೇಲೆ ನಡೆಯುತ್ತಿರುವ ಸಾಂಸ್ಕೃತಿಕ ಹಲ್ಲೆ ಮಿತಿ ಮೀರುತ್ತಿದ್ದು, ಈ ಹಿನ್ನೆಲೆಯಲ್ಲಿ ಆರನೇ ತರಗತಿಯ ದ್ವಿತೀಯ ಭಾಷಾ ಪಠ್ಯಪುಸ್ತಕದಲ್ಲಿರುವ ನನ್ನ ಕವಿತೆ ‘ಒಂದು ಸೋಜಿಗದ ಪದ್ಯ’ವನ್ನು ವಾಪಸ್ ಪಡೆಯುತ್ತಿದ್ದೇನೆ’ ಎಂದು ಕವಿ ಚಂದ್ರಶೇಖರ ತಾಳ್ಯ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಶಿಕ್ಷಣ ಸಚಿವರಿಗೆ ಪತ್ರ ಬರೆದಿರುವ ಅವರು, ‘ಅಸಾಂವಿಧಾನಿಕ ನಿರ್ಧಾರಗಳಿಂದ ಇಡೀ ಶೈಕ್ಷಣಿಕ ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಈ ಅನೈತಿಕ ನಡೆ ನನ್ನಂಥ ಲೇಖಕನನ್ನು ಅಧೀರರನ್ನಾಗಿ ಮಾಡುತ್ತಿದೆ. ಇದು ಕನ್ನಡ ಪರಂಪರೆಯನ್ನು ಕುಬ್ಜಗೊಳಿಸುವ ಅಕ್ರಮ ನಡೆ. ಪಠ್ಯ ಪರಿಷ್ಕರಣೆಯ ನೆಪದಲ್ಲಿ ನಡೆಯುತ್ತಿರುವ ಸಂಸ್ಕೃತಿ ತಿರುಚೀಕರಣ ನಮ್ಮ ಸಂಸ್ಕೃತಿಯನ್ನೇ ವಿರೂಪಗೊಳಿಸುವಂತಹದು’ ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

ಕವಿತೆ ಬಳಕೆಗೆ ರೂಪ ನಕಾರ

‘ಒಂಬತ್ತನೆಯ ತರಗತಿ ತೃತೀಯ ಭಾಷಾ ಕನ್ನಡ ಪಠ್ಯದಿಂದ ‘ಅಮ್ಮನಾಗುವುದೆಂದರೆ’ ಕವಿತೆ ಕೈಬಿಡಬೇಕು’ ಎಂದು ಲೇಖಕಿ ರೂಪ ಹಾಸನ ಅವರು ಸಚಿವ ನಾಗೇಶ್ ಅವರಿಗೆ ಮನವಿ ಮಾಡಿದ್ದಾರೆ.

‘ಪಠ್ಯಪುಸ್ತಕಗಳು ಆಳುವ ಪಕ್ಷದ ತತ್ವ, ಸಿದ್ಧಾಂತಕ್ಕೆ ಅನುಗುಣವಾಗಿ ಮರುಪರಿಷ್ಕರಣೆಗೊಂಡಿವೆ. ಪಠ್ಯಬಳಕೆಗೆ ನೀಡಿದ್ದ ಅನುಮತಿಯನ್ನು ಕೆಲವು ಹಿರಿಯ ಲೇಖಕರು ಹಿಂಪಡೆದು ಸಾತ್ವಿಕ ಪ್ರತಿರೋಧ ತೋರಿದ್ದಾರೆ. ತಪ್ಪನ್ನು ಸರಿಪಡಿಸಿ, ತಕ್ಷಣವೇ ಕ್ರಮ ಕೈಗೊಳ್ಳಬೇಕಾದ ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ಮರು ಪಠ್ಯಪರಿಷ್ಕರಣಾ ಸಮಿತಿಯಲ್ಲಿ ಮಹಿಳೆಯರಿಲ್ಲ. ಹತ್ತನೇ ತರಗತಿ ಕನ್ನಡ ಪಠ್ಯದಲ್ಲಿ ಯಾವ ಲೇಖಕಿಯ ಗದ್ಯ-ಪದ್ಯವೂ ಇಲ್ಲ. ಇದು ಸರ್ಕಾರವು ಮಹಿಳಾ ಸಂಕುಲಕ್ಕೆ ಮಾಡಿದ ಅವಮಾನ’ ಎಂದೂ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಸುದ್ದಿ 2 ನಿಮಿಷ

ಇತಿಹಾಸವನ್ನು ತಿದ್ದದೇ ಬೋಧಿಸಿ– ಯದುವೀರ್

ಮೈಸೂರು: ‘ಇತಿಹಾಸವನ್ನು ತಿದ್ದದೇ ಅದು ಇರುವಂತೆಯೇ ಮಕ್ಕಳಿಗೆ ಬೋಧಿಸಬೇಕು. ಅಲ್ಲಿ ಎಡ ಮತ್ತು ಬಲಪಂಥೀಯ ಸಿದ್ಧಾಂತಗಳ ಬೋಧನೆಗೆ ಅವಕಾಶ ಇರಬಾರದು’ ಎಂದು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರತಿಪಾದಿಸಿದರು.

ಮಂಗಳವಾರ ಸುದ್ದಿಗಾರರೊಡನೆ ಮಾತನಾಡಿದ ಅವರು, ‘ಪ್ರಸ್ತುತ ಕಾಲಕ್ಕೆ ಅನುಗುಣವಾಗಿ ಪಠ್ಯವನ್ನು ಅಳವಡಿಸಬೇಕು’ ಎಂದರು.

‘ಪಾರಂಪರಿಕ ಕಟ್ಟಡಗಳ ಉಳಿವು ಎಂದರೆ ನೆಲಸಮ ಮಾಡಿ ಮರು ನಿರ್ಮಿಸುವುದಲ್ಲ. ಕಟ್ಟಡಗಳ ಪುನಶ್ಚೇತನಕ್ಕೆ ಅವಕಾಶ ಕಲ್ಪಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪುನಶ್ಚೇತನಕ್ಕೆ ಅವಕಾಶ ನೀಡುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಬಸವಣ್ಣನ ತಿರುಚಿದ ಇತಿಹಾಸ: ಖಂಡನೆ

ಬೀದರ್: ‘ಬಸವಣ್ಣನವರ ಇತಿಹಾಸ ತಿರುಚಿರುವ ಕಾರಣ 9ನೇ ತರಗತಿ ಪರಿಷ್ಕೃತ ಸಮಾಜ ವಿಜ್ಞಾನ ಪಠ್ಯಪುಸ್ತಕವನ್ನು ಹಿಂಪಡೆಯಬೇಕು’ ಎಂದು ರಾಷ್ಟ್ರೀಯ ಬಸವ ದಳದ ರಾಷ್ಟ್ರೀಯ ಅಧ್ಯಕ್ಷ ಬಸವರಾಜ ಧನ್ನೂರ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಪಾಠದಲ್ಲಿ ಬಸವಣ್ಣನವರ ಇತಿಹಾಸವನ್ನು ತಪ್ಪು ತಪ್ಪಾಗಿ ಬಿಂಬಿಸಲಾಗಿದೆ. ಬಸವಣ್ಣನವರು ಶೈವ ಗುರುಗಳ ಸಾನಿಧ್ಯದಲ್ಲಿ ಲಿಂಗ ದೀಕ್ಷೆ ಪಡೆದು, ಧ್ಯಾನ ಸಾಧನೆ ಮಾಡಿದರು. ವೀರಶೈವ ಮತ ಅಭಿವೃದ್ಧಿಪಡಿಸಿದರು ಎಂದು ತಪ್ಪುಮಾಹಿತಿ ಕೊಡಲಾಗಿದೆ ಎಂದು ಆರೋಪಿಸಿದ್ದಾರೆ.

‘ಇಷ್ಟಲಿಂಗ ಕೊಟ್ಟವರೇ ಬಸವಣ್ಣ. ಅವರಿಗೂ ಮುಂಚೆ ಇಷ್ಟಲಿಂಗದ ಕಲ್ಪನೆ ಇರಲಿಲ್ಲ. ಅವರು ಯಾರಿಂದಲೂ ಲಿಂಗ ದೀಕ್ಷೆ ಪಡೆದಿರಲಿಲ್ಲ. ಬಸವಣ್ಣನವರೇ ಹೊಸ ಲಿಂಗಾಯತ ಧರ್ಮ ಸ್ಥಾಪಿಸಿದ್ದರು. ವೀರಶೈವ ಮತ ಅಭಿವೃದ್ಧಿಪಡಿಸಿದರು ಎನ್ನುವುದು ಆಧಾರ ರಹಿತ’ ಎಂದಿದ್ದಾರೆ.

‘ಉದ್ದೇಶಪೂರ್ವಕವಾಗಿ ಬಸವಣ್ಣನವರ ಪಾಠ ತಿರುಚಿರುವುದು ಕಂಡು ಬರುತ್ತದೆ. ಬಸವಣ್ಣನವರ ಬಗ್ಗೆ ತಪ್ಪು ಅಭಿಪ್ರಾಯ ಮೂಡುವಂತೆ ಲೇಖಕ ಮಾಡಿದ್ದಾರೆ. ಮಕ್ಕಳಿಗೆ ಬಸವಣ್ಣನವರ ತಪ್ಪು ಇತಿಹಾಸ ರವಾನಿಸಲು ಪ್ರಯತ್ನಿಸಿದ್ದಾರೆ’ ಎಂದು ಕಿಡಿ ಕಾರಿದ್ದಾರೆ.

ವೈದಿಕವಾದಿಗಳಿಂದ ದಾಳಿ: ಮಾವಳ್ಳಿ ಶಂಕರ್

ಮಂಗಳೂರು: ‘ದೇಶದಲ್ಲಿ ಅಶಾಂತಿ ಮೂಡಿಸಲು ಹೊರಟವರಿಗೆ ತಕ್ಕ ಪಾಠ ಕಲಿಸಬೇಕಾಗಿದೆ. ಪರಿಶಿಷ್ಟರು, ಮುಸ್ಲಿಮರು, ಮಹಿಳೆಯರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ’ ಎಂದು ದಸಂಸ (ಅಂಬೇಡ್ಕರ್‌ವಾದ) ರಾಜ್ಯ ಘಟಕದ ಅಧ್ಯಕ್ಷ ಮಾವಳ್ಳಿ ಶಂಕರ್ ಆರೋಪಿಸಿದರು.

ಸಿಪಿಎಂ ಕರ್ನಾಟಕ ರಾಜ್ಯ ಸಮಿತಿ ನಗರದ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಆಯೋಜಿಸಿರುವ ರಾಜ್ಯ ಮಟ್ಟದ ಮುಸ್ಲಿಂ ಸಮಾವೇಶದಲ್ಲಿ ಅವರು ಮಾತನಾಡಿದರು. ‘ರಾಜ್ಯದಲ್ಲಿ ಅರಾಜಕತೆ ಸೃಷ್ಟಿಯಾಗುತ್ತಿದೆ. ಪಠ್ಯಪುಸ್ತಕ ಪರಿಷ್ಕರಣೆಯಲ್ಲೂ ಗೊಂದಲ ಸೃಷ್ಟಿಸಲಾಗಿದೆ’ ಎಂದರು.

‘ಭಾರತವನ್ನು ಪಾಕಿಸ್ತಾನದಂಥ ಮತಾಂಧ ರಾಷ್ಟ್ರವನ್ನಾಗಿಸಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಪ್ರಯತ್ನಿಸುತ್ತಿವೆ. ಅದಕ್ಕೆ ಅವಕಾಶ ನೀಡಬಾರದು. ಜಾತ್ಯತೀತ ನಿಲುವು ಭಾರತದ ಜೀವವಾಯು. ಅದು ನಾಶವಾದರೆ ಭಾರತ ಇಲ್ಲವಾಗುತ್ತದೆ’ ಎಂದು ಸಮಾವೇಶ ಉದ್ಘಾಟಿಸಿದ ಕೇರಳದ ಶಾಸಕ ಡಾ.ಕೆ.ಟಿ. ಜಲೀಲ್ ಎಚ್ಚರಿಸಿದರು.

‘ಸಮುದಾಯದ ಸಂಕಟವನ್ನು ರಾಜ್ಯಕ್ಕೆ ತಿಳಿಸುವುದು ಸಮಾವೇಶದ ಉದ್ದೇಶ. ಮುಸ್ಲಿಂ ಸಮಾವೇಶ’ ಎಂದು ಸಿಪಿಎಂ ರಾಜ್ಯ ಸಮಿತಿ ಸದಸ್ಯ ಮುನೀರ್ ಕಾಟಿಪಳ್ಳ ಹೇಳಿದರು.

ಬಸವಣ್ಣ ವಿಚಾರ ಕೈಬಿಟ್ಟಿಲ್ಲ: ನಾಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಷ್ಕರಣೆಯಾಗಿರುವ ಪಠ್ಯದಲ್ಲಿ ಬಸವಣ್ಣ ಅವರ ವಿಚಾರಗಳನ್ನು ಕೈಬಿಟ್ಟಿಲ್ಲ. ಅದು ಪೂರ್ಣ ಪ್ರಮಾಣದಲ್ಲಿಯೇ ಇದೆ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಈಗಾಗಲೇ ಪರಿಷ್ಕರಣೆಗೊಂಡು ಪಠ್ಯಪುಸ್ತಕಗಳು ಮುದ್ರಣಗೊಂಡ ಬಳಿಕ ಮುಗಿಯಿತು. ಮತ್ತೊಮ್ಮೆ ಪರಿಷ್ಕರಣೆ ಸಮಿತಿಯನ್ನು ನೇಮಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.

ಮಕ್ಕಳು ಯಾವುದನ್ನು ಓದುತ್ತಾರೋ ಅದು ಪಠ್ಯದಲ್ಲಿ ಇರಬೇಕೇ ಹೊರತು ಸಿದ್ಧಾಂತಗಳನ್ನು ಪಠ್ಯದಲ್ಲಿ ಅಳವಡಿಸುವುದು ತಪ್ಪು. ಹೆಡಗೇವಾರ್ ಭಾಷಣದಲ್ಲಿ ಸಿದ್ಧಾಂತವಿಲ್ಲ. ಒಬ್ಬ ಮಗು ಯಾವುದನ್ನು ಆದರ್ಶವಾಗಿ ಇಟ್ಟುಕೊಳ್ಳಬೇಕು ಎಂಬ ಸಂದೇಶವಿದೆ. ದೇಶದ ಅತಿ ದೊಡ್ಡ ಸಂಘಟನೆಯನ್ನು ಕಟ್ಟಿದವರು. ಈ ಪಠ್ಯದಲ್ಲಿರುವ ಅಂಶಗಳು ಕಲಿಕೆಗೆ ಯೋಗ್ಯವಾಗಿದೆ. ಅದರಲ್ಲಿರುವ ಅಂಶಗಳ ಬಗ್ಗೆ ಭಿನ್ನಾಭಿಪ್ರಾಯ ವಿದ್ದರೆ ಹೇಳಿ, ಚರ್ಚೆ ಮಾಡೋಣ ಎಂದರು.

‘ನಾಡಗೀತೆ ಬಗ್ಗೆ ಅವಹೇಳನಕಾರಿಯಾಗಿ ಬರೆದ ಸಂದೇಶವನ್ನು ರೋಹಿತ್ ಚಕ್ರತೀರ್ಥ ಹಂಚಿಕೊಂಡಿದ್ದಾರೆ. ಅಂದಿನ ಸರ್ಕಾರ ಅವರ ಮೇಲೆ ಪ್ರಕರಣ ದಾಖಲಿಸಿ, ಬಿ ರಿಪೋರ್ಟ್ ಕೂಡಾ ಹಾಕಿತ್ತು. ಅದು ತಾವು ಬರೆದದ್ದು ಅಲ್ಲ ಎಂದು ಚಕ್ರತೀರ್ಥ ಸ್ಪಷ್ಟನೆ ನೀಡಿದ್ದಾರೆ. ಆದರೆ, ಕೆಲವರು ಆ ವಿಷಯವನ್ನು ಕೆದಕುತ್ತಿದ್ದಾರೆ. ಆದಿಚುಂಚನಗಿರಿಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಎಲ್ಲ ವಿಷಯವನ್ನು ತಿಳಿಸಿದ್ದೇನೆ’ ಎಂದರು.

‘ಮೈಸೂರು ಮಹಾರಾಜರ ಬಗ್ಗೆ ಇದ್ದ ಪಠ್ಯವನ್ನು ಹಿಂದಿನ ಸಮಿತಿ ಏಕೆ ಕೈಬಿಟ್ಟಿತು. ಮಹಾರಾಜರು ಬಲಪಂಥೀಯ ಎಂದು ತೀರ್ಮಾನಿಸಿ ಕೈಬಿಟ್ಟರಾ? ರಾಜ್ಯಕ್ಕೆ ಅತಿ ದೊಡ್ಡ ಕೊಡುಗೆ ನೀಡಿದ ಮಹಾರಾಜರ ಬಗ್ಗೆ ಓದಬಾರದು ತಿಳಿದುಕೊಳ್ಳಬಾರದು ಎಂಬುದು ಅವರ ಉದ್ದೇಶವಾ’ ಎಂದೂ ಸಚಿವ ನಾಗೇಶ್ ಅವರಿಗೆ ಪ್ರಶ್ನೆ ಮಾಡಿದ್ದಾರೆ.

ಅಂಚೆ ಕಚೇರಿಯಲ್ಲಿ ಕೇಳಿ: ಜಿ. ರಾಮಕೃಷ್ಣ

‘ನಾನು ಬರೆದ ಪತ್ರ ತಲುಪಿಲ್ಲವಾದರೆ ಸಮೀಪದ ಅಂಚೆ ಕಚೇರಿಯಲ್ಲಿ ವಿಚಾರಿಸಿ’ ಎಂದು ಡಾ.ಜಿ.ರಾಮಕೃಷ್ಣ ಅವರು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರನ್ನು ಉದ್ದೇಶಿಸಿ ಹೇಳಿದ್ದಾರೆ.

‘ಪಠ್ಯ ಹಿಂಪಡೆಯುವ ಬಗ್ಗೆ ಪತ್ರ ಬಂದಿಲ್ಲ’ ಎಂದು ನಾಗೇಶ್ ಹೇಳಿದ್ದಾರೆ. ನನ್ನಿಂದ ತಮಗೆ ಯಾವುದೇ ಮಾಹಿತಿಯೂ ದೊರೆತಿಲ್ಲವೆಂಬ ಮಾತನ್ನು ಮಾಧ್ಯಮದವರಿಗೆ ಮತ್ತೆ ಹೇಳಬಾರದು. ಆದ್ದರಿಂದ ಇಮೇಲ್ ಮೂಲಕ ಪತ್ರ ಕಳುಹಿಸುತ್ತಿದ್ದೇನೆ’ ಎಂದೂ ರಾಮಕೃಷ್ಣ ತಿಳಿಸಿದ್ದಾರೆ.

‘ಸರ್ಕಾರವು ಪಠ್ಯ ಪುಸ್ತಕ ಪರಿಷ್ಕರಣೆ ಮಾಡುತ್ತಿರುವ ಕುರಿತು ನನಗೆ ಯಾವ ಪತ್ರವೂ ಬಂದಿಲ್ಲ. ನನ್ನ ಬರಹವನ್ನು ಕೈಬಿಡುವ, ಇಲ್ಲವೇ ಸೇರ್ಪಡೆ ಬಗ್ಗೆ ನನಗೇನೂ ತಿಳಿಸಿಲ್ಲ’ ಎಂದು ಅವರು ಹೇಳಿದ್ದಾರೆ.

‘ಬರಗೂರು ರಾಮಚಂದ್ರಪ್ಪ ಅವರು ಸಮಿತಿ ಅಧ್ಯಕ್ಷರಾಗಿದ್ದಾಗ ನಾನು ನೀಡಿದ್ದ ಸಮ್ಮತಿಯು ಹೊಸ ಪಠ್ಯಗಳಿಗೆ ಅನ್ವಯಿಸುವುದಿಲ್ಲ. ಅನುಮತಿ ಪಡೆಯಬೇಕಾದದ್ದು ತಮ್ಮ ಜವಾಬ್ದಾರಿ. ಅನುಮತಿ ಇಲ್ಲದೇ ಸೇರ್ಪಡೆಗೊಳಿಸುವುದು ಅಕ್ರಮ. ಸಮಿತಿಯಲ್ಲಿ ಸಮಾಜದ ಹಲವು ವರ್ಗಗಳನ್ನು ಸೇರಿಸಿಯೇ ಇಲ್ಲ. ಅಂತಹ ಸಮಿತಿಯು ಎಂತಹ ಪರಿಷ್ಕರಣೆಯಲ್ಲಿಯೇ ತೊಡಗಿರಲಿ, ಅದರ ಉಸ್ತುವಾರಿಯಲ್ಲಿ ಪಠ್ಯವನ್ನು ಸಿದ್ಧಗೊಳಿಸುವುದು ಅಹಿತ. ಅದರಲ್ಲಿ ನನ್ನ ಯಾವುದೇ ಬರಹ ಸೇರ್ಪಡೆಗೆ ನನ್ನ ಸಮ್ಮತಿಯೂ ಇಲ್ಲ. ಹೇಗೂ ನನ್ನ ಬರಹವನ್ನು ಕೈಬಿಡಲಾಗಿದೆ ಎಂಬ ವರದಿ ನೋಡಿದೆ; ಕೈಬಿಡಲು ನನ್ನ ಸಮ್ಮತಿಯ ಅಗತ್ಯವಿಲ್ಲ. ನನ್ನ ಸಮ್ಮತಿ ಇಲ್ಲದೇ ಸೇರ್ಪಡೆಗೊಳಿಸಿದರೆ ನಾನು ಪ್ರತಿಭಟಿಸುತ್ತೇನೆ. ಸೂಕ್ತ ಕ್ರಮ ಕೈಗೊಳ್ಳುತ್ತೇನೆ’ ಎಂದಿದ್ದಾರೆ.

ಕುವೆಂಪು ಬಗ್ಗೆ ಅಪಾರ ಗೌರವ: ಚಕ್ರತೀರ್ಥ

‘ಕುವೆಂಪು ಅವರ ವ್ಯಕ್ತಿತ್ವಕ್ಕಾಗಲೀ, ಬರಹಕ್ಕಾಗಲೀ ಅವಮಾನ ಮಾಡುವ ಯಾವ ಉದ್ದೇಶವೂ ನನಗಿಲ್ಲ. ಕುವೆಂಪು ಬರಹಗಳನ್ನು ಶಾಲಾ ದಿನಗಳಿಂದಲೂ ಓದಿಕೊಂಡು ಬಂದಿದ್ದೇನೆ. ‘ಶ್ರೀರಾಮಾಯಣ ದರ್ಶನಂ’ ಮಹಾಕಾವ್ಯದ ಕೆಲವು ವಿಶಿಷ್ಟ ಪಾತ್ರಗಳ ಬಗ್ಗೆ ಉಪನ್ಯಾಸ ಮಾಡಿದ್ದೇನೆ ಮತ್ತು ಬರೆದಿದ್ದೇನೆ’ ಎಂದು ರೋಹಿತ್ ಚಕ್ರತೀರ್ಥ ಹೇಳಿದ್ದಾರೆ.

‘ಬೇಂದ್ರೆ ಮತ್ತು ಕುವೆಂಪು ಕನ್ನಡದ ಗಂಗೆ– ಕಾವೇರಿಯರು ಎಂಬ ಶೀರ್ಷಿಕೆ ಕೊಟ್ಟು ಬರೆದವನು ನಾನು. ಕುವೆಂಪು ಮೇಲೆ ಗೌರವ ಇದ್ದ ಕಾರಣಕ್ಕಾಗಿ ನಮ್ಮ ಪಠ್ಯಪುಸ್ತಕ ಪರಿಷ್ಕರಣ ಸಮಿತಿ ಅವರ ಅತ್ಯುತ್ತಮ ಶಿಶು ಸಾಹಿತ್ಯವಾದ ಬೊಮ್ಮನಹಳ್ಳಿ ಕಿಂದರಿ ಜೋಗಿಯನ್ನು ಪಾಠವಾಗಿ ಅಳವಡಿಸಿದ್ದೆವು’ ಎಂದಿದ್ದಾರೆ.

‘ಈ ಎಲ್ಲ ವಿಚಾರಗಳನ್ನು ಗಮನಿಸದೇ ಏಕಾಏಕಿಯಾಗಿ ನನ್ನ ಮೇಲೆ ವೈಯಕ್ತಿಕ ದಾಳಿ ಮಾಡಿ, ತೇಜೋವಧೆ ಮಾಡುವ ಕೆಲಸ ನಡೆಯುತ್ತಿರುವುದು ಬೇಸರದ ಸಂಗತಿ. ಕುವೆಂಪು ವಿರೋಧಿ ಎಂಬ ರೀತಿಯಲ್ಲಿ ಬಿಂಬಿಸುತ್ತಿರುವುದು ಗಾಸಿ ಉಂಟು ಮಾಡಿದೆ. ಸಾಮಾಜಿಕ ಜಾಣತಾಣದಲ್ಲಿ ನಾಡಗೀತೆಗೆ ಅವಮಾನ ಮಾಡಿ ಬರೆದ ವ್ಯಕ್ತಿಗೆ ಶಿಕ್ಷೆಯಾಗಲಿ’ ಎಂದು ಹೇಳಿದ್ದಾರೆ.

ಮಹಾಪುರುಷರ ಹೆಸರಲ್ಲಿ ರಾಜಕಾರಣ: ಜೋಶಿ ಟೀಕೆ

ಹುಬ್ಬಳ್ಳಿ: ‘ಬಿಜೆಪಿ ವಿಚಾರ–ಧಾರೆಗಳನ್ನು ಜನ ಒಪ್ಪುತ್ತಿರುವುದರಿಂದ ಕೆಲವರು ದೇಶದ ಮಹಾಪುರುಷರ ಹೆಸರಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಇದು ಅಸಹಿಷ್ಣುತೆಯಾಗಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ದೂರಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಎಲ್ಲವೂ ಚುನಾವಣೆಯ ಗಿಮಿಕ್ ಆಗಿದೆ. ಶಾಲಾ ಪಠ್ಯ–ಪುಸ್ತಕ ಇನ್ನೂ ಹೊರಗೆ ಬಂದಿಲ್ಲ. ಅದಾಗಲೇ ಭಗತ್ ಸಿಂಗ್, ನಾರಾಯಣ ಗುರು ಅವರ ಪಠ್ಯ ಕೈ ಬಿಡಲಾಗಿದೆ ಎಂದು ಹೇಳುತ್ತಿದ್ದಾರೆ’ ಎಂದರು.

‘ಮೊದಲು ಪುಸ್ತಕ ನೋಡಿ ಎಂದು ಅವರಿಗೆ ಪಠ್ಯಪುಸ್ತಕ ರಚನಾ ಸಮಿತಿ ಆಹ್ವಾನ ನೀಡಿದೆ. ಅದನ್ನು ನೋಡದೆ ವಿವಾದ ಸೃಷ್ಟಿಸುತ್ತಿದ್ದಾರೆ. ತಾವು ಕೈ ಬಿಟ್ಟಿರುವ ಪಠ್ಯದ ವಿಷಯವನ್ನು ಸಹ ಸರ್ಕಾರದ ಮೇಲೆ ಹಾಕುತ್ತಿರುವುದು ದುರ್ದೈವ’ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ಮಂಗಳೂರಿನ ಮಳಲಿ ಮಸೀದಿಯಲ್ಲಿ ದೇವಾಲಯ ಮಾದರಿ ಪತ್ತೆಯಾಗಿರುವ ಕುರಿತು ಪ್ರತಿಕ್ರಿಯಿಸಿದ ಸಚಿವ ಜೋಶಿ, ‘ಅಲ್ಲಿ ಸೌಹಾರ್ದತೆಯಿಂದ ಸಮಸ್ಯೆ ಬಗೆಹರಿಯುವ ಪ್ರಯತ್ನ ನಡೆದಿದೆ. ಹೊಸ ವಿವಾದ ಹುಟ್ಟುಹಾಕುವುದು ಬೇಡ’ ಎಂದು ವಿನಂತಿಸಿದರು.

‘ರೋಹಿತ್ ಚಕ್ರತೀರ್ಥ ಯಾವುದೇ ತಪ್ಪು ಮಾಡಿಲ್ಲ ಎಂದು ಮೇಲ್ನೋಟಕ್ಕೆ ಕಾಣುತ್ತಿದೆ. ತಪ್ಪಾಗಿದ್ದರೆ ಸರ್ಕಾರ ಸಮರ್ಥಿಸಿಕೊಳ್ಳುವುದಿಲ್ಲ. ಪಠ್ಯಪುಸ್ತಕ ವಿಚಾರದಲ್ಲಿ ರಾಜಿ ಪ್ರಶ್ನೆಯೇ ಇಲ್ಲ
ಡಿ.ವಿ.ಸದಾನಂದಗೌಡ, ಸಂಸದ

ಪಠ್ಯಪುಸ್ತಕಗಳಲ್ಲಿ ಬದಲಾವಣೆ ಆಗಿದ್ದರೆ ಮತ್ತೆ ಸರಿಪಡಿಸುವ ಅವಕಾಶ ಇವೆ. ಸರ್ಕಾರ ಪರಿಶೀಲಿಸಲಿದೆ. ಸಾಹಿತಿಗಳು ಇದೀಗ ನೀಡಿರುವ ರಾಜೀನಾಮೆ ಹಿಂದಕ್ಕೆ ಪಡೆಯಬೇಕು
ಎಂ.ಟಿ.ಬಿ.ನಾಗರಾಜ್, ಸಚಿವ

‘ಅನಿಶ್ಚಿತತೆ ಸೃಷ್ಟಿಸಿದ ತೈಲ ಬೆಲೆ ಏರಿಕೆ’

ನವದೆಹಲಿ: ‘ಜಿಡಿಪಿ ಬೆಳವಣಿಗೆಯ ಅಂಕಿ–ಅಂಶಗಳು ಬಹುತೇಕ ನಿರೀಕ್ಷೆಗೆ ಅನುಗುಣವಾಗಿ ಇವೆ. ಆದರೆ, ಕಚ್ಚಾ ತೈಲ ಬೆಲೆ ಏರುತ್ತಿರುವ ಕಾರಣ, ಮುಂದಿನ ದಿನಗಳಿಗೆ ಸಂಬಂಧಿಸಿದ ಅಂದಾಜಿನ ಮೇಲೆ ಅನಿಶ್ಚಿತತೆಯ ಕಾರ್ಮೋಡ ಕವಿದಿದೆ’ ಎಂದು ಕೋಟಕ್ ಮಹೀಂದ್ರ ಬ್ಯಾಂಕ್‌ನ ಅರ್ಥಶಾಸ್ತ್ರಜ್ಞೆ ಉಪಾಸನಾ ಭಾರದ್ವಾಜ್ ಹೇಳಿದ್ದಾರೆ.

ಸರ್ಕಾರದ ಕಡೆಯಿಂದ ವೆಚ್ಚವನ್ನು ಹೆಚ್ಚು ಮಾಡಲು ಅವಕಾಶ ಜಾಸ್ತಿ ಇಲ್ಲದಿರುವುದು, ಖರ್ಚುಗಳು ಹೆಚ್ಚಾಗಿರುವುದರಿಂದಾಗಿ ಕಾರ್ಪೊರೇಟ್ ಕಂಪನಿಗಳ ಲಾಭಾಂಶವು ತಗ್ಗಿರುವುದು ಮತ್ತು ಜಾಗತಿಕ ಮಟ್ಟದಲ್ಲಿ ಬೇಡಿಕೆಯು ತಗ್ಗಿರುವುದು ಕಳವಳ ಮೂಡಿಸುವಂಥದ್ದು ಎಂದು ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಕಂಡುಬಂದಿರುವ ಕೆಲವು ಬಿಕ್ಕಟ್ಟುಗಳು ತಿಳಿಯಾದ ನಂತರದಲ್ಲಿ ಖಾಸಗಿ ವಲಯದಿಂದ ದೊಡ್ಡ ಮಟ್ಟದಲ್ಲಿ ಚಟುವಟಿಕೆಗಳು ಶುರುವಾಗುವ ನಿರೀಕ್ಷೆ ಇದೆ. ಬೆಳವಣಿಗೆ, ಹಣದುಬ್ಬರ ಹಾಗೂ ಹಣಕಾಸಿನ ಸಮತೋಲನವನ್ನು ನಿಭಾಯಿಸುವುದು ಯಾವುದೇ ಅರ್ಥ ವ್ಯವಸ್ಥೆಗೆ ಸವಾಲಿನ ಕೆಲಸ ಎಂದು ಕೇಂದ್ರ ಸರ್ಕಾರ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಲಹರ್ ಸಿಂಗ್ ಸಿರೋಯಾ, ಜಗ್ಗೇಶ್ ಒಟ್ಟಿಗೆ ತೆರಳಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜತೆ ಮಾತುಕತೆ

ರಾಜ್ಯಸಭೆ ಚುನಾವಣೆ: ನಿರ್ಮಲಾ ಸೇರಿ ನಾಲ್ವರ ನಾಮಪತ್ರ

ಬೆಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಚಿತ್ರನಟ ಜಗ್ಗೇಶ್ ಅವರು ಬಿಜೆಪಿ ಅಭ್ಯರ್ಥಿಗಳಾಗಿ ರಾಜ್ಯಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಿದರು.

ನಾಲ್ಕನೇ ಸ್ಥಾನಕ್ಕೆ ಬಿಜೆಪಿಯ ಲಹರ್ ಸಿಂಗ್ ಸಿರೋಯಾ ಮತ್ತು ಜೆಡಿಎಸ್‌ನಿಂದ ಕುಪೇಂದ್ರ ರೆಡ್ಡಿ ಅವರು ನಾಮಪತ್ರ ಸಲ್ಲಿಸಿದರು.

ನಿರ್ಮಲಾ ಅವರು ನಾಮಪತ್ರ ಸಲ್ಲಿಸುವಾಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಶಾಸಕ ಬಿ.ಎಸ್.ಯಡಿಯೂರಪ್ಪ ಇದ್ದರು.

ಜಗ್ಗೇಶ್ ಅವರು ನಾಮಪತ್ರ ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿ, ‘ಪಕ್ಷ ನೀಡಿರುವ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತೇನೆ. ರಾಜ್ಯಸಭೆಯಲ್ಲಿ ಕನ್ನಡದಲ್ಲೇ ಮಾತನಾಡುತ್ತೇನೆ’ ಎಂದು ಹೇಳಿದರು.

ನಾಲ್ಕನೇ ಸ್ಥಾನಕ್ಕೆ ತೀವ್ರ ಹಣಾಹಣಿ

ಒಂದನೇ ಪುಟದಿಂದ...

ಕುಪೇಂದ್ರ ರೆಡ್ಡಿ ಅವರೂ ವೈಯಕ್ತಿಕ ನೆಲೆಯಲ್ಲಿ ಕಾಂಗ್ರೆಸ್‌ನಿಂದ ಒಂದಷ್ಟು ಮತಗಳನ್ನು ಸೆಳೆಯಲು ಸಿದ್ಧತೆ ನಡೆಸಿಕೊಂಡಿದ್ದಾರೆ. ಕಾಂಗ್ರೆಸ್‌ಗೆ ಈಗ ಜೈರಾಂ ರಮೇಶ್ ಅವರನ್ನು ಗೆಲ್ಲಿಸಿಕೊಳ್ಳುತ್ತದೆಯೋ, ಮುಸ್ಲಿಂ ಅಭ್ಯರ್ಥಿ ಮನ್ಸೂರ್ ಖಾನ್ ಅವರನ್ನು ಗೆಲ್ಲಿಸಿಕೊಂಡು ಅಲ್ಪಸಂಖ್ಯಾತರ ಪರ ನಿಲ್ಲುತ್ತದೋ ಎಂಬುದನ್ನು ಸಾಬೀತು ಮಾಡುವ ಹೊಣೆಗಾರಿಕೆ ಕಾಂಗ್ರೆಸ್‌ಗಿದೆ ಎನ್ನುತ್ತಾರೆ ಜೆಡಿಎಸ್ ನಾಯಕರು.

ಬಿಜೆಪಿಯಿಂದ ಮೂರನೇ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿರುವ ಲಹರ್ ಸಿಂಗ್ ಅವರು, ‘ಬಿಜೆಪಿ ಮಾತ್ರವಲ್ಲ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಲ್ಲೂ ನನಗೆ ಹಲವರು ಮಿತ್ರರಿದ್ದಾರೆ. ಇವರೆಲ್ಲರ ನೆರವಿನಿಂದ ಚುನಾವಣೆಯಲ್ಲಿ ಗೆದ್ದೇ ತಿರುತ್ತೇನೆ’ ಎಂದು ಹೇಳಿಕೊಂಡಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೌಷ್ಟಿಕ ಆಹಾರ ಸೇವಿಸಿ

ಪಠ್ಯ ಪರಿಷ್ಕರಣೆಗೆ ಸ್ವಾಮೀಜಿಗಳ ಆಕ್ರೋಶ

‘ಇತಿಹಾಸ ತಿರುಚಿ ಅಪಮಾನ’

ಒಂದನೇ ಪುಟದಿಂದ...

‘ಬಸವಣ್ಣ ಹಾಗೂ ಅವರು ಪ್ರತಿಪಾದಿಸಿದ ಲಿಂಗಾಯತ ಧರ್ಮದ ಬಗ್ಗೆ ತಪ್ಪು ಅಭಿಪ್ರಾಯ ಮೂಡುವಂತೆ ಮಾಡಿದ್ದು ಖಂಡನಾರ್ಹ’ ಎಂದೂ ಹೇಳಿದ್ದಾರೆ.

ಇನ್ನೊಂದೆಡೆ, ‘ಬಸವಣ್ಣನವರ ತತ್ವ-ಸಿದ್ಧಾಂತಕ್ಕೆ ಧಕ್ಕೆಯಾದರೆ ನಾವು ಸಹಿಸುವುದಿಲ್ಲ. ಪಠ್ಯಪುಸ್ತಕ ಬಿಡುಗಡೆಗೆ ಮೊದಲೇ ಲೋಪ ಸರಿಪಡಿಸಬೇಕು’ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹುಬ್ಬಳ್ಳಿಯಲ್ಲಿ ಒತ್ತಾಯಿಸಿದ್ದಾರೆ.

ಪಠ್ಯ ಪರಿಷ್ಕರಣೆ ವಿರುದ್ಧ ಈಗಾಗಲೇ ಸಾಂಸ್ಕೃತಿಕ ವಲಯದ ಪ್ರಮುಖರು, ಸಂಘ ಸಂಸ್ಥೆಗಳು ಪ್ರತಿಭಟನೆ ವ್ಯಕ್ತಪಡಿಸುತ್ತಿರುವುದರ ಹಿಂದೆಯೇ, ಈಗ ‘ಬಸವಣ್ಣ ಅವರ ಇತಿಹಾಸಕ್ಕೆ ಅಪಮಾನ’ ವಿಷಯವು ಸೇರ್ಪಡೆಯಾಗಿದೆ. ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ವಿರುದ್ಧದ ಆಕ್ರೋಶ ಇನ್ನಷ್ಟು ಪ್ರಬಲವಾದಂತಾಗಿದೆ.

ಮುಖ್ಯಮಂತ್ರಿಗೆ ಪತ್ರ: ಬಸವಣ್ಣ ಕುರಿತ ಪಠ್ಯ ಪರಿಷ್ಕರಣೆಗೆ ಆಕ್ಷೇಪ ವ್ಯಕ್ತಪಡಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮಂಗಳವಾರ ಸಾಣೆಹಳ್ಳಿ ಶ್ರೀಗಳು ಪತ್ರ ಬರೆದಿದ್ದಾರೆ.

‘9ನೇ ತರಗತಿ ಸಮಾಜ ವಿಜ್ಞಾನ ಪಠ್ಯದಲ್ಲಿ ಬಸವಣ್ಣನವರ ಕುರಿತ ಪಾಠ ಕಳೆದ ವರ್ಷವೂ ಇತ್ತು. ಈಗ ಪರಿಷ್ಕರಿಸಿ ಕೆಲವು ಸಾಲುಗಳನ್ನು ತೆಗೆಯಲಾಗಿದೆ. ಮಹತ್ವದ ಅಂಶಗಳನ್ನು ತಿರುಚಲಾಗಿದೆ. ಬಸವಣ್ಣನವರ ಶುದ್ಧ, ಪಾರದರ್ಶಕ ಬದುಕಿಗೆ ಕಳಂಕ ತರಲಾಗಿದೆ’ ಎಂದಿದ್ದಾರೆ.

‘ಪಠ್ಯಪುಸ್ತಕ ಪರಿಷ್ಕರಣೆ ಕುರಿತು ಈಗಾಗಲೇ ಸಾಕಷ್ಟು ಆಕ್ಷೇಪ ಹಾಗೂ ಆಪಾದನೆಗಳಿವೆ. ಯಾವ ಹಂತದಲ್ಲಿ ಏನು ಬದಲಾವಣೆಯಾಗಿದೆ ಎಂದು ಗಮನಿಸಲು ಪಠ್ಯಪುಸ್ತಕಗಳೇ ಸಿಗುತ್ತಿಲ್ಲ. ಶಾಲೆಗಳು ಪ್ರಾರಂಭವಾಗಿ 15 ದಿನಗಳಾಗಿವೆ. ಆದರೂ, ಪಠ್ಯಪುಸ್ತಕಗಳು ಲಭ್ಯವಾಗುತ್ತಿಲ್ಲ ಎಂದಾದರೆ, ಶಿಕ್ಷಕರು ಏನು ಪಾಠ ಮಾಡಬೇಕು’ ಎಂದೂ ಪತ್ರದಲ್ಲಿ ಪ್ರಶ್ನಿಸಿದ್ದಾರೆ.

‘ಈಗಿನ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯಲ್ಲಿ ಇರುವವರು ಒಂದು ವರ್ಗಕ್ಕೆ ಸೇರಿದವರು ಎಂಬುದು ಮೇಲ್ನೋಟಕ್ಕೆ ಎದ್ದು ಕಾಣುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ದುಡಿದವರು, ಶಿಕ್ಷಣ ತಜ್ಞರು, ಸಾಮಾಜಿಕ ಕಾಳಜಿಯ ದೂರದೃಷ್ಟಿಯುಳ್ಳವರು ಸಮಿತಿಯಲ್ಲಿರಬೇಕಾದದ್ದು ಅಪೇಕ್ಷಣೀಯ. ಇಲ್ಲಿ ಜಾತಿ, ಪಕ್ಷ, ರಾಜಕಾರಣ ಹೆಡೆಯಾಡಬಾರದು’ ಎಂದು ಅವರು ಹೇಳಿದ್ದಾರೆ.

‘ಎದೆಗೆ ಕಲ್ಲು ಹೊಡೆದಂತಾಯಿತು’

ಹುಬ್ಬಳ್ಳಿ: ‘ಪಠ್ಯ-ಪುಸ್ತಕದಲ್ಲಿ ಬಸವಣ್ಣವರ ಬಗ್ಗೆ ಇರುವ ಮಾಹಿತಿ ಪರಿಷ್ಕರಿಸಿದ್ದ ಸಾಲು ನೋಡಿ ಎದೆಗೆ ಕಲ್ಲು ಹೊಡೆದ ಹಾಗಾಯಿತು’ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಂತರ, ಮಹನೀಯರ ಸಂದೇಶಗಳನ್ನು ಮಕ್ಕಳಿಗೆ ನೀಡುವಂತಾಗಬೇಕು. ಅದನ್ನು ಬಿಟ್ಟು ಮೂಲ ಉದ್ದೇಶವೇ ದಾರಿ ತಪ್ಪುವಂತಾಗಬಾರದು’ ಎಂದರು.

‘ಅಸಮಾನತೆ ವಿರೋಧಿಸಿ ಬಸವಣ್ಣನವರು ಮನೆಯನ್ನು ಬಿಟ್ಟರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ, ನಿಮ್ಮ ತಂದೆಯವರು ಬಸವಣ್ಣನ ಭಕ್ತರಾಗಿದ್ದರು. ತಂದೆಯವರು ಹೇಗೆ ಬದುಕಿದ್ದರು ಎನ್ನುವುದನ್ನು ಒಮ್ಮೆ ತಿರುಗಿನೋಡಿ. ಅನೇಕ ಪೂಜ್ಯರ ಮಾರ್ಗದರ್ಶನ ನಿಮಗಿದೆ. ಬಸವಣ್ಣನವರ ತತ್ವ-ಸಿದ್ಧಾಂತಗಳನ್ನು ಜಗತ್ತಿಗೆ ತಿಳಿಸಿ. ನೀವು ಮೌನ ವಹಿಸಿದರೆ ಬಸವ ಭಕ್ತರಿಗೆ ನೋವಾಗುತ್ತದೆ’ ಎಂದು ಸ್ವಾಮೀಜಿ ಹೇಳಿದರು.

ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ, ಕ.ಗೃ.ಮಂ.ಕಟ್ಟಡ,
ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009
ಸಂ: ಜಲಅಇ/ಅರೈಉಸಂ/ಆರ್‌ಎಫ್‌ಪಿ/36/2021–22 ದಿನಾಂಕ: 31.05.2022
ಟೆಂಡರ್ ಆಹ್ವಾನಿಸುವ ಸೂಚನೆ
ಅಮೃತ ರೈತ ಉತ್ಪಾದಕರ ಸಂಸ್ಥೆಗಳ/ಉತ್ಪಾದಕರ ಸಂಸ್ಥೆಗಳ ರಚನೆಗೆ ಸಂಪನ್ಮೂಲ ಸಂಸ್ಥೆಗಳ ಎಂಪ್ಯಾನಲ್‌ಮೆಂಟ್
ಕರ್ನಾಟಕ ಇ–ಸಂಗ್ರಹಣ ವೇದಿಕೆ ಮೂಲಕ ಇಲಾಖೆಯು ಅಮೃತ ರೈತ/ಮೀನುಗಾರ/ನೇಕಾರರ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನಕ್ಕಾಗಿ ಸಂಪನ್ಮೂಲ ಸಂಸ್ಥೆಗಳನ್ನು ಎಂಪ್ಯಾನಲ್‌ಗೊಳಿಸಲು ಬಿಡ್‌ಗಳನ್ನು ಆಹ್ವಾನಿಸುತ್ತಿದೆ. ಟೆಂಡರ್ ದಾಖಲಾತಿಗಳೊಂದಿಗೆ ವಿವರವಾದ ಮಾಹಿತಿಯನ್ನು ಕರ್ನಾಟಕ ಇ–ಸಂಗ್ರಹಣೆ ವೇದಿಕೆ (https://eproc.karnataka.gov.in) ಯಲ್ಲಿ ಅಳವಡಿಸಲಾಗಿದ್ದು, ಆಸಕ್ತಿಯುಳ್ಳ ಸಂಸ್ಥೆಗಳು ಹಾಗೂ ಅವರ ಅಧಿಕೃತ ಏಜೆಂಟರುಗಳು ವಿವರಗಳನ್ನು ಅವಲೋಕಿಸಿ ಟೆಂಡರ್‌ಗಳನ್ನು ಸಲ್ಲಿಸುವುದು. ಟೆಂಡರ್ ದಾಖಲಾತಿಗಳು ಲಭ್ಯವಾಗುವ ದಿನಾಂಕ: 31.05.2022 ಮತ್ತು ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 01.07.2022 ರಂದು ಸಾಯಂಕಾಲ 5:00 ಗಂಟೆಯವರೆಗೂ ಇರುತ್ತದೆ. ಪ್ರೀ–ಬಿಡ್ ಸಭೆ ದಿನಾಂಕ: 14.06.2022 ರಂದು ಬೆಳಿಗ್ಗೆ 11:00 ಗಂಟೆಗೆ ನಿಗದಿಯಾಗಿರುತ್ತದೆ.
ಸಹಿ/–
ನಿರ್ದೇಶಕರು,
ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/696/ಎಂಎಎ/2022–23
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

INCOME TAX DEPARTMENT
TENDER NOTICE
The Income Tax Department, Bengaluru invites tender for providing Integrated Facility Management Service for the Block-G, Income Tax Guest House, Infantry Road, Bengaluru on Government e-publishing system (CPP Portal) vide tender id: 2022_ITD_662444_1. The last date for submission of Bid in sealed cover is 16.06.2022 by 11:00 AM. For more details, log on to
www.incometaxbengaluru.org
Sd/-
Joint Commissioner of Income Tax (Hq) (Admin), Bengaluru.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–11/3154/2022–23 ದಿನಾಂಕ: 30.05.2022
ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ತಾಂತ್ರಿಕ ಕೌಶಲ್ಯತೆಗಳು, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಪಿ.ಡಬ್ಲ್ಯೂ.ಡಿ ದರ್ಜೆ–1 (ಸಿವಿಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: (1) ರಾಮನಗರ ಜಿಲ್ಲೆ, ಯಾರೇಹಳ್ಳಿ ಬ್ಲಾಕ್ ನಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಕಲ್ವರ್ಟ್ಸ್, ಮಳೆ ನೀರು ಕೊಯ್ಲು ನಿರ್ಮಾಣ ಮತ್ತು ಹೆಚ್.ಡಿ.ಪಿ.ಇ ನೀರು ಸರಬರಾಜು ಕೊಳವೆ ಮಾರ್ಗದೊಂದಿಗೆ 30ಮೀ ಅಗಲ, 18 ಮೀ ಅಗಲದ ಡಾಂಬರೀಕರಣ ರಸ್ತೆಯನ್ನು ಒಳಗೊಂಡ ಹಾರೋಹಳ್ಳಿ 5ನೇ ಹಂತ ಕೈಗಾರಿಕಾ ಪ್ರದೇಶವನ್ನು ರಚನೆ ಮಾಡುವ ಕಾಮಗಾರಿ (2) ರಾಮನಗರ ಜಿಲ್ಲೆ, ಇ.ವಿ ಯುನಿಟ್ಸ್ ಬ್ಲಾಕ್ ನಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಕಲ್ವರ್ಟ್ಸ್, ಮಳೆ ನೀರು ಕೊಯ್ಲು ನಿರ್ಮಾಣ ಮತ್ತು ಹೆಚ್.ಡಿ.ಪಿ.ಇ ನೀರು ಸರಬರಾಜು ಕೊಳವೆ ಮಾರ್ಗದೊಂದಿಗೆ ಸರ್ವಿಸ್ ರಸ್ತೆ ಹಾಗೂ 18 ಮೀ ಅಗಲದ ಡಾಂಬರೀಕರಣ ರಸ್ತೆಯನ್ನು ಒಳಗೊಂಡ ಹಾರೋಹಳ್ಳಿ 5ನೇ ಹಂತ ಕೈಗಾರಿಕಾ ಪ್ರದೇಶವನ್ನು ರಚನೆ ಮಾಡುವ ಕಾಮಗಾರಿ. (3) ರಾಮನಗರ ಜಿಲ್ಲೆ, ಕಂಚುಗಾರನಹಳ್ಳಿ ಬ್ಲಾಕ್ ನಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಕಲ್ವರ್ಟ್ಸ್ ನಿರ್ಮಾಣ ಮತ್ತು ಹೆಚ್.ಡಿ.ಪಿ.ಇ ನೀರು ಸರಬರಾಜು ಕೊಳವೆ ಮಾರ್ಗದೊಂದಿಗೆ 30ಮೀ ಅಗಲ, 18 ಮೀ ಅಗಲದ ಡಾಂಬರೀಕರಣ ರಸ್ತೆಯನ್ನು ಒಳಗೊಂಡ ಹಾರೋಹಳ್ಳಿ 5ನೇ ಹಂತ ಕೈಗಾರಿಕಾ ಪ್ರದೇಶವನ್ನು ರಚನೆ ಮಾಡುವ ಕಾಮಗಾರಿ, (4) ರಾಮನಗರ ಜಿಲ್ಲೆ, ಕಂಚುಗಾರನಹಳ್ಳಿ ಕಾವಲ್ ಬ್ಲಾಕ್ ನಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಕಲ್ವರ್ಟ್ಸ್, ಮಳೆ ನೀರು ಕೊಯ್ಲು ನಿರ್ಮಾಣ ಮತ್ತು ಹೆಚ್.ಡಿ.ಪಿ.ಇ ನೀರು ಸರಬರಾಜು ಕೊಳವೆ ಮಾರ್ಗದೊಂದಿಗೆ 30ಮೀ ಅಗಲ, 18 ಮೀ ಅಗಲದ ಡಾಂಬರೀಕರಣ ರಸ್ತೆಯನ್ನು ಒಳಗೊಂಡ ಹಾರೋಹಳ್ಳಿ 5ನೇ ಹಂತ ಕೈಗಾರಿಕಾ ಪ್ರದೇಶವನ್ನು ರಚನೆ ಮಾಡುವ ಕಾಮಗಾರಿ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30.06.2022 ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/691/Zen/2022-23
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಂಕಿಪಾಕ್ಸ್: ತ್ವರಿತ ಪತ್ತೆ, ಪ್ರತ್ಯೇಕ ವಾಸಕ್ಕೆ ಮಾರ್ಗಸೂಚಿ ಪ್ರಕಟ

ನವದೆಹಲಿ: ಹಲವು ದೇಶಗಳಲ್ಲಿ ಮಂಕಿಪಾಕ್ಸ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಸೋಂಕು ಪ್ರಸರಣಕ್ಕೆ ಕಡಿವಾಣ ಹಾಕುವುದಕ್ಕಾಗಿ ಕೇಂದ್ರ ಸರ್ಕಾರ ಮಂಗಳವಾರ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

'ಜಿಲ್ಲಾ ಮಟ್ಟದಲ್ಲಿ ತೀವ್ರ ನಿಗಾ ವಹಿಸಬೇಕು. ಒಂದೇ ಒಂದು ಪ್ರಕರಣ ಕಂಡುಬಂದರೂ 'ಸಮಗ್ರ ರೋಗ ನಿಗಾ ಕಾರ್ಯಕ್ರಮ'ದಡಿ ಪತ್ತೆ ಕಾರ್ಯ ಹಾಗೂ ಸೋಂಕಿತರ ಪ್ರತ್ಯೇಕವಾಸಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಈ ಸಂಬಂಧ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯ ಪತ್ರ ಬರೆದಿದೆ. 'ಮಂಕಿಪಾಕ್ಸ್ ಪ್ರಕರಣಗಳನ್ನು ತ್ವರಿತವಾಗಿ ಪತ್ತೆ ಹಚ್ಚಿ, ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ವ್ಯಕ್ತಿಯಿಂದ ವ್ಯಕ್ತಿಗೆ ಸೋಂಕು ಪ್ರಸರಣವಾಗುವುದನ್ನು ತಡೆಯಲು ಈ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದು ಪತ್ರದಲ್ಲಿ ಸೂಚಿಸಲಾಗಿದೆ.

'ಈ ವರೆಗೂ ಮಂಕಿಪಾಕ್ಸ್ ಸೋಂಕು ಕಂಡುಬರದಿದ್ದ ದೇಶಗಳಲ್ಲಿಯೂ ಈಗ ಪ್ರಕರಣಗಳು ವರದಿಯಾಗುತ್ತಿವೆ. ದೇಶದಲ್ಲಿ ಈ ವರೆಗೆ ಈ ಸೋಂಕಿನ ಪ್ರಕರಣಗಳು ಕಂಡಬರದಿದ್ದರೂ, ಹೆಚ್ಚು ಮುಂಜಾಗ್ರತೆ ಅಗತ್ಯ' ಎಂದು ವಿವರಿಸಲಾಗಿದೆ.

ಕ್ಯಾಮರೂನ್, ಕಾಂಗೊ, ಗ್ಯಾಬೊನ್, ನೈಜೀರಿಯಾ ಸೇರಿದಂತೆ ಕೇಂದ್ರ ಹಾಗೂ ಪಶ್ಚಿಮ ಆಫ್ರಿಕಾ ದೇಶಗಳಲ್ಲಿ ಮಂಕಿಪಾಕ್ಸ್ ಪ್ರಕರಣಗಳು ವರದಿಯಾಗಿವೆ. ಜೊತೆಗೆ, ಕೆಲ ಐರೋಪ್ಯ ದೇಶಗಳಲ್ಲಿಯೂ ಸೋಂಕಿನ ಪ್ರಕರಣಗಳು ವರದಿಯಾಗಿವೆ.

ಮೈಸೂರಿನ ಕಲಾವಿದ ಅರುಣ್ ಕೈಯಲ್ಲಿ ಅರಳಲಿದೆ ಬೋಸ್ ಪ್ರತಿಮೆ

ನವದೆಹಲಿ (ಪಿಟಿಐ): ಇಲ್ಲಿನ ಇಂಡಿಯಾ ಗೇಟ್‌ನಲ್ಲಿ ಪ್ರತಿಷ್ಠಾಪಿಸಲಾಗುವ ನೇತಾಜಿ ಸುಭಾಶ್ಚಂದ್ರ ಬೋಸ್ ಅವರ ಪ್ರತಿಮೆಯು ಮೈಸೂರು ಮೂಲದ ಶಿಲ್ಪ ಕಲಾವಿದ ಅರುಣ್ ಯೋಗಿರಾಜ್ ಅವರ ಕೆತ್ತನೆಯಲ್ಲಿ ಅರಳಲಿದೆ.

ಶಿಲ್ಪಿ ಅರುಣ್ ಯೋಗಿರಾಜ್

ಆಗಸ್ಟ್ 15ರೊಳಗೆ ಪ್ರತಿಮೆ ಕೆತ್ತನೆ ಕಾರ್ಯವನ್ನು ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ ಎಂದು ಸಂಸ್ಕೃತಿ ಸಚಿವಾಲಯದ ಮೂಲಗಳು ಹೇಳಿವೆ.

ಈ ಮೊದಲು ಇದೇ ಸ್ಥಳದಲ್ಲಿದ್ದ ಅಮರ ಜವಾನ್ ಜ್ಯೋತಿ ಹಿಂಭಾಗದಲ್ಲಿನ ಬೃಹತ್ ಮಂಟಪದಲ್ಲಿ ಬೋಸ್ ಅವರ ಪ್ರತಿಮೆಯನ್ನು ಸ್ಥಾಪಿಸಲಾಗುತ್ತದೆ ಎಂದು ಮೂಲಗಳು ಮಂಗಳವಾರ ಹೇಳಿವೆ.

ಬೋಸ್ ಅವರ ಪ್ರತಿಮೆಯನ್ನು ಇಂಡಿಯಾ ಗೇಟ್ ಬಳಿ ಸ್ಥಾಪಿಸುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಅವರು ನೀಡಿರುವ ಕೊಡುಗೆಯನ್ನು ಗೌರವಿಸಲಾಗುವುದು ಎಂದು ಪ್ರಧಾನಿ ಮೋದಿ ಅವರು, ಬೋಸ್ ಅವರ 125ನೇ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಘೋಷಿಸಿದ್ದರು.

ಕೇದಾರನಾಥದಲ್ಲಿ ಪ್ರತಿಷ್ಠಾಪಿಸಲಾಗಿರುವ 12 ಅಡಿ ಎತ್ತರದ ಆದಿ ಶಂಕರಾಚಾರ್ಯರ ಪ್ರತಿಮೆಯನ್ನು ಸಹ ಅರುಣ್ ಅವರೇ ಕೆತ್ತಿದ್ದಾರೆ. ಕಳೆದ ವರ್ಷ ಈ ಪ್ರತಿಮೆಯನ್ನು ಮೋದಿ ಅನಾವರಣಗೊಳಿಸಿದ್ದರು.

ಗಡಿ ಬಿಕ್ಕಟ್ಟು: ಮತ್ತೆ ಮಾತುಕತೆಗೆ ಭಾರತ–ಚೀನಾ ಒಪ್ಪಿಗೆ

ನವದೆಹಲಿ (ಪಿಟಿಐ): ಪೂರ್ವ ಲಡಾಖ್ ಗಡಿಯಲ್ಲಿನ ಸಂಘರ್ಷವನ್ನು ಶಮನಗೊಳಿಸುವ ನಿಟ್ಟಿನಲ್ಲಿ ಮತ್ತೊಂದು ಸುತ್ತಿನ ಸೇನಾ ಕಮಾಂಡರ್‌ಗಳ ಸಭೆಯನ್ನು ನಡೆಸಲು ಭಾರತ ಹಾಗೂ ಚೀನಾ ಮಂಗಳವಾರ ಸಮ್ಮತಿಸಿದವು.

ಭಾರತ–ಚೀನಾ ಗಡಿ ವ್ಯವಹಾರಗಳಿಗೆ ಸಂಬಂಧಿಸಿದ ಡಬ್ಲ್ಯುಎಂಸಿಸಿಯ (ವರ್ಕಿಂಗ್ ಮೆಕ್ಯಾನಿಸಮ್ ಫಾರ್ ಕನ್ಸಲ್ಟೇಶನ್ ಅಂಡ್ ಕೋಆರ್ಡಿನೇಷನ್) ವರ್ಚುವಲ್ ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಸಂಘರ್ಷದ ಸ್ಥಳಗಳಿಂದ ಸೈನಿಕರನ್ನು ಸಂಪೂರ್ಣವಾಗಿ ಹಿಂದಕ್ಕೆ ಕರೆಸಿಕೊಳ್ಳುವುದು ಹಾಗೂ ದ್ವಿಪಕ್ಷೀಯ ಸಂಬಂಧವನ್ನು ಸಾಮಾನ್ಯಸ್ಥಿತಿಗೆ ತರುವ ಉದ್ದೇಶದ ಈ ಸಭೆಯ ದಿನಾಂಕವನ್ನು ಶೀಘ್ರವೇ ನಿಗದಿಪಡಿಸಲು ನಿರ್ಧರಿಸಲಾಯಿತು. ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಪ್ರಸ್ತುತ ಇರುವ ಸ್ಥಿತಿ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು' ಎಂದು ಸಚಿವಾಲಯ ತಿಳಿಸಿದೆ.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಹಣಕಾಸು ಇಲಾಖೆ ಉಪಕಾರ್ಯದರ್ಶಿ(3) ಕೆ. ನಿತೀಶ್ ಅವರನ್ನು ಅದೇ ಇಲಾಖೆಯ ಬಜೆಟ್ ಮತ್ತು ಸಂಪನ್ಮೂಲ ವಿಭಾಗದ ಉಪಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ.

ಮೊಹಮ್ಮದ್ ಇಕ್ರಾಮುಲ್ಲಾ ಶರೀಫ್ ಅವರನ್ನು ಹಣಕಾಸು ಇಲಾಖೆಯ ಉಪಕಾರ್ಯದರ್ಶಿ(3) ಹುದ್ದೆಗೂ, ದಿಗ್ವಿಜಯ್ ಬೋಡ್ಕೆ ಅವರನ್ನು ರಾಮನಗರ ಜಿಲ್ಲಾ ಪಂಚಾಯಿತಿ ಸಿಇಒ ಹುದ್ದೆಗೆ ವರ್ಗಾಯಿಸಲಾಗಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ವಿದ್ಯುತ್ ವಿಭಾಗ, ಕೆ.ಆರ್.ವೃತ್ತ, ಬೆಂಗಳೂರು. ದೂ.: 080-22112809 ಇ-ಮೇಲ್: pwdelediv1@gmail.com

ಸಂ. ಕಾ.ಇಂ(ವಿ)/ಲೋ.ಇ/ವಿದ್ಯುತ್/408/2022-23 ದಿನಾಂಕ : 30-05-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು **KW-1 & KW-2 STD** ಷರತ್ತುಗೊಳಪಟ್ಟಂತೆ ಟೆಂಡರ್‌ನ ಮೊದಲನೇ ಅಲ್ಪಾವಧಿ ಕರೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಕೆಳಕಂಡಂತಿವೆ.

1) ಕಾಮಗಾರಿಯ ಹೆಸರು : Providing Supply, Installing, Testing and Commissioning of 13 Passengers Machine Room Less elevator & with construction of Lift Shaft Civil works to Mini Vidhanasoudha Building (2nd Stage) at Kunigal Town, Tumkur Dist. **KPWD/2021-22/EL/WORK_INDENT151369.** ಟೆಂಡರ್‌ಗಿಟ್ಟ ಮೊತ್ತ : ರೂ. 24.68 ಲಕ್ಷಗಳು.

2) ಕಾಮಗಾರಿಯ ಹೆಸರು : Providing 125 KVA DG Set, AMF Panel Board & Connected accessories to Mini Vidhanasoudha Building (2nd Stage) at Kunigal in Tumkur Dist. **KPWD/2021-22/EL/WORK_INDENT151373** ಟೆಂಡರ್‌ಗಿಟ್ಟ ಮೊತ್ತ : ರೂ. 12.93 ಲಕ್ಷಗಳು.

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವವರು The tenderer as a prime contractor having valid class-1 & above electrical license issued by Electrical Inspectorate, Govt. of Karnataka ರವರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ http://eproc.karnataka.gov.in ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ : 27-05-2022 ರಿಂದ 04-06-2022 16:00 ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ : 04-06-2022 ರಂದು 16:00 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು (ವಿ),
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು

ವಾಸಾಸಂಇ/ವಾ.ಪ್ರ/705/ಶ್ರೇಷ್ಠ/2022-23

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಮನಗರ ಜಿಲ್ಲಾ ಪಂಚಾಯತ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರಾಮನಗರ ವಿಭಾಗ, ರಾಮನಗರ.

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 10/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸ.ಇಂ.-1/595/2022-23 ದಿನಾಂಕ : 30-05-2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜೆಜೆಎಂ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 41.90 ಲಕ್ಷಗಳು, ಇ.ಎಂ.ಡಿ. ಮೊತ್ತ ರೂ. 42,000.00. 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 17.55 ಲಕ್ಷಗಳು, ಇ.ಎಂ.ಡಿ. ಮೊತ್ತ ರೂ. 22,000.00. 3) ಕಾಲಾವಧಿ : 03 ತಿಂಗಳು.

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ದಿನಾಂಕಗಳು ಈ ಕೆಳಕಂಡಂತಿವೆ. ಕೊನೆಯ ದಿನಾಂಕ : 14-06-2022 ರ ಸಂಜೆ 5.30 ಗಂಟೆಯವರೆಗೆ. ಬಿಡ್ ತೆರೆಯುವ ದಿನಾಂಕ : 16-06-2022 ರ ಬೆಳಿಗ್ಗೆ 11.00 ಗಂಟೆಯ ನಂತರ.

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ / ವೆಬ್‌ಸೈಟ್ : **www.eproc.karnataka.gov.in** ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/86/ಮಣಿಪಾಲ್/2022-23

ಕರ್ನಾಟಕ ಸರ್ಕಾರ ಕಾರ್ಯಪಾಲಕ ಇಂಜಿನಿಯರರ ಕಛೇರಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.

ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:JALADHAREPHASE1:2022-23/627
ದಿನಾಂಕ:31-05-2022

ಟೆಂಡರ್ ಪ್ರಕಟಣೆ ಸಂಖ್ಯೆ:01/2022-23 (ದ್ವಿ-ಲಕೋಟೆ ಪದ್ಧತಿ) (e-procurement portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜಲ ಜೀವನ್ ಮಿಷನ್ ಯೋಜನೆಯಡಿ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ, ಪಾಂಡವಪುರ ಮತ್ತು ನಾಗಮಂಗಲ ತಾಲ್ಲೂಕಿನ 797 ಗ್ರಾಮೀಣ ಪ್ರದೇಶದ ಜನವಸತಿಗಳಿಗೆ ಹಾಗೂ 02 ನಗರ ಸ್ಥಳೀಯ ಸಂಸ್ಥೆಗಳು (ಬೆಳ್ಳೂರು ಪಟ್ಟಣ ಪಂಚಾಯತ್ ಮತ್ತು ನಾಗಮಂಗಲ ನಗರ), ಬಿ.ಜಿ.ನಗರ ಮತ್ತು ಕೆ.ಆರ್.ಪೇಟೆ ತಾಲ್ಲೂಕಿನ 05 ವಸತಿ ಶಾಲೆಗಳಿಗೆ ಬಹುಗ್ರಾಮ ಕುಡಿಯುವ ನೀರು ಯೋಜನೆಗೆ **Design, Build, Operate and Transfer (DBOT)** ಆಧಾರದ ಮೇಲೆ ಯೋಜನೆಯನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಪೂರ್ವಭಾವಿ ಸಭೆ **ದಿನಾಂಕ:10.06.2022** ಸಮಯ: **ಮಧ್ಯಾಹ್ನ: 12:00 ಗಂಟೆಗೆ (ಸ್ಥಳ:ಮುಖ್ಯ ಇಂಜಿನಿಯರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು)**, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:01.07.2022 ಸಂಜೆ:04:00 ಗಂಟೆಗೆ**, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:02.07.2022 ಸಂಜೆ 5:30 ಗಂಟೆಗೆ**. ಆರ್ಥಿಕ ಬಿಡ್ ತೆರೆಯುವ **ದಿನಾಂಕ:06.07.2022 ಬೆಳಿಗ್ಗೆ 11:00 ಗಂಟೆಗೆ**. ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. **ದೂರವಾಣಿ ಸಂಖ್ಯೆ: 08232-222363.**

ಸಹಿ/-ಕಾರ್ಯಪಾಲಕ ಇಂಜಿನಿಯರರು,
ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.

ವಾಸಾಸಂಇ/ಸನಿ-ಮಂಡ್ಯ/ಎಂಸಿ&ಎ/089/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನಾ ವಿಭಾಗ, ಯಲಹಂಕ ವಲಯ, ಬ್ಯಾಟರಾಯನಪುರ, ಬೆಂಗಳೂರು – 560 092.

ಸಂಖ್ಯೆ: ಬೃಬೆಂಮಪಾ/ಯಹ/ಕಾಪಾಅ(ಯೋಜನೆ)/ಟೆಂಡರ್/05/2021-22 ದಿನಾಂಕ: 30.05.2022

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ)
ಅಲ್ಪಾವಧಿ ಟೆಂಡರ್ (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನೆ ವಿಭಾಗ), ಯಲಹಂಕ ವಲಯ, ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳು – ಕೆಡಬ್ಲ್ಯೂ 4)**

ಕ್ರ. ಸಂ.	ಯೋಜನೆಗಳ ಹೆಸರು	ಟೆಂಡರಿಗಿಟ್ಟ ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ
1.	ವಾರ್ಡ್ ಸಂಖ್ಯೆ-02 ಚೌಡೇಶ್ವರಿಯ ಹಾರೋಹಳ್ಳಿ ಕೆರೆಯಲ್ಲಿ ಸಮಗ್ರ ಅಭಿವೃದ್ಧಿಗಳನ್ನು ಮಾಡುವುದು.	348.44	5.23 ಲಕ್ಷಗಳು
2.	ವಾರ್ಡ್ ಸಂಖ್ಯೆ-07 (ಬ್ಯಾಟರಾಯನಪುರ) ಜಕ್ಕೂರಿನಲ್ಲಿ ಮದುವೆ ಸಮುದಾಯ ಭವನದ ಬಾಕಿ ಉಳಿದಿರುವ ಕಾಮಗಾರಿಗಳನ್ನು ಮಾಡುವುದು	175.43	2.64 ಲಕ್ಷಗಳು
3.	ವಾರ್ಡ್ ಸಂಖ್ಯೆ-03ರಲ್ಲಿ ತಿರುಮಲ ಢಾಬಾ ಯಿಂದ ಎಂ.ಎಸ್ ಪಾಳ್ಯ ವೃತ್ತದವರೆಗೆ ಅಲಂಕಾರಿತ ಟಸ್ಕರ್ ಬೀದಿ ದೀಪ ಕಂಬಗಳು ಮತ್ತು ದೀಪಗಳನ್ನು ಒದಗಿಸುವುದು ಮತ್ತು ಅಳವಡಿಸುವುದು.	215.50	5.23 ಲಕ್ಷಗಳು

<u>ಟೆಂಡರ್ ವೇಳಾಪಟ್ಟಿ</u>: (1) ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ (ಆನ್‌ಲೈನ್ ಮೂಲಕ ಮಾತ್ರ) 10.06.2022ರ ಮಧ್ಯಾಹ್ನ 3:00 ಗಂಟೆಯವರೆಗೆ ನಡೆಸಲಾಗುವುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 10.06.2022ರ ಸಂಜೆ 4:00 ಗಂಟೆಯವರೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 13.06.2022ರ ಸಂಜೆ 4:00 ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 14.06.2022ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ದಿನಾಂಕ 16.06.2022ರ ಸಂಜೆ 4:00 ಗಂಟೆಗೆ ತೆರೆಯಲಾಗುವುದು (ಸಾಧ್ಯವಾದಲ್ಲಿ). ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, (ಯೋಜನೆ ವಿಭಾಗ), ಯಲಹಂಕ ವಲಯ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಿಲ್ಲಾ ಪಂಚಾಯತ್, ತುಮಕೂರು ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ–ಮಧುಗಿರಿ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ:03/2022-23
ದಿನಾಂಕ: 21.05.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ ವಿವಿಧ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಅನ್ನು ಕರೆಯಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡಗಳನ್ನು, ಸ್ವೀಕರಿಸಲು ಟೆಂಡರ್‌ಗಳಿಗೆ **ದಿ:21.05.2022** ರಿಂದ **ದಿ:16.06.2022** ರಂದು ಕೊನೆಯ ದಿನಾಂಕ ವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 080-25501216, 080-25501227 ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ http://www.eproc.karnataka,gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ಮಧುಗಿರಿ

DIPR/TUM/164/MCA/2022-23

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ

ಕರ್ನಾಟಕ ಒಂದು ರಾಜ್ಯ, ಹಲವು ಜಗತ್ತುಗಳು. ಪ್ರವಾಸೋದ್ಯಮ ಇಲಾಖೆ

(ಕರ್ನಾಟಕ ಸರ್ಕಾರದ ಒಂದು ಉದ್ಯಮ) CIN :U70100KA2015SGC081817
4ನೇ ಮಹಡಿ, ಎಂಬಸ್ಸಿ ಐಕಾನ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001, ದೂರವಾಣಿ: 080-22352525

ಸಂಖ್ಯೆ: ಕೆ.ಟಿ.ಐ.ಎಲ್/ಯೋ/ಬೆಳ.ವಿ/03/2021-22 ದಿನಾಂಕ: 31.05.2022

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ-2ನೇ ಕರೆ (ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ಗದಗ ಜಿಲ್ಲೆಯ ಲಕ್ಕುಂಡಿಯಲ್ಲಿ ಸಮಗ್ರವಾಗಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ (ಟೆಂಡರ್ ಸಂ: KTIL/2022-23/OW/WORK_INDENT 10/CALL-2) KW-3 ರನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. (1) ಟೆಂಡರ್ ಗಿಟ್ಟ ಮೊತ್ತ : ರೂ.81.99 ಲಕ್ಷಗಳು, (2) ಇ.ಎಂ.ಡಿ ಮೊತ್ತ: ರೂ. 1.64 ಲಕ್ಷಗಳು (3) ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 30.05.2022, (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 07.06.2022 ಸಂಜೆ :5.30 ಗಂಟೆಗೆ.

ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಎಲ್ಲಾ ಹೆಚ್ಚುವರಿ ಅಧಿಸೂಚನೆಗಳನ್ನು, ಬದಲಾವಣೆಗಳನ್ನು ಮತ್ತು ತಿದ್ದುಪಡಿಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ,
ಕೇಂದ್ರ ಕಛೇರಿ, ಬೆಂಗಳೂರು.

DIPR/CP/712/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ವಿಭಾಗ ಕಾರ್ಯಲಯ, ಹಬ್ಬುವಾಡಾ-ಕಾರವಾರ, ಉತ್ತರ ಕನ್ನಡ ಜಿಲ್ಲೆ -581 301.
ದೂರವಾಣಿ: 08382-228935, ಫ್ಯಾಕ್ಸ್: 229735 e-mail: eerdwsd.uk@gmail.com
ನಂ.: ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/ಪಿಬಿ-1/ಟೆಂಡರ/JJM/2022-23/391 ದಿನಾಂಕ: 27.05.2022

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಇವರಿಂದ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ/ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ-ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document KW-4 ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.

ಕಾಮಗಾರಿ ಹೆಸರು : (1) INDENT40391 (2) INDENT40414

(1) Downloading of document through e-proc portal: 28.05.2022 to 16.06.2022 up to 16.30 Hrs. (2) Time & date of Pre-Bid Conference: 03.06.2022 Time : 11.30 Hrs. Venue: O/o. Executive Engineer, Rural Drinking Water & Sanitation Division, Po: Habbuwada, Karwar- Uttara Kannada Dist. (3) Last Date & Time for Receipt of Bids: **16.06.2022 Time : 16.30 Hrs.** (4) Date & Time of Technical Bid Opening: **17.06.2022 Time : 17:00 Hrs.** (5) Date & Time of Financial Bid Opening: Will be informed technically qualified bidders after approval of Technical Bid.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಾರವಾರ (ಉ.ಕ.ಜಿಲ್ಲೆ)

DIPR/ADK/MCA/75/22-23 dt.30.05.2022

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

#49, ಪರಿಸರ ಭವನ, ಚರ್ಚ್ ಸ್ಟ್ರೀಟ್ ಬೆಂಗಳೂರು-560 001
ಫೋನ್: 080-2558 6520/2558 9112 ಫ್ಯಾಕ್ಸ್: 080-2588 6321
e-mail: ho@kspcb.gov.in | Website: kspcb.karnataka.gov.in

ಸಂಖ್ಯೆ: ಮಾನಿಮಂ/147/ಹಿಪಅ/ಗಣಿ/ಪಸಾಸ/2022-23/1576 ದಿನಾಂಕ:30.05.2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರಪೊರೇಶನ್ ಲಿಮಿಟೆಡ್ ರವರು ಬ್ಯಾಲಚಿಂತೆ ಮತ್ತು ಬಿ.ಡಿ.ಹಳ್ಳಿ ಮರಳು ಬ್ಲಾಕ್ ನಲ್ಲಿ (Block No.BLY-OSB-02) ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಹಗರಿ ನದಿಯ ಪಕ್ಕದ ಸರ್ವೆ ನಂ.162(P) ಬ್ಯಾಲಚಿಂತೆ ಗ್ರಾಮ ಮತ್ತು ಸರ್ವೆ ನಂ.342(P) ಬರದನಹಳ್ಳಿ (ಬಿ.ಡಿ.ಹಳ್ಳಿ) ಬ್ಯಾಲಚಿಂತೆ ಮತ್ತು ಬರದನಹಳ್ಳಿ ಮತ್ತು ಜಿ.ನಾಗೇನಹಳ್ಳಿ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಬಳ್ಳಾರಿ ಜಿಲ್ಲೆಯಲ್ಲಿ 49.00 ಎಕರೆ (19.83ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 1,33,590 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ಗೆ (ತಿದ್ದುಪಡಿ ದಿನಾಂಕ: 01.12.2009) ಒಳಪಟ್ಟಿದ್ದು, ಅದರ ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಇವರ Terms of Reference ಪತ್ರ ಸಂಖ್ಯೆ :SEIAA 382 MIN 2021 **ದಿನಾಂಕ: 20.11.2021** ಮತ್ತು ಉದ್ದಿಮೆಯವರು ನೀಡಿದ ನಿವೇದನಾ ಪತ್ರದ **ದಿನಾಂಕ: 12.04.2022** ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ

1	**ಕಂಪನಿಯ ಹೆಸರು ಮತ್ತು ವಿಳಾಸ:** ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್ KSMCL, TTMC, ಎ ಬ್ಲಾಕ್, 5ನೇ ಫ್ಲೋರ್,BMTC ಕಟ್ಟಡ, K H ರೋಡ್, ಶಾಂತಿನಗರ, ಬೆಂಗಳೂರು– 560027
2	**ಉದ್ದೇಶಿತ ಯೋಜನೆಯ ಸ್ಥಳ:** ಸರ್ವೆ.ನಂ.162(P) ಬ್ಯಾಲಚಿಂತೆ ಗ್ರಾಮ ಮತ್ತು ಸರ್ವೆ ನಂ.342(P) ಬಿ.ಡಿ.ಹಳ್ಳಿ, ಬ್ಯಾಲಚಿಂತೆ ಮತ್ತು ಬಿ.ಡಿ.ಹಳ್ಳಿ ಮತ್ತು ಜಿ.ನಾಗೇನಹಳ್ಳಿ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಬಳ್ಳಾರಿ ಜಿಲ್ಲೆ, ಕರ್ನಾಟಕ.
3	**ಉದ್ದೇಶಿತ ಯೋಜನೆಯ ಕಾರ್ಯಚಟುವಟಿಕೆ:** ವರ್ಷಕ್ಕೆ 1,33,590 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆ.
4	**ಮಾಲಿನ್ಯ ನಿಯಂತ್ರಣ ಕ್ರಮಗಳು:** ರಸ್ತೆಗಳಲ್ಲಿ ನಿಯಮಿತವಾಗಿ ನೀರು ಚಿಮುಕಿಸುವುದು, ಅವೆನ್ಯೂ ಪ್ಲಾಂಟೇಶನ್, ಲೋಡ್ ವಾಹನವನ್ನು ಟಾರ್ಪಾಲಿನ್‌ನಿಂದ ಮುಚ್ಚುವುದು, ನಿಯಮಿತ ರಸ್ತೆ ನಿರ್ವಹಣೆ, ಹಸಿರು ಪಟ್ಟಿ ರಚನೆ ಇತ್ಯಾದಿ. ವಾಹನದ ನಿಯಮಿತ ನಿರ್ವಹಣೆ, ಗ್ರೀನ್ ಬೆಲ್ಟ್ ಅಭಿವೃದ್ಧಿ, ಸರಿಯಾದ ರಸ್ತೆ ಗ್ರೇಡಿಯಂಟ್ ನಿರ್ವಹಣೆ ಇತ್ಯಾದಿ. ಅನುಮತಿಸುವ ಶಬ್ದ ಮಟ್ಟಗಳು ಮತ್ತು ಆ ಮಟ್ಟಗಳಿಗೆ ಗರಿಷ್ಠ ಮಾನ್ಯತೆ ಬಗ್ಗೆ ಕಾರ್ಮಿಕರಿಗೆ ಅರಿವು ನೀಡಲಾಗುವುದು. ಭೂ ಮಾಲೀಕರೊಂದಿಗೆ ಸಮಾಲೋಚಿಸಿ ಅಂತರ್ಜಲ ಮರುಪೂರಣ ಪಿಟ್, ಮಳೆ ನೀರು ಕೊಯ್ಲು ಕೆಲಸ, ಮರಳು ಬ್ಲಾಕ್ ಹಬೆಯ ಕಡೆಗೆ ಜಲಾನಯನ ಪ್ರದೇಶದ ಪುನಶ್ಚೇತನ, ಗಲ್ಲಿ ಪ್ಲಗ್ ಮತ್ತು ಚೆಕ್ ಡ್ಯಾಂಗಳನ್ನು ಕೈಗೊಳ್ಳಲು ಉದ್ದೇಸಿಸಲಾಗಿದೆ. ಮೇಲ್ಮೈ ನೀರಿನ ಮಾರ್ಗವನ್ನು ತಿರುಗಿಸಲಾಗುವುದಿಲ್ಲ. ಲೀಸ್‌ನ ಗಡಿಯುದ್ದಕ್ಕೂ ಮಳೆ ನೀರು ಕೆಲಸದ ಸ್ಥಳಕ್ಕೆ ಹೋಗುವುದನ್ನು ತಪ್ಪಿಸಲು ಹೂಮಾಲೆ ಚರಂಡಿಯನ್ನು ರಚಿಸಲಾಗುತ್ತದೆ ಮತ್ತು ನೀರನ್ನು ನೈಸರ್ಗಿಕ ನೀರಿನ ಹರಿವಿಗೆ ಬಿಡಲಾಗುತ್ತದೆ.
5	**ಪರಿಸರ ಸಾರ್ವಜನಿಕ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ:** 01.07.2022 (ಶುಕ್ರವಾರ) ರಂದು ಅಪರಾಹ್ನ 03:00 ಗಂಟೆ, ಸರ್ವೆ.ನಂ.162(P) ಬ್ಯಾಲಚಿಂತೆ ಗ್ರಾಮ ಮತ್ತು ಸರ್ವೆ ನಂ.342(P) ಬಿ.ಡಿ.ಹಳ್ಳಿಯ (Block BLY-OSB-2) ಬ್ಯಾಲಚಿಂತೆ ಮತ್ತು ಬಿ.ಡಿ.ಹಳ್ಳಿಮತ್ತು ಜಿ.ನಾಗೇನಹಳ್ಳಿ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಬಳ್ಳಾರಿ ಜಿಲ್ಲೆ, ಕರ್ನಾಟಕ.
6	**ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ. (ಆ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಳ್ಳಾರಿ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ. (ಈ) ತಾಲ್ಲೂಕು ಪಂಚಾಯತಿ ಕಾರ್ಯಲಯ ಬಳ್ಳಾರಿ. (ಉ) ತಹಶೀಲ್ದಾರರ ಕಾರ್ಯಲಯ ಬಳ್ಳಾರಿ. (ಊ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಕಾರೇಕಲ್ಲು ಗ್ರಾಮ ಬಳ್ಳಾರಿ ತಾಲ್ಲೂಕ & ಜಿಲ್ಲೆ. (ಋ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಬಿ.ಡಿ.ಹಳ್ಳಿ ಗ್ರಾಮ ಬಳ್ಳಾರಿ ತಾಲ್ಲೂಕ & ಜಿಲ್ಲೆ. (ಎ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ (ಏ) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ. 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001. (ಐ) **ಸಹಾಯ ಮೇಜು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,** ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ಮತ್ತು ಸಲಹೆಗಳು, ಅನಿಸಿಕೆಗಳು, ಟೀಕೆ ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: <u>kspcb.karnataka.gov.in</u> ರಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

रजिस्ट्री सं. डी.एल. – 33004/99 REGD. No. D.L 33004/99

भारत का राजपत्र
The Gazette of India

सी.जी.-डी.एल.-अ.-09052022-235649
CG-DL-E-09052022-235649

असाधारण
EXTRAORDINARY
भाग II–खण्ड 3–उप–खण्ड (ii)
PART II–Section 3–Sub-section (ii)
प्राधिकार से प्रकाशित
PUBLISHED BY AUTHORITY

सं. 2038] नई दिल्ली, सोमवार, मई 9, 2022/वैशाख 19, 1944
No. 2038] NEW DELHI, MONDAY, MAY 9, 2022/VAISAKHA 19, 1944

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ

ನವದೆಹಲಿ, ದಿನಾಂಕ: 9ನೇ ಮೇ 2022

ಎಸ್.ಓ. 2143(ಇ) ಕೇಂದ್ರ ಸರ್ಕಾರ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಅನುಸೂಚಿಯಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆಯಲ್ಲಿ ಕೇಂದ್ರ ಸರ್ಕಾರವು ಸಾರ್ವಜನಿಕರ ಉದ್ದೇಶಕ್ಕಾಗಿ ಈ ಕೆಳಗಿನ ಅನುಸೂಚಿಯಲ್ಲಿ ತಿಳಿಯಪಡಿಸಲಾದ ವಿವರಣೆಯು ಬಿಎಂ 1 ರ ಅಡಿಯಲ್ಲಿ ಬೆಂಗಳೂರು – ಮೈಸೂರು ಆರು ಪಥಗಳಿಗೆ ಸಂಬಂಧಿಸಿದ ರಸ್ತೆ ಸುರಕ್ಷತೆಯ ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಹಾಗೂ ಹೆಚ್ಚುವರಿ ಕಾಮಗಾರಿಗಳಿಗಾಗಿ ರಾಷ್ಟ್ರೀಯ ಹೆದ್ದಾರಿ 275 ರಲ್ಲಿ ಕಿ.ಮೀ. 17+300 ರಿಂದ ಕಿ.ಮೀ. 136+300 (ನರಸಿಂಹ ನಿಲಯ, ನಂ. 1541, 2ನೇ ಅಡ್ಡ ರಸ್ತೆ, ಸುಶೀಲಮ್ಮ ಉದ್ಯಾನವನ ಹತ್ತಿರ, ವಿದ್ಯಾ ನಗರ, ಮಂಡ್ಯ-571401) ವರೆಗಿನ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಅವಶ್ಯಕವಾಗಿರುತ್ತದೆ. ಆದಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ರ ಪ್ರಕಾರ ನಿಯಮ 3ಎ ರ ಉಪನಿಯಮ 1ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವುದಾಗಿ ಈ ಮೂಲಕ ಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆ ಹೊರಡಿಸಿರುವ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ಈ ಪ್ರಕಟಣೆ ಈ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ 21 ದಿನಗಳೊಳಗಾಗಿ ಸೆಕ್ಷನ್ 3ಸಿ (1) ರ ಅನ್ವಯ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ. ಅಂತಹ ಆಕ್ಷೇಪಣೆಯನ್ನು ಸಕ್ಷಮ ಪ್ರಾಧಿಕಾರಿಗಳು ಅಂದರೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಇವರಿಗೆ ಬರಹ ಮೂಲಕ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಎಂಬುದು ಕಂಡು ಬಂದಲ್ಲಿ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ರಾಷ್ಟ್ರೀಯ ಹೆದ್ದಾರಿ ಕಾಯ್ದೆಯ 1956 (1956ರ 48) ಪ್ರಕಾರ ಸೆಕ್ಷನ್ 3ಸಿ (2) ರಂತೆ ಸಕ್ಷಮ ಪ್ರಾಧಿಕಾರಿಗಳು ಮಾಡಿದ ಆದೇಶ ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶೆಗಳು ಮತ್ತು ದಾಖಲೆಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿವುಳ್ಳವರು ಸಕ್ಷಮ ಪ್ರಾಧಿಕಾರಿಯವರ ಕಚೇರಿಯಲ್ಲಿ ಪರಿಶೀಲಿಸಬಹುದಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಬೆಂಗಳೂರು ನಗರ ಜಿಲ್ಲೆಯಲ್ಲಿ ಬಿಎಂ 1 ರ ಅಡಿಯಲ್ಲಿ ಬೆಂಗಳೂರು – ಮೈಸೂರು ಆರು ಪಥಗಳಿಗೆ ಸಂಬಂಧಿಸಿದ ರಸ್ತೆ ಸುರಕ್ಷತೆಯ ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಹಾಗೂ ಹೆಚ್ಚುವರಿ ಕಾಮಗಾರಿಗಳಿಗಾಗಿ ರಾಷ್ಟ್ರೀಯ ಹೆದ್ದಾರಿ 275 ರಲ್ಲಿ ಕಿ.ಮೀ. 17+300 ರಿಂದ ಕಿ.ಮೀ. 136+300 (ನರಸಿಂಹ ನಿಲಯ, ನಂ. 1541, 2ನೇ ಅಡ್ಡ ರಸ್ತೆ, ಸುಶೀಲಮ್ಮ ಉದ್ಯಾನವನ ಹತ್ತಿರ, ವಿದ್ಯಾ ನಗರ, ಮಂಡ್ಯ – 571401) ವರೆಗಿನ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಕಟ್ಟಡ ಸಹಿತ/ಕಟ್ಟಡ ರಹಿತ ಭೂ ಸ್ವಾಧೀನಗೊಳ್ಳಲಿರುವ ಜಮೀನುಗಳ ಸಂಕ್ಷಿಪ್ತ ವಿವರ.

ರಾಜ್ಯ: ಕರ್ನಾಟಕ ಜಿಲ್ಲೆ: ಬೆಂಗಳೂರು ನಗರ

ಕ್ರ. ಸಂ.	ಸರ್ವೆ ನಂಬರು / ಪ್ಲಾಟ್ ಸಂಖ್ಯೆ	ಜಮೀನಿನ ಸ್ವರೂಪ	ಜಮೀನಿನ ತರಹೆ	ವಿಸ್ತೀರ್ಣ (ಚ.ಮೀ.ಗಳಲ್ಲಿ)
ತಾಲ್ಲೂಕು : ಬೆಂಗಳೂರು ದಕ್ಷಿಣ				
ಗ್ರಾಮ : ಕಂಬೀಪುರ				
1	202	ಖಾಸಗಿ	ಎನ್‌ಎಕೆ	62
2	202	ಖಾಸಗಿ	ಎನ್‌ಎಕೆ	800
3	46	ಖಾಸಗಿ	ಎನ್‌ಎಕೆ	300
4	47	ಖಾಸಗಿ (ಸರ್ಕಾರ /ಖಾಸಗಿ)	ಎನ್‌ಎಕೆ	300
5	49	ಖಾಸಗಿ	ಎನ್‌ಎಕೆ	350
6	50	ಖಾಸಗಿ	ಎನ್‌ಎಕೆ	300
7	51	ಖಾಸಗಿ	ಎನ್‌ಎಕೆ	300
8	52	ಖಾಸಗಿ	ಎನ್‌ಎಕೆ	800
9	59	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ/ಖುಷ್ಕಿ	62
10	62	ಖಾಸಗಿ	ಎನ್‌ಎಕೆ	750
11	63	ಖಾಸಗಿ	ಎನ್‌ಎಕೆ	1,200
12	64	ಖಾಸಗಿ	ಎನ್‌ಎಕೆ	400
ಗ್ರಾಮ: ಕಣಿಮಿಣಿಕೆ				
1	42	ಸಾಮಾನ್ಯ (ಸರ್ಕಾರ /ಖಾಸಗಿ)	ಖುಷ್ಕಿ	300
2	56	ಖಾಸಗಿ	ಖುಷ್ಕಿ/ಎನ್‌ಎಕೆ	2,000
3	60	ಖಾಸಗಿ	ಎನ್‌ಎಕೆ	800
4	61	ಖಾಸಗಿ	ಎನ್‌ಎಕೆ	800
5	64	ಖಾಸಗಿ	ಎನ್‌ಎಕೆ	900
6	71	ಸರ್ಕಾರ	ಖುಷ್ಕಿ/ಎನ್‌ಎಕೆ	850
7	88	ಖಾಸಗಿ	ಖುಷ್ಕಿ/ಎನ್‌ಎಕೆ	300
ಗ್ರಾಮ: ಕೆಂಗೇರಿ				
1	122	ಖಾಸಗಿ	ಎನ್‌ಎಕೆ	2,400
2	122	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ/ಖುಷ್ಕಿ	800
3	125	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ	304
4	126	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ	5,818
5	128	ಸರ್ಕಾರ (ಸಾರ್ವಜನಿಕ ವಲಯ ನಿಗಮ)	ಕ.ರಾ.ರ.ಸಾ.ನಿ	47
6	137	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ	1,646
7	142	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ	560
8	143	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ	1,925
9	148	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ	671
10	149	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ	1,980
11	150	ಸಾಮಾನ್ಯ (ಸರ್ಕಾರ /ಖಾಸಗಿ)	ಕೆಐಎಡಿಬಿ	1,564
12	151	ಖಾಸಗಿ	ಎನ್‌ಎಕೆ	1,492
13	152	ಖಾಸಗಿ	ಎನ್‌ಎಕೆ	1,033
14	153	ಖಾಸಗಿ	ಖುಷ್ಕಿ/ಎನ್‌ಎಕೆ	3,291
15	153	ಖಾಸಗಿ	ಖುಷ್ಕಿ/ಎನ್‌ಎಕೆ	200
16	154	ಖಾಸಗಿ	ಎನ್‌ಎಕೆ/ಖುಷ್ಕಿ	3,266
17	154	ಸಾಮಾನ್ಯ (ಸರ್ಕಾರ /ಖಾಸಗಿ)	ಖುಷ್ಕಿ/ಎನ್‌ಎಕೆ	600
18	157	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ/ಖುಷ್ಕಿ	50
19	160	ಸರ್ಕಾರ	ಖುಷ್ಕಿ/ಎನ್‌ಎಕೆ	157
20	234	ಸಾಮಾನ್ಯ (ಸರ್ಕಾರ /ಖಾಸಗಿ)	ಖುಷ್ಕಿ/ಎನ್‌ಎಕೆ	50
21	237	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ	1,940
22	277	ಖಾಸಗಿ	ಎನ್‌ಎಕೆ	156
23	279	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ	65
ಗ್ರಾಮ: ಕುಂಬಳಗೋಡು				
1	119	ಖಾಸಗಿ	ಎನ್‌ಎಕೆ	800
2	14	ಖಾಸಗಿ	ಎನ್‌ಎಕೆ	400
3	149	ಖಾಸಗಿ	ಎನ್‌ಎಕೆ/ಖುಷ್ಕಿ	160
4	179	ಖಾಸಗಿ	ಎನ್‌ಎಕೆ	430
5	24	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ/ಖುಷ್ಕಿ	800
6	25	ಸಾಮಾನ್ಯ (ಸರ್ಕಾರ /ಖಾಸಗಿ)	ಖುಷ್ಕಿ/ಎನ್‌ಎಕೆ	800
7	30	ಸಾಮಾನ್ಯ (ಸರ್ಕಾರ /ಖಾಸಗಿ)	ಖುಷ್ಕಿ/ಎನ್‌ಎಕೆ	700
8	30	ಸಾಮಾನ್ಯ (ಸರ್ಕಾರ /ಖಾಸಗಿ)	ಖುಷ್ಕಿ/ಎನ್‌ಎಕೆ	160
9	30	ಸಾಮಾನ್ಯ (ಸರ್ಕಾರ /ಖಾಸಗಿ)	ಖುಷ್ಕಿ/ಎನ್‌ಎಕೆ	800
10	40	ಸಾಮಾನ್ಯ (ಸರ್ಕಾರ /ಖಾಸಗಿ)	ಎನ್‌ಎಕೆ	40
11	41	ಖಾಸಗಿ	ಎನ್‌ಎಕೆ	40
12	47	ಖಾಸಗಿ	ಎನ್‌ಎಕೆ	430
13	47	ಖಾಸಗಿ	ಎನ್‌ಎಕೆ	800
14	51	ಖಾಸಗಿ	ಖುಷ್ಕಿ/ಎನ್‌ಎಕೆ	20
15	51	ಖಾಸಗಿ	ಖುಷ್ಕಿ/ಎನ್‌ಎಕೆ	800
			ಒಟ್ಟು	48,769

[F. No. NHAI/PIU-RMNG/Additional Works safety/NH-275/2021-22/3A1]
ರಾಜೇಶ್ ಗುಪ್ತ, ನಿರ್ದೇಶಕರು.

ಸಮಿತಿ ನಡಾವಳಿ, ನಿರ್ಧಾರ ಹೊರಗಿನವರಿಗೆ ಲಭ್ಯವಿಲ್ಲ

ಸದನದಲ್ಲಿ ವರದಿ ಸಲ್ಲಿಕೆಯಾಗುವವರೆಗೂ ಅವು ಗೋಪ್ಯವಾಗಿರಬೇಕು, ಪ್ರತಿಪಕ್ಷಗಳ ನಾಯಕರನ್ನೇ ಗುರಿಯಾಗಿಸಿ ಸಿಬಿಐ ದಾಳಿ ಕಳವಳಕಾರಿ

ಕಾರ್ತಿಯಿಂದ ದಾಖಲೆ ವಶಕ್ಕೆ: ಹಕ್ಕುಚ್ಯುತಿ ನೋಟಿಸ್ ನೀಡಿದ ತರೂರ್

ನವದೆಹಲಿ: ಕಾರ್ತಿ ಚಿದಂಬರಂ ಅವರ ನಿವಾಸದಲ್ಲಿ ಶೋಧ ಕಾರ್ಯಾಚರಣೆ ನಡೆಸುವಾಗ ಸಂಸದೀಯ ಸಮಿತಿಯ ಗೋಪ್ಯ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಿರುವ ಕಾಂಗ್ರೆಸ್ ಮುಖಂಡ ಶಶಿ ತರೂರ್ ಅವರು ಸಿಬಿಐ ವಿರುದ್ಧ ಹಕ್ಕುಚ್ಯುತಿ ನೋಟಿಸ್ ನೀಡಿದ್ದಾರೆ. ದಾಖಲೆಗಳನ್ನು ವಶಕ್ಕೆ ಪಡೆಯುವ ಮೂಲಕ ಸಂಸದೀಯ ಕಾರ್ಯಚಟುವಟಿಕೆಗೆ ಸಿಬಿಐ ಅಗೌರವ ತೋರಿದೆ ಎಂದು ಅವರು ಹೇಳಿದ್ದಾರೆ.

ಸಂವಹನ ಹಾಗೂ ಮಾಹಿತಿ ತಂತ್ರಜ್ಞಾನ ಕುರಿತ ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿರುವ ತರೂರ್, ಸಿಬಿಐ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ. ಸಮಿತಿಯ ಸದಸ್ಯರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿ ಸಮಿತಿಯ ದಾಖಲೆಗಳನ್ನು ಪಡೆದುಕೊಳ್ಳುವುದು ನಿಯಮಾವಳಿಯ ಗಂಭೀರ ಉಲ್ಲಂಘನೆಯಾಗುತ್ತದೆ ಎಂದು ಅವರು ಹೇಳಿದ್ದಾರೆ. ಕಾರ್ತಿ ಅವರು ಈ ಸಮಿತಿಯ ಸದಸ್ಯರಾಗಿದ್ದಾರೆ.



ಶಶಿ ತರೂರ್

'ಸಿಬಿಐನ ಈ ಕ್ರಮವು, ಸ್ಥಾಯಿ ಸಮಿತಿಯ ಕಾರ್ಯ ಚಟುವಟಿಕೆಗಳು ಹಾಗೂ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಈ ಮೂಲಕ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಶಾಸಕಾಂಗ ರಚಿತ ಘಟಕಕ್ಕೆ ಸಿಬಿಐ ಅಗೌರವ ತೋರಿದೆ' ಎಂದು ತರೂರ್ ಹೇಳಿದ್ದಾರೆ.

'ಸಾಕ್ಷಿಗಳ ವಿಚಾರಣೆ, ಸಾಕ್ಷ್ಯಗಳ ಪರಿಶೀಲನೆ ಉದ್ದೇಶದಿಂದ ಕಾರ್ತಿ ಅವರು ಸಿದ್ಧಪಡಿಸಿದ್ದ ಪ್ರಶ್ನಾವಳಿಗಳು ಸೇರಿದಂತೆ ಕೆಲವು ಮಹತ್ವದ ದಾಖಲೆಗಳನ್ನು ಸಿಬಿಐ ವಶಪಡಿಸಿಕೊಂಡಿದೆ ಎಂದು ಮಾಹಿತಿ ಇದೆ. ಸದಸ್ಯರಾದವರು ಸಮಿತಿ ಎದುರು ಮಾತ್ರ ಈ ಗೋಪ್ಯ ಮಾಹಿತಿಗಳನ್ನು ಹಂಚಿಕೊಳ್ಳಬೇಕಿತ್ತು. ಆದರೆ, ಈ ದಾಖಲೆಗಳು ಸಿಬಿಐ ವಶದಲ್ಲಿವೆ' ಎಂದು ತರೂರ್ ಆರೋಪಿಸಿದ್ದಾರೆ.

ಐಎಂಡಿ ಮುನ್ಸೂಚನೆ; ಬಂಪರ್ ಬೆಳೆ, ಹಣದುಬ್ಬರ ನಿಯಂತ್ರಣ ನಿರೀಕ್ಷೆ

ಮುಂಗಾರಿನಲ್ಲಿ ಉತ್ತಮ ಮಳೆ

ನವದೆಹಲಿ (ಪಿಟಿಐ): ದೇಶದ ಮಳೆಯಾಶ್ರಿತ ಕೃಷಿ ಪ್ರದೇಶದಲ್ಲಿ ಈ ಬಾರಿ ಮುಂಗಾರಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಂಗಳವಾರ ಮುನ್ಸೂಚನೆ ನೀಡಿದೆ. ಇದು ಕೃಷಿ ಕ್ಷೇತ್ರದಲ್ಲಿ ಬಂಪರ್ ಉತ್ಪಾದನೆ ಮತ್ತು ಹಣದುಬ್ಬರ ನಿಯಂತ್ರಣದ ಭರವಸೆಯನ್ನೂ ಹೆಚ್ಚಿಸಿದೆ.

'ಜೂನ್ ಮತ್ತು ಸೆಪ್ಟೆಂಬರ್ ನಡುವೆ ಸರಾಸರಿ ಮಳೆಯು ದೀರ್ಘಾವಧಿಯ ಸರಾಸರಿಯ ಶೇ 103ರಷ್ಟು ಆಗಲಿದೆ. ಜೂನ್‌ನಲ್ಲಿ ವಾಡಿಕೆಯಷ್ಟು ಮಳೆಯಾಗಲಿದೆ' ಎಂದು ಭಾರತೀಯ ಹವಾಮಾನ ಇಲಾಖೆ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಕೃಷಿಗೆ ಮುಂಗಾರು ಮಳೆ ಅವಲಂಬಿಸಿರುವ ಗುಜರಾತ್‌ನಿಂದ ಒಡಿಶಾವರೆಗಿನ ರಾಜ್ಯಗಳಲ್ಲಿ (ಕೋರ್ ಜೋನ್) ದೀರ್ಘಾವಧಿಯ ಸರಾಸರಿ ಶೇ 106ಕ್ಕಿಂತ ಹೆಚ್ಚಿನ ಮಳೆಯಾಗುವ ಮುನ್ಸೂಚನೆ ಇದೆ. ಮಧ್ಯ ಭಾರತ ಮತ್ತು ದಕ್ಷಿಣ ಪೆನಿನ್ಸುಲಾದಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಲಿದೆ. ಈಶಾನ್ಯ ಮತ್ತು ವಾಯುವ್ಯ ಪ್ರದೇಶಗಳಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದೆ ಎಂದು ಮಹಾಪಾತ್ರ ಹೇಳಿದರು.

ದೇಶದಲ್ಲಿ ಈ ಬಾರಿ ಮುಂಗಾರು ಮಳೆ ವಾಡಿಕೆಯಷ್ಟು, ಅಂದರೆ, ದೀರ್ಘಾವಧಿಯ (ಎಲ್‌ಪಿಎ) ಶೇ 99ರಷ್ಟು ಆಗಲಿದೆ ಎಂದು ಐಎಂಡಿ ಕಳೆದ ಏಪ್ರಿಲ್‌ನಲ್ಲಿ ಹೇಳಿತ್ತು. ಇದು 1971-2020ರವರೆಗಿನ 50 ವರ್ಷಗಳ ಅವಧಿಯಲ್ಲಿ ಬಿದ್ದ ಸರಾಸರಿ ಮಳೆಯನ್ನು ಎಲ್‌ಪಿಎ ಎಂದು ಅಂದಾಜಿಸಲಾಗುತ್ತದೆ. ಇಡೀ ದೇಶದಲ್ಲಿ ಎಲ್‌ಪಿಎ ಮಳೆ ದಾಖಲಾಗಿರುವುದು 87 ಸೆಂ.ಮೀ.

'ವಾಡಿಕೆಗಿಂತ ಕಡಿಮೆ ಮಳೆಯ ದಶಮಾನದ ಯುಗ ಅಂತ್ಯ ಸಮೀಪಿಸುತ್ತಿದ್ದು, ವಾಡಿಕೆ ಮುಂಗಾರು ಯುಗದತ್ತ ಸಾಗುತ್ತಿವೆ. ಸತತ ನಾಲ್ಕನೇ ವರ್ಷವು ವಾಡಿಕೆಗಿಂತ ಹೆಚ್ಚಿನ ಮುಂಗಾರು ಮಳೆಗೆ ದೇಶ ಸಾಕ್ಷಿಯಾಗುವ ಸಾಧ್ಯತೆಯಿದೆ. 2005ರಿಂದ 2008 ಮತ್ತು 2010-2013ರವರೆಗಿನ ದೇಶದಲ್ಲಿ ವಾಡಿಕೆಯಷ್ಟು ಮುಂಗಾರು ಮಳೆಯಾಗಿತ್ತು' ಎಂದು ಮಹಾಪಾತ್ರ ಹೇಳಿದರು.

ಕೇರಳಕ್ಕೆ ಮುಂಗಾರು ಪ್ರವೇಶಿಸುವ ಮುನ್ಸೂಚನೆ ಬಗ್ಗೆ ನಿಖರ ಮಾಹಿತಿ ನೀಡದೆ ಐಎಂಡಿ ಟೀಕೆಗೆ ಗುರಿಯಾಗಿರುವ ಬಗ್ಗೆ ಪ್ರಶ್ನಿಸಿದಾಗ, 'ಮುಂಗಾರು ಆರಂಭ ಮತ್ತು ಬೆಳವಣಿಗೆಯ ಮುನ್ಸೂಚನೆ ನೀಡಲು ಹವಾಮಾನ ಕಚೇರಿಯು ವೈಜ್ಞಾನಿಕ ಪ್ರಕ್ರಿಯೆ ಅನುಸರಿಸಿದೆ' ಎಂದು ಮಹಾಪಾತ್ರ ಸಮಜಾಯಿಷಿ ನೀಡಿದರು. ಬಲವಾದ ಪಶ್ಚಿಮ ಮಾರುತಗಳು ಮತ್ತು ಆ ಪ್ರದೇಶದಲ್ಲಿನ ಮೋಡದ ರಚನೆಗೆ ಸಂಬಂಧಿಸಿದ ಮಾನದಂಡಗಳನ್ನು ಪರಿಗಣಿಸಿ ಈ ಮುನ್ಸೂಚನೆ ನೀಡಲಾಗಿತ್ತು. ಕೇರಳದ ಶೇ 70ರಷ್ಟು ಹವಾಮಾನ ಕೇಂದ್ರಗಳು ವ್ಯಾಪಕ ಮಳೆಯಾದ ಬಗ್ಗೆ ವರದಿ ಮಾಡಿವೆ. ನೈರುತ್ಯ ಮುಂಗಾರು ಕೇರಳ ಪ್ರವೇಶಿಸುವುದು ಜೂನ್ 1 ವಾಡಿಕೆಯಾಗಿತ್ತು. ಮೂರು ದಿನ ಮುಂಚಿತವಾಗಿ ಮೇ 29ರಂದೇ ಪ್ರವೇಶಿಸಿದೆ ಎಂದು ಹೇಳಿದರು.

ಮುಂಗಾರುಗೆ ಅನುಕೂಲಕರ ವಾತಾವರಣ

ಭಾರತದ ಮುಂಗಾರು ಪ್ರಯೋಜನಕಾರಿಯಾದ ಪೆಸಿಫಿಕ್ ಮಹಾಸಾಗರದ ತಂಪಾಗಿಸುವಿಕೆ, ಚಾಲ್ತಿಯಲ್ಲಿರುವ ಲಾ ನಿನಾ ಪರಿಸ್ಥಿತಿಗಳು ಮುಂಗಾರು ಋತುವಿನಲ್ಲಿ ಮುಂದುವರಿಯುವ ಸಾಧ್ಯತೆಯಿದೆ. ಮತ್ತೊಂದು ಹವಾಮಾನ ಮುನ್ಸೂಚನೆಯ ಮಾನದಂಡ, ಅಂದರೆ ಹಿಂದೂ ಮಹಾಸಾಗರದ ದ್ವಿಧ್ರುವ ಮತ್ತು ಬಂಗಾಳ ಕೊಲ್ಲಿ ನಡುವಿನ ತಾಪಮಾನದ ಏರಿಳಿತ ಈ ವರ್ಷ ಉತ್ತಮ ಮುಂಗಾರಿಗೆ ಅನುಕೂಲಕರವಾಗಿ ಬದಲಾಗುವ ಸಾಧ್ಯತೆಯಿದೆ. ಇದನ್ನು ಗಮನಿಸಿ ಹವಾಮಾನ ಮುನ್ಸೂಚನೆ ಪರಿಷ್ಕರಿಸಲಾಗಿದೆ ಎಂದು ಐಎಂಡಿ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಹೇಳಿದರು.

ನೈರುತ್ಯ ಮುಂಗಾರು ಕರ್ನಾಟಕ, ತಮಿಳುನಾಡು, ಕೊಂಕಣ ಮತ್ತು ಗೋವಾ, ಈಶಾನ್ಯ ರಾಜ್ಯಗಳು ಮತ್ತು ಹಿಮಾಲಯದ ಕೆಲವು ಭಾಗಗಳಿಗೆ ತಲುಪಲು ಪರಿಸ್ಥಿತಿಯು ಅನುಕೂಲಕರವಾಗಿದೆ. ಮುಂದಿನ ಎರಡು–ಮೂರು ದಿನಗಳಲ್ಲಿ ಪಶ್ಚಿಮ ಬಂಗಾಳ ಮತ್ತು ಸಿಕ್ಕಿಂಗೆ ಮುಂಗಾರು ಪ್ರವೇಶಿಸಲಿದೆ ಎಂದು ಅವರು ಮಾಹಿತಿ ನೀಡಿದರು.

ಕೇರಳ ಒಳಗೊಂಡ ನೈರುತ್ಯ ಪರ್ಯಾಯ ದ್ವೀಪದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಬಹುದು. ಜಮ್ಮು ಮತ್ತು ಕಾಶ್ಮೀರ, ಲಡಾಖ್, ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶ ಹೊರತುಪಡಿಸಿ ದೇಶದ ಹೆಚ್ಚಿನ ಭಾಗಗಳಲ್ಲಿ ಜೂನ್‌ನಲ್ಲಿ ಸಾಮಾನ್ಯ ಗರಿಷ್ಠ ತಾಪಮಾನಕ್ಕಿಂತ ಕಡಿಮೆ ತಾಪಮಾನಕ್ಕೆ ಸಾಕ್ಷಿಯಾಗಲಿವೆ ಎಂದು ಮಹಾಪಾತ್ರ ಹೇಳಿದರು.

ಸುದ್ದಿ 2 ನಿಮಿಷ

ಹಾರ್ದಿಕ್ ಪಟೇಲ್ ನಾಳೆ ಬಿಜೆಪಿಗೆ

ಅಹಮದಾಬಾದ್ (ಪಿಟಿಐ): ಕಾಂಗ್ರೆಸ್ ಪಕ್ಷದ ಗುಜರಾತ್ ಘಟಕದ ಮಾಜಿ ಕಾರ್ಯಾಧ್ಯಕ್ಷ ಹಾಗೂ ಪಾಟೀದಾರ್ ಮೀಸಲಾತಿ ಆಂದೋಲನದ ನಾಯಕ ಹಾರ್ದಿಕ್ ಪಟೇಲ್ ಅವರು ಜೂನ್ 2ರಂದು ಬಿಜೆಪಿ ಸೇರಲಿದ್ದಾರೆ.

ಪಕ್ಷದ ಗುಜರಾತ್ ಘಟಕ ಅಧ್ಯಕ್ಷ ಸಿ.ಆರ್. ಪಾಟೀಲ್ ಅವರ ಸಮ್ಮುಖದಲ್ಲಿ ಹಾರ್ದಿಕ್ ಪಕ್ಷ ಸೇರಲಿದ್ದಾರೆ ಎಂದು ಬಿಜೆಪಿಯ ವಕ್ತಾರ ಯಜ್ಞೇಶ್ ದವೆ ಮಂಗಳವಾರ ತಿಳಿಸಿದ್ದಾರೆ.

ಎರಡು ದಶಕಗಳಿಂದ ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ರಾಜ್ಯದಲ್ಲಿ ಈ ವರ್ಷಾಂತ್ಯದ ವೇಳೆಗೆ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಈ ಬೆಳವಣಿಗೆ ನಡೆದಿದೆ. ಹಾರ್ದಿಕ್ ಬಿಜೆಪಿ ಸೇರಿ ಪಕ್ಷವನ್ನು ಮತ್ತಷ್ಟು ಬಲಪಡಿಸಲಿದ್ದಾರೆ ಎಂದು ಅವರು ಹೇಳಿದ್ದಾರೆ.

'ಪಕ್ಷ ಸೇರ್ಪಡೆ ನಂತರ, ಪಾಟೀದಾರ್ ಸಮಾಜ ಮತ್ತು ಸಮುದಾಯದ ಹಲವರ ವಿರುದ್ಧದ ಪ್ರಕರಣಗಳನ್ನು ರಾಜ್ಯ ಸರ್ಕಾರ ಹಿಂಪಡೆಯುವುದನ್ನು ಖಾತ್ರಿಪಡಿಸಬೇಕು. ಪಾಟೀದಾರ್ ಮೀಸಲಾತಿ ಹೋರಾಟದಲ್ಲಿ ಮೃತಪಟ್ಟವರ ಕುಟುಂಬದವರಿಗೆ ಉದ್ಯೋಗ ನೀಡಬೇಕು' ಎಂದು ಹಾರ್ದಿಕ್ ಪಟೇಲ್ ಅವರ ಆಪ್ತ ಸಹಾಯಕ ಅಲ್ಪೇಶ್ ಕಥಿರಿಯಾ ಒತ್ತಾಯಿಸಿದ್ದಾರೆ.

ಹೊಸ ಫಾರ್ಮಸಿ ಕಾಲೇಜು: ಅರ್ಜಿಗಳ ಪ್ರಕ್ರಿಯೆಗೆ 'ಸುಪ್ರೀಂ' ಸೂಚನೆ

ನವದೆಹಲಿ: ಹೊಸದಾಗಿ ಫಾರ್ಮಸಿ ಕಾಲೇಜುಗಳನ್ನು ಆರಂಭಿಸುವ ಕುರಿತು ಬರುವ ಅರ್ಜಿಗಳನ್ನು ಸ್ವೀಕರಿಸಿ ಮತ್ತು ಪ್ರಕ್ರಿಯೆಗೆ ಚಾಲನೆ ನೀಡುವಂತೆ ಸುಪ್ರೀಂಕೋರ್ಟ್ 'ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ'ಗೆ (ಪಿಸಿಐ) ಸೂಚಿಸಿದೆ.

ದೇಶದಾದ್ಯಂತ ವಿವಿಧ ಕ್ಷೇತ್ರಗಳಲ್ಲಿ ನಾಯಿಕೊಡೆಗಳಂತೆ ಬೆಳೆಯುತ್ತಿರುವ ಖಾಸಗಿ ಕಾಲೇಜುಗಳ ಕುರಿತು ಸುಪ್ರೀಂಕೋರ್ಟ್ ಇದೇ ವೇಳೆ ಕಳವಳ ವ್ಯಕ್ತಪಡಿಸಿದೆ. 'ಶಿಕ್ಷಣವು ಉದ್ಯಮವಾಗಿರುವುದು ಎಲ್ಲರಿಗೂ ತಿಳಿದಿದೆ. ಈ ಕ್ಷೇತ್ರದಲ್ಲಿ ದೊಡ್ಡ ವ್ಯಾಪಾರ ಸಂಸ್ಥೆಗಳೇ ತೊಡಗಿಕೊಂಡಿವೆ' ಎಂದು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಹಿಮಾ ಕೊಹ್ಲಿ ಅವರ ಪೀಠ ಅಸಮಾಧಾನ ವ್ಯಕ್ತಪಡಿಸಿತು.

ಪಿಸಿಐ ಪರವಾಗಿ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಹೊಸ ಕಾಲೇಜುಗಳನ್ನು ತೆರೆಯಲು ವಿಧಿಸಲಾಗಿರುವ ನಿಷೇಧವನ್ನು ಸಮರ್ಥಿಸಿಕೊಂಡರು. 'ಫಾರ್ಮಸಿ ಕಾಲೇಜುಗಳು ನಾಯಿಕೊಡೆಗಳಂತೆ ಹೆಚ್ಚಾಗಿದ್ದು, ಶೈಕ್ಷಣಿಕ ಸಂಸ್ಥೆಗಳ ಹೆಸರಿನಲ್ಲಿ ಉದ್ಯಮ ನಡೆಸುತ್ತಿದ್ದಾರೆ' ಎಂದು ದೂರಿದರು. ಕೆಲವು ಕಾಲೇಜುಗಳಂತೂ ಸಣ್ಣ ಅಂಗಡಿಗಳಂತೆ ನಡೆಯುತ್ತಿದ್ದವು. ಅವುಗಳನ್ನು ಮುಚ್ಚಿಸಲಾಗಿದೆ ಎಂದೂ ಅವರು ಹೇಳಿದರು.

ಫಾರ್ಮಸಿ ಕಾಲೇಜುಗಳ ಪರ ವಾದಿಸಿದ ವಕೀಲರು, ನಿಷೇಧದ ಕಾರಣ ಮೂರು ವರ್ಷಗಳನ್ನು ಕಳೆದುಕೊಂಡಿದ್ದೇವೆ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೆಹ್ತಾ ಅವರು, 'ಇದನ್ನು ವಿದ್ಯಾರ್ಥಿಗಳು ಹೇಳಿದರೆ ಸರಿಯಿರುತ್ತದೆ, ಆದರೆ ಉದ್ಯಮಗಳಾಗಿರುವ ಕಾಲೇಜುಗಳು ಹೇಳುವುದು ಸರಿಯಲ್ಲ' ಎಂದರು.

ವಾದ, ಪ್ರತಿವಾದ ಆಲಿಸಿದ ಬಳಿಕ ಪೀಠವು, 'ಹೈಕೋರ್ಟ್‌ನಲ್ಲಿ ಅರ್ಜಿದಾರರಾಗಿರುವವರ ಅರ್ಜಿಗಳನ್ನು ಸ್ವೀಕರಿಸಲು ಮತ್ತು ಪ್ರಕ್ರಿಯೆ ಆರಂಭಿಸಲು ನಾವು ಪಿಸಿಐಗೆ ನಿರ್ದೇಶಿಸುತ್ತೇವೆ' ಎಂದಿತು. ವಿಚಾರಣೆಯನ್ನು ಜುಲೈ 26ಕ್ಕೆ ನಿಗದಿಪಡಿಸಿತು.

'ಮೂಲಭೂತವಾದಿ ಶಕ್ತಿಗಳಿಂದ ಮೀಸಲಿಗೆ ಅಪಾಯ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಮೂಲಭೂತವಾದಿ ಶಕ್ತಿಗಳು ಅಧಿಕಾರದಲ್ಲಿ ಮುಂದುವರಿದರೆ ಮೀಸಲಾತಿ ರದ್ದುಪಡಿಸುವ ಅಪಾಯವಿದೆ. ಇದರ ವಿರುದ್ಧದ ಹೋರಾಟಕ್ಕೆ ಭೀಮ ಪರಿವಾರ ಸಜ್ಜಾಗಬೇಕಿದೆ' ಎಂದು ಸಂಗೀತ ನಿರ್ದೇಶಕ ಹಂಸಲೇಖ ಮಂಗಳವಾರ ಸಲಹೆ ನೀಡಿದರು.

ಇಲ್ಲಿನ ಮುರುಘಾಮಠದ ಅನುಭವ ಮಂಟಪದಲ್ಲಿ ಶಿವಶರಣ ಹರಳಯ್ಯ ಗುರುಪೀಠ ಏರ್ಪಡಿಸಿದ್ದ ಸಮಾರಂಭದಲ್ಲಿ 'ಶ್ರೀ ಮಹಾಶಿವಶರಣ ಹರಳಯ್ಯ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದರು.

'ಮೂಲಭೂತ ಶಕ್ತಿಗಳು ಪಿತೂರಿ ಮಾಡುವುದನ್ನು ಕೈಬಿಡಬೇಕು. ಭೀಮ ಪರಿವಾರ ಜಾಗೃತವಾಗಿದೆ. ನಮ್ಮನ್ನು ಅಲುಗಾಡಿಸಲು ಆಗದು. ಒಂದು ಸತ್ಯ ಮಾತನಾಡಿದ್ದಕ್ಕೆ ನನ್ನಿಂದ ಕ್ಷಮೆ ಕೇಳಿಸಲಾಯಿತು. ಭೀಮ ಪರಿವಾರದ ಶಕ್ತಿಯೂ ಆಗ ಪ್ರದರ್ಶನಗೊಂಡಿತು' ಎಂದು ಹೇಳಿದರು.

ತೋಂಟದಾರ್ಯ ಮಠದ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, 'ಬಸವಣ್ಣನವರನ್ನು ಕಲ್ಯಾಣದಿಂದ ಓಡಿಸಿದ್ದು ಮುಸ್ಲಿಮರು, ಕ್ರೈಸ್ತರಲ್ಲ. ಇದೇ ಸಂಪ್ರದಾಯವಾದಿಗಳು ಬಸವಣ್ಣನವರಿಗೆ ಕಿರುಕುಳ ನೀಡಿದ್ದರು. ಬಸವಣ್ಣ ಮಾಡಿದ ತಪ್ಪಾದರೂ ಏನು' ಎಂದು ಪ್ರಶ್ನಿಸಿದರು.

'ಇತ್ತೀಚೆಗೆ ರಾಜಕಾರಣಿಗಳು ಯುವಕರ ಕೈಗೆ ಕತ್ತಿ, ಹತಾರ ನೀಡುತ್ತಿರುವುದನ್ನು ಕಾಣುತ್ತಿದ್ದೇವೆ. ಇಂತಹ ಶಿಬಿರಗಳು ದೇಶದ ಎಲ್ಲೆಡೆ ನಡೆಯುತ್ತಿವೆ. ಯುವಕರಿಗೆ ಧರ್ಮದ ಅಫೀಮಿನ ಧ್ವಜ ಕೊಡಬೇಡಿ. ಕಾಯಕ ಪ್ರಜ್ಞೆ, ದುಡಿಯುವ ಪೆನ್ನು ನೀಡಿ' ಎಂದು ಹೇಳಿದರು.

ಸಮಾರಂಭದಲ್ಲಿ ಬಸವ ವಾಹಿನಿಯ ಮುಖ್ಯಸ್ಥ ಕೃಷ್ಣಪ್ಪ ಅವರಿಗೆ 'ಶೀಲವಂತ ಪ್ರಶಸ್ತಿ', ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿಗೆ 'ಮಧುವರಸ ಪ್ರಶಸ್ತಿ', ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ ₹25 ಸಾವಿರ ನಗದು ಪುರಸ್ಕಾರದೊಂದಿಗೆ 'ಹರಳಯ್ಯ ಪ್ರಶಸ್ತಿ' ಹಾಗೂ ಅಮೃತ್ ಆರ್ಕ್ಯಾನಿಕ್ಸ್ ಸಂಸ್ಥೆ ಸಂಸ್ಥಾಪಕ ನಾಗರಾಜ ಅವರಿಗೆ 'ಶ್ರೀಹರಳಯ್ಯ ಯುವ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಮಾಜಿ ಸಚಿವ ಎಚ್.ಆಂಜನೇಯ, ಹರಳಯ್ಯ ಸ್ವಾಮೀಜಿ, ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು, ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ವಿಧಾನಪರಿಷತ್ ಸದಸ್ಯ ಕೆ.ಎಸ್.ನವೀನ್, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ಇದ್ದಾರೆ.

'ರಾಕೇಶ್ ಟಿಕಾಯತ್ ಮೇಲಿನ ದಾಳಿ ಪೂರ್ವನಿಯೋಜಿತ'

ಮೈಸೂರು: 'ರೈತ ಮುಖಂಡ ರಾಕೇಶ್ ಟಿಕಾಯತ್ ಅವರ ಮೇಲಿನ ದಾಳಿ ಪೂರ್ವಯೋಜಿತ. ಇದು ಕರ್ನಾಟಕದ ರಾಜಕೀಯ ಆರೋಗ್ಯಕ್ಕೆ ಒಳ್ಳೆಯದಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಅಖಿಲ ಭಾರತ ಕಿಸಾನ್ ಸಭಾ ರಾಜ್ಯಘಟಕದ ಅಧ್ಯಕ್ಷ ಸಿದ್ಧನಗೌಡ ಪಾಟೀಲ ಒತ್ತಾಯಿಸಿದರು.

ಮಂಗಳವಾರ ಅಖಿಲ ಭಾರತ ಕಿಸಾನ್ ಸಭಾ, ಎಐಟಿಯುಸಿ, ಸಿಪಿಐ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಅವರು, 'ಆರ್‌ಎಸ್‌ಎಸ್, ಬಿಜೆಪಿಯನ್ನು ಟೀಕಿಸುವವರ ವಿರುದ್ಧ ಶ್ರೀರಾಮಸೇನೆ, ಬಜರಂಗದಳ, ಭಾರತ ರಕ್ಷಣಾ ವೇದಿಕೆಯಂಥ ಅನೇಕ ಸಂಘಟನೆಗಳು ದಾಳಿ ನಡೆಸುತ್ತಿವೆ.' ಎಂದು ದೂರಿದರು.

ಅಧ್ಯಕ್ಷ ಸ್ಥಾನದಿಂದ ಕೋಡಿಹಳ್ಳಿ ಚಂದ್ರಶೇಖರ್ ವಜಾ, ತನಿಖೆಗೆ ಸಮಿತಿ

ಎಚ್.ಆರ್.ಬಸವರಾಜಪ್ಪ ರೈತ ಸಂಘದ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಭ್ರಷ್ಟಾಚಾರ ಆರೋಪಗಳ ಹಿನ್ನೆಲೆಯಲ್ಲಿ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ರೈತ ಸಂಘದ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿರುವ ಪದಾಧಿಕಾರಿಗಳು, ಅವರ ಸ್ಥಾನದಲ್ಲಿ ಎಚ್.ಆರ್. ಬಸರಾಜಪ್ಪ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದಾರೆ.



ಎಚ್.ಆರ್. ಬಸವರಾಜಪ್ಪ

ಮಂಗಳವಾರ ಶಿವಮೊಗ್ಗದಲ್ಲಿ ತುರ್ತು ಸಭೆ ನಡೆಸಿದ ರೈತ ಸಂಘದ ಜಿಲ್ಲಾ ಪದಾಧಿಕಾರಿಗಳು, ರಾಜ್ಯ ಸಮಿತಿ ಮುಖಂಡರು ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ವಜಾಗೊಳಿಸುವ ಒಮ್ಮತದ ನಿರ್ಧಾರ ತೆಗೆದುಕೊಂಡರು.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಚ್.ಆರ್. ಬಸವರಾಜಪ್ಪ, 'ಕೋಡಿಹಳ್ಳಿ ಚಂದ್ರಶೇಖರ್ ಹೊರಗಿಟ್ಟು ಸಂಘಟನೆ ಬಲಪಡಿಸುತ್ತೇವೆ. ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಸತ್ಯಶೋಧನಾ ಸಮಿತಿ ರಚಿಸಲಾಗಿದೆ. ಮುಂದಿನ ದಿನಗಳಲ್ಲಿ ಹೊಸ ಪದಾಧಿಕಾರಿಗಳನ್ನು ನೇಮಿಸಿ ರೈತ ಸಂಘಟನೆ ಬಲಪಡಿಸುತ್ತೇವೆ' ಎಂದು ಪ್ರಕಟಿಸಿದರು.

'ರೈತ ಸಂಘದ ಮೂಲ ಸ್ಥಾಪಕರಾದ ಎಚ್.ಎಸ್.ರುದ್ರಪ್ಪ, ಡಾ.ಚಿಕ್ಕಸ್ವಾಮಿ, ಕಡಿದಾಳ್ ಶಾಮಣ್ಣ, ಎನ್.ಡಿ. ಸುಂದರೇಶ್, ಪ್ರೊ.ನಂಜುಂಡಸ್ವಾಮಿ ಅವರ ತತ್ವ–ಸಿದ್ಧಾಂತ, ಆಶಯಗಳಂತೆ ಸಂಘಟನೆ ಮುನ್ನಡೆಸಲಾಗುವುದು. ಯಾವುದೇ ಬ್ಯಾನರ್‌ಗಳಲ್ಲಿ ಅಧ್ಯಕ್ಷರ ಫೋಟೊ ಬಳಸುವುದಿಲ್ಲ. ಸಂಸ್ಥಾಪಕ ನಾಯಕರ ಫೋಟೊಗಳನ್ನಷ್ಟೇ ಬಳಸುತ್ತೇವೆ' ಎಂದು ಹೇಳಿದರು.

'ಇದೇ ಮೊದಲ ಬಾರಿಗೆ ರೈತ ಸಂಘದ ಅಧ್ಯಕ್ಷರನ್ನು ವಜಾ ಮಾಡಲಾಗಿದೆ. ಸತ್ಯಶೋಧನಾ ಸಮಿತಿ ತನಿಖೆ ನಂತರ ಆರೋಪ ಸಾಬೀತಾದರೆ ಸಂಘಟನೆಯಿಂದಲೇ ಉಚ್ಚಾಟಿಸಲಾಗುವುದು. ಹಿಂದೆ ರಾಜಕಾರಣಿಗಳು ಆಪಾದನೆ ಬಂದಾಗ ರಾಜೀನಾಮೆ ಕೊಟ್ಟಿದ್ದರು. ಕೋಡಿಹಳ್ಳಿ ಸಹ ಆರೋಪ ಕೇಳಿ ಬಂದಾಗ ರಾಜೀನಾಮೆ ಕೊಡಬೇಕಿತ್ತು. ಹಾಗೆ ಮಾಡಿದ್ದರೆ ವಜಾ ಮಾಡುವ ಪ್ರಮೇಯ ಬರುತ್ತಿರಲಿಲ್ಲ' ಎಂದು ಹೇಳಿದರು.

'ರಾಜ್ಯದ ಎಲ್ಲ ರೈತ ಸಂಘಟನೆಗಳನ್ನು ಒಗ್ಗೂಡಿಸುವ ಪ್ರಯತ್ನಕ್ಕೆ ಚಾಲನೆ ನೀಡಲಾಗುವುದು. ಎಲ್ಲರೂ ಒಗ್ಗೂಡಿದರೆ ಅಧ್ಯಕ್ಷ ಸ್ಥಾನ ಬಿಟ್ಟುಕೊಡಲು ಸಿದ್ಧ' ಎಂದು ಭರವಸೆ ನೀಡಿದರು.

ರೈತ ನಾಯಕ ರಾಕೇಶ್ ಟಿಕಾಯತ್ ಅವರ ಮೇಲೆ ಮಸಿ ಬಳಿದು ಹಲ್ಲೆಗೆ ಯತ್ನಿಸಿರುವುದು ಖಂಡನೀಯ. ಸರ್ಕಾರ ಆರೋಪಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರೈತ ಸಂಘದ ಮುಖಂಡರಾದ ಡಾ.ಚಿಕ್ಕಸ್ವಾಮಿ, ಹಿಟ್ಟೂರು ರಾಜು, ಶಶಿಕಾಂತ್ ಪಡಸಲಗಿ, ಸಿದ್ದವೀರಪ್ಪ, ಕುರುವ ಗಣೇಶ್, ಟಿ.ಎಂ. ಚಂದ್ರಪ್ಪ, ನಿಂಗಪ್ಪ, ಸಿದ್ದವೀರಪ್ಪ, ಸುಭಾಷ್, ಬಸವನಗೌಡ ಪಾಟೀಲ್, ದುಗ್ಗಪ್ಪಗೌಡ, ಅಗ್ನಿ ಶಿವಪ್ಪ ಉಪಸ್ಥಿತರಿದ್ದರು.

ಪದಚ್ಯುತಿಗೆ ಅಧಿಕಾರವಿಲ್ಲ: ಕೋಡಿಹಳ್ಳಿ

ಬೆಂಗಳೂರು: 'ಶಿವಮೊಗ್ಗದಲ್ಲಿ ಸಭೆ ನಡೆಸಿದವರಿಗೂ ನಮ್ಮ ರೈತ ಸಂಘಕ್ಕೂ ಸಂಬಂಧವೇ ಇಲ್ಲ. ನನ್ನನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸುವ ಅಧಿಕಾರ ಅವರಿಗೆ ಇಲ್ಲ' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಶಿವಮೊಗ್ಗದಲ್ಲಿ ಸಭೆ ನಡೆದಿರುವುದು ಸಾಮೂಹಿಕ ನಾಯಕತ್ವದ ರೈತ ಸಂಘದ್ದು. ನಮ್ಮ ಸಂಘಟನೆಯ ನಾಯಕರು ಅವರಲ್ಲ. ನನ್ನನ್ನು ಉಚ್ಚಾಟನೆ ಮಾಡಲು ಅವರು ಯಾರು' ಎಂದು ಪ್ರಶ್ನಿಸಿದರು.

'ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರು ಕಟ್ಟಿದ ರೈತ ಸಂಘದ ಅಧ್ಯಕ್ಷನಾಗಿ ನಾನು ಕೆಲಸ ಮಾಡುತ್ತಿದ್ದೇನೆ. ಎಲ್ಲಮ ಪದಾಧಿಕಾರಿಗಳು ಮತ್ತು ರೈತರ ಬೆಂಬಲ ನನಗಿದೆ. ನನ್ನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವ ಅಧಿಕಾರ ಇರುವುದು ರೈತರಿಗೆ ಮಾತ್ರ. ನಾನೇ ರೈತ ಸಂಘದ ಅಧ್ಯಕ್ಷನಾಗಿ ಮುಂದುವರಿಯುತ್ತೇನೆ. ಚೋಣಪ್ಪ ಪೂಜಾರಿ ಅಧ್ಯಕ್ಷರಾಗಿದ್ದ ಸಾಮೂಹಿಕ ನಾಯಕತ್ವದ ರೈತ ಸಂಘಕ್ಕೆ ಎಚ್.ಆರ್. ಬಸವರಾಜಪ್ಪ ಅಧ್ಯಕ್ಷರಾಗಬಹುದು' ಎಂದರು.

'ನಾನು ಅಧಿಕಾರ ದುರ್ಬಳಕೆ ಮಾಡಿಕೊಂಡಿಲ್ಲ. ಅಧಿಕಾರ ದುರ್ಬಳಕೆ ಸಾಬೀತುಪಡಿಸಿದರೆ ಚಳವಳಿಗಳಲ್ಲಿ ಭಾಗವಹಿಸುವುದಿಲ್ಲ. ಹಸಿರು ಟವೆಲ್ ಧರಿಸುವುದಿಲ್ಲ. ಕರ್ನಾಟಕ ರಾಜ್ಯ ರೈತ ಸಂಘ ಸಂಸ್ಥಾಪಕರಲ್ಲಿ ನಾನು ಒಬ್ಬನಾಗಿದ್ದೇನೆ. ಆರೋಪ ಮಾಡಿದ ತಕ್ಷಣ ಅಪರಾಧಿಯಾಗುವುದಿಲ್ಲ. ಆರೋಪದ ಕುರಿತು ತನಿಖೆ ನಡೆಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದೇನೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಕೆಪಿಸಿಸಿ: ದಿನೇಶ್ ಗೂಳಿಗೌಡ ನೇಮಕ

ಬೆಂಗಳೂರು: ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರನ್ನು ಕೆಪಿಸಿಸಿ ಮಾಧ್ಯಮ ಸಂಯೋಜಕರನ್ನಾಗಿ ನೇಮಿಸಲಾಗಿದೆ.

'ಪಕ್ಷದ ಮಾಧ್ಯಮ ವಿಭಾಗದಲ್ಲಿ ತಕ್ಷಣದಿಂದಲೇ ಈ ಹೊಸ ಜವಾಬ್ದಾರಿ ವಹಿಸಿಕೊಂಡು ಕಾರ್ಯನಿರ್ವಹಿಸಬೇಕು' ಎಂದು ನೇಮಕಾತಿ ಆದೇಶದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ.

ಅಶುದ್ಧ ನೀರು ಸೇವನೆ: ಮಹಿಳೆ ಸಾವು, 63 ಜನರು ಅಸ್ವಸ್ಥ

ರಾಯಚೂರು: ನಗರದಲ್ಲಿ ಕಲುಷಿತ ಕುಡಿಯುವ ನೀರು ಕುಡಿದು ವಾಂತಿ-ಭೇದಿಯಾಗಿ ಮಹಿಳೆಯೊಬ್ಬರು ಮೃತಪಟ್ಟಿದ್ದು, 63ಕ್ಕೂ ಹೆಚ್ಚು ಜನರು ಅಸ್ವಸ್ಥರಾಗಿ ವಿವಿಧ ಆಸ್ಪತ್ರೆಗಳಿಗೆ ಮಂಗಳವಾರ ದಾಖಲಾಗಿದ್ದಾರೆ.

'ಇಂದಿರಾನಗರದ ನಿವಾಸಿ ಮಲ್ಲಮ್ಮ ಮುದುಕಪ್ಪ (40) ನಿರ್ಜಲೀಕರಣದಿಂದ ಮೃತಪಟ್ಟಿದ್ದು, 63ಕ್ಕು ಹೆಚ್ಚು ಜನರು ನಿರ್ಜಲೀಕರಣ, ವಾಂತಿ, ಭೇದಿ ಕಾರಣಕ್ಕೆ ಆಸ್ಪತ್ರೆ ಸೇರಿದ್ದಾರೆ. ಅನಾರೋಗ್ಯಕ್ಕೆ ಒಳಗಾದವರಲ್ಲಿ 23 ಮಕ್ಕಳಿದ್ದಾರೆ' ಎಂದು ರಿಮ್ಸ್ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ರೋಟರ್‌ಗೆ ಸಿಲುಕಿದ ಚಾಲಕನ ದೇಹ ಛಿದ್ರ

ಮಂಚೇನಹಳ್ಳಿ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಕಡಬೂರು ಗ್ರಾಮದಲ್ಲಿ ಜಮೀನು ಉಳುಮೆ ಮಾಡುವಾಗ ಚಾಲಕ, ಕಾಮಗಾನಹಳ್ಳಿಯ ನಾರಾಯಣಸ್ವಾಮಿ ಆಯತಪ್ಪಿ ಬಿದ್ದು ಟ್ರ್ಯಾಕ್ಟರ್ ರೋಟರ್‌ಗೆ ಸಿಲುಕಿದ್ದು, ದೇಹ ಛಿದ್ರವಾಗಿದೆ.

ಕಡಬೂರು ಗ್ರಾಮದ ಶ್ರೀರಾಮರೆಡ್ಡಿ ಎಂಬುವರ ಹೊಲದ ಉಳುಮೆ ಮಾಡಲು ಹೋಗಿದ್ದರು. ರೋಟರ್‌ಗೆ ಸಿಲುಕಿ ಅವರ ದೇಹ ಎರಡು ತುಂಡಾಗಿದೆ. ನಾರಾಯಣಸ್ವಾಮಿ ಅವರ ಪತ್ನಿ ರೂಪಾ ಈ ಸಂಬಂಧ ಮಂಚೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಶ್ರೀರಂಗಪಟ್ಟಣ: 'ಮೂಲ ಮಂದಿರ ಚಲೋ' 4ಕ್ಕೆ

ಮಂಡ್ಯ: 'ಮೂಡಲಬಾಗಿಲು ಆಂಜನೇಯನ ದೇವಾಲಯವಾಗಿದ್ದ ಶ್ರೀರಂಗಪಟ್ಟಣದ ಜಾಮಿಯಾ ಮಸೀದಿಯಲ್ಲಿ ಹನುಮನ ಪೂಜೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಜೂನ್ 4ರಂದು 'ಮೂಲ ಮಂದಿರ ಚಲೋ' ನಡೆಸಲಾಗುವುದು' ಎಂದು ವಿಶ್ವ ಹಿಂದೂ ಪರಿಷತ್, ಬಜರಂಗದಳ ಮುಖಂಡರು ತಿಳಿಸಿದ್ದಾರೆ.

'ರಾಜ್ಯದ ವಿವಿಧೆಡೆಯಿಂದ ಸಾವಿರಾರು ಹನುಮ ಭಕ್ತರು ಅಂದು ಬೆಳಿಗ್ಗೆ 10.30ಕ್ಕೆ ಮಸೀದಿಯಾಗಿರುವ ಮೂಲ ಮಂದಿರ ಪ್ರವೇಶ ಮಾಡಲಿದ್ದಾರೆ. ದೇವಾಲಯವನ್ನು ಕೆಡವಿ ಟಿಪ್ಪು ಸುಲ್ತಾನ್ ಮಸೀದಿ ನಿರ್ಮಿಸಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಮಂದಿರವನ್ನು ಅತಿಕ್ರಮಣ ಮಾಡಿ, ನಮಾಜ್ ಮಾಡಲಾಗುತ್ತಿದೆ. ಅತಿಕ್ರಮಣಕಾರರನ್ನು ಕೂಡಲೇ ಹೊರಹಾಕಬೇಕು ಎಂದು ಒತ್ತಾಯಿಸಲಾಗುವುದು' ಎಂದಿದ್ದಾರೆ.

ದೆಹಲಿ ಮುಖ್ಯಮಂತ್ರಿ ರಾಜೀನಾಮೆಗೆ ಬಿಜೆಪಿ ಆಗ್ರಹ

'ಸತ್ಯೇಂದ್ರ ಮೇಲಿನ ಆರೋಪ ರಾಜಕೀಯ ಪ್ರೇರಿತ'

ನವದೆಹಲಿ (ಪಿಟಿಐ): ದೆಹಲಿಯ ಸಚಿವ ಸತ್ಯೇಂದ್ರ ಜೈನ್ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಬಂಧಿಸಿರುವ ಕುರಿತು ಮಂಗಳವಾರ ಮೌನ ಮುರಿದಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, 'ಜೈನ್ ಮೇಲಿನ ಆರೋಪವು ಸುಳ್ಳಾಗಿದ್ದು, ರಾಜಕೀಯ ಪ್ರೇರಿತವಾಗಿದೆ' ಎಂದಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿ ಪರಿಶೀಲನೆ ವೇಳೆ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಜೈನ್ ಅವರ ವಿರುದ್ಧದ ಆರೋಪ ಪ್ರಕರಣವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದ್ದೇನೆ. ಅವರ ವಿರುದ್ಧ ಉದ್ದೇಶಪೂರ್ವಕವಾಗಿ ಸುಳ್ಳು ಆರೋಪ ಮಾಡಲಾಗಿದೆ. ಆಮ್ ಆದ್ಮಿ ಪಕ್ಷವು ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದೆ' ಎಂದು ಪ್ರತಿಪಾದಿಸಿದರು.

'ನಮಗೆ ನ್ಯಾಯಾಂಗದಲ್ಲಿ ನಂಬಿಕೆ ಇದೆ. ಜೈನ್ ಅವರು ಶುದ್ಧಹಸ್ತರಾಗಿ ವಾಪಸ್ ಬರುತ್ತಾರೆ. ಸುಳ್ಳು ಪ್ರಕರಣವು ದೀರ್ಘ ಕಾಲ ನಿಲ್ಲುವುದಿಲ್ಲ' ಎಂದರು.

ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಜೈನ್ ಅವರನ್ನು ಸಂಪುಟದಿಂದ ವಜಾಗೊಳಿಸಲು ಆಗ್ರಹಿಸುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ 'ಅವರು ಏನು ಬೇಕಾದರೂ ಹೇಳುತ್ತಾರೆ. ಅದರಲ್ಲಿ ಶೇಕಡ ಒಂದಾದರೂ ಅಂಶವಿದ್ದರೆ ಸಾಕು ನಾನು ಕ್ರಮ ತೆಗೆದುಕೊಳ್ಳುತ್ತಿದ್ದೆ' ಎಂದು ಉತ್ತರಿಸಿದರು.

'ಪಂಜಾಬ್ ವಿಧಾನಸಭಾ ಚುನಾವಣೆಗೂ ಮುನ್ನವೇ ಜನವರಿಯಲ್ಲಿ ಜೈನ್ ಅವರನ್ನು ಇ.ಡಿ ಬಂಧಿಸಬಹುದು ಎಂದು ಕೆಲ ಮೂಲಗಳಿಂದ ತಿಳಿದುಕೊಂಡಿದ್ದೆ. ಆಮ್ ಆದ್ಮಿ ಪಕ್ಷವು ಭ್ರಷ್ಟಾಚಾರದ ದೂರುಗಳ ಬಗ್ಗೆ ಗಮನ ಹರಿಸಿದ್ದು, ಯಾವುದೇ ತನಿಖಾ ಸಂಸ್ಥೆಗಳ ಕಾರ್ಯಾಚರಣೆಗೂ ಮುನ್ನವೇ ಅಂಥವರನ್ನು ಸಚಿವ ಸಂಪುಟದಿಂದ ಕಿತ್ತು ಹಾಕಿದೆ. ಆದರೆ, ಕೇಂದ್ರದ ಕೈಗೊಂಬೆಗಳಾಗಿರುವ ತನಿಖಾ ಸಂಸ್ಥೆಗಳು ರಾಜಕೀಯ ಪ್ರೇರಿತವಾಗಿವೆ' ಎಂದು ಅವರು ದೂರಿದ್ದಾರೆ.

ಜೈನ್ ರಾಜೀನಾಮೆಗೆ ಆಗ್ರಹ

ನವದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಹಾಗೂ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಇಬ್ಬರೂ ರಾಜೀನಾಮೆ ನೀಡಬೇಕು ಎಂದು ಮಂಗಳವಾರ ಬಿಜೆಪಿ ಆಗ್ರಹಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ವಕ್ತಾರ ಗೌರವ ಭಾಟಿಯಾ, 'ಕೇಜ್ರಿವಾಲ್ ಭ್ರಷ್ಟಾಚಾರವನ್ನು ಮೇಲ್ನೋಟಕ್ಕೆ ಖಂಡಿಸುತ್ತಾರೆ. ಆದರೆ, ಅವರೇ ಅದರಲ್ಲಿ ತೊಡಗಿಕೊಂಡಿದ್ದಾರೆ. ಎಎಪಿ ಆರೋಪಿಸಿರುವಂತೆ ಈ ಬಂಧನವು ರಾಜಕೀಯ ಪ್ರೇರಿತವಾದದು ಎಂದು ಸ್ಪಷ್ಟಪಡಿಸಿದರು.

'ಭ್ರಷ್ಟಾಚಾರ ಪ್ರಕರಣದಲ್ಲಿ ಕೇಂದ್ರೀಯ ಸಂಸ್ಥೆಗಳ ಯಾವುದೇ ಪ್ರಕ್ರಿಯೆಗಳನ್ನು ಯಾವುದೇ ನ್ಯಾಯಾಲಯವು ರದ್ದುಗೊಳಿಸಿಲ್ಲ' ಎಂದರು.

ಕಾಂಗ್ರೆಸ್ ಪಕ್ಷವೂ ಸತ್ಯೇಂದ್ರ ಜೈನ್ ಅವರ ರಾಜೀನಾಮೆಗೆ ಆಗ್ರಹಿಸಿದೆ.

'ದೆಹಲಿ ಸಂಪುಟದಲ್ಲಿ ಸಚಿವರಾಗುವುದಕ್ಕೂ ಮುನ್ನವೇ ಸತ್ಯೇಂದ್ರ ಜೈನ್ ವಿರುದ್ಧ ಶೆಲ್ ಕಂಪನಿಗಳೊಂದಿಗೆ ಹವಾಲ ವಹಿವಾಟು ನಡೆಸುತ್ತಿದ್ದರು ಎಂಬ ಆರೋಪ ಕೇಳಿಬಂದಿತ್ತು. ಆದರೂ ಅರವಿಂದ ಕೇಜ್ರಿವಾಲ್ ಅವರನ್ನು ಸಚಿವರನ್ನಾಗಿ ಮಾಡಿದರು' ಎಂದು ದೆಹಲಿಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಅನಿಲ್ ಕುಮಾರ್ ದೂರಿದ್ದಾರೆ.

ಸತ್ಯೇಂದ್ರ ಜೂನ್ 9ರವರೆಗೆ ಇ.ಡಿ ವಶಕ್ಕೆ

ನವದೆಹಲಿ: ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ದೆಹಲಿ ಸಚಿವ ಸತ್ಯೇಂದ್ರ ಜೈನ್ ಅವರನ್ನು ಮಂಗಳವಾರ ಇಲ್ಲಿನ ನ್ಯಾಯಾಲಯವು ಮುಂದಿನ ವಿಚಾರಣೆಯ ತನಕ ಅಂದರೆ ಜೂನ್ 9ರವರೆಗೆ ಜಾರಿ ನಿರ್ದೇಶನಾಲಯದ ವಶಕ್ಕೆ ಒಪ್ಪಿಸಿದೆ.

ದೊಡ್ಡ ಸಂಚಿನ ಹಿಂದಿರುವ ಸತ್ಯವನ್ನು ಹೊರಗೆಳೆಯಲು ಜೈನ್ ಅವರನ್ನು ಇ.ಡಿ ವಶಕ್ಕೆ ಒಪ್ಪಿಸುವ ಅಗತ್ಯವನ್ನು ವಿಶೇಷ ನ್ಯಾಯಾಧೀಶರಾದ ಗೀತಾಂಜಲಿ ಗೋಯಲ್ ಅವರು ಪರಿಗಣಿಸಿದರು.

ಮಾಲೇಕಲ್ ತಿರುಪತಿ: ಕಿಡಿಗೇಡಿಗಳಿಂದ ವಿಗ್ರಹ ಧ್ವಂಸ

ಅರಸೀಕೆರೆ: ಇಲ್ಲಿನ ಮಾಲೇಕಲ್ ತಿರುಪತಿ ಲಕ್ಷ್ಮೀ ವೆಂಕಟರಮಣ ಸ್ವಾಮಿ ಬೆಟ್ಟದಲ್ಲಿನ ಶ್ರೀನಿವಾಸ ಕಲ್ಯಾಣ ಗ್ಯಾಲರಿನಲ್ಲಿ ಪ್ರತಿಷ್ಠಾಪಿಸಲು ನಿರ್ಮಿಸಿದ್ದ ದೇವ– ದೇವತೆಗಳ 13 ವಿಗ್ರಹಗಳನ್ನು ದುಷ್ಕರ್ಮಿಗಳು ಸೋಮವಾರ ಧ್ವಂಸ ಮಾಡಿ ಪರಾರಿಯಾಗಿದ್ದಾರೆ.

ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಕಾಂಕ್ರೀಟ್‌ನಿಂದ ರೂಪಿಸಿದ್ದ ವಿಗ್ರಹಗಳಿಗೆ ಬಣ್ಣ ಹಚ್ಚುವ ಕೆಲಸವಷ್ಟೇ ಬಾಕಿ ಇತ್ತು. ಸೋಮವಾರ ಕೆಲವರು ವಿಗ್ರಹಗಳ ಪಕ್ಕದಲ್ಲೇ ಮೂತ್ರ ವಿಸರ್ಜಿಸಲು ಪ್ರಯತ್ನಿಸಿದಾಗ ಕಾರ್ಮಿಕರು ತಡೆದಿದ್ದರು. ಸಿಟ್ಟಾದ ದುಷ್ಕರ್ಮಿಗಳು ವಿಗ್ರಹಗಳನ್ನು ಒಡೆದು, ಸ್ಥಳದಲ್ಲಿದ್ದವರ ಮೇಲೆ ಹಲ್ಲೆಗೆ ಯತ್ನಿಸಿ ಪರಾರಿಯಾಗಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್ ಗೌಡ ಸ್ಥಳಕ್ಕೆ ಭೇಟಿ ನೀಡಿದ್ದರು.

ಕಿಡಿಗೇಡಿಗಳು ಗಣೇಶ ವಿಗ್ರಹಗಳನ್ನು ವಿರೂಪಗೊಳಿಸಿರುವುದು

'ದುಷ್ಕರ್ಮಿಗಳ ಪತ್ತೆಗೆ ತನಿಖೆ ಕೈಗೊಳ್ಳಲಾಗಿದೆ ದುಷ್ಕರ್ಮಿಗಳು ಕನ್ನಡ ಮಾತನಾಡುತ್ತಿದ್ದರು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಸ್ಥಳದಲ್ಲಿ ಸಿಸಿಟಿವಿ ಕ್ಯಾಮೆರಾ ಇಲ್ಲ' ಎಂದು ಡಿವೈಎಸ್ಪಿ ಅಶೋಕ್ ಸುದ್ದಿಗಾರರಿಗೆ ತಿಳಿಸಿದರು.

ನೂರಾರು ಉದ್ಯೋಗಾಕಾಂಕ್ಷಿಗಳಿಂದ 'ಬಾಗಿಲು ತಟ್ಟಿ ಪ್ರತಿಭಟನೆ'

'3ಂಗಳೊಳಗೆ ಫಲಿತಾಂಶ– ಕೆಪಿಎಸ್‌ಸಿ ಆಶ್ವಾಸನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2017ನೇ ಸಾಲಿನ 106 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನಡೆದ ಮುಖ್ಯ ಪರೀಕ್ಷೆಯ ಫಲಿತಾಂಶವನ್ನು ಜೂನ್ ತಿಂಗಳ ಒಳಗೆ ಪ್ರಕಟಿಸುವುದಾಗಿ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷ ಮತ್ತು ಕಾರ್ಯದರ್ಶಿ ಆಶ್ವಾಸನೆ ನೀಡಿದ್ದಾರೆ' ಎಂದು ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ತಿಳಿಸಿದರು.

ನೂರಾರು ಉದ್ಯೋಗಾಕಾಂಕ್ಷಿಗಳ ಜೊತೆಗೆ ಕೆಪಿಎಸ್‌ಸಿ ಮುಖ್ಯದ್ವಾರದ ಬಳಿ ನಿಂತು ಮಾಹಿತಿ ನೀಡುವಂತೆ ಆಗ್ರಹಿಸಿ ಮಂಗಳವಾರ ಅವರು 'ಬಾಗಿಲು ತಟ್ಟಿ ಪ್ರತಿಭಟನೆ' ನಡೆಸಿದರು. ಈ ವೇಳೆ ಕೆಪಿಎಸ್‌ಸಿ ಕಾರ್ಯದರ್ಶಿ ಈ ವಿಷಯ ತಿಳಿಸಿದ್ದಾರೆ ಎಂದರು.

ಕೆಪಿಎಸ್‌ಸಿ ಮುಖ್ಯ ದ್ವಾರದ ಬಳಿ ಉದ್ಯೋಗಾಕಾಂಕ್ಷಿಗಳ ಜೊತೆ ಸುರೇಶ್ ಕುಮಾರ್ –ಪ್ರಜಾವಾಣಿ ಚಿತ್ರ

'150 ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳಿಗೆ 10 ದಿನಗಳಲ್ಲಿ ಹಾಗೂ 1,136 ಎಫ್‌ಡಿಎ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಜೂನ್ 10ರ ಒಳಗೆ, ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪದವೀಧರ ಚಿತ್ರಕಲಾ ಶಿಕ್ಷಕರ ಹುದ್ದೆಗಳಿಗೆ ನಡೆದ ಪರೀಕ್ಷೆ ಫಲಿತಾಂಶವನ್ನು 15 ದಿನಗಳಲ್ಲಿ ಪ್ರಕಟಿಸುವುದಾಗಿ ಭರವಸೆ ಸಿಕ್ಕಿದೆ' ಎಂದರು.

'ಎಸ್‌ಡಿಎ 1,323 ಹುದ್ದೆಗಳಿಗೆ ನಡೆದ ಪರೀಕ್ಷೆ ಮತ್ತು ಲೋಕೋಪಯೋಗಿ ಇಲಾಖೆಯ ಕಿರಿಯ ಮತ್ತು ಸಹಾಯಕ ಎಂಜಿನಿಯರ್ ಒಟ್ಟು 990 ಹುದ್ದೆಗಳಿಗೆ ನಡೆದ ಪರೀಕ್ಷೆಯ ಮೌಲ್ಯಮಾಪನ ನಡೆಯುತ್ತಿದ್ದು ಶೀಘ್ರದಲ್ಲಿ ಫಲಿತಾಂಶ ನೀಡಲಾಗುವುದು. ಎಲ್ಲ ವಿವರಗಳನ್ನು ಎರಡು ದಿನಗಳಲ್ಲಿ ಆಯೋಗದ ಜಾಲತಾಣದಲ್ಲಿ ಪ್ರಕಟಿಸುವುದಾಗಿ ಕಾರ್ಯದರ್ಶಿ ತಿಳಿಸಿದ್ದಾರೆ' ಎಂದರು.

'ಕೆಪಿಎಸ್‌ಸಿಯಲ್ಲಿ ಸದಸ್ಯರು ಹಾಗೂ ಆಡಳಿತ ವಿಭಾಗದ ನಡುವೆ ಸಮನ್ವಯ ಕೊರತೆಯಿಂದಾಗಿ ಕಾರ್ಯನಿರ್ವಹಣೆ ಮೇಲೆ ನಕಾರಾತ್ಮಕ ಪರಿಣಾಮಗಳು ಉಂಟಾಗಿವೆ. ಅವುಗಳ ತಾರ್ಕಿಕ ಅಂತ್ಯ ಆಗದ ಹೊರತು ಸಂಸ್ಥೆಯ ಕುರಿತ ಭಾವನೆ ಬದಲಾಗದು. ಈ ಬಗ್ಗೆ ಮುಖ್ಯಮಂತ್ರಿ ಜೊತೆ ಮಾತನಾಡುತ್ತೇನೆ. ಕೆಪಿಎಸ್‌ಸಿ ತನ್ನ ಕಾರ್ಯವೈಖರಿ ಬದಲಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ' ಎಂದೂ ಹೇಳಿದರು.

'ಅಸಮರ್ಥ ಅಧ್ಯಕ್ಷರ ನೇಮಕವೂ ಕಾರಣ'

ಬೆಂಗಳೂರು: ಕೆಪಿಎಸ್‌ಸಿ ಮುಖ್ಯದ್ವಾರದಲ್ಲಿ ಸುರೇಶ್ ಕುಮಾರ್ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಟೀಕಿಸಿರುವ ಕೆಪಿಸಿಸಿ ವಕ್ತಾರ ರಮೇಶ್ ಬಾಬು, 'ಆಡಳಿತ ಪಕ್ಷದ ಶಾಸಕರು ತಮ್ಮದೇ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದರೆ ಅದು ಆ ಸರ್ಕಾರದ ವೈಫಲ್ಯವನ್ನು ಸಾರುತ್ತದೆ. ಶಾಸಕರ ಸ್ವಹಿತಾಸಕ್ತಿಯ ಅನುಮಾನವನ್ನೂ ಹುಟ್ಟಿಸುತ್ತದೆ' ಎಂದಿದ್ದಾರೆ.

'ರಾಜ್ಯ ಸರ್ಕಾರದಿಂದ ಕೆಪಿಎಸ್‌ಸಿಗೆ ಅಸಮರ್ಥ ಅಧ್ಯಕ್ಷರ ನೇಮಕ, ಕಾರ್ಯದರ್ಶಿ ಬದಲಾವಣೆ, ಪರೀಕ್ಷಾ ನಿಯಂತ್ರಕರ ವರ್ಗಾವಣೆ ನೀತಿಯಿಂದ ಕಾರ್ಯ ನಿಧಾನಗತಿಯ ಜೊತೆಗೆ ಉದ್ಯೋಗಾಕಾಂಕ್ಷಿಗಳಿಗೆ ತೊಂದರೆಯಾಗುತ್ತಿದೆ. ಈ ಎಲ್ಲ ಸತ್ಯಗಳನ್ನು ಮುಚ್ಚಿಟ್ಟು ಜನರ ಕಿವಿಗೆ ಹೂವು ತೊಡಿಸಲು ಮುಂದಾಗಿರುವ ಶಾಸಕ ಸುರೇಶ್ ಕುಮಾರ್ ಅವರ ನಾಟಕ ರಂಜನೀಯವಾಗಿದೆ. ಈ ನಾಟಕವನ್ನು ಬಿಟ್ಟು, ಖಾಲಿಯಿರುವ ಎರಡೂವರೆ ಲಕ್ಷ ಸರ್ಕಾರಿ ಹುದ್ದೆಗಳನ್ನು ತುಂಬಲು ತಮ್ಮದೇ ಸರ್ಕಾರದ ಮೇಲೆ ಮತ್ತು ಪಕ್ಷದ ಮೇಲೆ ಒತ್ತಡ ಹಾಕಲಿ' ಎಂದು ಆಗ್ರಹಿಸಿದ್ದಾರೆ.



EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ



ಚತುರ ಮಸೂರವು ಪರದೆಯಂತೆ ಕೆಲಸ ಮಾಡುವುದಷ್ಟೇ ಅಲ್ಲ, ನಿಮ್ಮ ಆರೋಗ್ಯದ ಕಾಳಜಿ ವಹಿಸಲೂ ಸಹಾಯ ಮಾಡುತ್ತದೆ. ಇದರ ಜತೆಗೆ, ಪರೀಕ್ಷೆ ಬರೆಯುವ ಮಕ್ಕಳು ಇದನ್ನು ಧರಿಸಿ ಬಂದು, ನಕಲು ಮಾಡಬಹುದಾದ ಆತಂಕವೂ ಇದೆಯೇ?

ಚತುರ ಮಸೂರವ ಕಂಡಿರಾ?

ಕ್ಷಮಾ ವಿ. ಭಾನುಪ್ರಕಾಶ್

ಕೆಲವರು ಅರಳು ಹುರಿದಂತೆ ಪಟ ಪಟ ಮಾತಾಡುತ್ತಾರೆ; ಮಾತಿನಲ್ಲಿ ಅವರು ಉಲ್ಲೇಖಿಸುವ ಕವಿನುಡಿಗಳು, ವಚನಗಳು ಅವರ ವಾಕ್ಚತುರತೆಗೆ ಕನ್ನಡಿ ಹಿಡಿದಂತೆ. ಈಗಂತೂ ಮಾತೊಂದು ಬಂದರೆ ಸಾಕು ಜಗತ್ತನ್ನೇ ಗೆಲ್ಲಬಹುದು ಎಂಬ ಪರಿಸ್ಥಿತಿ. ಕೆಲವರಂತೂ ಮಾತಿಗೆ ನಿಂತರೆ ಬೆಬ್ಬೆಬ್ಬೆ! ಅವರಿಗೆ ಭಾಷಣದ ಮುದ್ರಿತಪ್ರತಿ ಕೈಯಲ್ಲಿರಲೇಬೇಕು ಅಥವಾ ಮುಂದಿನ ವಿದ್ಯುನ್ಮಾನ ಪರದೆಯ ಮೇಲೆ ಹಾಜರಿರಬೇಕು. ಇಲ್ಲವೇ ಕಿವಿಯಲ್ಲಿ ಧರಿಸಿದ ಪುಟಾಣಿ ಇಯರ್‌ಪಾಡ್‌ಗಳಲ್ಲಿ ಪ್ರತಿ ವಾಕ್ಯದ ಮೊದಲ ಪದ ಜ್ಞಾಪಿಸಿದರೆ ಮಾತ್ರ, ಭಾಷಣದ ಗಾಡಿ ಮುಂದಕ್ಕೆ ಓಡುವುದು. ಒಬ್ಬೊಬ್ಬರಿಗೆ ಒಂದೊಂದು ಬಗೆ; ಇದೇನು ತಪ್ಪಲ್ಲ ಬಿಡಿ. ಕೆಲವರಿಗೆ ಅಂಗಡಿಗೆ ಹೋಗುವ ಮುನ್ನ ತಲೆಯಲ್ಲಿ ನೆನಪಿದ್ದ ದಿನಸಿ ಪಟ್ಟಿ, ಅಂಗಡಿಯ ಬಾಗಿಲಿನಲ್ಲಿ ಕಲಸುಮೇಲೋಗರ! ಕೆಲವು ಕುಂಟು ನೆನಪು, ಹಲವು ಮಸುಕು ಮಸುಕು ಎಂಬ ಪರಿಸ್ಥಿತಿ. ಅದರ ಬದಲು ನಮ್ಮ ಕಣ್ಣ ಮುಂದೆಯೇ ಭಾಷಣವೂ ದಿನಸಿಪಟ್ಟಿಯೂ ಹತ್ತಬೇಕಿರುವ ವಿಮಾನದ ವಿವರವೂ ಕೊಳ್ಳುತ್ತಿರುವ ಚಿನ್ನದ ಬಿಡಿಬಿಡಿ ಲೆಕ್ಕಾಚಾರವೂ ಮೂಡುವ ಹಾಗಿದ್ದರೆ? ಅದೂ ಎಲ್ಲಿ? ನಮ್ಮ ಫೋನಿನಲ್ಲೋ, ಚತುರ (ಸ್ಮಾರ್ಟ್) ಗಡಿಯಾರದಲ್ಲೋ ಅಲ್ಲ, ನಮ್ಮದೇ ಕಣ್ಣಪರದೆಯಲ್ಲಿ! ಹೀಗೂ ಸಾಧ್ಯವೇ ಎನಿಸಿತಲ್ಲವೇ? ಮಕ್ಕಳಿಗೆ ಬಿದ್ದ ಕನಸೇನೋ ಎನಿಸುವ ಇದನ್ನು ನನಸು ಮಾಡುವಲ್ಲಿ ಸೈ ಎನಿಸಿಕೊಂಡಿದ್ದಾರೆ, ಮೋಜೋ ಸಂಸ್ಥೆಯ ಸಂಶೋಧಕರು.



ಕನ್ನಡಕ ಧರಿಸುವ ಇಚ್ಛೆ ಇಲ್ಲದವರು 'ಕಾಂಟಾಕ್ಟ್ ಲೆನ್ಸ್' ಅನ್ನು ಧರಿಸುವುದು ಗೊತ್ತೇ ಇದೆ. ಈ ಪುಟಾಣಿ ಮಸೂರಗಳು ಅತ್ಯಂತ ಸೂಕ್ಷ್ಮವಾಗಿ, ತೆಳುವಾಗಿ ಇದ್ದು, ಹುಷಾರಾಗಿ ಅವನ್ನು ಕಣ್ಣುಗುಡ್ಡೆಯ ಮೇಲೆ ಇರಿಸಿಕೊಳ್ಳಬೇಕು. ನಂತರ, ದೃಷ್ಟಿದೋಷವು ಇದ್ದದ್ದು ಹೌದೇ ಎಂಬಂತೆ ಎಲ್ಲವೂ ನಿಚ್ಚಳವಾಗಿ ಕಾಣುವುದು ಲಕ್ಷಾಂತರ ಜನರ ಅನುಭವವೇ! ಈಗ ಮೋಜೋ ಸಂಸ್ಥೆಯು ತಯಾರಿಸಿರುವ ಚತುರ ಮಸೂರವು (ಸ್ಮಾರ್ಟ್ ಲೆನ್ಸ್), ದೃಷ್ಟಿದೋಷ ಸರಿಪಡಿಸುವ ಕೆಲಸದ ಜೊತೆಗೆ ಇನ್ನೂ ಹತ್ತು ಹಲವು ಅನುಕೂಲಗಳನ್ನು ನಿಮಗೆ ಕೊಡಮಾಡಲಿದೆಯಂತೆ! ಅದೊಂದು ವಿದ್ಯುನ್ಮಾನ ಪರದೆಯಾಗಿ ಕಂಗೊಳಿಸಲಿದ್ದು, ಅದರ ಮೇಲೆ, ಬೇಕಾದ ಮಾಹಿತಿಯನ್ನು ಪ್ರದರ್ಶನವಾಗುವ ಹಾಗೆ ಮಾಡಿ, ನೀವು ಯಾರಿಗೂ ತಿಳಿಯದಂತೆ ಓದಬಹುದು! ನಿಮ್ಮ ಭಾಷಣವೋ ಪಾಸ್‌ಪೋರ್ಟ್ ಮಾಹಿತಿಯೋ ಷೇರುಮಾರುಕಟ್ಟೆಗೆ ಬೇಕಾದ ಅಂಕಿಅಂಶಗಳೋ – ಹೀಗೆ ಏನು ಬೇಕಾದರೂ ಈ ಕಣ್ಣೊಳಗಿನ ಪರದೆಯ ಮೇಲೆ ಮೂಡುವಂತೆ ಮಾಡಬಹುದು. ಅದು, ಇದನ್ನು ಧರಿಸಿದ ನಿಮಗೆ ಮಾತ್ರ ಕಾಣುತ್ತಿರುತ್ತದೆಯೇ ಹೊರತು, ನಿಮ್ಮ ಎದುರಿಗಿರುವವರಿಗೆ ಖಂಡಿತ ಅಲ್ಲ. ಇಷ್ಟೆಲ್ಲಾ ಮಾಹಿತಿ ಕಾಣಬೇಕಾದರೆ ಪರದೆ ಕೊಂಚ ದೊಡ್ಡದಿದ್ದರೆ ಚೆನ್ನ ಅಲ್ಲವೇ? ಹಾಗಾಗಿ, ಈ ಚತುರ ಮಸೂರವು ನಿಮ್ಮ ಕಣ್ಣುಗುಡ್ಡೆಯಷ್ಟೇ ಅಗಲ ಇರುವುದಿಲ್ಲ; ಬದಲಿಗೆ, ಕಣ್ಣುಗಳ ಬಿಳಿಯ ಭಾಗಕ್ಕೂ ಹರಡಿಕೊಳ್ಳುತ್ತದೆ.

ಈ ಚತುರ ಮಸೂರವು ಪರದೆಯಂತೆ ಕೆಲಸ ಮಾಡುವುದಷ್ಟೇ ಅಲ್ಲ, ನಿಮ್ಮ ಆರೋಗ್ಯದ ಕಾಳಜಿ ವಹಿಸಲೂ ಸಹಾಯ ಮಾಡುತ್ತದೆ. ಕಂಗಳಲ್ಲಿರುವ ನೀರಿನಲ್ಲಿ ಗ್ಲುಕೋಸ್‌ನ ಪ್ರಮಾಣ ಎಷ್ಟಿದೆ, ಇತರ ಜೀವರಾಸಾಯನಿಕಗಳ ಪ್ರಮಾಣ ಎಷ್ಟಿದೆ ಎಂಬುದ ಆಧಾರದ ಮೇಲೆ ರಕ್ತದಲ್ಲಿನ ಸಕ್ಕರೆ ಅಂಶ, ಮುಂದೆ ಮಧುಮೇಹ ಬರಬಹುದೇ ಅಥವಾ ಬಂದಿದ್ದರೆ ಅದರ ಮಟ್ಟ ಎಷ್ಟಿದೆ, ಕ್ಯಾನ್ಸರ್ ಬರುವ ಸಾಧ್ಯತೆ ಇದೆಯೇ, ಕಣ್ಣಿನೊಳಗಿನ ಒತ್ತಡ ಎಷ್ಟಿದೆ, ಅಂಗಾಂಗಗಳು ಮತ್ತು ಅಂಗಾಂಶಗಳ ಆರೋಗ್ಯ ಹೇಗಿದೆ – ಎಂಬಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಸಹಾಯ ಮಾಡುತ್ತದೆ. ಇಲ್ಲಿ ನಿಮ್ಮ ಕಣ್ಣುಗಳು ಬೆಳಕಿಗೆ ಯಾವಾಗ, ಹೇಗೆ ಸ್ಪಂದಿಸುತ್ತವೆ ಎಂಬುದನ್ನೂ ಗಮನಕ್ಕೆ ತೆಗೆದುಕೊಂಡು, ಇಂತಹ ವಿಶ್ಲೇಷಣೆ ನಡೆಸಲಾಗುತ್ತದೆ. ಇಂತಹ ಆರೋಗ್ಯ ಸಂಬಂಧಿ ಮಾಹಿತಿ ಕಲೆಹಾಕಿ, ವಿಶ್ಲೇಷಿಸಲು ಬೇಕಾದ ಸಂವೇದಕಗಳನ್ನು ಈ ಚತುರ ಮಸೂರಗಳಲ್ಲಿ ಅಡಗಿಸಲಾಗಿರುತ್ತದೆ.

ಇಷ್ಟೇ ಅಲ್ಲ, ಈ ಚತುರ ಮಸೂರಗಳ ಅನುಕೂಲಗಳು ಅಬ್ಬಬ್ಬ ಎನಿಸುವಂತಿವೆ. ಹಾಗಿದ್ದ ಮೇಲೆ ಹೊಸ ವಿದ್ಯುನ್ಮಾನ ಗ್ಯಾಡ್ಜೆಟ್‌ಗಳ ಜೊತೆಗೆ ಇದ್ಯಾಕೆ ಇನ್ನೂ ಮಾರುಕಟ್ಟೆಗೆ ಲಗ್ಗೆ ಇಟ್ಟಿಲ್ಲ ಎಂದು ಯೋಚಿಸುತ್ತಿದ್ದೀರಾ? ಇದರ ಸಮಸ್ಯೆಗಳಿಗಿನ್ನೂ ಸೂಕ್ತ ಪರಿಹಾರ ದೊರೆಯಬೇಕಿದೆ. ಇಷ್ಟೊಂದು ಚತುರ ಮಸೂರಕ್ಕೂ ಸಮಸ್ಯೆ ಇಲ್ಲದಿಲ್ಲ. ಇಂತಹ ಚತುರ ಮಸೂರವನ್ನು ಧರಿಸಿದ ಮೇಲೆ ತೆಗೆಯೋದನ್ನೇ ಮರೆತು ಬಿಡುವ ಸಾಧ್ಯತೆಯಿದೆಯಂತೆ; ಅಷ್ಟು ಅನುಕೂಲಕಾರಿ ಇದು. ಹಾಗಾಗಿ, ಕಣ್ಣೊಳಗಿನ ಅದೇ ಪರದೆಯ ಮೇಲೆ 'ಮಸೂರವನ್ನು ಧರಿಸಿ ಬಹಳ ಹೊತ್ತಾಯ್ತು, ಅದನ್ನ ಕಳಚಿಡಿ' ಎಂಬ ಎಚ್ಚರಿಕೆ ಸಂದೇಶ ಪ್ರಕಟವಾಗುತ್ತದಂತೆ. ಅಷ್ಟು ಬಾರಿ ಈ ಮಸೂರಗಳನ್ನು ತೆಗೆಯಬೇಕಾಗುವುದು ಏಕೆ ಗೊತ್ತೇ? ಇದೊಂದು ಸಾಮಾನ್ಯ ಮಸೂರವಲ್ಲ ಸ್ವಾಮಿ, ಇದೊಂದು ವಿದ್ಯುನ್ಮಾನ ಸಾಧನ! ಹಾಗಿದ್ದಮೇಲೆ, ಇದನ್ನು ಚಾರ್ಜ್ ಮಾಡಬೇಕಲ್ಲವೇ? ನಮ್ಮ ಮೊಬೈಲು, ಸ್ಮಾರ್ಟ್‌ವಾಚ್‌ಗಳಂತೆ ಇದನ್ನೂ ಹೆಚ್ಚು ಬಳಸಿದರೆ ಹೆಚ್ಚು ಬೇಗ ಚಾರ್ಜ್ ಮಾಡಬೇಕಾಗುತ್ತದೆ.

ಇನ್ನು ಪರೀಕ್ಷೆ ಬರೆಯುವ ಮಕ್ಕಳು ಇದನ್ನು ಧರಿಸಿ ಬಂದು, ನಕಲು ಮಾಡುತ್ತಿಲ್ಲ ಎಂದು ಹೇಗೆ ನಂಬುವಿರಿ? ಪ್ರಶ್ನೆಗೆ ಬೇಕಾದ ಉತ್ತರವನ್ನು ಕಣ್ಣೊಳಗೆ ಅಡಗಿದ ಪರದೆಯ ಮೇಲೆ ಓದಿಕೊಂಡು, ಸೂಸೂತ್ರವಾಗಿ ಬರೆದು, ಮೇಲ್ವಿಚಾರಕರ ಮೂಗಿನ ಕೆಳಗೇ ರಾಜಾರೋಷವಾಗಿ ಕಾಪಿ ಹೊಡೆಯುವವರನ್ನು ತಡೆಯುವುದು ಹೇಗೆ? ಜೊತೆಗೆ, ಇದು ಕೇವಲ ಪರದೆಯಂತಲ್ಲ, ಕ್ಯಾಮೆರಾ ಆಗಿ ಕೂಡ ಕಾರ್ಯನಿರ್ವಹಿಸಬಹುದಂತೆ! ಅಂದರೆ ಇದರ ಅರ್ಥ, ಎದುರಿಗಿರುವವರ ಖಾಸಗಿತನವು ಸದ್ದೇ ಇಲ್ಲದಂತೆ ಬಟಾಬಯಲು! ಗೂಗಲ್ ಸಂಸ್ಥೆಯ ಚತುರ ಕನ್ನಡಕಗಳು ಇದೇ ಕಾರಣಕ್ಕೇ ಸೋಲನ್ನನುಭವಿಸಿದ್ದು ಗೊತ್ತೇ ಇದೆ. ಚತುರ ಕನ್ನಡಕಗಳಲ್ಲಾದರೂ, ಎದುರಿಗಿರುವವರನ್ನು ಎಚ್ಚರಿಸಲು ಕೆಂಪುದೀಪವಿರುತ್ತದೆ. ಅದು ಆನ್ ಆಗಿದ್ದರೆ, ನಮ್ಮ ಕನ್ನಡಕವು ವಿಡಿಯೊ ರೆಕಾರ್ಡ್ ಮಾಡುತ್ತಿದೆ ಅಥವಾ ಫೋಟೊ ಸೆರೆಹಿಡಿಯುತ್ತಿದೆ ಎಂದು ಎದುರಿನವರಿಗೆ ತಿಳಿಯುತ್ತದೆ. ಆದರೆ, ಈ ಚತುರ ಮಸೂರಗಳ ಮೂಲಕ ಗಮನಕ್ಕೇ ಬರದಂತೆ ಫೋಟೊ, ವಿಡಿಯೊ ಮಾಡಿ ದೇಶಗಳೇ ನಡುಗುವಂತಹ ಹಗರಣಗಳು ಆಗಬಹುದು ಅಥವಾ ಬೆಳಕಿಗೆ ಬರಬಹುದು. ಯಾರನ್ನು ನೋಡಿದಾಗ ನಮ್ಮ ಪ್ರತಿಕ್ರಿಯೆ ಹೇಗಿರುತ್ತದೆ, ಯಾವುದನ್ನು ಹೆಚ್ಚು ಹೊತ್ತು ಗಮನಿಸುತ್ತೇವೆ ಮುಂತಾದ ಮಾಹಿತಿಗಳೂ ವಿಶ್ಲೇಷಿತಗೊಂಡು ನಮ್ಮ ಖಾಸಗಿತನವೂ ಜಗತ್ತಿನ ಚಹಾದೊಂದಿಗೆ ನೆಂಚಿಕೊಳ್ಳುವ ಚೂಡಾ ಆಗಬಹುದು. ಇಂತಹ ಸಮಸ್ಯೆಗಳನ್ನು ನೀಗಿಕೊಂಡು, ಮಾರುಕಟ್ಟೆಗೆ ಬರುವ ಧಾವಂತದಲ್ಲಿದೆ ಮೋಜೋ ಮಸೂರ. ಹಾಗಾಗಿ, ಈ ಚತುರ ಮಸೂರದ ಮೋಡಿ ನೋಡಲು ಒಂಚೂರು ಕಾಯಬೇಕಿದೆ.

ಮಾರಾಟಕ್ಕಿದೆ ಡಿಜಿಟಲ್ ಸೈಟು!

ಕೃಷ್ಣ ಭಟ್

'ಅಲ್ಲೊಂದು 30ಕ್ಕೆ 40 ಇದೆ. 5 ಸಾವ್ರ ಹೇಳ್ತಾವ್ರೆ. ಮಾಡ್ಕೊಂಬುಡಿ... ಚೆನ್ನಾಗೈತೆ', 'ಆ ಕಾರ್ನರ್ ಸೈಟು ಚೆನ್ನಾಗಿದೆ, ನೀವೇ ಹಾಕ್ಕೊಂಬುಡಿ' ... ಇಂಥ ಮಾತುಗಳೆಲ್ಲ ಟೀ ಬೆಂಗಳೂರಿನ ಜನಪ್ರಿಯ ಪ್ರದೇಶಗಳ ಮೂಲೆಯಲ್ಲಿರುವ ಟೀ ಅಂಗಡಿಯಲ್ಲಿ ಕಿವಿಗೆ ಬೀಳುವುದು ಸಾಮಾನ್ಯ. ಇದು ರಿಯಲ್ ಎಸ್ಟೇಟಿನ ಪ್ರಾಥಮಿಕ ಪದಪುಂಜಗಳು. ಆದರೆ, ಮುಂದಿನ ಕೆಲವು ವರ್ಷಗಳಲ್ಲಿ ಜನರು ಚದರಡಿಯ ಬದಲಿಗೆ ಪಿಕ್ಸೆಲ್‌ಗಳ ಬಗ್ಗೆ ಮಾತನಾಡಿದರೆ ಹೇಗಿರುತ್ತದೆ? ಈ ಭೂಮಿಯ ಮೇಲೆ ಇಲ್ಲದ, ಬೇರೆ ಗ್ರಹದಲ್ಲೂ ಇಲ್ಲದ, ಕಣ್ಣಿಗೆ ಕಾಣದೆಯೇ ಇರುವ ಸೈಟುಗಳ ಬಗ್ಗೆ ಮಾತನಾಡುವಂತಾದರೆ ಹೇಗಿರುತ್ತದೆ?

ಇಂಥದೊಂದು ಪರಿಕಲ್ಪನೆಗೆ ಮೆಟಾವರ್ಸ್ ಹೊಸ ಅವಕಾಶವನ್ನು ತೆರೆದಿದೆ. ಯಾರೂ ಊಹಿಸದಿದ್ದ ಹೊಸದೊಂದು ಹೂಡಿಕೆ ಅವಕಾಶ ಮೆಟಾವರ್ಸ್‌ನಿಂದ ಹುಟ್ಟಿಕೊಂಡಿದೆ. ಅದೇ ಡಿಜಿಟಲ್ ರಿಯಲ್ ಎಸ್ಟೇಟ್! ಈಗಾಗಲೇ ದೊಡ್ಡ ದೊಡ್ಡ ಕಂಪನಿಗಳು ಈ ಡಿಜಿಟಲ್ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಇಳಿದು ಕೋಟ್ಯಂತರ ಕಾಸು ಹೂಡಿಕೆ ಮಾಡಿವೆ ಎಂದರೆ ಅಚ್ಚರಿಯಾದೀತು. ಆದರೆ, ಅದು ನಿಜ!

ತೀರಾ ಇತ್ತೀಚೆಗೆ, ಕಳೆದ ಡಿಸೆಂಬರ್‌ನಲ್ಲಿ, ಪಾಪ್ ಸ್ಟಾರ್ ಸ್ನೂಪ್ ಡಾಗ್ ತನ್ನ ನೆರೆಮನೆಯ ಜಾಗವನ್ನು ₹3.45 ಕೋಟಿಗೆ ಮಾರಿದರಂತೆ. ಅದು ನ್ಯೂಯಾರ್ಕ್‌ನಲ್ಲೋ ಅಥವಾ ವಾಷಿಂಗ್ಟನ್‌ನಲ್ಲೋ ಅಲ್ಲ. ಬದಲಿಗೆ, ಮೆಟಾವರ್ಸ್‌ನಲ್ಲಿ! ಅಂದರೆ, ಭೂಮಿಯ ಮೇಲೆ ಆ ಜಾಗ ಇಲ್ಲ. ವಾಸ್ತವದಲ್ಲಿ ಆ ಜಾಗ ಎಂಬುದೇ ಇಲ್ಲ. ಅಲ್ಲಿ ಒಂದಷ್ಟು ಪಿಕ್ಸೆಲ್‌ಗಳಿವೆ ಅಷ್ಟೇ!

ಒಂದು ಅಂದಾಜಿನ ಪ್ರಕಾರ ಮೆಟಾವರ್ಸ್‌ನಲ್ಲಿ ಶುರುವಾಗಿರುವ ಈ ರಿಯಲ್ ಎಸ್ಟೇಟ್ ಕಳೆದ ಜನವರಿ ತಿಂಗಳೊಂದರಲೇ 8.5 ಕೋಟಿ ಡಾಲರ್ ವಹಿವಾಟು ಮಾಡಿದೆ.

ಏನಿದು ಡಿಜಿಟಲ್ ರಿಯಲ್ ಎಸ್ಟೇಟ್?

ಡಿಜಿಟಲ್ ರಿಯಲ್ ಎಸ್ಟೇಟ್ ಎಂಬುದು ಒಂದು ಭೂಮಿ ಮೇಲಿನ ಒಂದು ಸ್ಥಳದ ರೀತಿಯದ್ದೇ ಡಿಜಿಟಲ್ ಸ್ಪೇಸ್. ಇಲ್ಲಿ ನೀವು ಮನೆ ಕಟ್ಟಡಬಹುದು, ಮ್ಯೂಸಿಯಂ ಕಟ್ಟಬಹುದು, ಟವರ್ ಮಾಡಬಹುದು,... ಏನನ್ನು ಬೇಕಾದರೂ ನಿರ್ಮಿಸಬಹುದು. ಇದಕ್ಕಾಗಿ ಹಲವು ಸಂಸ್ಥೆಗಳು ಹುಟ್ಟಿಕೊಂಡಿವೆ. ಇವು ಡಿಜಿಟಲ್ ಸ್ಪೇಸ್ ಮಾರಾಟ ಮಾಡುತ್ತವೆ. ಸ್ಯಾಂಡ್‌ಬಾಕ್ಸ್, ಡಿಸೆಂಟ್ರಾಲ್ಯಾಂಡ್, ಕ್ರಿಪ್ಟೋವಾಕ್ಸೆಲ್ಸ್, ಸೋಮ್ನಿಯಮ್ ಪ್ರಮುಖ ಡಿಜಿಟಲ್ ರಿಯಲ್ ಎಸ್ಟೇಟ್ ಕಂಪನಿಗಳು. ಇವು ಒಟ್ಟಾಗಿ 2.68 ಲಕ್ಷ ತುಂಡು ಭೂಮಿಯನ್ನು ಹೊಂದಿವೆ. ಈ ಕಂಪನಿಗಳಲ್ಲಿ ಹಣ ಕೊಟ್ಟು ಎನ್‌ಎಫ್‌ಟಿ ಖರೀದಿ ಮಾಡಿಕೊಳ್ಳಬೇಕು. ಈ ಎನ್‌ಎಫ್‌ಟಿಯನ್ನು ನಾವು ಬಳಸಿಕೊಂಡು ಭೂಮಿ ಖರೀದಿ ಮಾಡಬಹುದು. ಈ ಕಂಪನಿಗಳು ಒಂದೊಂದು ಪ್ರಾಜೆಕ್ಟ್ ಮಾಡಿವೆ. ಈ ಪ್ರಾಜೆಕ್ಟ್‌ನಲ್ಲಿ ಈಗಾಗಲೇ ಖರೀದಿ ಮಾಡಿರುವವರ ಬಳಿಯೇ ಭೂಮಿ ಖರೀದಿಸಬಹುದು ಅಥವಾ ಪ್ರಾಜೆಕ್ಟ್‌ನಲ್ಲಿರುವ ಭೂಮಿಯನ್ನು ಖರೀದಿ ಮಾಡಬಹುದು. ಇಲ್ಲಿ ಮುಖ್ಯವಾಗುವುದು, ನಾವು ಎಲ್ಲಿ ಖರೀದಿ ಮಾಡುತ್ತೇವೆ ಎಂಬುದು.

ಜನಪ್ರಿಯ ತಾರೆಯರ ಪಕ್ಕದ ಜಾಗಕ್ಕೆ ಭಾರಿ ರೇಟು!

ಜನಪ್ರಿಯ ರ‍್ಯಾಪರ್ ಸ್ನೂಪ್ ಡಾಗ್ ಸ್ನೂಪ್‌ವರ್ಸ್‌ನಲ್ಲಿ ಒಂದು ಪ್ರಾಜೆಕ್ಟ್ ಮಾಡಿದ್ದಾರೆ. ಅದರಲ್ಲಿ ಅವರು, ಭೂಮಿಯಲ್ಲಿರುವ ತನ್ನ ಮನೆಯನ್ನೇ ಹೋಲುವ ಮನೆಯನ್ನು ನಿರ್ಮಾಣ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಅವರು ಇಲ್ಲೇ ತಮ್ಮ ಕಾನ್ಸರ್ಟ್ ಅನ್ನೂ ಮಾಡಲಿದ್ದಾರಂತೆ. ಇವರ ಮನೆಯ ಪಕ್ಕದಲ್ಲಿರುವ ಜಾಗವನ್ನು ಇವರು ಮಾರಾಟ ಮಾಡಿದ್ದಾರೆ. ಅದು ₹3.45 ಕೋಟಿಗೆ ಮಾರಾಟವಾಗಿದೆ. ಇಲ್ಲಿ, ಸ್ನೂಪ್ ಡಾಗ್ ಮನೆಯ ಪಕ್ಕದಲ್ಲಿರುವ ಸ್ಥಳ ಎಂಬ ಕಾರಣಕ್ಕೇ ಇದಕ್ಕೆ ಇಷ್ಟು ದರ ಬಂದಿದೆ!

ಅಷ್ಟೇ ಅಲ್ಲ, ಹಲವು ಸೆಲೆಬ್ರಿಟಿಗಳು, ಬ್ರ್ಯಾಂಡ್‌ಗಳು, ಕಂಪನಿಗಳು ಈ ಡಿಜಿಟಲ್ ರಿಯಲ್ ಎಸ್ಟೇಟ್‌ನಲ್ಲಿ ಭಾರಿ ಹೂಡಿಕೆ ಮಾಡುತ್ತಿವೆ. ಹಿಲ್ಟನ್ ಹೋಟೆಲ್ ಸಂಸ್ಥಾಪಕರ ಮೊಮ್ಮಗಳು ಹಾಗೂ ಜನಪ್ರಿಯ ಹಾಲಿವುಡ್ ತಾರೆ ಪ್ಯಾರಿಸ್ ಹಿಲ್ಟನ್ ಕೂಡ ರಾಬ್ಲಾಕ್ಸ್‌ನಲ್ಲಿ ತನ್ನ ಡಿಜಿಟಲ್ ರಿಯಲ್ ಎಸ್ಟೇಟ್ ಮಾಡಿಕೊಂಡಿದ್ದು, ಕಳೆದ ಹೊಸ ವರ್ಷದ ಸಂಭ್ರಮಾಚರಣೆಯ ಸಮಯದಲ್ಲಿ ಸಂಗೀತ ಕಚೇರಿಯನ್ನೂ ನಡೆಸಿದ್ದರು. ಟಾಮಿ ಹಿಲ್ಫಿಗರ್, ನೈಕ್, ರೀಸ್ ವಿದರ್‌ಸ್ಪೂನ್ ಸೇರಿದಂತೆ ಹಲವು ಬ್ರ್ಯಾಂಡ್‌ಗಳೂ ಈ ಡಿಜಿಟಲ್ ರಿಯಲ್ ಎಸ್ಟೇಟ್‌ಗೆ ಪ್ರಚಾರ ನೀಡುತ್ತಿವೆ.

ಎಚ್‌ಎಸ್‌ಬಿಸಿ, ಜೆಪಿ ಮಾರ್ಗನ್ಸ್, ಗೋಲ್ಡ್‌ಮನ್ ಸ್ಯಾಕ್ಸ್ ಸೇರಿದಂತೆ ದೊಡ್ಡ ದೊಡ್ಡ ಹಣಕಾಸು ಸಂಸ್ಥೆಗಳೂ ಈಗ ರಿಯಲ್ ಎಸ್ಟೇಟ್‌ಗೆ ಇಳಿದಿವೆ. ಸ್ಯಾಂಡ್‌ಬಾಕ್ಸ್‌ನಲ್ಲಿ ಎಚ್‌ಎಸ್‌ಬಿಸಿ ಹೂಡಿಕೆ ಮಾಡಿದ್ದರೆ, ಜೆಪಿ ಮಾರ್ಗನ್ ಡಿಸೆಂಟ್ರಲ್ಯಾಂಡ್‌ನಲ್ಲಿ ಹೂಡಿಕೆ ಮಾಡಿದೆ.

ಜಮೀನು ಅಸಲಿಯೇ?

ವಾಸ್ತವದಲ್ಲಿ, ಈ ಡಿಜಿಟಲ್ ರಿಯಲ್ ಎಸ್ಟೇಟ್ ಬಗ್ಗೆ ಎರಡೂ ಬಗೆಯ ವಾದಗಳು ಚಾಲ್ತಿಯಲ್ಲಿವೆ. ಇದು ಸದ್ಯ ಭಾರಿ ಸದ್ದು ಮಾಡುತ್ತಿರುವುದರಿಂದ ದರ ಏರಿಕೆಯಾಗುತ್ತಿದೆ. ಆದರೆ, ಮುಂದೊಂದು ದಿನ ಇದರ ಬೆಲೆ ನಗಣ್ಯವಾಗಲಿದೆ ಎಂದೂ ವಾದಿಸುವ ತಜ್ಞರಿದ್ದಾರೆ. ಏಕೆಂದರೆ, ಭೂಮಿಯ ಮೇಲೆ ಇರುವ ಸ್ಥಳಕ್ಕೆ ಮಿತಿ ಇದೆ. ಹೀಗಾಗಿ, ಇದರ ಬೆಲೆ ಏರಿಕೆಯಾಗುತ್ತದೆ. ಆದರೆ, ವರ್ಚುವಲ್‌ನಲ್ಲಿ ಸ್ಥಳಕ್ಕೆ ಮಿತಿ ಇಲ್ಲದ್ದರಿಂದ ಅದರ ಬೆಲೆ ಮುಂದಿನ ದಿನಗಳಲ್ಲಿ ಕುಸಿಯಲಿದೆ ಎಂಬುದು ಸಹಜ ಲೆಕ್ಕಾಚಾರ. ಆದರೆ, ಇದರಲ್ಲಿ ಹೂಡಿಕೆ ಮಾಡುತ್ತಿರುವವರ ವಾದವೂ ಸಕಾರಣವಾದುದೇ. ಮುಂದಿನ ದಿನಗಳಲ್ಲಿ ಜನರು ಭೌತಿಕ ಮಾಲ್‌ಗಳಿಗೋ, ಮನೋರಂಜನೆ ತಾಣಗಳಿಗೋ ಹೋಗುವುದಕ್ಕಿಂತ ಹೆಚ್ಚಾಗಿ ವರ್ಚುವಲ್ ತಾಣಗಳಿಗೇ ಹೆಚ್ಚು ಭೇಟಿ ಕೊಡತೊಡಗುತ್ತಾರೆ. ಹೀಗಾಗಿ, ವರ್ಚುವಲ್‌ನಲ್ಲಿ ಒಂದು ಮಾಲ್‌ಗೆ, ಶಾಪಿಂಗ್ ಕಾಂಪ್ಲೆಕ್ಸ್‌ಗೆ ಹೆಚ್ಚು ಮೌಲ್ಯವಿದೆ. ಮುಂದಿನ ದಿನಗಳಲ್ಲಿ ಇದರ ಮೌಲ್ಯ ಇನ್ನಷ್ಟು ಹೆಚ್ಚಲಿದೆ ಎಂಬುದು ಅವುಗಳ ವಾದ.



ಒನ್‌ಪ್ಲಸ್ ನಾರ್ಡ್ ಬಡ್ಸ್

ವಿಶ್ವನಾಥ ಎಸ್.

ಭಾರತದ ಬಜೆಟೆಡ್ ಮಾರುಕಟ್ಟೆಯು ಬಹಳ ವಿಸ್ತಾರವಾಗಿದೆ ಎನ್ನುವುದು ಒನ್‌ಪ್ಲಸ್ ಕಂಪನಿಗೆ ಮನವರಿಕೆ ಆಗಿದೆ. ಹೀಗಾಗಿಯೇ ಕಂಪನಿಯು ಪ್ರೀಮಿಯಂ ವಿಭಾಗದಿಂದಾಚೆಗೆ ಬಜೆಟೆಡ್ ಸ್ಮಾರ್ಟ್ ಸಾಧನಗಳನ್ನು ನೀಡುವುದರ ಕಡೆಗೂ ಹೆಚ್ಚು ಗಮನ ಹರಿಸಲು ಆರಂಭಿಸಿದೆ. ಹೆಚ್ಚಿನ ಗ್ರಾಹಕರನ್ನು ತನ್ನತ್ತ ಸೆಳೆಯುವ ಸಲುವಾಗಿ ಕಡಿಮೆ ಬೆಲೆಯ ಸ್ಮಾರ್ಟ್ ಸಾಧನಗಳನ್ನು ನೀಡುತ್ತಿದೆ. ಈ ನಿಟ್ಟಿನಲ್ಲಿ ಈಚೆಗಷ್ಟೇ ಒನ್‌ಪ್ಲಸ್ ನಾರ್ಡ್ ಬಡ್ಸ್ ಬಿಡುಗಡೆ ಮಾಡಿದೆ. ಇದರ ಬೆಲೆ ₹ 2,799.

ಹೊರಗಿನ ಶಬ್ದವು ಕೇಳಿಸದಂತೆ ತಡೆಯಲು ಆ್ಯಕ್ಟಿವ್ ನಾಯ್ಸ್ ಕ್ಯಾನ್ಸಲೇಷನ್ (ಎಎನ್ ಸಿ) ಇದರಲ್ಲಿ ಇಲ್ಲ. ಆದರೆ, ಎಐ ನಾಯ್ಸ್ ಕ್ಯಾನ್ಸಲೇಷನ್ ಅದರ ಕೊರತೆಯನ್ನು ಬಹಳಷ್ಟರ ಮಟ್ಟಿಗೆ ನಿಭಾಯಿಸುತ್ತದೆ. ಬ್ಯಾಟರಿ ಬಾಳಿಕೆ ಹಾಗೂ ಸಾಧನದ ಗುಣಮಟ್ಟ ಉತ್ತಮವಾಗಿದೆ. ಕೆಲವು ಬಡ್ಸ್‌ಗಳನ್ನು ಒಂದು ಗಂಟೆಯವರೆಗೆ ಕಿವಿಯಲ್ಲಿ ಇಟ್ಟುಕೊಂಡರೆ ಆಗ ಕಿವಿ ನೋಯುತ್ತದೆ. ಆದರೆ ಇದು ಹಾಗಿಲ್ಲ. ಎಷ್ಟು ಹೊತ್ತು ಇಟ್ಟುಕೊಂಡರೂ ಯಾವುದೇ ಸಮಸ್ಯೆ ಆಗುವುದಿಲ್ಲ.

ಆಂಡ್ರಾಯ್ಡ್ ಮತ್ತು ಐಒಎಸ್‌ಗೆ ಬೆಂಬಲಿಸುತ್ತದೆ. ಹೇ ಮೆಲೊಡಿ ಆ್ಯಪ್ ಮೂಲಕ ಇದರ ಬ್ಯಾಟರಿ ಮಟ್ಟವನ್ನು ಪರಿಶೀಲಿಸಬಹುದು. ಟಚ್ ಆಯ್ಕೆಯನ್ನು ನಿಯಂತ್ರಿಸಬಹುದು. ಒನ್‌ಪ್ಲಸ್ ಫೋನ್ ಅನ್ನೇ ಬಳಸಿದರೆ ಆ್ಯಪ್ ನೆರವಿಲ್ಲದೆಯೇ ಬ್ಲುಟೂತ್ ಸೆಟ್ಟಿಂಗ್ಸ್‌ನಲ್ಲಿಯೇ ಎಲ್ಲವನ್ನೂ ನಿರ್ವಹಿಸಬಹುದು. ಧ್ವನಿಯು ಬಹಳ ಸ್ಪಷ್ಟವಾಗಿ ಕೇಳಿಸುತ್ತದೆ. ಬ್ಲುಟೂತ್ 5.2 ಆವೃತ್ತಿ ಹೊಂದಿದೆ.

ಆಕರ್ಷಕ ವಿನ್ಯಾಸ ಹೊಂದಿದೆ. ಪ್ಲಾಸ್ಟಿಕ್‌ನಿಂದ ಬಡ್ಸ್ ತಯಾರಿಸಲಾಗಿದೆ. ಹೀಗಿದ್ದರೂ ಗಟ್ಟಿಮುಟ್ಟಾಗಿವೆ. ಧೂಳು ಮತ್ತು ನೀರಿನಿಂದ ರಕ್ಷಿಸಲು ಐಪಿ55 ರೇಟಿಂಗ್ಸ್ ಹೊಂದಿದೆ. ಕಿವಿಯ ಗಾತ್ರಕ್ಕೆ ಅನುಗುಣವಾಗಿ ಮೂರು ರೀತಿಯ ಇಯರ್ ಟಿಪ್‌ಗಳನ್ನು ನೀಡಲಾಗಿದೆ. ಯುಎಸ್‌ಬಿ ಟೈಪ್–ಸಿ ಚಾರ್ಜಿಂಗ್ ಕೇಬಲ್ ಹೊಂದಿದೆ.

ಇಯರ್ ಕೇಸ್‌ನಿಂದ ಬಡ್ಸ್‌ಗಳನ್ನು ಹೊರತೆಗೆದಾಗ ಅವು ಆನ್ ಆಗಿ ಸಂಪರ್ಕಕ್ಕೆ ಬರುತ್ತವೆ. ಫೋನ್‌ನ ಬ್ಲೂಟೂತ್ ಆನ್ ಮಾಡಿ ಬಡ್ಸ್ ಎಂದು ಹುಡುಕಿ ಪರಸ್ಪರ ಸಂಪರ್ಕಿಸಬಹುದು. ಏಕಕಾಲಕ್ಕೆ ಎರಡು ಸಾಧನಗಳೊಂದಿಗೆ ಸಂಪರ್ಕಿಸಬಹುದಾಗಿದೆ.

ಚಾರ್ಜಿಂಗ್ ಕೇಸ್ 480 ಎಂಎಎಚ್ ಬ್ಯಾಟರಿ ಹೊಂದಿದ್ದರೆ, ಇಯರ್ ಬಡ್ ತಲಾ 41 ಎಂಎಎಚ್ ಬ್ಯಾಟರಿ ಹೊಂದಿವೆ. ಒಮ್ಮೆ ಚಾರ್ಜಿಂಗ್ ಕೇಸ್ ಪೂರ್ತಿ ಚಾರ್ಜ್ ಆದರೆ, ಅದರಿಂದ ಬಡ್ಸ್ ಅನ್ನು ಮೂರು ಬಾರಿ ಚಾರ್ಜ್ ಮಾಡಬಹುದು. ಅಲ್ಟ್ರಾ ಫಾಸ್ಟ್ ಚಾರ್ಜಿಂಗ್ ಸೌಲಭ್ಯ ಇದ್ದು, 10 ನಿಮಿಷ ಚಾರ್ಜ್ ಮಾಡಿದರೆ 5 ಗಂಟೆ ಬಳಸಬಹುದು. 7 ಗಂಟೆಗಳವರೆಗೆ ನಿರಂತರವಾಗಿ ಸಂಗೀತ ಆಲಿಸಬಹುದು. ಚಾರ್ಜಿಂಗ್ ಕೇಸ್‌ನಲ್ಲಿ ಇದ್ದಾಗ 30 ಗಂಟೆ ಬ್ಯಾಟರಿ ಬಾಳಿಕೆ ಬರುತ್ತದೆ.

ಬಡ್ಸ್ ಅನ್ನು ಕಿವಿಯಲ್ಲಿ ಇಟ್ಟುಕೊಂಡಿದ್ದಾಗ ಹೊರಗಿನ ಶಬ್ಧ ಕೇಳದಂತೆ ತಡೆಯುವ (ಎಐ ಎನ್‌ಸಿ) ವ್ಯವಸ್ಥೆಯು ಉತ್ತಮವಾಗಿದೆ. ಮನೆಯಿಂದ ಹೊರಗಡೆ ಓಡಾಡುವಾಗಲೂ ಫೋನಿನಲ್ಲಿ ನಮ್ಮೊಂದಿಗೆ ಮಾತನಾಡುತ್ತಿರುವವರಿಗೆ ನಮ್ಮ ಧ್ವನಿ ಸ್ಪಷ್ಟವಾಗಿ ಕೇಳುವುದಷ್ಟೇ ಅಲ್ಲದೆ, ಅವರ ಧ್ವನಿಯೂ ನಮಗೆ ಸ್ಪಷ್ಟವಾಗಿ ಕೇಳುತ್ತದೆ. ಹಾಡು ಕೇಳುವಾಗ, ವಿಡಿಯೊ ನೋಡುವಾಗಲೂ ಹೊರಗಿನ ಶಬ್ಧವು ನಮಗೆ ಕೇಳಿಸದಷ್ಟು ಸ್ಪಷ್ಟವಾಗಿತ್ತು.

ಹೇ-ಮೆಲೋಡಿ (HeyMelody) ಆ್ಯಪ್ ಮೂಲಕ ಆಂಡ್ರಾಯ್ಡ್ ಮತ್ತು ಐಒಎಸ್ ಸ್ಮಾರ್ಟ್‌ಫೋನ್‌ಗಳಲ್ಲಿ ಸೆಟ್ಟಿಂಗ್ಸ್ ಮಾಡಬಹುದು. ಒನ್‌ಪ್ಲಸ್ ಬಡ್ಸ್ ಪ್ರೊಗೆ ಹೋಲಿಸಿದರೆ ಇದರ ಬಳಕೆ ಸುಲಭವಾಗಿದೆ. ಬಡ್ಸ್ ಅನ್ನು ಒಂದು ಬಾರಿ ಟ್ಯಾಪ್ ಮಾಡಿದರೆ ಮ್ಯೂಸಿಕ್ ಪ್ಲೇ/ಪಾಸ್ ಆಗುತ್ತದೆ. ಎರಡು ಬಾರಿ ಟ್ಯಾಪ್ ಮಾಡಿದರೆ ಮುಂದಿನ ಹಾಡಿಗೆ ಹಾಗೆಯೇ ಮೂರು ಬಾರಿ ಟ್ಯಾಪ್ ಮಾಡಿದರೆ ಹಿಂದಿನ ಹಾಡಿಗೆ ಹೋಗುತ್ತದೆ.

ಕರೆ ಸ್ವೀಕರಿಸಲು ಅಥವಾ ಕರೆಯನ್ನು ಮುಗಿಸಲು ಎರಡು ಬಾರಿ ಟ್ಯಾಪ್ ಮಾಡಬೇಕು. ಫೋನ್ ನಮ್ಮ ಬಳಿ ಇಲ್ಲದೇ ಇದ್ದರೂ 10ಮೀಟರ್ ವ್ಯಾಪ್ತಿಯಲ್ಲಿ ಹಾಡು ಕೇಳಲು, ಮಾತನಾಡಲು ಇದನ್ನು ಬಳಸಬಹುದು. ಹೆಚ್ಚಿನ ಬೆಲೆಯ ಒನ್‌ಪ್ಲಸ್ ಬಡ್ಸ್ ಜೆಡ್2, ಒನ್‌ಪ್ಲಸ್ ಬಡ್ಸ್ ಪ್ರೊಗೆ ಹೋಲಿಸಿದರೆ ₹3 ಸಾವಿರದೊಳಗಿನ ಬೆಲೆಯಲ್ಲಿ ಖರೀದಿಸಲು ಉತ್ತಮ ಆಯ್ಕೆ ಇದಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಅಂದಂದಿನ ಕೆಲಸಗಳನ್ನು ಅಂದಂದೇ ಮಾಡಿ, ಆ ಬಗ್ಗೆ ಬಹಳವಾಗಿ ಚಿಂತನೆ ಮಾಡದೇ ಇರಬೇಕು. ಅದೇ ಒಳ್ಳೆಯ ಜೀವನ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಟಿಕಾಯತ್ ಮೇಲೆ ಹಲ್ಲೆ ರಾಜ್ಯದ ವರ್ಚಸ್ಸಿಗೆ ಮಸಿ

ಭಾರತೀಯ ಕಿಸಾನ್ ಒಕ್ಕೂಟದ ಮುಖಂಡ ರಾಕೇಶ್ ಟಿಕಾಯತ್ ಅವರ ಮೇಲೆ ಹಲ್ಲೆ ಮಾಡಿ, ಮಸಿ ಎರಚಿರುವುದು ಪ್ರತಿಯೊಬ್ಬರೂ ಖಂಡಿಸಬೇಕಾದ ಘಟನೆ. ಈ ಕುಕೃತ್ಯವನ್ನು ಯಾವುದೇ ದೃಷ್ಟಿಕೋನದಿಂದಲೂ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ರಾಜ್ಯದ ಜನರೂ ಇದನ್ನು ಒಪ್ಪುವುದಿಲ್ಲ. ಕರ್ನಾಟಕ ರಾಜ್ಯದ ವರ್ಚಸ್ಸಿಗೆ ಇದು ಮಸಿ ಬಳಿಯುವಂತಹ ಕೆಲಸವಿದು. ಇದರಿಂದ ಕರ್ನಾಟಕದ ಘನತೆ, ಗೌರವಕ್ಕೆ ಕುಂದುಂಟಾಗಿದೆ. ಪ್ರಜಾತಂತ್ರಾತ್ಮಕ ಮೌಲ್ಯಗಳ ಮೇಲೆ ನಂಬಿಕೆ ಇಟ್ಟುಕೊಂಡಿರುವ ಎಲ್ಲರೂ ಇದನ್ನು ಖಂಡಿಸಬೇಕಾಗಿದೆ. ರಾಜ್ಯ ಸರ್ಕಾರ ಯಾವುದೇ ಮುಲಾಜಿಲ್ಲದೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಆರೋಪಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ರಾಜ್ಯದಲ್ಲಿ ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳುವ ಹೊಣೆಗಾರಿಕೆಯೂ ಸರ್ಕಾರದ ಮೇಲಿದೆ. ರಾಕೇಶ್ ಟಿಕಾಯತ್ ಅವರು ದೇಶದ ಪ್ರಮುಖ ರೈತ ನಾಯಕ. ಕೃಷಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಜಾರಿಗೊಳಿಸಿದ್ದ ಕಾಯ್ದೆಗಳನ್ನು ವಿರೋಧಿಸಿ ದೆಹಲಿ ಬಳಿ ಬೃಹತ್ ಹೋರಾಟ ಸಂಘಟಿಸಿ, ಆ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವಂತೆ ಮಾಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ರೈತರ ಪರವಾದ ನಿರಂತರ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ರಾಜ್ಯದ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಅವರ ವಿರುದ್ಧ ಕೇಳಿಬಂದಿರುವ ಭ್ರಷ್ಟಾಚಾರ ಆರೋಪಗಳ ಕುರಿತಂತೆ ಚರ್ಚೆ ನಡೆಸಲು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ರೈತ ಮುಖಂಡರು ಬೆಂಗಳೂರಿನ ಗಾಂಧಿಭವನದಲ್ಲಿ ಆತ್ಮಾವಲೋಕನ ಮತ್ತು ಸ್ಪಷ್ಟೀಕರಣ ಸಭೆ ಆಯೋಜಿಸಿದ್ದರು. ರಾಜ್ಯದ ರೈತ ನಾಯಕರಲ್ಲದೆ ರಾಷ್ಟ್ರಮಟ್ಟದ ರೈತ ಮುಖಂಡರು ಈ ಸಭೆಯಲ್ಲಿ ಭಾಗಿಯಾಗಿದ್ದರು. ಸಭೆಯ ನಂತರ ಪತ್ರಿಕಾಗೋಷ್ಠಿ ನಡೆಯುತ್ತಿದ್ದ ಸಂದರ್ಭದಲ್ಲಿ 'ಭಾರತ ರಕ್ಷಣಾ ವೇದಿಕೆ' ಕಾರ್ಯಕರ್ತರು ಟಿಕಾಯತ್ ಮೇಲೆ ಹಲ್ಲೆ ನಡೆಸಿದ್ದಾರೆ. ಅವರ ಮೇಲೆ ಮಸಿ ಎರಚಿದ್ದಾರೆ. ಹಲ್ಲೆ ನಡೆಸಿದ ಆ ವೇದಿಕೆಯ ಅಧ್ಯಕ್ಷ ಭರತ್ ಶೆಟ್ಟಿ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಇನ್ನೂ ಕೆಲವು ಆರೋಪಿಗಳು ಪರಾರಿಯಾಗಿದ್ದಾರೆ. ಈ ಸಂದರ್ಭದಲ್ಲಿ ರೈತ ಸಂಘದ ಮುಖಂಡರು ಹಾಗೂ ಆರೋಪಿಗಳ ನಡುವೆ ಮಾರಾಮಾರಿ ಕೂಡ ನಡೆದಿದೆ. ಆರೋಪಿಗಳು 'ಮೋದಿ... ಮೋದಿ' ಎಂಬ ಘೋಷಣೆಯನ್ನು ಕೂಗುತ್ತಿದ್ದರು ಎಂದೂ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಟಿಕಾಯತ್ ಮೇಲೆ ಹಲ್ಲೆ ನಡೆಸಿರುವುದಕ್ಕೆ ನಿರ್ದಿಷ್ಟವಾದ ಕಾರಣ ಏನು? ಈ ಸಂಚಿನ ಹಿಂದೆ ಇರುವ ಶಕ್ತಿಗಳು ಯಾವುವು ಎಂಬುದನ್ನು ಪತ್ತೆ ಮಾಡಿ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ಮಾಡಬೇಕಾಗಿದೆ. ಟಿಕಾಯತ್ ಅವರು ರೈತ ಹೋರಾಟದ ಮೂಲಕ ಕೇಂದ್ರ ಸರ್ಕಾರವನ್ನು ಮಣಿಸಿದ್ದನ್ನು ಜೀರ್ಣಿಸಿಕೊಳ್ಳಲಾಗದ ಶಕ್ತಿಗಳು ಈ ಕೃತ್ಯದ ಹಿಂದಿರಬಹುದು ಎಂಬ ಅನುಮಾನಗಳು ಇವೆ. ಈ ಬಗ್ಗೆಯೂ ನಿಷ್ಪಕ್ಷಪಾತ ತನಿಖೆ ನಡೆಯಲಿ.

ಈ ಕೃತ್ಯದ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು

ಈ ಹಿಂದೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ರಾಜ್ಯಕ್ಕೆ ಭೇಟಿ ನೀಡಿದ್ದಾಗ ಅವರ ಮುಖಕ್ಕೂ ಮಸಿ ಬಳಿಯಲಾಗಿತ್ತು. ಅದಕ್ಕೆ ಕಾರಣರಾದವರಿಗೆ ಸೂಕ್ತ ಶಿಕ್ಷೆಯಾಗಿದ್ದರೆ ಇಂತಹ ಘಟನೆ ಮರುಕಳಿಸುತ್ತಿರಲಿಲ್ಲ. ಯಾವುದೇ ವಿಷಯದ ಬಗ್ಗೆ ಭಿನ್ನಾಭಿಪ್ರಾಯ ಇದ್ದರೆ ಅದನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದು. ಅದನ್ನು ಬಿಟ್ಟು ಯಾವುದೇ ವ್ಯಕ್ತಿಗೆ ಮಸಿ ಬಳಿಯುವುದು, ಹಲ್ಲೆ ನಡೆಸುವುದು ಅಕ್ಷಮ್ಯ. ಟಿಕಾಯತ್ ಅವರ ಮೇಲೆ ಹಲ್ಲೆ ನಡೆದ ಸಂದರ್ಭದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಇರಲಿಲ್ಲ. ಸ್ಥಳದಲ್ಲಿದ್ದ ಪೊಲೀಸರೂ ಮೂಕಪ್ರೇಕ್ಷಕರಾಗಿದ್ದರು ಎಂದು ರೈತ ಮುಖಂಡರು ಆರೋಪಿಸಿದ್ದಾರೆ. ಈ ಬಗ್ಗೆ ಕೂಡ ಸೂಕ್ತ ತನಿಖೆಯಾಗಬೇಕು. ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ರೈತ ನಾಯಕರು ಸಭೆ ನಡೆಸುತ್ತಿದ್ದಾರೆ ಹಾಗೂ ಈ ಸಭೆಯಲ್ಲಿ ರಾಷ್ಟ್ರಮಟ್ಟದ ರೈತ ಮುಖಂಡರು ಭಾಗಿಯಾಗುತ್ತಿದ್ದಾರೆ ಎಂಬುದು ಪೊಲೀಸರಿಗೆ ತಿಳಿದಿದ್ದರೂ ಸೂಕ್ತ ಬಂದೋಬಸ್ತ್ ಮಾಡದೇ ಇದ್ದುದು ಗಂಭೀರ ಲೋಪ. ಅಲ್ಲದೆ, ರಾಷ್ಟ್ರಮಟ್ಟದ ರೈತ ಮುಖಂಡರ ಮೇಲೆ ಹಲ್ಲೆ ನಡೆಯಬಹುದಾದ ಸಾಧ್ಯತೆ ಕುರಿತು ಮಾಹಿತಿ ಸಂಗ್ರಹಿಸಿ, ದಾಳಿ ತಡೆಗೆ ಮುನ್ನೆಚ್ಚರಿಕೆ ವಹಿಸದೇ ಇದ್ದುದು ಗುಪ್ತಚರ ಇಲಾಖೆಯ ವೈಫಲ್ಯ. ಈ ಬಗ್ಗೆ ಕೂಡ ರಾಜ್ಯ ಸರ್ಕಾರ ಗಮನ ಹರಿಸಬೇಕಾಗಿದೆ. ಹೋರಾಟಗಾರರು ಪತ್ರಿಕಾಗೋಷ್ಠಿ ನಡೆಸಿ ತಮ್ಮ ಅಭಿಪ್ರಾಯವನ್ನು ಹೇಳಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗುವುದು ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಭೂಷಣವಲ್ಲ. ಯಾವುದೇ ಕಾರಣಕ್ಕೂ ಇಂತಹ ಗೂಂಡಾಗಿರಿಗೆ ಅವಕಾಶ ನೀಡಬಾರದು. ಘಟನೆಯ ಬಗ್ಗೆ ನಿಷ್ಪಕ್ಷಪಾತ ಮತ್ತು ಪ್ರಾಮಾಣಿಕ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಮಾಡಬೇಕು. ಆ ಮೂಲಕ ತಂಟೆಕೋರರಿಗೆ ಪ್ರಬಲವಾದ ಸಂದೇಶವನ್ನು ರವಾನಿಸಬೇಕು. ಜೊತೆಗೆ ರಾಜ್ಯದ ಘನತೆ, ಗೌರವವನ್ನು ಉಳಿಸಬೇಕು.

ಶೃಂಗಸಭೆಯಲ್ಲಿ ಆಗಬಹುದೆಂದು ನಿರೀಕ್ಷಿಸಿದ್ದೇ ಬೇರೆ, ಆಗಿದ್ದೇ ಬೇರೆ

ಕ್ವಾಡ್: ಭಾರತದ ನಿಲುವಿಗೆ ಬಲ ತುಂಬಿತೇ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಪ್ರಧಾನಿ ನರೇಂದ್ರ ಮೋದಿ ಅವರು ಕ್ವಾಡ್ ಶೃಂಗಸಭೆಯಲ್ಲಿ ಭಾಗಿಯಾಗಲು ಇತ್ತೀಚೆಗೆ ಟೋಕಿಯೊಕ್ಕೆ ಹೊರಟು ನಿಂತಾಗ, ಈ ಶೃಂಗಸಭೆಯಲ್ಲಿ ಉಕ್ರೇನ್ ವಿಷಯ ಪ್ರಸ್ತಾಪವಾಗಬಹುದು, ರಷ್ಯಾ ಕುರಿತಂತೆ ಭಾರತ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಎಂಬ ಒತ್ತಡ ಅಮೆರಿಕದಿಂದ ಬರಬಹುದು ಎನ್ನಲಾಗಿತ್ತು. ರಷ್ಯಾ ವಿರುದ್ಧ ದಿಗ್ಬಂಧನ ಹೇರಿರುವ ಜಪಾನ್ ಮತ್ತು ಆಸ್ಟ್ರೇಲಿಯಾ ಕೂಡ ಅಮೆರಿಕದೊಂದಿಗೆ ಧ್ವನಿ ಸೇರಿಸಬಹುದು, ಹಾಗಾಗಿ ಕ್ವಾಡ್ ಒಕ್ಕೂಟದ ನಾಯಕರನ್ನು ಈ ಮುಖಾಮುಖಿ ಸಭೆಯಲ್ಲಿ ಎದುರಿಸುವುದು ಪ್ರಧಾನಿ ಮೋದಿ ಅವರಿಗೆ ಕಠಿಣವಾಗಬಹುದು ಎಂದು ವಿಶ್ಲೇಷಿಸಲಾಗಿತ್ತು. ಆದರೆ ಅಲ್ಲಿ ಆದದ್ದೇ ಬೇರೆ.

ಉಕ್ರೇನ್ ಮತ್ತು ರಷ್ಯಾದ ವಿಷಯ ಮುಖ್ಯ ಚರ್ಚೆಯ ಭಾಗವಾಗಲಿಲ್ಲ. ಜಂಟಿ ಹೇಳಿಕೆಯಲ್ಲಿ ನುಸುಳಲಿಲ್ಲ. ಕೊರೊನಾ ನಿರ್ವಹಣೆಯ ವಿಷಯದಲ್ಲಿ ಭಾರತಕ್ಕೆ ಮೆಚ್ಚುಗೆ ದೊರೆಯಿತು. ತೈವಾನ್ ಕುರಿತ ಚೀನಾದ ಧೋರಣೆಯ ಬಗ್ಗೆ ಮಾತು ಬಂತು. ಪತ್ರಿಕಾಗೋಷ್ಠಿಯ ವೇಳೆ ಅಮೆರಿಕದ ಅಧ್ಯಕ್ಷ ಜೋ ಬೈಡನ್ 'ಬಲವಂತದಿಂದ ತೈವಾನ್ ವಶಪಡಿಸಿಕೊಳ್ಳಲು ಚೀನಾ ಮುಂದಾದರೆ, ತೈವಾನ್ ಬೆಂಬಲಕ್ಕೆ ಅಮೆರಿಕ ನಿಲ್ಲಲಿದೆ' ಎಂದು ಘೋಷಿಸಿದರು. ಶೃಂಗಸಭೆ ಮುಗಿಸಿ ಮಂದಹಾಸದೊಂದಿಗೆ ಪ್ರಧಾನಿ ಮೋದಿ ಭಾರತಕ್ಕೆ ಹಿಂದಿರುಗಿದರು.

ಹಾಗಾದರೆ, ರಷ್ಯಾ ಕುರಿತ ಭಾರತದ ನಿಲುವಿನ ಬಗ್ಗೆ ಚರ್ಚೆ ಏಕೆ ನಡೆಯಲಿಲ್ಲ? ಜಪಾನ್ ಮತ್ತು ಆಸ್ಟ್ರೇಲಿಯಾದ ವಿಷಯ ಬಿಡಿ, ಉಕ್ರೇನ್ ಮೂಲಕ ರಷ್ಯಾಕ್ಕೆ ಪಾಠ ಕಲಿಸಲು ಟೊಂಕಕಟ್ಟಿ ನಿಂತಿರುವ ಅಮೆರಿಕದ ಅಧ್ಯಕ್ಷ ಬೈಡನ್ ಅವರಾದರೂ ಭಾರತದ ನಿಲುವನ್ನು ಟೀಕಿಸಬೇಕಿತ್ತು. 'ನೀವು ಅಮೆರಿಕ ಮತ್ತು ರಷ್ಯಾ ಎರಡರ ಜೊತೆಗೂ ಉತ್ತಮ ಬಾಂಧವ್ಯ ಉಳಿಸಿಕೊಳ್ಳಲು ಸಾಧ್ಯವಿಲ್ಲ' ಎಂಬ ಕಠಿಣ ಮಾತು ಆಡಬೇಕಿತ್ತು. ಆದರೆ ಹಾಗಾಗಲಿಲ್ಲ.

ಈ ಹಿಂದೆ ವಿಶ್ವಸಂಸ್ಥೆಯಲ್ಲಿ ರಷ್ಯಾ ವಿರುದ್ಧದ ನಿರ್ಣಯಗಳಿಗೆ ಮತ ಹಾಕದೇ ಭಾರತ ತಟಸ್ಥ ನಿಲುವು ಪ್ರಕಟಿಸಿದಾಗ, ಭಾರತ ಚಂಚಲ ನಿಲುವು ಹೊಂದಿದೆ ಎಂದು ಬೈಡನ್ ಪ್ರತಿಕ್ರಿಯಿಸಿದ್ದರು. ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತವು ಉಕ್ರೇನ್ ಪರ ನಿಲ್ಲಬೇಕು, ಭಾರತದ ತಟಸ್ಥ ನಿಲುವು ಮುಂದೆ ದುಬಾರಿಯಾಗಲಿದೆ, ಭಾರತ ಮತ್ತು ಅಮೆರಿಕದ ನಡುವಿನ ಸಂಬಂಧದ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ಅಮೆರಿಕದ ಕೆಲವು ಸಂಸದರು ವ್ಯಾಖ್ಯಾನಿಸಿದ್ದರು. ಇದೇ ಅಭಿಪ್ರಾಯ ಭಾರತದ ಒಳಗೂ ಸಣ್ಣಗೆ ಪ್ರತಿಧ್ವನಿಸಿತ್ತು.

ಆದರೆ ಹಿರಿಯಣ್ಣನ ಅಂಗಳದಿಂದ ಎಷ್ಟೇ ಟೀಕೆ, ಒತ್ತಡ ಬಂದರೂ ಭಾರತ ತನ್ನ ನಿಲುವಿನ ಕುರಿತು ಮರು-ಯೋಚಿಸಲಿಲ್ಲ. ಉಕ್ರೇನ್ ಮತ್ತು ರಷ್ಯಾ ನಡುವಿನ ಬಿಕ್ಕಟ್ಟು ಆ ಎರಡು ದೇಶಗಳು ಸೃಷ್ಟಿಸಿಕೊಂಡದ್ದು, ಮಾತುಕತೆಯ ಮೂಲಕವೇ ಪರಿಹಾರ ಕಂಡುಕೊಳ್ಳಬೇಕು ಎಂಬ ಬಗ್ಗೆ ಭಾರತಕ್ಕೆ ಸ್ಪಷ್ಟತೆಯಿತ್ತು. ಮುಖ್ಯವಾಗಿ ಮೂರು ಕಾರಣಗಳಿಂದಾಗಿ ರಷ್ಯಾವನ್ನು ಬಿಟ್ಟುಕೊಡುವ ಸ್ಥಿತಿಯಲ್ಲಿ ಭಾರತ ಇರಲಿಲ್ಲ. ಮೊದಲನೆಯದು, ರಷ್ಯಾ--ಭಾರತದ ನಡುವಿನ ದಶಕಗಳ ಸಖ್ಯ. ಈ ಹಿಂದೆ ಅಮೆರಿಕವು ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತವನ್ನು ಪ್ರೋತ್ಸಾಹಿಸುತ್ತಾ, ಪಾಕಿಸ್ತಾನದ ಬಗಲಿಗೆ ನಿಂತು ಭಾರತದೊಂದಿಗೆ ಅಂತರವನ್ನು ಕಾಯ್ದುಕೊಂಡಾಗ, 70ರ ದಶಕದಲ್ಲಿ ನಿಕ್ಸನ್ ಮತ್ತು ಕಿಸ್ಸಿಂಜರ್‌ದ್ವಯರು ಚೀನಾದ ಜೊತೆ ಹೆಣೆದುಕೊಳ್ಳುವ ಉಮೇದಿನಲ್ಲಿ ಭಾರತವನ್ನು ಕಡೆಗಣಿಸಿದಾಗ ನಮ್ಮ ಜೊತೆಗೆ ನಿಂತದ್ದು ರಷ್ಯಾ. ಕಾಶ್ಮೀರದ ವಿಷಯ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಪ್ರಸ್ತಾಪವಾಗಿ ಪಾಕಿಸ್ತಾನದ ಪರ ಚೀನಾ ವಕಾಲತ್ತು ವಹಿಸಿದ ಸಂದರ್ಭದಲ್ಲಿ ಬ್ರಿಟನ್, ಅಮೆರಿಕ, ಫ್ರಾನ್ಸ್ ದೇಶಗಳು ತಟಸ್ಥ ನಿಲುವು ತಳೆದಾಗ ತನ್ನ ವಿಟೊ ಅಧಿಕಾರ ಬಳಸಿ ಭಾರತದ ವಿರುದ್ಧ ಯಾವುದೇ ನಿರ್ಣಯ ಊರ್ಜಿತಗೊಳ್ಳದಂತೆ ತಡೆದದ್ದು ರಷ್ಯಾ. ಆ ಸಂಗತಿಗಳನ್ನು ನಾವು ಮರೆಯುವಂತಿರಲಿಲ್ಲ.

ಎರಡನೆಯದು, ಭದ್ರತಾ ಸಹಕಾರ. ನಮ್ಮ ಸೇನೆಗೆ ಬೇಕಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿರುವುದು, ಹಳೆಯ ಯುದ್ಧಯಂತ್ರಗಳ ದುರಸ್ತಿಗೆ ಬೇಕಾದ ಬಿಡಿ ಭಾಗಗಳನ್ನು ಪೂರೈಸುತ್ತಿರುವುದು ರಷ್ಯಾ. ನಿಜ, ಇದೀಗ ನಾವು ಶಸ್ತ್ರಾಸ್ತ್ರಗಳನ್ನು ಅಮೆರಿಕ, ಫ್ರಾನ್ಸ್, ಇಸ್ರೇಲ್ ದೇಶಗಳಿಂದಲೂ ತರಿಸಿಕೊಳ್ಳುತ್ತಿದ್ದೇವೆ. ಹಾಗಾಗಿ ಸಂಪೂರ್ಣವಾಗಿ ರಷ್ಯಾವನ್ನು ನೆಚ್ಚಿಕೊಳ್ಳಬೇಕಿಲ್ಲ. ಆದರೆ ರಷ್ಯಾವನ್ನು ಬಿಟ್ಟುಕೊಡದಿರಲು ಭಾರತ ನಿರ್ಧರಿಸಿದ್ದು ಮುಖ್ಯವಾಗಿ ಚೀನಾದ ದೃಷ್ಟಿಯಿಂದ. ಒಂದೊಮ್ಮೆ ಅಮೆರಿಕವನ್ನು ನೆಚ್ಚಿಕೊಂಡು ರಷ್ಯಾದ ವಿರುದ್ಧ ಭಾರತ ನಿಲುವು ತಳೆದರೆ, ಚೀನಾ ಮತ್ತು ರಷ್ಯಾ ನಡುವಿನ ಬಂಧ ಬಿಗಿಯಾಗಬಹುದು. ಚೀನಾ ಮತ್ತು ಅಮೆರಿಕದ ನಡುವಿನ ಶೀತಲ ಸಮರಕ್ಕೆ ಮತ್ತೊಂದು ಆಯಾಮ ಜೋಡಣೆಯಾಗಬಹುದು. ದೂರದ ಅಮೆರಿಕಕ್ಕೆ ಪಾಠ ಕಲಿಸಲು ಚೀನಾ-ರಷ್ಯಾ ನಿಂತರೆ, ಈ ರಾಷ್ಟ್ರಗಳಿಗೆ ಸನಿಹದಲ್ಲೇ ಇರುವ ಭಾರತ ಪ್ರತೀಕಾರದ ಅಂಗಳವಾಗಬಹುದು ಎಂಬ ವಾಸ್ತವದ ಅರಿವು ನಮಗಿತ್ತು. ಹಾಗಾಗಿಯೇ ಹಿರಿಯಣ್ಣನ ಒತ್ತಡದ ನಡುವೆಯೂ ಭಾರತ ತಟಸ್ಥ ಧೋರಣೆಗೆ ಅಂಟಿಕೊಂಡಿತು.

ಮಿಗಿಲಾಗಿ, ರಷ್ಯಾದ ಜೊತೆ ವ್ಯಾವಹಾರಿಕ ಸಂಬಂಧ ಇಟ್ಟುಕೊಳ್ಳುವ ತನ್ನ ಧೋರಣೆಯನ್ನು ಜಾಗತಿಕ ವೇದಿಕೆಗಳಲ್ಲಿ ಭಾರತ ಸಮರ್ಥಿಸಿಕೊಂಡಿತು. 'ಕೇವಲ ನಾವಷ್ಟೇ ಅಲ್ಲ, ಪಶ್ಚಿಮ ಯುರೋಪಿನ ರಾಷ್ಟ್ರಗಳು ರಷ್ಯಾದಿಂದ ಭಾರತ ಖರೀದಿಸುವುದಕ್ಕಿಂತ ಹೆಚ್ಚಿನ ಇಂಧನವನ್ನು ಇಂದಿಗೂ ಖರೀದಿಸುತ್ತಿವೆ' ಎಂದು ಟೀಕೆಗೆ ತಿರುಗೇಟು ನೀಡಿತು. ರಷ್ಯಾ ಮೇಲಿನ ಅವಲಂಬನೆಯನ್ನು ಒಮ್ಮೆಲೇ ಕಡಿದುಕೊಳ್ಳುವುದು ಸಾಧ್ಯವಿಲ್ಲ ಎಂಬುದು ಐರೋಪ್ಯ ರಾಷ್ಟ್ರಗಳಿಗೂ ಅರಿವಾಗತೊಡಗಿತು. ಅವು ಭಾರತದ ವಿರುದ್ಧ ಮಾತನಾಡಲಿಲ್ಲ. ಮೋದಿ ಅವರು ಇತ್ತೀಚೆಗೆ ಜರ್ಮನಿಗೆ ಭೇಟಿ ಕೊಟ್ಟಾಗ, ರಷ್ಯಾ ಕುರಿತ ಭಾರತದ ಧೋರಣೆಯನ್ನು ಜರ್ಮನಿ ಅನುಮೋದಿಸಿತು. ಒತ್ತಡ ಹೇರಿ ಭಾರತದ ನಿಲುವನ್ನು ಬದಲಿಸಲಾಗದು ಎಂಬುದು ಮನವರಿಕೆಯಾದ ಮೇಲೆ ಅಮೆರಿಕವೂ ಪಟ್ಟು ಸಡಿಲಿಸಿತು. ಹಾಗಾಗಿ ಟೋಕಿಯೊದ ಕ್ವಾಡ್ ಶೃಂಗಸಭೆಯಲ್ಲಿ ರಷ್ಯಾ ಕುರಿತ ಭಾರತದ ನಿಲುವಿನ ಬಗ್ಗೆ ಚರ್ಚೆ ನಡೆಯಲಿಲ್ಲ.

ಹಾಗಾದರೆ ಈ ಬಾರಿಯ ಕ್ವಾಡ್ ಶೃಂಗಸಭೆ ರವಾನಿಸಿದ ಸಂದೇಶವೇನು? ಕ್ವಾಡ್ ಒಕ್ಕೂಟ ರಚಿಸುವ ಸಂದರ್ಭದಲ್ಲಿ ಅಮೆರಿಕ ಮತ್ತು ಜಪಾನ್ ಈ ಒಕ್ಕೂಟವನ್ನು 'ಏಷ್ಯಾದ ಪ್ರಜಾಪ್ರಭುತ್ವದ ಕಮಾನು' ಎಂದು ಕರೆದರೆ, 'ಏಷ್ಯಾದ ನ್ಯಾಟೊ' ಎಂದು ಚೀನಾ ಕರೆದಿತ್ತು. ಒಕ್ಕೂಟದ ಮುಖ್ಯ ಆಶಯ ಪ್ರಾಂತೀಯವಾಗಿ ಚೀನಾ ಒಡ್ಡುವ ಸವಾಲನ್ನು ಎದುರಿಸುವುದಾಗಿತ್ತು. ಈ ಬಾರಿಯೂ ಆ ಕುರಿತ ಚರ್ಚೆಗಳಾದವು. ಶೃಂಗಸಭೆಯ ಹೊರಗೆ ತೈವಾನ್ ಕುರಿತು ಅಮೆರಿಕದ ಅಧ್ಯಕ್ಷ ಬೈಡನ್ ಮಾತನಾಡಿದರು. ತೈವಾನ್ ಮೇಲೆ ದಾಳಿಗೆ ಮುಂದಾಗಲು ಚೀನಾದ ಸೇನೆ ಸಿದ್ಧತೆ ನಡೆಸುತ್ತಿದೆ ಎಂಬ ಮಾಹಿತಿ ಬಹಿರಂಗಗೊಂಡ ಹಿನ್ನೆಲೆಯಲ್ಲಿ ಬೈಡನ್ ಈ ಮಾತುಗಳನ್ನು ಆಡಿದರೇ? ಅಷ್ಟೇ ಇರಲಾರದು. ಉಕ್ರೇನ್ ಯುದ್ಧದಲ್ಲಿ ರಷ್ಯಾಕ್ಕೆ ಚೀನಾ ಪರೋಕ್ಷವಾಗಿ ಸಹಾಯ ಮಾಡುತ್ತಿದೆ, ಆ ಕಾರಣದಿಂದಲೇ ಆರ್ಥಿಕ ದಿಗ್ಬಂಧನಗಳನ್ನು ರಷ್ಯಾ ತಾಳಿಕೊಳ್ಳಲು ಸಾಧ್ಯವಾಗಿದೆ ಎಂಬ ಮಾತು ಪಶ್ಚಿಮ ಜಗತ್ತಿನಲ್ಲಿ ಕೇಳಿಬರುತ್ತಿದೆ. ಹಾಗಾಗಿ ಒಂದೊಮ್ಮೆ ನೀವು ಅದೇ ಹಾದಿಯಲ್ಲಿ ಮುಂದುವರಿದರೆ, ತೈವಾನ್ ವಿಷಯದಲ್ಲಿ ನಮ್ಮನ್ನು ಎದುರಿಸಬೇಕಾದೀತು ಎಂಬ ಎಚ್ಚರಿಕೆಯೂ ಬೈಡನ್ ಅವರ ಮಾತಿನಲ್ಲಿ ಇರಬಹುದು.

ಭಾರತದ ದೃಷ್ಟಿಯಿಂದ ನೋಡುವುದಾದರೆ, ರಷ್ಯಾದ ಜೊತೆ ಸಂಬಂಧ ಕಾಯ್ದುಕೊಂಡೂ, ಅಮೆರಿಕ ನೇತೃತ್ವದ ಯಾವುದೇ ಒಕ್ಕೂಟದಲ್ಲಿ ಭಾರತ ಆತ್ಮವಿಶ್ವಾಸದಿಂದ ಪಾಲ್ಗೊಳ್ಳಬಹುದು ಎಂಬುದನ್ನು ಈ ಶೃಂಗಸಭೆ ತೋರಿಸಿದೆ. ಕ್ವಾಡ್‌ನಂತಹ ಯಾವುದೇ ಒಕ್ಕೂಟದ ಭಾಗವಾಗಿದ್ದೇವೆ ಎಂದ ಮಾತ್ರಕ್ಕೆ ಭಾರತದ ಆಯ್ಕೆಗಳನ್ನು ಇತರ ರಾಷ್ಟ್ರಗಳು ನಿರ್ಧರಿಸಲು ಸಾಧ್ಯವಿಲ್ಲ ಎಂಬ ಸಂದೇಶ ರವಾನೆಯಾಗಿದೆ. ಉಕ್ರೇನ್ ಯುದ್ಧದ ವಿಷಯದಲ್ಲಿ ಭಾರತದ ತಟಸ್ಥ ನಿಲುವಿನ ಕುರಿತು ಮೊದಲಿಗೆ ಟೀಕೆಗಳು ಬಂದರೂ, ಇದೀಗ ಆ ನಿಲುವು ಪಶ್ಚಿಮ ಜಗತ್ತಿಗೂ ಒಪ್ಪಿತವಾದಂತೆ ಕಾಣುತ್ತಿದೆ. ಭಾರತದ 'ದೇಶ ಮೊದಲು' ನೀತಿಗೆ ಹೆಚ್ಚಿನ ಬಲ ಬಂದಿದೆ.

ಚುರುಮುರಿ



'ಮಾರ್ಕ್ಸ್' ವಾದ!

• ಚಂದ್ರಕಾಂತ ವಡ್ಡು

ತಿಂಗಳೇಶ ಸ್ನಾನ ಮುಗಿಸಿ ಬರುವುದನ್ನೇ ಕಾಯ್ತಿದ್ದ ಮಡದಿ ಬಹಳ ಉತ್ಸಾಹದಿಂದಿದ್ದಳು: 'ರೀ... ಬದ್ರಿ ಫೋನ್ ಮಾಡಿದ್ರು. ಅರ್ಜೆಂಟಾಗಿ ಅವರ ಮನೆಗೆ ಹೋಗಬೇಕಂತೆ'.

'ಯಾಕೆ? ಸಾಲ ವಾಪಸ್ ಕೊಡ್ತಾನಂತೇನು?'

'ಅದ್ಕ ಇರ್ಬೇಕು. ಜಲ್ದೀ ಹೋಗಿ ಇಸಗೊಂಡು ಬರ್ರಿ' ಹೆಂಡತಿ ಆಸೆ ಹುಟ್ಟಿಸಿ ಅವಸರಿಸಿದಳು.

ದೆಹಲಿ ವಿಮಾನ ಏರುವ ಸಚಿವಾಕಾಂಕ್ಷಿ ಶಾಸಕನಂತೆ ಅದೆಷ್ಟನೇ ಸಾರಿಯೋ ಬದ್ರಿ ಮನೆ ಕಡೆ ವಸೂಲಿಗೆ ಹೊರಟ ತಿಂಗಳೇಶ. 'ಈ ಸಲನೂ ಸಿಎಮ್ಮರಂತೆ ಬರಿಗೈಯಲ್ಲಿ ಬರಬಾರದು ನೋಡ್ರಿ' ಎಂದು ಹೆಂಡತಿ ಎಚ್ಚರಿಸಿದಳು.

ಬದ್ರಿ ಮನೆಯಲ್ಲಿ ಐ.ಟಿ. ರೇಡ್ ಮೌನ ಆವರಿಸಿತ್ತು. ತಿಂಗಳೇಶನ ಆಗಮನವನ್ನೂ ಗಮನಿಸದೆ ತಲೆಗೆ ಕೈಹೊತ್ತು ಕುಳಿತಿದ್ದರು ಬದ್ರಿ ದಂಪತಿ. ಕೋಣೆಯೊಳಗಿನಿಂದ ದುಃಖಿಸುವ ದನಿ. ಸಾಲ ಮರುಪಾವತಿ ಸುಳಿವೇ ಇಲ್ಲ. ತಿಂಗಳೇಶನೇ ಮೌನ ಮುರಿದ: 'ಏನಾಯ್ತು?'

'ಎಸ್‌ಎಸ್‌ಎಲ್‌ಸಿಯಲ್ಲಿ 80 ಪರ್ಸೆಂಟ್ ತೊಗೊಂಡು ಅಳಕೋತ ಕುಂತಾನ ನನ್ನ ಮಗ'.

'ಅರೆ... ಡಿಸ್ಟಿಂಕ್ಷನ್ ತೊಗೊಂಡ್ರೂ ಅಳೋದೆ? ಎಂಥಾ ಕಾಲ, ಎಂಥಾ ಹುಡುಗ್ರು!'

'30 ತೊಗೊಂಡಿದ್ರೆ ರಾಜಕೀಯಕ್ಕೆ, 60 ತೊಗೊಂಡಿದ್ರೆ ಇಂಜಿನಿಯರಿಂಗ್, 90 ಆಗಿದ್ರೆ ಮೆಡಿಕಲ್‌ಗೆ ಸೇರಿಸಬಹುದಿತ್ತು, ಈಗ ಅತ್ಲಾಗೂ ಇಲ್ಲ, ಇತ್ಲಾಗೂ ಇಲ್ಲ' ಅಪ್ಪನ ಆಲೋಚನೆ 30, 60, 90 ಸುತ್ತಲೇ ಗಿರಕಿ!

'ಹೇಳೋಕಷ್ಟೇ ಬಲಪಂಥೀಯ ಸರ್ಕಾರ, ಮಾಡೋದೆಲ್ಲಾ ಎಡಪಂಥೀಯ ನಿರ್ಧಾರ!' ರಾಮಭಕ್ತ ಬದ್ರಿಯನ್ನು ಕೆಣಕಲು ಒಂದು ರಾಮಬಾಣ ಬಿಟ್ಟ ತಿಂಗಳೇಶ.

'ಅದೇನು ಹಂಗೇಳ್ತೀಯಾ... ಪಠ್ಯಪುಸ್ತಕಗಳೆಲ್ಲಾ ಬಲಮುಖಿ ಪರಿಷ್ಕರಣೆ ಆಗ್ತಿವೆ'.

'ಪುಸ್ತಕಗಳು ಎಷ್ಟೇ ಪರಿಷ್ಕರಣೆ ಆದ್ರೂ ವಿದ್ಯಾರ್ಥಿಗಳಿಗೆ ಪ್ರಯೋಜನವಿಲ್ಲ. ಕೊನೆಗೆ ನಿಲ್ಲೋದು 'ಮಾರ್ಕ್ಸ್' ವಾದ, ಗೆಲ್ಲೋರು 'ಮಾರ್ಕ್ಸ್' ವಾದಿಗಳು!

'ಹೌದು, ಪಠ್ಯದೊಳಗೆ ಹೆಡಗೇವಾರ್, ಸಾವರ್ಕರ್ ಯಾರೇ ಬಲಗಡೆಯಿಂದ ಎಂಟ್ರಿ ಕೊಟ್ರೂ ವಿದ್ಯಾರ್ಥಿಗಳಿಗೆ, ಪೋಷಕರಿಗೆ 'ಮಾರ್ಕ್ಸ್' ಬಿಟ್ಟರೆ ಗತಿಯಿಲ್ಲ!'

ದಿನದ ಟ್ವೀಟ್

ಇದೆಂಥ ನಿಲುವು?

ಕೇರಳದ ಕೋರ್ಟುಗಳ ಸಿಬ್ಬಂದಿಗೆ ಪ್ಯಾಂಟು- ಶರ್ಟಿನ ಸಮವಸ್ತ್ರ ಧರಿಸಿ ಬರುವ ಮಹಿಳಾ ವಕೀಲರೆಂದರೆ ಅಸಹ್ಯ. ಸಂಶೋಧಕ ಸಹಾಯಕ ಹುದ್ದೆಗೆ ಬರುವವರು ಮತ್ತು ಇಂಟರ್ನ್‌ಶಿಪ್ ಮಾಡಲು ಬರುವವರನ್ನೂ ಚೂಡಿದಾರ್/ಸೀರೆ ಹಾಕಬೇಕೆಂದು ಹಿಂಸಿಸುವುದುಂಟು. ಹಕ್ಕುಗಳನ್ನು ಎತ್ತಿ ಹಿಡಿಯಬೇಕಾದ ಸ್ಥಳದಲ್ಲಿ ಹೀಗಿದೆ ಸ್ಥಿತಿ. ನಮ್ಮಲ್ಲಿ (ಕರ್ನಾಟಕದಲ್ಲಿ) ಹೇಗಿದೆ?

ಮೈತ್ರೇಯಿ ಹೆಗಡೆ, ವಕೀಲೆ

ಕಿಡಿನುಡಿ

ಉಪನ್ಯಾಸಕ, ಕುಲಸಚಿವ, ಕುಲಪತಿಯ ಹುದ್ದೆಗಳ ನೇಮಕಾತಿ & ಅಭ್ಯರ್ಥಿಗಳ ಅರ್ಹತೆ, ಅಧಿಕಾರ ವ್ಯಾಪ್ತಿ ಇತ್ಯಾದಿಗಳಿಗೆ ಶಾಸನದ ಸ್ವರೂಪವಿದೆ. ಒಂದು ಪೀಳಿಗೆಯ ಬೌದ್ಧಿಕ ಸಾಮರ್ಥ್ಯವನ್ನು ಪ್ರಭಾವಿಸುವಂತಹ ಶಿಫಾರಸು ಮಾಡುವ ಶಾಲಾ ಕಾಲೇಜು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಸದಸ್ಯರ ನೇಮಕಾತಿಗೆ ಕೇವಲ ಸರ್ಕಾರದ ಆದೇಶ ಸಾಕೇ? ಶಾಸನ ಚೌಕಟ್ಟು ಬೇಡವೇ?

ಕೆ.ಬಿ.ಕೆ. ಸ್ವಾಮಿ, ವಕೀಲ

25 ವರ್ಷಗಳ ಹಿಂದೆ

ಭಾನುವಾರ, 1-6-1997

• **ವಿವಾದದ ಹೊಗೆಯಲ್ಲೇ ಬೆಳಗಿದ ರಾಷ್ಟ್ರೀಯ ಕ್ರೀಡಾಜ್ಯೋತಿ**

ಬೆಂಗಳೂರು, ಮೇ 31– ಆತಿಥೇಯ ಕ್ರೀಡಾಪಟುಗಳ ಅಸಮಾಧಾನದ ಹೊಗೆಯಲ್ಲೇ ಕ್ರೀಡಾಜ್ಯೋತಿ ಬೆಳಗಿದ ನಂತರ ಅದ್ದೂರಿಯ ಸಮಾರಂಭದ ಮಧ್ಯೆ ರಾಷ್ಟ್ರಪತಿ ಡಾ. ಶಂಕರ ದಯಾಳ ಶರ್ಮಾ, ನಾಲ್ಕನೇ ರಾಷ್ಟ್ರೀಯ ಕ್ರೀಡೆಗಳನ್ನು ಇಂದು ಸಂಜೆ ಉದ್ಘಾಟಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಮಧ್ಯಾಹ್ನದಿಂದಲೇ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರಿಗೆ ತೀರ ನಿರಾಶೆಯೇನೂ ಆಗಲಿಲ್ಲ. ಆರಂಭದಲ್ಲಿ ಕೆಲವು ಕಾರ್ಯಕ್ರಮಗಳು ನೀರಸವಾಗಿದ್ದರೂ ಕ್ರಮೇಣ ಕಾವೇರಿತು. ಡಾ. ರಾಜಕುಮಾರರ 'ಕ್ರೀಡಾಮೇಳ, ಚೇತನಶೀಲ' ಹಾಡಿಗೆ ಜನ ತಾಳ ಹಾಕಿದರು. ಮನರಂಜನಾ ಕಾರ್ಯಕ್ರಮಗಳು ಜನರನ್ನು ಕೊನೆಯವರೆಗೂ ಕ್ರೀಡಾಂಗಣದಲ್ಲಿ ಇರುವಂತೆ ಮಾಡಿದವು. ರಾಜಕಾರಣಿಗಳ ಭಾಷಣ ಯಾರಿಗೂ ಸರಿಯಾಗಿ ಕೇಳದಿದ್ದುದರ ಜೊತೆಗೆ ಜನರಿಗೆ ಅದರಲ್ಲಿ ಆಸಕ್ತಿಯೂ ಇದ್ದಂತಿರಲಿಲ್ಲ.

• **ಮೊಳಕಾಲ್ಮುರು: ಕಾಂಗ್ರೆಸ್‌ಗೆ ಜಯ**

ಚಿತ್ರದುರ್ಗ, ಮೇ 31– ಇಡೀ ರಾಜ್ಯದ ಗಮನ ಸೆಳೆದ ಮತ್ತು ರಾಜಕೀಯ ವಲಯದಲ್ಲಿ ತೀವ್ರ ಆಸಕ್ತಿ ಕೆರಳಿಸಿದ್ದ ಮೊಳಕಾಲ್ಮುರು ವಿಧಾನಸಭೆ ಕ್ಷೇತ್ರ ಕಾಂಗ್ರೆಸ್ ಪಾಲಾಗಿದೆ. ಆ ಪಕ್ಷದ ಅಭ್ಯರ್ಥಿ ಎನ್. ವೈ.ಗೋಪಾಲಕೃಷ್ಣ ಅವರು ಜನತಾದಳದ ಪಟೇಲ್ ಜಿ.ಎಂ.ತಿಪ್ಪೇಸ್ವಾಮಿ ವಿರುದ್ಧ 12107 ಮತಗಳ ಅಂತರದಿಂದ ಜಯ ಗಳಿಸಿದ್ದಾರೆ.

ದಳದ ಶಾಸಕರಾಗಿದ್ದ ಪೂರ್ಣಮುತ್ತಪ್ಪ ಅವರ ನಿಧನದಿಂದಾಗಿ ಇಲ್ಲಿ ಉಪಚುನಾವಣೆ ನಡೆದಿತ್ತು.

ರಾಜ್ಯದ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ಅಭ್ಯರ್ಥಿ ಮತ್ತು ಇತರ ಇಬ್ಬರು ಪಕ್ಷೇತರರು ಠೇವಣಿ ಕಳೆದುಕೊಂಡಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 1-6-1972

• **ರಾಷ್ಟ್ರದಾದ್ಯಂತ 10ರಿಂದ 18 ಸ್ಟ್ಯಾಂಡರ್ಡ್ ಎಕರೆಗಳ ಏಕರೂಪದ ಪರಿಮಿತಿ**

ನವದೆಹಲಿ, ಮೇ 31– ಭೂ ಪರಿಮಿತಿ ರಾಷ್ಟ್ರದಾದ್ಯಂತ 10ರಿಂದ 18 ಸ್ಟ್ಯಾಂಡರ್ಡ್ ಎಕರೆಗಳವರೆಗೆ ಏಕರೂಪವಾಗಿ ಇರುವಂತೆ ವಿಧಿಸಬೇಕೆಂದು ಭೂ ಸುಧಾರಣೆ ಕುರಿತ ಒಂದು ತಂಡ ನೆನ್ನೆ ರಾತ್ರಿ ಬಹಳ ಹೊತ್ತಾದ ಮೇಲೆ ಆಖೈರ್ ನಿರ್ಧಾರ ತೆಗೆದುಕೊಂಡಿತೆಂದು ಯೋಜನಾ ಸಚಿವ ಸಿ.ಸುಬ್ರಹ್ಮಣ್ಯಂ ಬಹಿರಂಗಪಡಿಸಿದರು.

ಈ ಪರಿಮಿತಿಯು ಸರ್ಕಾರಿ ಮತ್ತು ಖಾಸಗಿ ನೀರಾವರಿ ಮೂಲಗಳ ಮೂಲಕ ಸಾಗುವಳಿ ಮಾಡುವ ಭೂಮಿಗಳೆರಡಕ್ಕೂ ಅನ್ವಯಿಸುವುದೆಂದು ಅವರು ತಿಳಿಸಿದರು.

• **ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ನಿಲ್ಲಿಸಲು ಲೋಕಸಭೆ ಆಗ್ರಹ**

ನವದೆಹಲಿ, ಮೇ 31– ರಾಷ್ಟ್ರಗೀತೆಗೆ ಜನತೆ ಅಗೌರವ ತೋರುತ್ತಿರುವ ದೃಷ್ಟಿಯಿಂದ ಚಿತ್ರಮಂದಿರಗಳಲ್ಲಿ ಗೀತೆ ನುಡಿಸುವುದನ್ನು ನಿಲ್ಲಿಸಬೇಕೆಂದು ಅನೇಕ ಸದಸ್ಯರು ಇಂದು ಲೋಕಸಭೆಯಲ್ಲಿ ಒತ್ತಾಯಪಡಿಸಿದರು.

ವಾರ್ತಾ ಇಲಾಖೆ ಸ್ಟೇಟ್ ಸಚಿವೆ ನಂದಿನಿ ಸತ್ಪಥಿ ಅವರು ಈ ವಾದವನ್ನು ಒಪ್ಪಲಿಲ್ಲ.

ಸಂಗತ

ವಕ್ರ ಮನಸ್ಸಿನ ವಯಸ್ಕರು

ಮಕ್ಕಳ ಸಹಜ ಮಾನಸಿಕ ವಿಕಾಸಕ್ಕೆ ಅಡ್ಡಿಪಡಿಸುವ ವಯಸ್ಕರ ಸಂಕುಚಿತ ಭಾವಗಳಿಗೆ ತಡೆಯೊಡ್ಡಬೇಕಾಗಿದೆ

• ಡಾ. ಎ.ಶ್ರೀಧರ

ಹಲವು ತಿಂಗಳುಗಳ ಹಿಂದೆ ಅಮೆರಿಕದ 'ನ್ಯೂಯಾರ್ಕ್ ಟೈಮ್ಸ್' ದಿನಪತ್ರಿಕೆಯಲ್ಲಿ ಪಠ್ಯಪುಸ್ತಕಗಳ ಉಪಯುಕ್ತತೆ ಕುರಿತ ಲೇಖನವೊಂದಿತ್ತು. ಓದುಗರಿಂದ ಇದಕ್ಕೆ ಬಂದಿದ್ದ ಪ್ರತಿಕ್ರಿಯೆಗಳಲ್ಲಿ ಹೆಚ್ಚಿನವು ಮಾಜಿ ವಿದ್ಯಾರ್ಥಿಗಳ ಶಾಲಾ ಅನುಭವಗಳು. ಜೊತೆಯಲ್ಲಿ ಶಿಕ್ಷಕರು, ಪಾಲಕರ ಒಂದಿಷ್ಟು ಅಭಿಪ್ರಾಯಗಳೂ ಇದ್ದವು. ಪಠ್ಯಪುಸ್ತಕಗಳ ಪ್ರಭಾವವು ಪರೀಕ್ಷೆಗಳಿಗೆ ಮಾತ್ರ ಸೀಮಿತ, ವಿದ್ಯಾರ್ಥಿಗಳ ಅರಿವಿನ ಮೇಲೆ ಇದರ ಪರಿಣಾಮ ಕಡಿಮೆ ಎಂದು ತಿಳಿಸಿದ್ದವರೇ ಹೆಚ್ಚು. ಪಠ್ಯಪುಸ್ತಕಗಳು ಆಸಕ್ತಿ ಕೆರಳಿಸುವುದಕ್ಕಿಂತ ಹೆಚ್ಚಾಗಿ ಬೇಸರವನ್ನು ಹೆಚ್ಚಿಸುತ್ತವೆ ಎನ್ನುವ ಪ್ರತಿಕ್ರಿಯೆಗಳೂ ಇದ್ದವು.

ಬಹುಪಾಲು ಓದುಗರ ಪ್ರತಿಕ್ರಿಯೆಯಲ್ಲಿ ಎದ್ದು ಕಾಣಿಸುತ್ತಿದ್ದ ಸಂಗತಿ ಎಂದರೆ, ಶಾಲಾ ಕಲಿಕೆಯನ್ನು ನಿರ್ದಿಷ್ಟ ರಾಜಕೀಯ, ಧಾರ್ಮಿಕ ನಿಲುವುಗಳನ್ನು ಬಲವಂತದಿಂದ ಪರಿಚಯಿಸುವುದಕ್ಕೆ ಇದ್ದ ವಿರೋಧ. ಇತರರ ಬಗ್ಗೆ ನಕಾರಾತ್ಮಕ ಭಾವನೆ, ದುರಭಿಪ್ರಾಯಗಳನ್ನು ಪಾಠಗಳ ಮೂಲಕ ಪರೋಕ್ಷವಾಗಿ ಪರಿಚಯಿಸಲಾಗಿದೆ ಎನ್ನುವುದನ್ನೂ ವಾಚಕರ ಅಭಿಪ್ರಾಯಗಳು ಸೂಚಿಸಿದ್ದವು. ಎಲ್ಲ ವಯಸ್ಸಿನ ಮಕ್ಕಳ ಸಮಗ್ರ ಮಾನಸಿಕ ಬೆಳವಣಿಗೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಉತ್ತೇಜಿಸುವ ವಾತಾವರಣವೆಂದರೆ ಶಾಲೆ ಎಂಬುದು ಬಲ್ಲ ಅತಿ ಪುರಾತನ ಸತ್ಯ. ಮಕ್ಕಳ ಮನಸ್ಸೆಂಬುದು ಮೊಳಕೆಯೊಡೆದು ಚಿಗುರುವಂತೆ ಮಾಡುವ ಬಲವು ಶಾಲೆಯ ನೆಲದಲ್ಲಿದೆ. ಮಕ್ಕಳ ಮನೋವಿಕಾಸಕ್ಕೆ ಅಗತ್ಯವಿರುವ ಪೂರಕಾಂಶಗಳು ಶಾಲೆಯ ಆವರಣದಲ್ಲಿ ಸಿಗುವಷ್ಟು ಸುಲಭವಾಗಿ ಮಿಕ್ಕ ಯಾವ ವ್ಯವಸ್ಥೆಯಲ್ಲಿಯೂ ಸಿಗವು.

ಕಲಿಕೆಯ ಪ್ರಕ್ರಿಯೆಗಳು ನೆರವೇರುವ ವಿಧಾನವು ಒಂದು ಮಗುವಿನಲ್ಲಿ ಸಾಗಿದಂತೆ ಇನ್ನೊಂದು ಮಗುವಿನಲ್ಲಿ ಸಾಗದು. ಜೊತೆಯಲ್ಲಿ ಪಠ್ಯಪುಸ್ತಕಗಳ ಸಾಲುಗಳನ್ನು ಕಲಿಯುವುದಕ್ಕೆ ವಿಶೇಷ ಉತ್ಸಾಹಗಳಿರುವುದು ಅಪರೂಪ. ಹೀಗಾಗಿ ಪಠ್ಯಪುಸ್ತಕಗಳಲ್ಲಿ ಕಾಣಿಸಿಕೊಳ್ಳುವ ಉದಾತ್ತ ವಿಚಾರಗಳು ಎಷ್ಟೇ ವಿದ್ವತ್ಪೂರ್ಣವಾಗಿದ್ದರೂ ಕಲಿಯುವವರಿಗೆ ಅವು ಪರೀಕ್ಷೆಗೆ ಸಂಬಂಧಿಸಿದ ವಿಷಯಗಳಷ್ಟೇ.

ಮುಂದಿನ ತರಗತಿಗೆ ಸರಿಯುವುದರೊಂದಿಗೆ ಹಿಂದಿನ ಕಲಿಕೆಯು ಹಿಂದೆ ಸರಿಯುವುದು ಸಾಮಾನ್ಯ. ಆದುದರಿಂದ ನೆನಪಿನ ಸರಕಾಗಿ ಬರುವ ಪಠ್ಯಗಳು ಪರೀಕ್ಷೆಯ ನಂತರದ ವ್ಯಕ್ತಿತ್ವ ವಿಕಸನಕ್ಕೆ ನೆರವಾಗವು. ಪರೀಕ್ಷೆಯಲ್ಲಿ ತೇರ್ಗಡೆಯಾಗಲಿ, ಉತ್ತಮ ಅಂಕ ಗಳಿಸಲಿ ಎನ್ನುವ ಭಾವನೆಯು ಬೋಧಕರಲ್ಲಿಯೂ ನುಸುಳಿರುತ್ತದೆ. ಹೀಗಿದ್ದರೂ ಮಕ್ಕಳ ಮನಸ್ಸಿಗೆ ಉದಾತ್ತ ವಿಚಾರಗಳನ್ನು ಪರಿಚಯಿಸುವ ಉತ್ತಮ ಶಿಕ್ಷಕರು ಅಪರೂಪವಲ್ಲ. ಆದ್ದರಿಂದ ಶಾಲಾ ಮಕ್ಕಳ ಕಲಿಕೆಯ ಆವರಣದಲ್ಲಿ ಸಮಾಜ, ಸಂಸ್ಕೃತಿಗಳ ಅನುಭವ, ಅವಲೋಕನ ಮಾಡಿರುವ ಸೃಜನಶೀಲ, ಸಜ್ಜನರ ಬರಹಗಳನ್ನು, ಭಿನ್ನಾಭಿಪ್ರಾಯಗಳ ನಡುವೆಯೂ ಪರಿಚಯಿಸುವುದು ಮಕ್ಕಳ ಮನೋವಿಕಾಸದ ಹಿತದೃಷ್ಟಿಯಿಂದ ಬಹುಮುಖ್ಯ.

ಶಾಲಾ ವಯಸ್ಸಿನ ಮಕ್ಕಳ ವ್ಯಕ್ತಿತ್ವ ವಿಕಾಸ ನೆರವೇರುವುದಕ್ಕೆ ಬೇಕಾಗುವ ಪ್ರೇರಣೆಯು ತರಗತಿಯ ಹೊರಗಿನ ಸಾಮಾಜಿಕ ವಾತಾವರಣದಿಂದ ಸಿಗುವುದೇ ಹೆಚ್ಚು. ನಿಗದಿತ ಪಠ್ಯ, ಬೋಧನೆಗಳನ್ನು ಮೀರಿಸುವ ವಿಷಯ, ವಿಚಾರಗಳನ್ನು ತನ್ನದೇ ಆದ ರೀತಿಯಲ್ಲಿ ಶಾಲೆಯ ಆವರಣವು ಒದಗಿಸುತ್ತದೆ. ಒಂಟಿತನ, ಗೆಳೆತನ, ನಂಬಿಕೆ, ವಿರೋಧ, ಪ್ರತಿರೋಧದ ಭಾವನೆಗಳ ಮೂಲಕ ಹೊಸತನ ಮೂಡುವಂತೆ ಮಾಡುತ್ತದೆ. ವಿಭಿನ್ನ ಕೌಟುಂಬಿಕ ವಾತಾವರಣದಿಂದ ಶಾಲೆಗೆ ಬರುವ ಮಕ್ಕಳು ಮನೆಯ ವಾತಾವರಣವನ್ನು ಬದಿಗಿರಿಸಿ ಸಮವಯಸ್ಕರು, ಸಹಪಾಠಿಗಳೊಂದಿಗೆ ಬೆರೆಯುವುದರ ಮೂಲಕ ವಿಚಾರ ಮಾಡುವ, ವಿರೋಧಿಸುವ ಗುಣಗಳನ್ನು ಅನುಕರಣೆ, ಅನುಸರಣೆಯ ವಿಧಾನಗಳ ಮೂಲಕ ಕಲಿಯುತ್ತಾರೆ.

ತಂತ್ರಜ್ಞಾನದ ಮೂಲಕ ಹರಿದುಬರುತ್ತಿರುವ ಮಾಹಿತಿಗಳಿಗೆ ಇಂದು ಇತಿಮಿತಿಯೇ ಇಲ್ಲ. ಅರಿವು ಕೆಡಿಸುವ, ಪೂರ್ವಗ್ರಹ ಕೆದಕುವ ವಾದ ವಿವರಣೆಗಳನ್ನು ಬೇಕಾದಂತೆ ಸೃಷ್ಟಿಸಿ, ಸ್ಪಷ್ಟವಾಗಿ ಗೋಚರಿಸುವ ಸತ್ಯ-ಸಂಗತಿಗಳನ್ನು ತಿರುಚಿ ಹುಸಿಯಾಗಿಸುವ ಕುತಂತ್ರವು ಸಾಮಾನ್ಯವಾಗುತ್ತಿರುವ ಈ ಸಮಯದಲ್ಲಿ ಮಕ್ಕಳ ಮನೋವಿಕಾಸ ಮತ್ತು ಮಾನಸಿಕ ಆರೋಗ್ಯ ಹಾದಿಕೆಡದಂತೆ ಎಚ್ಚರ ವಹಿಸಬೇಕಿದೆ. ಮಾನಸಿಕ ಆರೋಗ್ಯ ಎನ್ನುವುದು ಕೇವಲ ಲವಲವಿಕೆಯಿಂದ ಇರುವುದು, ಕಿರಿಕಿರಿ ಮಾಡಿಕೊಳ್ಳದೆ ಸದಾ ಶಾಂತವಾಗಿ ಇರುವುದಕ್ಕಷ್ಟೇ ಸೀಮಿತವಾಗಿ ಇರುವುದಿಲ್ಲ.

ಉತ್ತಮ ಮಾನಸಿಕತೆ ವ್ಯಕ್ತಗೊಳ್ಳುವುದು ಈರ್ಷ್ಯೆ ಮತ್ತು ಹಗೆತನದ ಭಾವಗಳಿಂದ ಮೂಡುವ ನಕಾರಾತ್ಮಕ ವರ್ತನೆಗಳನ್ನು ನಿಗ್ರಹಿಸುವುದನ್ನು ಕಲಿತಾಗ. ನಕಾರಾತ್ಮಕ ಭಾವನೆಗಳನ್ನು ಬದಲಿಸುವ ಶಕ್ತಿಯು ಶಾಲೆಯ ಆವರಣದಲ್ಲಿ ಸರಾಗವಾಗಿ ಸಿಗುತ್ತದೆ. ಸಹಪಾಠಿಗಳು, ಸ್ನೇಹಿತರು ಮತ್ತು ಸಮವಯಸ್ಕರೊಂದಿಗಿನ ಪರಸ್ಪರ ಸಂಬಂಧ, ಸಂಪರ್ಕಗಳ ಮೂಲಕ ಇದು ಸಾಧ್ಯ ಎನ್ನುವುದನ್ನು ಅನುಭವಿಸದಿರುವ ವಿದ್ಯಾರ್ಥಿಗಳು ಅಪರೂಪ.

ನಾನಾ ರೀತಿಯಲ್ಲಿ ಆತ್ಮೀಯತೆಯ ಭಾವಗಳನ್ನು ಅನುಭವಿಸಲು ಸಾಧ್ಯವಿರುವಂತಹ ಸಹಜ ಮನೋಸಾಮಾಜಿಕ ಶುದ್ಧ ವಾತಾವರಣವನ್ನು ಶಾಲೆಯ ಆವರಣ ಹೇರಳವಾಗಿ ಕೊಡುತ್ತದೆ. ಮಕ್ಕಳ ಸಹಜ ಮಾನಸಿಕ ವಿಕಾಸಕ್ಕೆ ಅಡ್ಡಿಪಡಿಸುವ ವಕ್ರ ಮನಸ್ಸಿನ ವಯಸ್ಕರ ಸಂಕುಚಿತ ಭಾವಗಳಿಗೆ ತಡೆಯೊಡ್ಡುತ್ತಲೇ ಇರಬೇಕಾಗುತ್ತದೆ.

ಲೇಖಕ: ಮನೋವಿಜ್ಞಾನಿ

ವಾಚಕರ ವಾಣಿ

ಮಹಿಳಾ ಸಬಲೀಕರಣಕ್ಕೆ ನಿದರ್ಶನ

ಕೇಂದ್ರ ಲೋಕಸೇವಾ ಆಯೋಗ ನಡೆಸಿದ 2021ನೇ ಸಾಲಿನ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ 685 ಜನರಲ್ಲಿ 177 ಮಹಿಳೆಯರು ಇರುವುದು, ಅದರಲ್ಲಿ ಮೊದಲ ಮೂರು ಸ್ಥಾನಗಳನ್ನು ಮಹಿಳೆಯರೇ ಪಡೆದಿರುವುದು ಸಂತೋಷದ ಸಂಗತಿ. ಇದು, ಮಹಿಳಾ ಸಬಲೀಕರಣಕ್ಕೆ ಉತ್ತಮ ಉದಾಹರಣೆ. ಚಿಕ್ಕ ವಯಸ್ಸಿನಲ್ಲೇ ಮದುವೆಗೆ ಒತ್ತಾಯಿಸುವ ಬದಲು, ಅವಳಿಗೆ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಿ ಪ್ರೋತ್ಸಾಹಿಸಿದರೆ, ಯಶಸ್ಸು ಪಡೆಯುವುದು ಮಹಿಳೆಗೆ ದೊಡ್ಡ ಸಂಗತಿಯೇನಲ್ಲ.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಮನ್ನಣೆಯ ದಾಹಕ್ಕೆ ಕೊನೆಯಿಲ್ಲ

ಇತ್ತೀಚೆಗೆ ಟಿ.ವಿ. ಚಾನೆಲ್ ಒಂದರಲ್ಲಿ ನಟಿ ಶ್ರುತಿ ಅವರ ತಂದೆ-ತಾಯಿಯ ಸಂದರ್ಶನವನ್ನು ನೋಡುವ ಸಂದರ್ಭ ಒದಗಿಬಂತು. ಶ್ರುತಿ ಅವರ ತಂದೆ ಕೃಷ್ಣ ಅವರು ಇತ್ತೀಚೆಗೆ ಬಿಡುಗಡೆಯಾಗಿ ರಾಷ್ಟ್ರ ಮಟ್ಟದಲ್ಲಿ ಖ್ಯಾತಿ ಗಳಿಸಿದ ಕೆಜಿಎಫ್ ಚಿತ್ರದಲ್ಲಿ ನಾಯಕನ ತಂದೆಯ ಪಾತ್ರ ನಿರ್ವಹಿಸಿದ್ದಾರೆ. ಅಂತಹದ್ದೊಂದು ದೊಡ್ಡ ಚಿತ್ರದಲ್ಲಿ ಅವರಿಗೆ ಆ ಪಾತ್ರ ದೊರಕಿದ ಬಗ್ಗೆ ಪತಿ-ಪತ್ನಿ ಇಬ್ಬರೂ ಬಹು ಧನ್ಯರಾದಂತಿದ್ದು, ಆ ಚಿತ್ರದ ನಾಯಕ, ನಿರ್ಮಾಪಕ, ನಿರ್ದೇಶಕ ಹೀಗೆ ಎಲ್ಲರಿಗೂ ಕಾರ್ಯಕ್ರಮದಲ್ಲಿ ತುಂಬಾ ಧನ್ಯವಾದಗಳನ್ನು ಅರ್ಪಿಸುತ್ತಿದ್ದರು. ಅದು ಸಹಜವೂ ಹೌದು. ಆದರೆ ಆ ಭರದಲ್ಲಿ ಅವರು ಹೇಳಿದ ಮಾತೊಂದನ್ನು ಕೇಳಿ ಪಿಚ್ಚೆನಿಸಿತು. ಅವರು ಹೇಳಿದ ಮಾತಿನ ಸಾರಾಂಶ ಇಷ್ಟು: 'ಇದೊಂದು ಪಾತ್ರ ನನಗೆ ಇದುವರೆಗೂ ಸಿಗದ ಹೆಸರು, ಗೌರವ ಗಳಿಸಿಕೊಟ್ಟಿದೆ. ಈ ಪಾತ್ರದ ಮುಂದೆ ನಾನು 70 ವರ್ಷ ರಂಗಭೂಮಿಯಲ್ಲಿ ಪಾತ್ರ ಮಾಡಿ ಹೆಸರು ಗಳಿಸಿದ್ದು ಏನೇನೂ ಅಲ್ಲ. ನಾನು ಮುಂಚೆಯೇ ಚಿತ್ರರಂಗಕ್ಕೆ ಬರಬೇಕಿತ್ತು'.

ನಿಜ, ಖ್ಯಾತ ಚಿತ್ರವೊಂದರ ಭಾಗವಾಗುವುದು ಎಲ್ಲರಿಗೂ ಅಭಿಮಾನದ ವಿಷಯ. ಆದರೆ ಆ ಒಂದು ಪಾತ್ರಕ್ಕಾಗಿ ಇಷ್ಟು ವರ್ಷ ತಮ್ಮ ಜೀವನಕ್ಕೆ ಆಧಾರವಾಗಿದ್ದ, ತಮ್ಮನ್ನು, ತಮ್ಮ ಕುಟುಂಬವನ್ನು ಸಲಹಿದ, ಪ್ರಾಯಶಃ ಈ ಚಲನಚಿತ್ರದ ಪಾತ್ರಕ್ಕೆ ಭದ್ರ ಬುನಾದಿಯನ್ನು ಒದಗಿಸಿದ ರಂಗಭೂಮಿಯನ್ನು ತಿರಸ್ಕಾರದಿಂದ ಕಂಡಾಗ ಯಾಕೋ ಬೇಸರವಾಯಿತು. ಕೆಜಿಎಫ್ ಚಿತ್ರದ ತಂದೆಯ ಪಾತ್ರವೇನೂ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿರುವ 'ನಾಗರಹಾವು' ಚಲನಚಿತ್ರದ ಚಾಮಯ್ಯ ಮೇಷ್ಟ್ರು ಅಥವಾ ಒನಕೆ ಓಬವ್ವನ ಪಾತ್ರದಂತಹ ಸಕಾರಾತ್ಮಕ ಪಾತ್ರವಾಗಿರದೆ, ಕುಡುಕ ಗಂಡನ ಪಾತ್ರವಾಗಿದೆ. ಕೇವಲ ಅಂತಹದ್ದೊಂದು ಪಾತ್ರ ಮತ್ತು ಆ ಚಲನಚಿತ್ರದೊಂದಿಗೆ ಗುರುತಿಸಿಕೊಂಡು ಖ್ಯಾತರಾಗಲು ಅವರಾಡಿದ ಮಾತು ಡಿವಿಜಿ ಅವರ 'ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ, ಚಿನ್ನದಾತುರಕಿಂತ ಹೆಣ್ಣು-ಗಂಡೊಲವು, ಮನ್ನಣೆಯ ದಾಹವೀಯೆಲ್ಲಕಂ ತೀಕ್ಷ್ಣತಮ...' ಎಂಬ ಕಗ್ಗದ ಸಾಲುಗಳನ್ನು ನೆನಪಿಸಿತು. ಎಷ್ಟೊಂದು ನಿಜ!

ಮಂಜುನಾಥ ಎಸ್.ಎಸ್., ಬೆಂಗಳೂರು

ನಕಲಿ ನೋಟಿನ ಅಸಲಿ ರೂಪ!

'ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ದೇಶದಲ್ಲಿ ಒಟ್ಟು 2.30 ಲಕ್ಷ ನಕಲಿ ನೋಟುಗಳು ಪತ್ತೆಯಾಗಿವೆ' ಎಂದು ಆರ್‌ಬಿಐ ವಾರ್ಷಿಕ ವರದಿ ತಿಳಿಸಿದೆ (ಪ್ರ.ವಾ., ಮೇ 31). ಇನ್ನೂ ಪತ್ತೆಯಾಗದ ಇಂತಹ ನೋಟುಗಳು ಎಷ್ಟಿವೆಯೋ? 2016ರಲ್ಲಿ ಕೇಂದ್ರ ಸರ್ಕಾರವು ನಕಲಿ ನೋಟು ಹಾಗೂ ಕಪ್ಪುಹಣಕ್ಕೆ ಕಡಿವಾಣ ಹಾಕಲೆಂದು ₹ 500 ಹಾಗೂ ₹ 1,000 ಮುಖಬೆಲೆಯ ನೋಟುಗಳನ್ನು ರದ್ದುಗೊಳಿಸಿತ್ತು. ನಿಗದಿತ ದಿನಾಂಕದವರೆಗೂ ನಾಗರಿಕರು ಹಳೆಯ ನೋಟುಗಳನ್ನು ಬದಲಾಯಿಸಿಕೊಂಡರು. ಆದರೆ ಕೇಂದ್ರ ಸರ್ಕಾರವಾಗಲೀ, ಆರ್‌ಬಿಐ ಆಗಲೀ ಆವರೆಗೆ ಮುದ್ರಣಗೊಂಡಿದ್ದ ಎಲ್ಲ ನೋಟುಗಳೂ ಸಂಪೂರ್ಣವಾಗಿ ಹಿಂದೆ ಬಂದಿವೆಯೇ ಎಂಬುದರ ಬಗ್ಗೆ ಇದುವರೆಗೂ ಸರಿಯಾದ ಮಾಹಿತಿ ನೀಡಿಲ್ಲ!

ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಕಂತೆ ಕಂತೆ ಹಣ ನಂತರದ ದಿನಗಳಲ್ಲೂ ಸಿಕ್ಕಿದೆ. ರದ್ದಾಗಿರುವ ನೋಟುಗಳು ಈಗಲೂ ದೇವಸ್ಥಾನದ ಹುಂಡಿಗಳಲ್ಲಿ ಕಾಣಿಕೆ ರೂಪದಲ್ಲಿ ಪ್ರತ್ಯಕ್ಷವಾಗುತ್ತಿವೆ. ಮುಖ್ಯವಾಗಿ ಇವೇನೂ ನಕಲಿ ನೋಟುಗಳಲ್ಲ. ತೆರಿಗೆ ತಪ್ಪಿಸಿ ಕೂಡಿಟ್ಟ, ಆದರೆ ರದ್ದುಗೊಂಡಿರುವ ಅಸಲಿ ನೋಟುಗಳೇ! ಇದರಿಂದ ನೋಟು ರದ್ದಾಗಿದ್ದಕ್ಕೆ ಅರ್ಥವೇ ಇಲ್ಲದಂತಾಯಿತು. ಇನ್ನು ನಗದುರಹಿತ ವ್ಯವಹಾರ ಎಂದು ಸರ್ಕಾರ ಹೇಳುತ್ತಿದ್ದರೂ ಗ್ರಾಮೀಣ ಪ್ರದೇಶದಲ್ಲಿ ನೆಟ್‌ವರ್ಕ್ ಸಮಸ್ಯೆ, ಸರ್ವರ್ ಸಮಸ್ಯೆ, ಅನಕ್ಷರಸ್ಥರು ನಗದುರಹಿತ ವ್ಯವಹಾರಕ್ಕೆ ಒಗ್ಗದೇ ಇರುವುದು ಪ್ರಮುಖ ಸಮಸ್ಯೆಗಳೇ ಆಗಿವೆ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಇತಿಹಾಸ ಎಲ್ಲವನ್ನೂ ಒಳಗೊಳ್ಳಲಿ

ಗಾಂಧೀಜಿ ಇತಿಹಾಸವನ್ನು ಒಪ್ಪಿಕೊಂಡರೆ ಗೋಡ್ಸೆ ಇತಿಹಾಸವನ್ನೂ ಒಪ್ಪಿಕೊಳ್ಳಲೇಬೇಕು. ಇಲ್ಲದಿದ್ದರೆ ಮಹಾತ್ಮ ಗಾಂಧಿ ಹೇಗೆ ಸತ್ತರು ಎಂಬ ಪ್ರಶ್ನೆಗೆ ಉತ್ತರ ಸಿಗದು. ಇತಿಹಾಸವೇ ಹಾಗೆ. ಒಂದನ್ನು ಮರೆಮಾಚಿದರೆ ಮತ್ತೊಂದಕ್ಕೆ ಸ್ಪಷ್ಟ ಉತ್ತರ ಸಿಗದು. ನೀವು ಒಂದು ಪಂಥದ ಇತಿಹಾಸ ಮರೆಮಾಚಿದರೆ ಮತ್ತೊಂದು ಪಂಥದ ಬಗ್ಗೆ ಓದುವಾಗ ಗೊಂದಲ ಹುಟ್ಟುತ್ತದೆ, ಸುಳ್ಳು ಎನಿಸುತ್ತದೆ.

ಬಸವಣ್ಣ, ನಾರಾಯಣಗುರು, ಗಾಂಧಿ, ಹೆಡಗೇವಾರ್, ಗೋಡ್ಸೆ ಎಲ್ಲರೂ ಮುಖ್ಯ. ಇತಿಹಾಸದಲ್ಲಿ ಗೆದ್ದವರು, ಸೋತವರು, ಕೆಟ್ಟದ್ದು, ಒಳ್ಳೆಯದು ಎಲ್ಲವೂ ಇರಬೇಕು. ಆಗ ಇತಿಹಾಸಕ್ಕೆ ಚ್ಯುತಿ ಬರುವುದಿಲ್ಲ.

ಸಣ್ಣಮಾರಪ್ಪ ಚಂಗಾವರ, ಶಿರಾ

ರೈತಾಪಿ ವರ್ಗಕ್ಕಾದ ಅವಮಾನ

ದೇಶದ ಮುಂಚೂಣಿ ರೈತ ನಾಯಕ ರಾಕೇಶ್ ಟಿಕಾಯತ್ ಅವರ ಮೇಲೆ ಬೆಂಗಳೂರಿನಲ್ಲಿ ಹಲ್ಲೆ ಮಾಡಿ, ಮಸಿ ಎರಚಿರುವುದು ಖಂಡನೀಯ. ಇದು ಟಿಕಾಯತ್ ಅವರೊಬ್ಬರಿಗಷ್ಟೇ ಅಲ್ಲ ಇಡೀ ರೈತಾಪಿ ವರ್ಗಕ್ಕೆ ಮಾಡಿದ ಅವಮಾನವಾಗಿದೆ. ಸೂಕ್ತ ಭದ್ರತೆ ಒದಗಿಸಬೇಕಾಗಿದ್ದ ಪೊಲೀಸ್ ಇಲಾಖೆಯ ವೈಫಲ್ಯ ಇಲ್ಲಿ ಎದ್ದು ಕಾಣುತ್ತದೆ. ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಭಿನ್ನಾಭಿಪ್ರಾಯಗಳಿದ್ದರೆ ಟೀಕೆ- ಟಿಪ್ಪಣಿಗಳ ಮೂಲಕ ಬಗೆಹರಿಸಿಕೊಳ್ಳಬೇಕೇ ವಿನಾ ಹಲ್ಲೆ ಮಾಡುವುದು, ಮಸಿ ಬಳಿಯುವುದು ಯಾರಿಗೂ ಶೋಭೆ ತರುವ ಸಂಗತಿಗಳಲ್ಲ.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸ್ತ್ರೀ ಶಕ್ತಿಗೆ 26 ದೇಶಗಳ ಚುಕ್ಕಾಣಿ

2030ರ ಹೊತ್ತಿಗೆ ಸಾಧಿಸಬೇಕಾದ ಸುಸ್ಥಿರ ಅಭಿವೃದ್ಧಿ ಗುರಿಗಳು ಸಾಕಾರಗೊಳ್ಳಬೇಕಾದರೆ ರಾಜಕೀಯ ಮತ್ತು ಸಾರ್ವಜನಿಕ ಜೀವನದ ನಾಯಕತ್ವದಲ್ಲಿ ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯ ಬೇಕು. ಆದರೆ, ಜಾಗತಿಕ ಮಟ್ಟದ ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಬಹಳ ಕಡಿಮೆ. ರಾಜಕೀಯದಲ್ಲಿ ಸಮಾನ ಪ್ರಾತಿನಿಧ್ಯ ಇನ್ನೂ ಬಹಳ ದೂರವಿದೆ ಎಂದು ವಿಶ್ವಸಂಸ್ಥೆಯು ಹೇಳಿದೆ. ಜಗತ್ತಿನ 26 ದೇಶಗಳ ಅಧ್ಯಕ್ಷ ಅಥವಾ ಪ್ರಧಾನಿ ಹುದ್ದೆಯಲ್ಲಿ ಈಗ ಮಹಿಳೆಯರು ಇದ್ದಾರೆ. ನ್ಯೂಜಿಲೆಂಡ್‌ನ ಪ್ರಧಾನಿ ಜೆಸಿಂಡಾ ಆರ್ಡೆರ್ನ್, ಜರ್ಮನಿಯ ಛಾನ್ಸೆಲರ್ ಆಗಿದ್ದ ಅಂಜೆಲಾ ಮರ್ಕೆಲ್ ಮುಂತಾದವರು ತಮ್ಮ ವಿಶಿಷ್ಟ ನಾಯಕತ್ವ ಶೈಲಿಯಿಂದಾಗಿ ಛಾಪು ಮೂಡಿಸಿದವರು. ಮಹಿಳಾ ನಾಯಕತ್ವವು ಹೆಚ್ಚಳವಾದರೆ, ಈ ಜಗತ್ತು ಇನ್ನಷ್ಟು ಉತ್ತಮವಾಗಬಹುದು ಎಂಬ ಭರವಸೆಗೆ ಅವರು ಕಾರಣರಾಗಿದ್ದಾರೆ

ಮೆಟೆ ಫ್ರೆಡ್ರಿಕ್‌ಸನ್ ಡೆನ್ಮಾರ್ಕ್ ಪ್ರಧಾನಿ 2019

ಶೇಖ್ ಹಸೀನಾ ಬಾಂಗ್ಲಾದೇಶ ಪ್ರಧಾನಿ 2009

ಜೆಸಿಂಡಾ ಆರ್ಡೆರ್ನ್ ನ್ಯೂಜಿಲೆಂಡ್ ಪ್ರಧಾನಿ 2017

ವಿದ್ಯಾದೇವಿ ಭಂಡಾರಿ ನೇಪಾಳ ಅಧ್ಯಕ್ಷೆ 2015

ಕತೆರಿನಾ ಸಕೆಲಾರಪೂಲೊ ಗ್ರೀಸ್ ಅಧ್ಯಕ್ಷೆ 2020

ಅನಾ ಬ್ರನಬಿಕ್ ಸರ್ಬಿಯಾ ಪ್ರಧಾನಿ 2017

ಹಲೀಮಾ ಯಾಕೂಬ್ ಸಿಂಗಪುರ ಅಧ್ಯಕ್ಷೆ 2017

ನಜ್ಲಾ ಬುಡೇನ್ ರೊಮದಾನಿ ಟ್ಯುನಿಷಿಯಾ ಪ್ರಧಾನಿ 2021

ಸಹಾಲೆ ವರ್ಕ್ ಜಹೌಡಿ ಇಥಿಯೋಪಿಯಾ ಅಧ್ಯಕ್ಷೆ 2018

ಸಾಯಿ ಇಂಗ್ ವೆನ್ ತೈವಾನ್ ಅಧ್ಯಕ್ಷೆ 2016

ಜುಜಾನ ಚಾಪುತೊವ ಸ್ಲೊವಾಕಿಯಾ ಅಧ್ಯಕ್ಷೆ 2019

ಕಾತ್ರಿನ್ ಯಾಕಬ್ಸ್ ಡೋಟಿರ್ ಐಸ್‌ಲ್ಯಾಂಡ್ ಪ್ರಧಾನಿ 2017

ಸಮಿಯಾ ಸಲುಹು ಹಸನ್ ತಾಂಜಾನಿಯಾ ಪ್ರಧಾನಿ 2021

ಮಗ್ಡಲೇನ ಆಂಡರ್ಸನ್ ಸ್ವೀಡನ್ ಪ್ರಧಾನಿ 2021

ಸಾನಾ ಮೇರಿನ್ ಫಿನ್ಲೆಂಡ್ ಪ್ರಧಾನಿ 2019*

ರೋಸ್ ಕ್ರಿಸ್ಟಿಯಾನ ರಪೊಂಡಾ ಗ್ಯಾಬೊನ್ ಪ್ರಧಾನಿ 2020

ರೊಬಿನಾ ನಬ್ಬಾಂಜ ಉಗಾಂಡ ಪ್ರಧಾನಿ 2021

ಮಾಯಾ ಸಾಂದು ಮಾಲ್ಡೊವಾ ಅಧ್ಯಕ್ಷೆ 2020

ಸಾಂದ್ರ ಮಸಾನ್ ಬಾರ್ಬಡೋಸ್ ಅಧ್ಯಕ್ಷೆ 2021

ಕಾಯ ಕಾಲಸ್ ಎಸ್ಟೋನಿಯಾ ಪ್ರಧಾನಿ 2021

ಸಲೂಮೆ ಜುಗಬಿಸ್‌ವಿಲಿ ಜಾರ್ಜಿಯಾ ಅಧ್ಯಕ್ಷೆ 2018

ಸಿಯೊಮಾರ ಕಾಸ್ಟ್ರೊ ಹೊಂಡುರಾಸ್ ಅಧ್ಯಕ್ಷೆ 2022

ಇಂಗ್ರೀಡ ಶಿಮೊನಿಟ್ಟ ಲಿಥುವೆನಿಯಾ ಪ್ರಧಾನಿ 2020

ಸಾರಾ ಕೂಗೊನ್‌ಗೆಲ್ವಾ ಅಮೆಧಿಲಾ ನಮೀಬಿಯಾ ಪ್ರಧಾನಿ: 2015

ಫಿಯಾಮ ನವೋಮಿ ಮತಾಫ ಸಮೋವಾ ಪ್ರಧಾನಿ: 2021

ವಿಕ್ಟ್ವಾ ತೊಮೆಗಾ ಡೊಗ್ಬೆ ಟೋಗೊ ಪ್ರಧಾನಿ 2020

ಮೆಟೆ ಫ್ರೆಡ್ರಿಕ್‌ಸನ್

ಡೆನ್ಮಾರ್ಕ್‌ನ ಪ್ರಧಾನಿಯಾಗಿ ಮೆಟೆ ಫ್ರೆಡ್ರಿಕ್‌ಸನ್ ಅವರು 2019ರ ಜೂನ್‌ನಲ್ಲಿ ಅಧಿಕಾರ ವಹಿಸಿಕೊಂಡರು. ಈ ದೇಶದ ಪ್ರಧಾನಿ ಹುದ್ದೆಗೇರಿದ ಎರಡನೇ ಮಹಿಳೆ ಇವರು. ಮೆಟೆ ಅವರು ಡೆನ್ಮಾರ್ಕ್‌ನ ಅತ್ಯಂತ ಕಿರಿಯ ವಯಸ್ಸಿನ ಪ್ರಧಾನಿ ಎಂಬ ಹೆಗ್ಗಳಿಕೆಯನ್ನೂ ಹೊಂದಿದ್ದಾರೆ. ಸೋಷಿಯಲ್ ಡೆಮಾಕ್ರಟ್ಸ್ ಪಕ್ಷದ ಯುವ ವಿಭಾಗಕ್ಕೆ 15ನೇ ವರ್ಷದಲ್ಲಿ ಸೇರ್ಪಡೆಯಾದರು. 2001ರಲ್ಲಿ ತಮ್ಮ 24ನೇ ವಯಸ್ಸಿನಲ್ಲಿ ಸಂಸತ್ತಿಗೆ ಆಯ್ಕೆಯಾದರು. 2011ರಲ್ಲಿ ಅವರು ಮೊದಲ ಬಾರಿಗೆ ಸಚಿವೆಯಾದರು. 2015ರ ಚುನಾವಣೆಯಲ್ಲಿ ಅವರ ಪಕ್ಷವು ಅಲ್ಪ ಅಂತರದಿಂದ ಸೋತಿತು. ಆಗ ಮೆಟೆ ಅವರು ವಿರೋಧ ಪಕ್ಷದ ನಾಯಕಿಯಾದರು.

ಶೇಖ್ ಹಸೀನಾ

ಬಾಂಗ್ಲಾದೇಶದ ಪ್ರಧಾನಿಯಾಗಿ ಶೇಖ್ ಹಸೀನಾ ಅವರು 1996ರಲ್ಲಿ ಮೊದಲ ಬಾರಿಗೆ ಅಧಿಕಾರ ವಹಿಸಿಕೊಂಡರು. 2001ರಲ್ಲಿ ನಡೆದ ಚುನಾವಣೆಯಲ್ಲಿ ಹಸೀನಾ ಅವರ ಬಾಂಗ್ಲಾದೇಶ ಅವಾಮಿ ಲೀಗ್ ಪಕ್ಷಕ್ಕೆ ಬಹುಮತ ಬರಲಿಲ್ಲ. 2008ರ ಡಿಸೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಹಸೀನಾ ಅವರ ಪಕ್ಷ ಗೆದ್ದಿತು. 2009ರ ಜನವರಿಯಲ್ಲಿ ಎರಡನೇ ಅವಧಿಗೆ ಹಸೀನಾ ಅಧಿಕಾರ ವಹಿಸಿಕೊಂಡರು. ಬಾಂಗ್ಲಾದೇಶದಲ್ಲಿ ಅತಿ ದೀರ್ಘ ಕಾಲ ಪ್ರಧಾನಿ ಹುದ್ದೆಯಲ್ಲಿದ್ದ ವ್ಯಕ್ತಿ ಎಂಬ ಹೆಗ್ಗಳಿಕೆ ಅವರದ್ದು. ಮೂಲಭೂತವಾದ ಮತ್ತು ಭಯೋತ್ಪಾದನೆಯ ವಿರುದ್ಧ ಅತ್ಯಂತ ದೃಢ ನಿಲುವನ್ನು ಅವರು ತೆಗೆದುಕೊಂಡಿದ್ದಾರೆ.

ಜೆಸಿಂಡಾ ಆರ್ಡೆರ್ನ್

ನ್ಯೂಜಿಲೆಂಡ್‌ನ ಪ್ರಧಾನಿಯಾಗಿ 2017ರಲ್ಲಿ ಅಧಿಕಾರ ವಹಿಸಿಕೊಂಡಾಗ ಜೆಸಿಂಡಾ ಆರ್ಡೆರ್ನ್‌ಗೆ 37 ವರ್ಷ ವಯಸ್ಸು. ಆ ದೇಶದ ಅತ್ಯಂತ ಕಿರಿಯ ವಯಸ್ಸಿನ ಪ್ರಧಾನಿ ಅವರು. ಜತೆಗೆ, ದೇಶವೊಂದರ ಮುಖ್ಯಸ್ಥೆಯಾದ ಅತ್ಯಂತ ಕಡಿಮೆ ವಯಸ್ಸಿನ ಮಹಿಳೆ. ಪರಿಣಾಮಕಾರಿಯಾದ ನಾಯಕತ್ವ ಗುಣವನ್ನು ಪ್ರದರ್ಶಿಸಿದ ಜೆಸಿಂಡಾ ಅವರು, ಕೋವಿಡ್ ಸಾಂಕ್ರಾಮಿಕದ ನಿರ್ವಹಣೆಯಿಂದಾಗಿ ಜಗತ್ತಿನ ಗಮನ ಸೆಳೆದರು. ಅಮೆರಿಕ, ಬ್ರಿಟನ್‌ನಂತಹ ದೇಶಗಳು ಕೋವಿಡ್‌ನಿಂದ ಹೈರಾಣಾದರೆ, ಪುಟ್ಟ ದೇಶ ನ್ಯೂಜಿಲೆಂಡ್ ಕೋವಿಡ್ ಸಾಂಕ್ರಾಮಿಕವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿತು.

ವಿದ್ಯಾದೇವಿ ಭಂಡಾರಿ

ನೇಪಾಳದ ಎರಡನೇ ಅಧ್ಯಕ್ಷೆಯಾಗಿ ವಿದ್ಯಾದೇವಿ ಭಂಡಾರಿ ಅವರು 2015ರಲ್ಲಿ ಚುನಾಯಿತರಾದರು. 2018ರಲ್ಲಿ ಪುನರಾಯ್ಕೆಗೊಂಡರು. ನೇಪಾಳದ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರವೇನೂ ಇಲ್ಲ. ಆದರೆ, ಭಂಡಾರಿ ಅವರು ತಮ್ಮ ಗಾಢವಾದ ರಾಜಕೀಯ ಅನುಭವದಿಂದಾಗಿ ರಾಜಕೀಯ ಪಕ್ಷಗಳ ಮೇಲೆ ಪ್ರಭಾವ ಬೀರುವಂತಹ ವ್ಯಕ್ತಿತ್ವ ಹೊಂದಿದ್ದಾರೆ. ಸಂಸತ್ತಿನಲ್ಲಿ ಮೂರನೇ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸುವ ಕಾಯ್ದೆಯ ಹಿಂದೆ ಭಂಡಾರಿ ಅವರ ಶ್ರಮ ಇದೆ.

ಕತೆರಿನಾ ಸಕೆಲಾರಪೂಲೊ

62 ವರ್ಷದ ಕತೆರಿನಾ ಸಕೆಲಾರಪೂಲೊ ಅವರು 2020ರಲ್ಲಿ ಗ್ರೀಸ್‌ನ ಮೊದಲ ಮಹಿಳಾ ಅಧ್ಯಕ್ಷೆಯಾಗಿ ನೇಮಕವಾದರು. ಈ ಹುದ್ದೆಗೆ ಏರುವ ಮುನ್ನ ನ್ಯಾಯಾಧೀಶರಾಗಿದ್ದ ಕತೆರಿನಾ ಅವರು ತಮ್ಮ ಪ್ರಗತಿಪರ ಚಿಂತನೆಗಳಿಂದ ಹೆಸರಾಗಿದ್ದರು. ಮಾನವ ಹಕ್ಕುಗಳು, ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಕೆಲಸ ಮಾಡಿದ್ದಾರೆ. ಕತೆರಿನಾ ಅವರು 300 ಸದಸ್ಯ ಬಲದ ಸಂಸತ್‌ನಲ್ಲಿ 261 ಮತಗಳನ್ನು ಪಡೆದಿದ್ದಾರೆ. ಈ ಗೆಲುವಿನ ಮೂಲಕ ಭವಿಷ್ಯದ ಅವಕಾಶಗಳು ತೆರೆದವು ಎಂಬುದಾಗಿ ಗ್ರೀಸ್ ಪ್ರಧಾನಿ ಕ್ರಿಯಾಕೊಸ್ ಅವರು ಬಣ್ಣಿಸಿದ್ದರು.

ಅನಾ ಬ್ರನಬಿಕ್

ಅನಾ ಬ್ರನಬಿಕ್ ಅವರು ಸರ್ಬಿಯಾದ ಅಧ್ಯಕ್ಷೆಯಾಗಿ ಎರಡನೇ ಅವಧಿಗೆ ಆಯ್ಕೆಯಾಗಿದ್ದಾರೆ. ಬ್ರಿಟನ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿ 2002ರಲ್ಲಿ ಸರ್ಬಿಯಾಕ್ಕೆ ವಾಪಸಾದ ಅವರು ಸ್ಥಳೀಯಾಡಳಿತಕ್ಕೆ ಸಂಬಂಧಿಸಿದಂತೆ ಸಾಕಷ್ಟು ಕೆಲಸ ಮಾಡಿದರು. 2016ರಲ್ಲಿ ಸಚಿವರಾಗಿ ನೇಮಕವಾದರು. ಅವರು ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ಎಂಬುದು ಬಹಿರಂಗವಾಗಿತ್ತು. ಅವರೇ ಅದನ್ನು ಹೇಳಿಕೊಂಡಿದ್ದರು.

ಹಲೀಮಾ ಯಾಕೂಬ್

ಸಿಂಗಪುರದ 8ನೇ ಮತ್ತು ಮೊದಲ ಮಹಿಳಾ ಅಧ್ಯಕ್ಷೆಯಾಗಿ ಹಲೀಮಾ ಯಾಕೂಬ್ ಅವರು 2017ರಲ್ಲಿ ಆಯ್ಕೆಯಾದರು. ಮಲೇಷ್ಯಾ ಮೂಲದ ಜನಾಂಗೀಯ ಗುಂಪಿಗೆ ಸೇರಿದವರೇ ಅಧ್ಯಕ್ಷರಾಗಬೇಕು ಎಂದು ಸರ್ಕಾರವು ನಿಯಮ ಬದಲಾಯಿಸಿದ್ದು ಹಲೀಮಾ ಅವರ ಆಯ್ಕೆಯನ್ನು ಸುಲಭವಾಗಿಸಿತು. ಈ ನಿಯಮ ಬದಲಾವಣೆ ಬಗ್ಗೆ ಟೀಕೆಯೂ ವ್ಯಕ್ತವಾಗಿದೆ. ಇವರ ತಂದೆ ಭಾರತ ಮೂಲದವರು. ಹಲೀಮಾಗೆ 8 ವರ್ಷವಿದ್ದಾಗಲೇ ಅವರು ಮೃತಪಟ್ಟರು. ಹೀಗಾಗಿ, ಹಲೀಮಾ ಅವರ ಬಾಲ್ಯ ಕಷ್ಟಕರವಾಗಿತ್ತು.

ನಜ್ಲಾ ಬುಡೇನ್ ರೊಮದಾನಿ

ಟ್ಯುನಿಷಿಯಾ ದೇಶದ ಪ್ರಧಾನಿ ಹುದ್ದೆಗೆ ಅಚ್ಚರಿಯಾಗಿ ಆಯ್ಕೆಯಾಗಿದ್ದು, ಪ್ರಾಧ್ಯಾಪಕಿ ನಜ್ಲಾ ಬುಡೇನ್ ರೊಮದಾನಿ. ಇವರು ಟ್ಯುನಿಷಿಯಾದ ಮೊದಲ ಮಹಿಳಾ ಪ್ರಧಾನಿಯಷ್ಟೇ ಅಲ್ಲದೆ ಅರಬ್ ದೇಶಗಳಲ್ಲಿ ದೇಶದ ಚುಕ್ಕಾಣಿ ಹಿಡಿದ ಮೊದಲ ಮಹಿಳೆಯೂ ಆಗಿದ್ದಾರೆ. ವಿಶ್ವಬ್ಯಾಂಕ್‌ನಲ್ಲಿ ಕೆಲಸ ಮಾಡಿದ ಅನುಭವ ಬಿಟ್ಟರೆ, ರಾಜಕೀಯ ಅವರಿಗೆ ಹೊಸತು. ಅಧ್ಯಕ್ಷ ಕೇಸ್ ಸೇದ್ ಅವರು ಸರ್ಕಾರವನ್ನು ಕಿತ್ತುಹಾಕಿ ಬುಡೇನ್ ಅವರನ್ನು ನೇಮಿಸಿದರು. ಕೊರೊನಾ ವೈರಸ್‌ನ ಹರಡುವಿಕೆಯನ್ನು ನಿಯಂತ್ರಿಸುವುದು ಹಾಗೂ ದೇಶದ ಆರ್ಥಿಕತೆಯನ್ನು ಮೇಲೆತ್ತುವ ದೊಡ್ಡ ಜವಾಬ್ದಾರಿಗಳನ್ನು ಬುಡೇನ್ ಅವರು ಆಯ್ಕೆಯಾದಾಗ ಅವರ ಮುಂದಿದ್ದವು.

ಸಹಾಲೆ ವರ್ಕ್ ಜಹೌಡಿ

2018ರಲ್ಲಿ ಇಥಿಯೋಪಿಯಾದ ಮೊದಲ ಅಧ್ಯಕ್ಷೆಯಾಗಿ ಸಹಾಲೆ ವರ್ಕ್ ಜಹೌಡಿ ಚುನಾಯಿತರಾದರು. ರಾಜತಾಂತ್ರಿಕ ಅಧಿಕಾರಿಯಾಗಿದ್ದ ಅವರು, ಈ ಹುದ್ದೆಗೂ ಮುನ್ನ ವಿಶ್ವಸಂಸ್ಥೆಯಲ್ಲಿ ಕೆಲಸ ಮಾಡಿದ್ದರು. ಇವರ ಆಯ್ಕೆಯಿಂದ ದೇಶದಲ್ಲಿ ಲಿಂಗ ಸಮಾನತೆಯ ಹಾದಿ ತೆರೆದುಕೊಂಡಿತು ಎಂದು ವಿಶ್ಲೇಷಿಸಲಾಗಿದೆ. ಮಹಿಳೆಯರ ದನಿಯಾಗುವುದಾಗಿ ಅವರು ತಮ್ಮ ಮೊದಲ ಭಾಷಣದಲ್ಲಿ ವಾಗ್ದಾನ ನೀಡಿದ್ದರು.

ಸಾಯಿ ಇಂಗ್ ವೆನ್

ಚೀನಾವನ್ನು ಎದುರು ಹಾಕಿಕೊಂಡು ಎರಡನೇ ಅವಧಿಗೆ ತೈವಾನ್ ಅಧ್ಯಕ್ಷೆಯಾಗಿ ಆಯ್ಕೆಯಾದ ದಿಟ್ಟ ಮಹಿಳೆ ಸಾಯಿ ಇಂಗ್ ವೆನ್. ತೈವಾನ್ ಮೇಲೆ ಕಣ್ಣಿಟ್ಟಿರುವ ಚೀನಾವನ್ನು ಎದುರಿಸುತ್ತಲೇ ಒಂದು ಅವಧಿ ಪೂರ್ಣಗೊಳಿಸಿದರು. ದೇಶದ ಸಾರ್ವಭೌಮತೆಯಲ್ಲಿ ಯಾರೂ ಮೂಗು ತೂರಿಸುವಂತಿಲ್ಲ ಎಂದು ಸ್ಪಷ್ಟವಾಗಿ ಹೇಳುವ ಛಲ ಅವರಲ್ಲಿದೆ. 'ಸ್ವತಂತ್ರ ಪ್ರಜಾಪ್ರಭುತ್ವವನ್ನು ನಾವು ಎಷ್ಟು ಇಷ್ಟಪಡುತ್ತೇವೆ ಎಂಬುದನ್ನು ತೈವಾನ್ ದೇಶವು ಜಗತ್ತಿಗೆ ತೋರಿಸುತ್ತಿದೆ' ಎಂದು ಅವರು ಹೇಳುತ್ತಾರೆ.

* ಅಧಿಕಾರಕ್ಕೆ ಏರಿದ ವರ್ಷ

ಅಮೆರಿಕದ ಅವಕಾಶ

ಜಗತ್ತಿನ ಅತ್ಯಂತ ಹಳೆಯ ಪ್ರಜಾಪ್ರಭುತ್ವ ದೇಶವಾದ ಅಮೆರಿಕದ ಅಧ್ಯಕ್ಷರಾಗಿ ಮಹಿಳೆಯೊಬ್ಬರು ಈವರೆಗೆ ಆಯ್ಕೆ ಆಗಿಲ್ಲ. ಆದರೆ, ಅಂತಹುದೊಂದು ಅವಕಾಶ ಈಗ ತೆರೆದುಕೊಂಡಿದೆ. ಭಾರತ ಮೂಲದ ಕಮಲಾ ಹ್ಯಾರಿಸ್ ಅವರು ಅಮೆರಿಕದ ಉಪಾಧ್ಯಕ್ಷರಾಗಿ 2021ರಲ್ಲಿ ಅಧಿಕಾರ ವಹಿಸಿಕೊಂಡಿದ್ದಾರೆ. ಅಮೆರಿಕದ ಉಪಾಧ್ಯಕ್ಷ ಹುದ್ದೆಗೆ ಏರಿದ ಮೊದಲ ಮಹಿಳೆ ಇವರು. 2024ರಲ್ಲಿ ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ಮಹಿಳೆಯೊಬ್ಬರನ್ನು ಆಯ್ಕೆ ಮಾಡಿ ಇತಿಹಾಸ ಸೃಷ್ಟಿಸುವ ಅವಕಾಶ ಅಮೆರಿಕನ್ನರ ಮುಂದೆ ಇದೆ.

ಆಧಾರ: ವರ್ಲ್ಡ್ ಪಾಪ್ಯುಲೇಶನ್ ರಿವ್ಯೂ, ಕೊಲಂಬಿಯಾ ಯುನಿವರ್ಸಿಟಿ ವರ್ಲ್ಡ್ ಲೀಡರ್ಸ್ ಫೋರಂ, ಕೌನ್ಸಿಲ್ ಆಫ್ ವಿಮೆನ್ ವರ್ಲ್ಡ್ ಲೀಡರ್ಸ್

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 135

ಬ್ರಹ್ಮನ ನಿಟ್ಟುಸಿರಲ್ಲಿ ಹುಟ್ಟಿದ ವಸಂತ

'ಎಲೈ ಮನ್ಮಥ, ನಿನ್ನ ಕಾಂತೆಯೊಡನೆ ಶಿವನನ್ನು ಮೋಹಗೊಳಿಸಲು ಪ್ರಯತ್ನಿಸು' ಎಂದು ಬ್ರಹ್ಮ ಸೂಚಿಸುತ್ತಾನೆ. ಇದಕ್ಕೆ ಒಪ್ಪಿದ ಮನ್ಮಥ ಒಂದು ಷರತ್ತು ವಿಧಿಸುತ್ತಾನೆ. 'ನಿನ್ನ ಮಾತಿನಂತೆ ಶಂಭುವನ್ನು ಮೋಹಗೊಳಿಸುವೆನು. ಆದರೆ ನೀನು ಶಿವನು ಅನುರಾಗಗೊಳ್ಳುವಂತಹ ಸುಂದರಿಯನ್ನು ಸೃಷ್ಟಿ ಮಾಡಬೇಕು. ಈ ಕಾರ್ಯಕ್ಕೆ ನನಗೆ ಸ್ತ್ರೀಯೇ ದೊಡ್ಡ ಆಯುಧ. ಆದುದರಿಂದ ಶಂಭುವನ್ನು ನಾನು ಮೋಹಗೊಳಿಸುತ್ತಿರುವಾಗ, ಆ ಸುಂದರಿಯೂ ಶಿವನನ್ನು ಮತ್ತಷ್ಟು ಮೋಹಗೊಳ್ಳುವಂತೆ ಮಾಡಬೇಕು. ಇದರ ಬಗ್ಗೆ ಒಂದು ಉಪಾಯವನ್ನು ಮಾಡು' ಎನ್ನುತ್ತಾನೆ.

ಮನ್ಮಥನ ಮಾತು ಕೇಳಿದ ಬ್ರಹ್ಮ ಯಾವ ಸುಂದರಿಯನ್ನು ಶಿವನನ್ನು ಮೋಹಗೊಳಿಸಲು ಜನಿಸಿದರೆ ಸೂಕ್ತವಾಗಿರುತ್ತದೆ ಎಂದು ಚಿಂತಿಸುತ್ತಿರುವಾಗ, ಬ್ರಹ್ಮನ ಮುಖದಿಂದ ನಿಟ್ಟುಸಿರೊಂದು ಹೊರಟಿತು. ಅದರಿಂದ ವಸಂತ (ವಸಂತಋತು) ಪುಷ್ಪಗಳಿಂದ ಅಲಂಕೃತನಾಗಿ ಜನಿಸಿದ. ಮನ್ಮಥನಂತೆಯೆ ಸುಂದರನಾಗಿದ್ದ ವಸಂತನ ಮೈಬಣ್ಣ ರಕ್ತಕಮಲದಂತೆ ನಸುಗೆಂಪಾದ ಕಾಂತಿಯಿಂದ ಆಕರ್ಷಿತವಾಗಿತ್ತು. ಅರಳಿದ ಕಮಲದಂತಿರುವ ಕಣ್ಣುಗಳು, ಸಂಜೆಯಲ್ಲಿ ಉದಯಿಸಿರುವ ಹುಣ್ಣಿಮೆ ಚಂದ್ರನಂತಿರುವ ಮುಖ, ಸುಂದರವಾದ ಮೂಗು, ಶಂಖದಂತಿರುವ ಕಿವಿ, ಕಪ್ಪಾದ ಮತ್ತು ವಕ್ರವಾದತಲೆ ಕೂದಲುಗಳಿಂದ ಬಹುಸುಂದರನಾಗಿ ಕಂಗೊಳಿಸುತ್ತಿದ್ದ. ಸಂಜೆಯ ಸೂರ್ಯನಂತಿರುವ ಎರಡು ಕಡಕು(ಪುರುಷರು ಧರಿಸುವ ಓಲೆ)ಗಳನ್ನು ಕಿವಿಯಲ್ಲಿ ಧರಿಸಿದ್ದ. ಅವನ ಗಮನವು ಕೊಬ್ಬಿದ ಸಲಗದಂತಿತ್ತು. ಅವನಿಗೆ ದೃಢವೂ ವಿಶಾಲವೂ ಆದ ಎದೆ, ಉನ್ನತವಾದ ಭುಜಶಿರಸ್ಸುಗಳೂ ಇದ್ದವು. ಅವನ ಕತ್ತು ಶಂಖದಂತಿದ್ದರೆ, ಮುಖ ಗುಂಡಗೆ ಸುಂದರವಾಗಿತ್ತು. ಒಟ್ಟಾರೆ, ಅವನು ಸರ್ವಾಂಗ ಸುಂದರನಾಗಿದ್ದ. ಪುರುಷರಿಗೆ ಒಪ್ಪುವ ಸುಂದರ ದೇಹದಾರ್ಢ್ಯ ಲಕ್ಷಣಗಳಿಂದ ಕಂಗೊಳಿಸುತ್ತಿದ್ದ. ಎಂಥ ಸುಂದರಿಯೂ ಆತನತ್ತ ಆಕರ್ಷಿತಳಾಗುವಷ್ಟು ತುಂಬಾ ಸುಂದರನಾಗಿದ್ದ. ಅವನನ್ನು ನೋಡಿದವರಲ್ಲಿ ಕಾಮವಿಕಾರವನ್ನು ಹೆಚ್ಚಿಸುತ್ತಾ ಮೋಹಗೊಳಿಸುತ್ತಿದ್ದ.

ಬ್ರಹ್ಮನ ನಿಟ್ಟುಸಿರಿನಿಂದ ಪುಷ್ಪಮಯನಾದಂತಹ ವಸಂತ ಜನಿಸಿದಾಗ, ಆತನ ಮೈಯ ಪುಷ್ಪ ಸುವಾಸನೆ ಗಾಳಿಯೊಡನೆ ಬೆರೆತು, ಮೆಲ್ಲಗೆ ಬೀಸತೊಡಗಿತು. ಆಗ ಎಲ್ಲಾ ಮರಗಳಲ್ಲಿಯೂ ಹೂವುಗಳು ಅರಳಿದುವು. ಕೋಗಿಲೆಗಳು ಇಂಪಾಗಿ ಪಂಚಮಸ್ವರದಲ್ಲಿ ಹಾಡಿದವು. ಸರೋವರಗಳಲ್ಲಿ ಸುಂದರವಾದ ಕಮಲಗಳು ಕನ್ನೈದಿಲೆಗಳೂ ಅರಳಿ ನಲಿದವು. ಹೀಗೆ ಜನಿಸಿದ ಆ ಸುಂದರನಾದ ವಸಂತನನ್ನು ನೋಡಿ, ಬ್ರಹ್ಮ ಮನ್ಮಥನನ್ನು ಕುರಿತು ಮಧುರವಾಗಿ ಹೀಗೆ ಹೇಳಿದ:

'ಎಲೈ ಮನ್ಮಥ, ಈ ವಸಂತನು ನಿನ್ನ ಮಿತ್ರನಾಗಿ ಸದಾ ನಿನ್ನೊಡನಾಡಿಯಾಗಿಯೇ ಇರುವನು. ಅಗ್ನಿಗೆ ಮಿತ್ರನಾದ ವಾಯುವು ಹೇಗೆ ಎಲ್ಲೆಡೆಯೂ ಅಗ್ನಿಗೆ ಸಹಾಯಮಾಡುವನೋ, ಅದರಂತೆ ನಿನ್ನ ಮಿತ್ರನಾದ ಈ ವಸಂತನೂ ನಿನ್ನೊಡನೆಯೇ ಇದ್ದು, ನಿನ್ನ ಕಾರ್ಯಕ್ಕೆ ಸಹಾಯ ಮಾಡುವನು.'

ಇವನು ಕಾಮಿಗಳನ್ನು ಸುಮ್ಮನೆ ಇರುವುದಕ್ಕೆ ಬಿಡುವವನಲ್ಲವಾದುದರಿಂದ ಇವನಿಗೆ ವಸಂತನೆಂದು ಹೆಸರು. ನಿನಗೆ ಈ ವಸಂತ, ಶೃಂಗಾರರಸ, ಮಲಯಪರ್ವತದ ಗಂಧದ ಗಾಳಿ ಮತ್ತು ಸ್ತ್ರೀಯರ ಯೌವನದಲ್ಲಿನ ಚೇಷ್ಟೆಗಳೂ ನಿನ್ನ ಅಧೀನವಾಗಿರುವುವು. ಬಿಬ್ಬೋಕ (ಗರ್ವದಿಂದ ಅಥವಾ ಬಿಂಕದಿಂದ ತನಗೆ ಇಷ್ಟವಾಗಿದ್ದರೂ ಸಹ ಅನಾದರಣೆಯನ್ನು ತೋರಿಸುವ ಶೃಂಗಾರಚೇಷ್ಟೆ) ಮೊದಲಾದ ಕಾಮ ವಿಕಾರವನ್ನುಂಟುಮಾಡುವ ಭಾವಗಳ ಅರವತ್ತು ನಾಲ್ಕು ಶೃಂಗಾರಕಲೆಗಳೂ ನಿನ್ನ ಕಾಂತೆಯಾದ ರತೀದೇವಿಗೆ ಸಹಾಯವನ್ನು ಮಾಡುವುವು. ಈ ಎಲ್ಲಾ ಮೋಹಕ ಪರಿವಾರಗಳಿಂದ ಮತ್ತು ರತಿಯ ಸಹಾಯದಿಂದ ಒಗ್ಗೂಡಿ ಪ್ರಯತ್ನ ಪಡು. ಆ ಮಹಾವಿರಾಗಿಯಾದ ಮಹಾದೇವನನ್ನು ಮೋಹಗೊಳಿಸು. ಶಿವನನ್ನು ಮೋಹಗೊಳಿಸುವಂತಹ ಸುಂದರಿ ಯಾರೆಂಬುದನ್ನು ತಿಳಿಸುವೆ' ಎಂದು ಬ್ರಹ್ಮ ಹೇಳಿದಾಗ ಮನ್ಮಥ ಸಂತೋಷಗೊಂಡ.

ಶಿವನ ಮನಸ್ಸನ್ನು ವಿರಾಗದಿಂದ ಅನುರಾಗದೆಡೆಗೆ ಸೆಳೆಯಲು ಪತ್ನಿ ರತಿಯೊಡನೆ ಹೊರಡುವ ಮುನ್ನ ಮನ್ಮಥ ತನ್ನ ತಂದೆ ಬ್ರಹ್ಮ, ಮಾವನಾದ ದಕ್ಷಬ್ರಹ್ಮ ಮತ್ತವನ ಸೋದರರಾದ ಮಾನಸಪುತ್ರ ಮುನಿಗಳ ಪಾದಗಳಿಗೆ ನಮಸ್ಕರಿಸಿ, ಪರಮಾತ್ಮನಾದ ಶಂಕರನು ಇರುವ ಸ್ಥಳಕ್ಕೆ ತೆರಳಿದ ಎಂಬಲ್ಲಿಗೆ ಸತೀಖಂಡದ ಎಂಟನೆ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ನಾಗಾ ಸಾಧುವೊಬ್ಬರ ಗಡ್ಡ ಮತ್ತು ಜಡೆಯನ್ನು ಯುವಕನೊಬ್ಬ ಬಲವಂತದಿಂದ ಕತ್ತರಿಸುತ್ತಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಜಡೆ ಕತ್ತರಿಸುವುದಕ್ಕೆ ಸಾಧು ಪ್ರತಿರೋಧ ಒಡ್ಡಿದಾಗ, ಆ ಯುವಕ ಸಾಧುವಿನ ಮೇಲೆ ಹಲ್ಲೆ ನಡೆಸುವ ದೃಶ್ಯವೂ ಈ ವಿಡಿಯೊದಲ್ಲಿ ಇದೆ. ಜತೆಗೆ ಆ ಯುವಕ ಸಾಧುವನ್ನು ಅವಾಚ್ಯ ಪದಗಳಿಂದ ನಿಂದಿಸುತ್ತಾನೆ. 'ಮಧ್ಯಪ್ರದೇಶದಲ್ಲಿ ನಾಗಾ ಸಾಧುವೊಬ್ಬರ ಮೇಲೆ ಮುಸ್ಲಿಂ ಯುವಕ ಹಲ್ಲೆ ನಡೆಸಿದ್ದಾನೆ. ಹಿಂದೂ ಸಂತರ ಮೇಲೆ ಹಲ್ಲೆ ನಡೆಸಿದ ಮುಸ್ಲಿಂ ಯುವಕನಿಗೆ ಕಠಿಣ ಶಿಕ್ಷೆ ನೀಡಬೇಕು' ಎಂದು ವೈರಲ್ ಆಗಿರುವ ವಿಡಿಯೊ ಜತೆಗೆ ವಿವರವನ್ನು ನೀಡಲಾಗಿದೆ.

'ಈ ವಿಡಿಯೊಗೆ ಸಂಬಂಧಿಸಿದ ಮಾಹಿತಿಯನ್ನು ತಿರುಚಲಾಗಿದೆ ಮತ್ತು ಅದಕ್ಕೆ ಕೋಮಿನ ಬಣ್ಣ ಹಚ್ಚಲಾಗಿದೆ' ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಮಧ್ಯಪ್ರದೇಶದ ಖಾಂಡ್ವಾದಲ್ಲಿ ಈ ಘಟನೆ ನಡೆದಿದೆ. ಪೃಥ್ವಿ ಚಕ್ರ ಎಂಬ ಖಾತೆಯಲ್ಲಿ ಮೊದಲ ಬಾರಿ ಈ ವಿಡಿಯೊವನ್ನು ಹಂಚಿಕೊಳ್ಳಲಾಗಿದೆ. ಸಾಧುವಿನ ಮೇಲೆ ಹಲ್ಲೆ ನಡೆಸಿದ ಯುವಕನ ಹೆಸರು ಪ್ರವೀಣ್ ಗೌರ್ ಎಂದು ಗುರುತಿಸಲಾಗಿದೆ. ಈತನ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಸದ್ಯ ಬಂಧನದಲ್ಲಿ ಇದ್ದಾನೆ ಎಂದು ಖಾಂಡ್ವಾ ಪೊಲೀಸರು ದೃಢಪಡಿಸಿದ್ದಾರೆ. ಸಾಧುವಿನ ಮೇಲೆ ಪ್ರವೀಣ್ ಗೌರ್ ಏಕೆ ಹಲ್ಲೆ ನಡೆಸಿದ ಎಂಬುದು ಗೊತ್ತಾಗಿಲ್ಲ, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ. ಆದರೆ ಹಲ್ಲೆ ನಡೆಸಿದ ವ್ಯಕ್ತಿ ಮುಸ್ಲಿಂ ಎಂಬುದು ಸುಳ್ಳು ಮಾಹಿತಿ' ಎಂದು ಆಲ್ಟ್‌ನ್ಯೂಸ್ ವಿವರಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬ್ರಹ್ಮಪುರಿಯ ತಿರುಕ

ತಿರುಕ ನೀನೀ ಬ್ರಹ್ಮಪುರಿಯೊಳದ ಮರೆಯದಿರು |
ಸಿರಿಯಿರ್ದೊಡೇನು? ಪರಿಜನವಿರ್ದೊಡೇನು? ||
ತೊರೆದೆಲ್ಲ ಡಂಭಗಳ ನೀನೆ ನಿನ್ನಾಳಾಗು |
ಪರದೇಶಿವೊಲು ಬಾಳು – ಮಂಕುತಿಮ್ಮ ||640||

ಪದ-ಅರ್ಥ: ನೀನೀ= ನೀನು+ ಈ, ಬ್ರಹ್ಮಪುರಿಯೊಳದ= ಬ್ರಹ್ಮಪುರಿಯೊಳು (ಬ್ರಹ್ಮನ ನಗರದಲ್ಲಿ) + ಅದ, ಸಿರಿಯಿರ್ದೊಡೇನು= ಸಿರಿ+ ಇರ್ದೊಡೇನು (ಇದ್ದರೇನು), ಪರಿಜನವಿರ್ದೊಡೇನು= ಪರಿಜನ (ಬಂಧು ಬಳಗ) + ಇರ್ದೊಡೇನು, ತೊರೆದೆಲ್ಲ= ತೊರೆದು+ ಎಲ್ಲ, ಡಂಭಗಳ= ಬೂಟಾಟಿಕೆಗಳ, ನಿನ್ನಾಳಾಗು= ನಿನ್ನ+ ಆಳು+ ಆಗು, ಪರದೇಶಿವೊಲು= ಪರದೇಶಿಯ ಹಾಗೆ.

ವಾಚ್ಯಾರ್ಥ: ನೀನು ಈ ಬ್ರಹ್ಮನ ನಗರದಲ್ಲಿ ಒಬ್ಬ ತಿರುಕ ಎಂಬುದನ್ನು ಮರೆಯದಿರು. ಎಷ್ಟು ಸಂಪತ್ತಿದ್ದರೇನು? ಅನೇಕ ಬಂಧು-ಬಳಗದವರಿದ್ದರೇನು? ಎಲ್ಲ ಬೂಟಾಟಿಕೆಗಳನ್ನು ಬಿಟ್ಟು ನೀನೇ ನಿನ್ನ ಆಳಾಗಿ ಬದುಕು. ಪರದೇಶಿಯ ಹಾಗೆ ಬಾಳು.

ವಿವರಣೆ: ವೇದಾಂತದ ಸಾರವನ್ನು ಶ್ವೇತಾಶ್ವತರ ಉಪನಿಷತ್ತು ಸಂಗ್ರಹರೂಪದಲ್ಲಿ ಒಂದು ಮಂತ್ರವಾಗಿ ಹೇಳುತ್ತದೆ.

ಏಕೋ ದೇವ: ಸರ್ವಭೂತೇಷು ಗೂಢ:
ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ|
ಕರ್ಮಾಧ್ಯಕ್ಷ: ಸರ್ವಭೂತಾಧಿವಾಸ:
ಸಾಕ್ಷಿ ಚೇತಾ ಕೇವಲೋ ನಿರ್ಗುಣಶ್ಚ||

ದೇವರೊಬ್ಬನೆ. ಅವನು ಎಲ್ಲ ವಸ್ತುಗಳಲ್ಲಿಯೂ ಗೂಢವಾಗಿದ್ದಾನೆ, ಎಲ್ಲೆಡೆಯೂ ಹರಡಿದ್ದಾನೆ, ಎಲ್ಲ ಪ್ರಾಣಿಗಳಲ್ಲಿ ಆತ್ಮರೂಪವಾಗಿದ್ದಾನೆ, ಎಲ್ಲ ಪ್ರಾಣಿಗಳ ಒಳಗೆ ಅಧಿಕಾರಿಯಾಗಿದ್ದಾನೆ. ಆತ ನಿರ್ಗುಣನಾಗಿದ್ದುಕೊಂಡು, ಸಾಕ್ಷಿಯಂತೆ ಇದ್ದು, ಎಲ್ಲರನ್ನು ಚೈತನ್ಯಪೂರ್ಣರನ್ನಾಗಿ ಮಾಡುತ್ತಾನೆ. ಅನಂತವೆನಿಸುವ ಈ ಮಹಾ ವ್ಯಾಕೃತ ವಿಶ್ವಕ್ಕೆ, ಅದರ ಹಿಂದೆ ಅವ್ಯಾಕೃತವಾದ ಮಹಾಕಾರಣ ತತ್ವವಿದೆ. ಅದರ ಪರಮಾಶ್ರಯದಲ್ಲಿ ವಿಶ್ವ ಬಾಳುತ್ತದೆ. ಅದೇ ದೇವ ಸತ್ವ. ಇಲ್ಲಿ ನಮ್ಮದೇ ಎನ್ನುವಂಥದ್ದು ಯಾವುದೂ ಇಲ್ಲ. ದೇಹ, ಗುಣ, ಪ್ರಕೃತಿ, ಭಾವನೆಗಳು ಇವೆಲ್ಲ ಮೂಲತತ್ವದಿಂದಲೇ ಸೃಷ್ಟಿಯಾದವುಗಳು. ನಮ್ಮದೇನೂ ಇಲ್ಲ, ಇದ್ದದ್ದೆಲ್ಲ ಭಗವಂತ ಕೊಟ್ಟಿದ್ದು ಎನ್ನುವುದಾದರೆ ನಾವೂ ಭಿಕ್ಷುಕರೇ ಅಲ್ಲವೆ? ಅದಕ್ಕೇ ಕಗ್ಗ ಮನುಷ್ಯರನ್ನು ಬ್ರಹ್ಮಪುರಿಯ ಭಿಕ್ಷುಕ ಎಂದು ಕರೆಯುತ್ತಾರೆ.

ನಮ್ಮ ಹತ್ತಿರ ಬಹಳಷ್ಟು ಹಣವಿರಬಹುದು ಆದರೆ ಅದು ನನ್ನದಲ್ಲ. ಬ್ಯಾಂಕಿನಲ್ಲಿ ಕ್ಯಾಷಿಯರ್ ಲಕ್ಷ, ಲಕ್ಷ ರೂಪಾಯಿಗಳನ್ನು ಎಣಿಸಿ, ಜತನದಿಂದ ಲಾಕರ್ದಲ್ಲಿ ಇಟ್ಟು ರಕ್ಷಿಸುತ್ತಾನೆ. ಅವನು ಹಣದ ಮಧ್ಯೆಯೇ ಇದ್ದರೂ ಹಣ ಅವನದಲ್ಲ. ಅದರಂತೆಯೇ ಬಂಧು ಬಳಗದವರು. ಇಲ್ಲಿ ಆರಿಗಾರೂ ಇಲ್ಲ, ಕೆಟ್ಟವಂಗೆ ಕೆಳೆಯಿಲ್ಲ, ಇದನ್ನು ತಿಳಿದರೂ ಮನುಷ್ಯರು ಬದುಕುವ ರೀತಿಯನ್ನು ಕಂಡು, ಚೆನ್ನಬಸವಣ್ಣ ಅದನ್ನು ಗುಬ್ಬಿಯ ಸ್ವಭಾವಕ್ಕೆ ಹೋಲಿಸುತ್ತಾನೆ.

ಗುಬ್ಬಿ ಹೆರರ ಮನೆಯ ತನ್ನ ಮನೆ ಎಂಬಂತೆ ಧರೆ, ಧನ, ವನಿತೆಯರು ಎನ್ನುವರು ತನ್ನವರೆಂದು ಹೋರಿ ಹೋರಿ ಸಾಯುತ್ತದೆ ಜೀವ.

ಹಾಗಾದರೆ, ಹೇಗೆ ಬದುಕಬೇಕು? ಮನಸಿನ ಕಪಟ, ಬೂಟಾಟಿಕೆಗಳನ್ನು ತೆಗೆದೊಗೆದು ನಾನೇ ಆಳಿನಂತೆ, ಪರದೇಶಿಯಂತೆ ಬಾಳಬೇಕು. ನಾನು ಮತ್ತೊಂದು ದೇಶದಲ್ಲಿ ಪರದೇಶಿ. ಆ ದೇಶದ ಅವರು ಹೇಳಿದಂತೆ, ಅವರ ನಿಯಮಗಳಂತೆ ಬಾಳಬೇಕು. ಡಿ.ವಿ.ಜಿ ತಮ್ಮನ್ನು ಕೂಡ ಭಿಕ್ಷುಕ ಎಂದೇ ಕರೆದುಕೊಂಡರು. 'ಡೀವೀಜೀ ಸಂಜ್ಞಿತ: ಕೋಪಿ ಬ್ರಹ್ಮಪತ್ತಾನ ಭಿಕ್ಷುಕ:" "ಡಿ.ವಿ.ಜಿ ಹೆಸರಿನಿಂದ ಕರೆಯಲ್ಪಡುವ ಭಿಕ್ಷುಕ'.

❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜೂನ್ 1, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ದ್ವಿತೀಯ ಗಂ. 21-47 ನಕ್ಷತ್ರ: ಮೃಗಶಿರ ಗಂ. 13-00 ಯೋಗ: ಶೂಲ ಗಂ. 25-34, ಕರಣ: ಬಾಲವ ಗಂ. 08-33, ವೃಷಭ ಮಾಸದ 17 ನೇ ದಿನ.
ರಾಹುಕಾಲ: ಮಧ್ಯಾಹ್ನ 12:00–01:30
ಸೂರ್ಯೋದಯ: 06-06 ಸೂರ್ಯಾಸ್ತ: 06-50
ಮುಸ್ಲಿಂ ದಿನಾಂಕ: 01 ಜುಲ್ಹಾಯದ್
ದಿನ ವಿಶೇಷ: ಶೃಂಗೇರಿ ಜಗದ್ಗುರು ಶ್ರೀ ನೃಸಿಂಹ ಭಾರತೀ ಮಹಾಸ್ವಾಮಿಗಳವರ ಆರಾಧನೆ
ಅದೃಷ್ಟ ಸಂಖ್ಯೆ: 2, 6

ಮೇಷ: ಇಂದು ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು. ಪ್ರಮುಖ ಸ್ಥಾನ ಪಡೆಯಲು ಹೆಚ್ಚಿನ ತಯಾರಿ ನಡೆಸುವಿರಿ. ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ ಕಾಣುವುದು.

ವೃಷಭ: ಸ್ನೇಹಿತರೊಂದಿಗೆ ಅಧ್ಯಾತ್ಮಿಕ ಮಾತುಕತೆಗಳಲ್ಲಿ ತೊಡಗುವಿರಿ. ಇಂದು ಕೆಲವು ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಬರಲಿದೆ.

ಮಿಥುನ: ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ. ಆತಂಕವಿಲ್ಲದೆ ಕೆಲಸ ಕಾರ್ಯಗಳು ಸಾಗುವುದು. ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿ ಲಾಭ ಸಿಗಲಿದೆ. ಆರೋಗ್ಯ ಉತ್ತಮವಾಗಿರುವುದು.

ಕರ್ಕಾಟಕ: ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಹೆಚ್ಚಿನ ಪ್ರಶಂಸೆ ದೊರೆತು ಭಡ್ತಿ ಸಿಗುವುದು. ಅನಿರೀಕ್ಷಿತ ಧನಲಾಭ ಉಂಟಾಗುವುದು. ವೈದ್ಯರ ತಪಾಸಣೆಯಿಂದ ಬಂದ ಫಲಿತಾಂಶ ಆತಂಕವನ್ನು ಸೃಷ್ಟಿ ಮಾಡಲಿದೆ.

ಸಿಂಹ: ತಮ್ಮಂದಿರ ಓದಿನಲ್ಲಿ ಉತ್ತಮ ಪ್ರಗತಿಯನ್ನು ಕಾಣುವಿರಿ. ಅನಿರೀಕ್ಷಿತವಾಗಿ ಹಳೆಯ ಸ್ನೇಹಿತರ ಭೇಟಿಯಾಗಲಿದೆ. ಬಂಧುಗಳ ಮನೆಯ ಶುಭಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಓಡಾಟವಿರುವುದು.

ಕನ್ಯಾ: ಕಾರ್ಖಾನೆಯಲ್ಲಿ ಹೊಸ ವಿದ್ಯುತ್ ಉಪಕರಣಗಳನ್ನು ಅಳವಡಿಸುವಲ್ಲಿ ಅಧಿಕ ಬಂಡವಾಳವನ್ನು ಹೂಡುವಿರಿ. ಹಿರಿಯ ಅಧಿಕಾರಿಗಳೊಬ್ಬರ ಭೇಟಿಯಿಂದ ಎಲ್ಲಾ ಕಾರ್ಯಗಳು ಸರಾಗವಾಗಿ ನಡೆಯುವುದು.

ತುಲಾ: ಸಣ್ಣಪುಟ್ಟ ವಿಚಾರಗಳನ್ನೂ ಉಪೇಕ್ಷಿಸದೆ ಮಾತನಾಡುವಿರಿ. ದೈವಾನುಕೂಲದಿಂದ ನಡೆಯಬೇಕಾದ ಶುಭ ಕಾರ್ಯಗಳನ್ನು ಹಿರಿಯರೊಂದಿಗೆ ಕುಳಿತು ನಿಶ್ಚಯ ಮಾಡಬಹುದು.

ವೃಶ್ಚಿಕ: ಸಹೋದರನ ಮೂಲಕ ಜಮೀನಿನ ಖರೀದಿ ವಿಚಾರದ ಮಾತುಕತೆಗಳು ಜರುಗುವುದು. ಸ್ವಂತ ಉದ್ಯೋಗದವರು ಅಧಿಕ ಬಂಡವಾಳವನ್ನು ಹಾಕುವುದರಿಂದ ಕೈ ಸುಡುವಂತಾಗುವುದು.

ಧನು: ಉನ್ನತ ಓದಿನೆಡೆಗೆ ಹೆಚ್ಚಿನ ಗಮನ ನೀಡಬೇಕಾಗುವುದು. ಚಿತ್ರಕಲೆಯಲ್ಲಿನ ನಿಮ್ಮ ಆಸಕ್ತಿಯಿಂದಾಗಿ ಹೆಚ್ಚಿನ ಕಲಿಕೆಗಾಗಿ ವಿಶೇಷ ತರಗತಿಗೆ ಕಳುಹಿಸಲು ತಂದೆಯವರಿಂದ ಒಪ್ಪಿಗೆ ದೊರೆಯುವುದು.

ಮಕರ: ಸಣ್ಣಪುಟ್ಟ ತೊಡಕು ನಿವಾರಿಸಿಕೊಳ್ಳುವುದನ್ನು ಸ್ವಂತವಾಗಿ ಅಭ್ಯಾಸಿಸಿ. ದೇವಸ್ಥಾನದಲ್ಲಿನ ವಿಶೇಷ ಕಾರ್ಯಕ್ರಮಗಳಿಗೆ ನಿಮ್ಮಿಂದ ಸಹಾಯ ಅಪೇಕ್ಷಿಸುವವರ ವಿಚಾರದಲ್ಲಿ ಮುಂಜಾಗ್ರತೆ ಇರಲಿ.

ಕುಂಭ: ಮಕ್ಕಳ ಕೆಲಸಗಳ ಬಗ್ಗೆ ನೆರೆಯವರಿಂದ ಪ್ರಶಂಸೆಯ ಮಾತು ಕೇಳಿ ಆನಂದವಾಗುತ್ತದೆ. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭವು ಒದಗಿ ಬರಲಿದೆ.

ಮೀನ: ಮಗನ ಸಹಾಯದಿಂದ ಸಂಬಂಧಿಕರೊಬ್ಬರ ಕೆಲಸ ಸುಗಮವಾಗಿ ಕೈಗೂಡುವುದರಿಂದ ಸಂತಸವಿರುವುದು. ಕೆಲಸದಲ್ಲಿ ಬದಲಾವಣೆಗಳ ಅಗತ್ಯಗಳನ್ನು ಸಂಸ್ಥಾಪಕರಿಗೆ ಮನವರಿಕೆ ಮಾಡಿಕೊಡುವಿರಿ.

ಪದಬಂಧ 4975

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
3.ಮಧುರವಾಗಿರುವ ತುಟಿ (3)
4.ಸಮುದ್ರಕ್ಕಿರುವ ಇನ್ನೊಂದು ಹೆಸರು (4)
6.ವಂಚಕತನಕ್ಕೆ ಹೆಸರಾದ ಪ್ರಾಣಿ (2)
7.ಹರಸುತಲಿದ್ದಾಗ ಬಂದಿರುವ ಮಗ (2)
8.ಮಲಗುವಾಗ ಕಂಡ ಕಾಣಿಸೀತೇ? (2)
9.ತಗ್ಗು ದನಿಯಿದು (2)
10.ಉತ್ತರದವರ ಬಾಯಲ್ಲಿಚಿಕ್ಕಪ್ಪನ ಹೆಂಡತಿ! (2)
11.ಮಂತ್ರಿ ಹತ್ತಿರವೇ ಕಪಟ ಇದ್ದಾನೆ! (2)
13.ತಿರುಗಿದಾಗ ಆಗಿರುವ ಕಳವಳ (4)
15.ಮುಖವಿಲ್ಲಿ ಉಲ್ಟಾ ಪಲ್ಟಾ ಆಗಿದೆಯಲ್ಲಾ! (3)
16.ಹೆಬ್ಬಾಗಿಲು ಇಲ್ಲಿದೆ (4)

ಮೇಲಿಂದ ಕೆಳಕ್ಕೆ
1.ಸರ ಖರೀದಿಸುವಾಗಿನ ಪಾಳಿ (3)
2.ಸರಕ್ಕನೆ ತಂದು ಧರಿಸಿದ ಮಾಲೆ (2)
3.ಬೆಂಕಿಯನ್ನು ಆರಿಸುವ ಸಿಬ್ಬಂದಿ (7)
5.ಬೆಳ್ಳಿ ಹಬ್ಬವಿದು (7)
6.ನಗು ಪದದ ವಿರುದ್ಧ ಪದ (2)
9.ಸಚಿವರು ಇಲ್ಲಿದ್ದಾರೆ (2)
12.ವಾರದಲ್ಲೇ ಕಾಣಿಸಿದ ಮಂಗ! (3)
14.ಕತ್ತಲು ಹೀಗೆ ಬಂದಿದೆ (2)



4974ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರಣಭೇರಿ 3.ಕಡಿವಾಣ
5.ಪುಕಾರು 6.ತಪ್ಪಲು
8.ಪ್ರವಾಹ 9.ಜನಕ
10.ತಿಲಕ 12.ಸದನ
14.ಭಯಂಕರ 15.ನಳಪಾಕ

ಮೇಲಿಂದ ಕೆಳಕ್ಕೆ:
1.ರವಿಸುತ 2.ರಿಕಾಪು
3.ಕರಾರು 4.ರಗಹ
7.ಲುಬ್ಧಕ 8.ಪ್ರಗತಿ
9.ಜಯಸ್ತಂಭ 11.ಕರ್ನಾಟಕ
12.ಸಮರ 13.ನರ್ತನ

ಸುಡೊಕು 5361

			4		3		6	
					2			5
		3	5		8	7	2	
		9		3				7
	3				6		5	
8		6		4		2		3
		5		2				4
3						5		
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5360 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಗಾಯಕ ಸಿಧು ಮೂಸೆವಾಲಾ ಅಂತ್ಯಕ್ರಿಯೆ

ಮಾನ್ಸಾ (ಪಂಜಾಬ್): ದುಷ್ಕರ್ಮಿಗಳ ಗುಂಡೇಟಿನಿಂದ ಹತ್ಯೆಗೀಡಾದ ಪಂಜಾಬಿ ಜನಪ್ರಿಯ ಗಾಯಕ ಸಿಧು ಮೂಸೆವಾಲಾ ಅವರ ಅಂತ್ಯಕ್ರಿಯೆಯು ಮಾನ್ಸಾ ಜಿಲ್ಲೆಯ ಅವರ ಸ್ವಗ್ರಾಮದಲ್ಲಿ ಮಂಗಳವಾರ ಮಧ್ಯಾಹ್ನ ನೆರವೇರಿತು.

ಹೂವಿನಿಂದ ಅಲಂಕರಿಸಿದ್ದ ಸಿಧು ಅವರ ನೆಚ್ಚಿನ ಟ್ರ್ಯಾಕ್ಟರ್‌ನಲ್ಲಿಯೇ ಅವರ ಮೃತದೇಹವನ್ನಿರಿಸಿ, ಮೆರವಣಿಗೆ ನಡೆಸಲಾಯಿತು. ದಾರಿಯುದ್ದಕ್ಕೂ ಸಾವಿರಾರು ಮಂದಿ ತಮ್ಮ ನೆಚ್ಚಿನ ಗಾಯಕನಿಗೆ ಅಶ್ರುತರ್ಪಣ ಸಲ್ಲಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಇ.ಡಿ. ವಿಚಾರಣೆ ಎದುರಿಸಿದ ಫಾರೂಖ್ ಅಬ್ದುಲ್ಲಾ

ಶ್ರೀನಗರ(ಪಿಟಿಐ): ಜಮ್ಮು ಮತ್ತು ಕಾಶ್ಮೀರ ಕ್ರಿಕೆಟ್ ಅಸೋಸಿಯೆಷನ್‌ನಲ್ಲಿ (ಜೆಕೆಸಿಎ) ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಫಾರೂಖ್ ಅಬ್ದುಲ್ಲಾ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ 3 ಗಂಟೆಗೂ ಹೆಚ್ಚು ಕಾಲ ವಿಚಾರಣೆ ನಡೆಸಿತು.

ಶ್ರೀನಗರದ ಸಂಸದರೂ ಆಗಿರುವ ಅವರು ರಾಜ್‌ಬಾಘ್‌ನಲ್ಲಿ ಇ.ಡಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿ, ‘ನಾನು ಇ.ಡಿ ಸಮನ್ಸ್ ಬಗ್ಗೆ ಮಾತನಾಡುವುದಿಲ್ಲ. ಚುನಾವಣೆ ನಡೆಯುವವರೆಗೂ ಅವರು ನಮಗೆ ತೊಂದರೆ ನೀಡುತ್ತಾರೆ’ ಎಂದು ಹೇಳಿದರು. ವಿಚಾರಣೆ ಬಳಿಕ ಇ.ಡಿ ಕಚೇರಿಯಿಂದ ಹೊರಬಂದ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಲು ನಿರಾಕರಿಸಿದರು.

ಅಕ್ರಮ ಹಣ ವರ್ಗಾವಣೆ ಸಂಬಂಧ ಅಬ್ದುಲ್ಲಾ ಅವರಿಗೆ ಮೇ 27ರಂದು ಇ.ಡಿ. ಸಮನ್ಸ್ ಜಾರಿ ಮಾಡಿತ್ತು. ಇದೇ ಪ್ರಕರಣದಲ್ಲಿ 2019ರಲ್ಲೂ ಇ.ಡಿ. ಮುಂದೆ ಹೇಳಿಕೆ ದಾಖಲಿಸಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ಎಂಎನ್ಸಿಗೆ ಅಕೌಂಟೆಂಟ್ಸ್ ರಿಪೋರ್ಟರ್ಸ್ ಕಂಪ್ಯೂಟರ್ ಆಪರೇಟರ್ಸ್ ಆಫೀಸ್/ ಅಕೌಂಟ್ಸ್ ಅಸಿಸ್ಟೆಂಟ್ಸ್ ಸ್ಟೋರ್ಕೀಪರ್ಸ್ ಫಿಟ್ಟರ್ಸ್ ವೆಲ್ಡರ್ಸ್ ಎಲೆಕ್ಟ್ರಾನಿಕ್ಸ್ ಮೋನಿಕಾ 7204367465/ 8050107101

Cook

ವಿಜಯನಗರದ ಪಿ.ಜಿ.ಯಲ್ಲಿ ದಕ್ಷಿಣ ಭಾರತ ಶೈಲಿಯಲ್ಲಿ ಅಡಿಗೆ ಮಾಡಲು ಪುರುಷರು/ ಮಹಿಳೆಯರು ಬೇಕಾಗಿದ್ದಾರೆ. ಉಚಿತ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ: 7892988996, 08041158379

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17,800 - 68,000/-, 9538811104, 9538811223

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿ ಇದೆ. 10,000 -15,000. 8951315839, 9880545002

ವಿಶ್ವಾಸಕ್ಕೆ ಅರ್ಹರಾದ ಹೌಸ್ ಕೀಪಿಂಗ್ ಮಹಿಳೆಯರು ಕಛೇರಿ ಕೆಲಸಕ್ಕೆ ತುರ್ತಾಗಿ ಬೇಕಾಗಿದ್ದಾರೆ ಆಕರ್ಷಕ ಸಂಬಳ ನೀಡಲಾಗುವುದು ಸಂಪರ್ಕಿಸಿ: ರಾಜಾಜಿನಗರ, +91 6366443134.

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC,Degree ಸಂಬಳ 15000 to 28000 ಸಂಪರ್ಕಿಸಿರಿ 9980814578, 9980812378

ಬೇಕಾಗಿದ್ದಾರೆ: ಅಟೆಂಡರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

Marketing & Sales

ಕಾಸ್ಮಿಕ್ ಮೈಕ್ರೋಸಿಸ್ಟಮ್ಸ್ ಪ್ರೈ ಲಿ., ಯಶವಂತಪುರ ಬೆಂಗಳೂರು ಸಂಸ್ಥೆಯ ಪ್ರಾಡಕ್ಟ್ ಪ್ರಮೋಷನ್‌ಗಾಗಿ ಬೆಂಗಳೂರು, ಹುಬ್ಬಳ್ಳಿ, ಬಿಜಾಪುರ, ಮೈಸೂರು, ಚೆನ್ನೈ, ಹೈದರಾಬಾದ್, ಪುಣೆ ನಗರಗಳಲ್ಲಿ ಬ್ಯುಸಿನೆಸ್ ಡೆವಲಪ್ಮೆಂಟ್/ಮಾರ್ಕೆಟಿಂಗ್ ಎಕ್ಸಿಕ್ಯುಟಿವ್ಸ್ ಬೇಕಾಗಿದ್ದಾರೆ. ಪ್ರಾಡಕ್ಟ್ & ಹೆಚ್ಚಿನ ವಿವರಗಳಿಗೆ www.cosmicenergy.in ಗೆ ಭೇಟಿನೀಡಿ. Mob- 8951362090, 9606088821. hr@cosmicups.net

WANTED SALES Executives with Bike & Smart Phone Must. Contact Jain Bearings 7619317794, 9986788177

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ

Astrology

★||ಶ್ರೀಪಾತಾಳಭುವನೇಶ್ವರಿ||★ ಆರಾಧನೆಯಿಂದ ಪ್ರೀತಿಪ್ರೇಮ ಸ್ತ್ರೀಪುರುಷ ವಶೀಕರಣ, ದಾಂಪತ್ಯಕಿರಿಕಿರಿ, ಕಂಕಣಭಾಗ್ಯ, ಸಾಲದಭಾದೆ, ಸಂತಾನಭಾಗ್ಯ ಇನ್ನೂಯಾವುದೇ ಕಠಿಣ ಸಮಸ್ಯೆಗಳಿಗೆ ಶಾಶ್ವತ_ಪರಿಹಾರ. ''ಆತ್ಮರಾಮ್_ಭಟ್'' 9900933145

★||ಶ್ರೀಶಾಕಾಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 1ದಿನದಲ್ಲಿ ಶಾಶ್ವತ ಪರಿಹಾರ. 9900222591

ನಂ. 1, ವಶೀಕರಣ ಮಾಂತ್ರಿಕ ನೂರ್ ಖಾನ್. ಯಾವುದೇ ಸಮಸ್ಯೆ ಇರಲಿ ಮೂರು ಗಂಟೆಗಳಲ್ಲಿ ಶಾಶ್ವತ ಪರಿಹಾರ. ಸಂಪರ್ಕಿಸಿ: 7892651684

★||ಶ್ರೀಹುಲಿಗೆಮ್ಮ_ಚೌಡೇಶ್ವರಿ ಜ್ಯೋತಿಷ್ಯರು||★ ಸ್ತ್ರೀಪುರುಷ_ವಶೀಕರಣ ಸಂಭೋಗ ವಶೀಕರಣ ಇನ್ನುಯಾವುದೇ ಘೋರ ನಿಗೂಡ ಗುಪ್ತಕಠಿಣ ಸಮಸ್ಯೆಗಳಿಗೆ 11ನಿಮಿಷಗಳಲ್ಲಿ ಶಾಶ್ವತ_ಪರಿಹಾರ ನಂಬಿ_ಕರೆಮಾಡಿ 9606735267

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

Chamarajpet

50 CRORES Commercial Building for sale. 4 Crores Rent/ Month Prime Location K.R Market, Main Road Facing, N.R Road. Brokers Excuse. 7411255535

ವ್ಯಾಪಾರ

Business Offers

General

ಭಾರತದಾದ್ಯಂತ ಶಾಖೆ ಹೊಂದಿರುವ IMC ಕಂಪನಿಯ ದಿನಬಳಕೆ ವಸ್ತುಗಳು ಬ್ಯೂಟಿಕೇರ್ ವಸ್ತುಗಳನ್ನು ನೀವಿರುವ ಜಾಗದಲ್ಲಿ ಮಾರಾಟಮಾಡಿ ಸಾವಿರ ಹಣಗಳಿಸಿ.9743309498

ಸಾರ್ವಜನಿಕ ಪ್ರಕಟಣೆ

PUBLIC NOTICE
IN THE COURT OF SENIOR CIVIL JUDGE AT ANEKAL
O.S.No. 354 / 2014

Plaintiffs: Smt. Muniyamma, W/o. Late Krishnappa, Aged about 75 years, Residing at Gatta halli Village, Sarjapura Hobli, Anekal Taluk. Bangalore Urban District - 560 100 and others.
Defendants: Smt. Muniyamma & others
Notice to Proposed Defendant Nos. a4.42, 54, 63, 72, 82, 85, 96, 97, 98, 99, 101 on IA No. /2021 Under Order I Rule 10(2) R/w Section 151 of the Code of Civil Procedure
Proposed Defendant No.34:
M/s. Hamilton, Projects LLP, A Limited Liability Partnership Firm, Both having their office at: No.10, 5A Block, 17th "B" Main Road, Koramangala, Bangalore - 560 095.
Proposed Defendant No.42:
Sri.Punith Kumar, S/o. Ashwath Narayana D, Aged about 35 years. R/at No. Elanahalli, Begur, Bangalore South, Bangalore-560 068.
Proposed Defendant No 54:
Sri.Hemant Krishna Rai, S/o Late Krishna S. Rai, Aged about 44 years, R/at Daadys Elixir Apartment, Flat: A-109, Near Huskur Fruit Market, Electronic City Phase-2, Bangalore-560 100.
Proposed Defendant No. 63:
Sri Suresh Hegde, S/o. Krishna Hegde, Aged about: 37 years, R/at No. 458, 6th Cross, KPC Layout, Kasavanahalli, Opp. LACASA Restaurant, Opp. Sarjapur Road, Camaleram Post, Bangalore - 560 035.
Proposed Defendant No 68:
Smt. Preethi Perumal, W/o. Nirmal Karthick, Aged about: 30 years,R/at Flat No.202, Ozone Evergreens Apartment, Haralur Road, Opp Sarjapur Road, Bangalore-560102.
Proposed Defendant No.72:
Sri.Manish Kumar, S/o Kaushik Kumar Sing, Aged about 36 years, Both are R/at Dell, Plot No. 123, EPIP Phase-II, Whitefield Industrial Area, Bangalore-560135.
Proposed Defendant No.85:
SmtAysha Lubna, W/o Basheer Shah, Aged about 34 years, Both are R/at 5A, West Wing, Fernhill Gardens Apartments, HSR Layout Sector-6, Bangalore.
Proposed Defendant No.96:
Sri.Rajrishi Dutta, S/o Malay Kumar Dutta, Aged about 35 years, R/at No.G-403, SJR Hamilton Homes, Bangalore-560 099.
Proposed Defendant No.97:
Sri.Tinto Tom, S/o Thomas.P.T, Aged about 33 years, R/at Kunduthode (PO) Kavilumpara(via), Kozhikode (Dt), Kerala-673513.
Proposed Defendant No.98:
Sri. Arun Kumar.E.R, S/o Raveendran.E.V, Aged about 45 years,
Proposed Defendant No.99:
Smt. Binita Girish, W/o Arun Kumar.E.V, Aged about 35 years, Both are R/at B-101, Sai Krupa Elite, Frens City Road, Doddanekkundi, Bangalore-560 037.
Proposed Defendant No.101:
Vistra ITCL (India) Limited, a Company Incorporated under the Companies Act 1956.
by its Registered Office at Plot No.C22 G Block, Bandra Kurla Complex, Bandra East, Mumbai- 400051. And having an office at A1-Latheef, First Floor, No.2, union street, Off Infantry Road, Bangalore -560 001. Rep by its Chief Manager (RACPC-IV), Whitefield Branch, Bangalore-560 066.
That above named plaintiffs have filed the IA No. /2021. Under Order I Rule 10 (2) R/w Section 151 of the Code of Civil Procedure in the above suit to impleading the proposed defendants against you all & others; this Hon'ble'Court pleased to Order for issue of notice to you all for your appearance on 20.06.2022.
You are hereby noticed to appear before this Court within 10 days from the date of this notification either in person or through your pleader/Advocate, failing which the matter will be decided in your absence.
Given Under my hand and seal of the Court on this the 26th day of March 2022 at Anekal.
Advocate for Plaintiff
T.S.Chandraprabha, Advocate, No.32, 2nd floor, Hari Hara Complex, B.V.K.Iyengar Road, Bangalore-560 053.
By Order of the Court
Sd/- Chief Ministerial Officer,
Sr. Civil Judge & JMFC Court, Anekal.

ಪ್ರವಾಸ

Travel

ಪ್ರವಾಸ:11.06.2022 ರಿಂದ 5 ದಿನ ಶಿರಡಿ, ಪಂಡರಾಪುರ,ಕೊಲ್ಲಾಪುರ,ಕೂಡಲ ಸಂಗಮ,ಬಿಜಾಪುರ. 09.07.2022 ರಿಂದ 6 ದಿನ ರಾಮೇಶ್ವರ,ಕನ್ಯಾಕುಮಾರಿ, ತ್ರಿವೇಂಡ್ರಂ,ಗುರುವಾಯೂರು. 21.07.2022 ರಿಂದ 4 ದಿನ 9 ನವಗ್ರಹ ದೇವರುಗಳು,ತಿರುನಲ್ಲೂರ್,ತಂಜಾವೂರು,ಚಿದಂಬರಂ. 11.08.2022 ರಿಂದ 5 ದಿನ ವಿಮಾನದಲ್ಲಿ 2+2 ಎ/ಸಿ ಬಸ್ಸಿನಲ್ಲಿ ಕಾಶಿ,ಗಯಾ,ಆಯೋಧ್ಯ,ಅಲಹಾಬಾದ್,ಬುದ್ಧಗಯಾ. ಶ್ರೀಗುರುರಾಜ ಟ್ರಾವೆಲ್ಸ್, ಕೋಲಾರ. 9900124333, 9611082432, 8123099913.

ಸ್ವಯಂಭೂ ಹಿಮಲಿಂಗ ಅಮರನಾಥ್, ವೈಷ್ಣವಿದೇವಿ ಕಾಶ್ಮೀರ್ ಅಮೃತಸರ್ 26.06.2022 ರಿಂದ 13/17 ದಿನಗಳು. ಚಿತ್ರಕೂಟ, ನೈಮೀಶಾರಣ್ಯ ಕಾಶಿ,ಗಯಾ, ಪ್ರಯಾಗ,ಅಯೋಧ್ಯ 8 ದಿನಗಳು. ಸಿಕ್ಕಿಂ,ಕಾಮಕ್ಯ, ಡಾರ್ಜಲಿಂಗ್, ಪುರಿ,ಭುವನೇಶ್ವರ್ 14 ದಿನಗಳು. 07.08.2022 14.08.2022 ರಿಂದ ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

26.06.2022 07.07.2022 ರಿಂದ 10/13/24 ದಿನಗಳ ಪುರಿಜಗನ್ನಾಥ್ ಕಾಶಿ.,ಗಯಾ, ಅಯೋಧ್ಯ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ, ವೈಷ್ಣೋದೇವಿ ಅಮೃತ್‌ಸರ್ ದೆಹಲಿ/ 07.08.2022 07.09.2022 ರಿಂದ 11/13 ದಿನಗಳ ಮುಕ್ತಿನಾಥ್, ಜನಕಪುರಿ,ನೇಪಾಳ ನೈಮೀಶಾರಣ್ಯ, ಗೋರಕ್‌ಪುರ್ ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289, 9448119290 9019301300

15.08.2022 7 ದಿನಗಳ ಕಾಶಿ,ಗಯಾ,ಅಯೋಧ್ಯ 15.09.2022 35 ದಿನಗಳ ಉತ್ತರ ಭಾರತ. 05.09.2022 ಚಾರ್‌ಧಾಮ್. 22.08.2022 11 ದಿನಗಳ ಮುಕ್ತಿನಾಥ್ ನೇಪಾಳ. 14.07.2022 ಅಮರನಾಥ ಯಾತ್ರೆ ಪ್ರವಾಸಗಳಿಗಾಗಿ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ 080-26574131 26573421 9964108171

27.06.2022, 14 ದಿನಗಳ ವೈಷ್ಣವಿದೇವಿ ಕಾಶ್ಮಿರ,ಗುಲ್ಮಾರ್ಗ್ ಅಮರನಾಥ ಯಾತ್ರೆ. 17.07.2022, 11 ದಿನಗಳ ಕಾಶಿಯಾತ್ರೆ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ತ್ಯಾಗರಾಜನಗರ ಬೆಂಗಳೂರು-70. 9342287551 8050629305

ಆಗಸ್ಟ್‌ನಲ್ಲಿ 14 ದಿನಗಳ ಅಷ್ಟ ಜ್ಯೋತಿರ್ಲಿಂಗ ಯಾತ್ರೆ. ಸೆಪ್ಟಂಬರ್‌ನಲ್ಲಿ 12 ದಿನಗಳ ಬದರಿನಾಥ್, ಕೇದಾರನಾಥ್ ಯುಮುನೋತ್ರಿ,ಗಂಗೋತ್ರಿ. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ,ಬೆಂಗಳೂರು. 9448294477

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 23/06/22 ಕಾಶಿ ವಿಶ್ವನಾಥ, ಜಾರ್ಖಂಡ್ ವೈದ್ಯನಾಥ. 14/07/22 ಶಿರಡಿ, ಪಂಡರಾಪುರ. 21/07/22 ನೇಪಾಳ ಮುಕ್ತಿನಾಥ, ಪಶುಪತಿನಾಥ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ

Classifieds
EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
Admission Notice,
Education Success
Congratulation Ads

ಶಿಮ್ಲಾ ರೋಡ್ ಶೋನಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ

ಬಿಜೆಪಿಯಲ್ಲಿ ಭ್ರಷ್ಟಾಚಾರ ಶೂನ್ಯ

ಶಿಮ್ಲಾ (ಪಿಟಿಐ): ‘ಬಿಜೆಪಿ ನೇತೃತ್ವದ ಆಡಳಿತವು ಭ್ರಷ್ಟಾಚಾರ ನಿರ್ಮೂಲನೆ ಮಾಡಿದ್ದು, ಎಂಟು ವರ್ಷಗಳಲ್ಲಿ ದೇಶವು ಅಗಾಧ ಬದಲಾವಣೆ ಕಂಡಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಮಂಗಳವಾರ ಇಲ್ಲಿ ರ‍್ಯಾಲಿಗೂ ಮೊದಲು ಕೇಂದ್ರದ ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಅವರು ಸಂವಾದ ನಡೆಸಿದರು. ಕಿಸಾನ್ ಸಮ್ಮಾನ್ ನಿಧಿಯ 11ನೇ ಕಂತಾಗಿ 80 ಕೋಟಿ ರೈತರಿಗೆ ₹21,000 ಕೋಟಿ ಅನುದಾನ ಬಿಡುಗಡೆ ಮಾಡಿದರು.

‘2014ರ ಮೊದಲು ಭ್ರಷ್ಟಾಚಾರವನ್ನು ಸರ್ಕಾರದ ಅತ್ಯಗತ್ಯ ಭಾಗವಾಗಿ ಪರಿಗಣಿಸಲಾಗಿತ್ತು’ ಎಂದು ಆರೋಪಿಸಿದ ಮೋದಿ, ‘2014ಕ್ಕೂ ಮೊದಲು ವಿವಿಧ ಹಗರಣಗಳಿಂದ ಸರ್ಕಾರ ಸುದ್ದಿಯಾಗುತ್ತಿತ್ತು. ಆದರೆ, ಈಗ ಭ್ರಷ್ಟಾಚಾರ ಸಹಿಸದಿರುವುದು ಮತ್ತು ಅಭಿವೃದ್ಧಿ ಯೋಜನೆಗಳ ಚರ್ಚೆ ನಡೆಯುತ್ತಿದೆ. ದೇಶದಲ್ಲಿ ಬಡತನವೂ ತಗ್ಗಿದೆ. ಇದನ್ನು ಅಂತರರಾಷ್ಟ್ರೀಯ ಏಜೆನ್ಸಿಗಳು ಸಹ ಒಪ್ಪಿಕೊಳ್ಳುತ್ತಿವೆ’ ಎಂದರು.

‘ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಭ್ರಷ್ಟಾಚಾರ ಸಹಿಸದೇ, ವಿವಿಧ ಯೋಜನೆಗಳ ಒಂಬತ್ತು ಕೋಟಿ ನಕಲಿ ಫಲಾನುಭವಿಗಳನ್ನು ಪಟ್ಟಿಯಿಂದ ಕೈಬಿಟ್ಟಿದ್ದೇವೆ. ಪ್ರಧಾನ ಮಂತ್ರಿ ಆವಾಸ್ ಯೋಜನೆ, ವಿದ್ಯಾರ್ಥಿ ವೇತನ ಅಥವಾ ಯಾವುದೇ ಯೋಜನೆಯಾಗಿರಲಿ, ಅರ್ಹರಿಗೆ ನೇರ ವರ್ಗಾವಣೆಯ ಮೂಲಕ ಸರ್ಕಾರದ ಪ್ರಯೋಜನವನ್ನು ತಲುಪಿಸಿ, ಭ್ರಷ್ಟಾಚಾರದ ವ್ಯಾಪ್ತಿಯನ್ನು ಹತ್ತಿಕ್ಕಿದ್ದೇವೆ. ₹22 ಲಕ್ಷ ಕೋಟಿಯನ್ನು ನೇರ ನಗದು ವರ್ಗಾವಣೆ ಮೂಲಕ ವಿವಿಧ ಯೋಜನೆಗಳ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಿದ್ದೇವೆ’ ಎಂದು ಹೇಳಿದರು.

ಕೋವಿಡ್ ಸಾಂಕ್ರಾಮಿಕ ಎದುರಿಸಲು ಕೈಗೊಂಡ ಸರ್ಕಾರ ಕ್ರಮಗಳನ್ನು ಪ್ರಶಂಸಿಸಿದ ಅವರು, ‘ದೇಶದಲ್ಲಿ ಈವರೆಗೆ ಸುಮಾರು 200 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. ಅಲ್ಲದೆ, ಹಲವು ದೇಶಗಳಿಗೆ ಕೋವಿಡ್ ಲಸಿಕೆಗಳನ್ನು ಪೂರೈಸುವ ಮೂಲಕ ಭಾರತವು ಸ್ನೇಹದ ಹಸ್ತ ಚಾಚಿದೆ’ ಎಂದರು.

ಬಿಲಾಸ್‌ಪುರದಲ್ಲಿ ನಿರ್ಮಿಸುತ್ತಿರುವ ಏಮ್ಸ್ ಅನ್ನು ಉಲ್ಲೇಖಿಸಿ ‘ದೇಶದ ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ನಿರ್ಮಿಸಲು ಯೋಜಿಸಿದ್ದೇವೆ’ ಎಂದರು.

ಶಿಮ್ಲಾದಲ್ಲಿ ಮಂಗಳವಾರ ರೋಡ್ ಶೋ ವೇಳೆ ಪ್ರಧಾನಿ ಮೋದಿ ತಮ್ಮ ಬೆಂಗಾವಲು ಪಡೆ ನಿಲ್ಲಿಸಿ, ಕಾರಿನಿಂದ ಇಳಿದು ಹೋಗಿ, ಬಾಲಕಿ ರಚಿಸಿದ್ದ ತಮ್ಮ ತಾಯಿ ಹೀರಾಬೆನ್ ಮೋದಿಯವರ ಕಲಾಕೃತಿಯನ್ನು ಸ್ವೀಕರಿಸಿದರು – ಪಿಟಿಐ ಚಿತ್ರ

ನಾನು ನನ್ನನ್ನು ಪ್ರಧಾನಿ ಎಂದು ಪರಿಗಣಿಸದೇ, ‘ಪ್ರಧಾನ ಸೇವಕ’ ಮತ್ತು 130 ಕೋಟಿ ಭಾರತೀಯರ ಕುಟುಂಬದ ಸದಸ್ಯನೆಂದು ಪರಿಗಣಿಸಿ, ನನ್ನ ಜೀವನ ಅವರಿಗಾಗಿ ಮುಡಿಪಾಗಿಟ್ಟಿರುವೆ

ನರೇಂದ್ರ ಮೋದಿ, ಪ್ರಧಾನಿ

ಕಲಾಕೃತಿ ಕೊಡುಗೆ

ಶಿಮ್ಲಾದ ರಿಡ್ಜ್ ಮೈದಾನಕ್ಕೆ ಹೋಗುವ ರಸ್ತೆಯು ಪ್ರಧಾನಿ ಮೋದಿ ಅವರ ದರ್ಶನಕ್ಕಾಗಿ ಕಾದು ಕುಳಿತಿದ್ದ ಜನರಿಂದ ತುಂಬಿ ತುಳುಕುತ್ತಿತ್ತು. ಜನರ ನಡುವೆ ಶಿಮ್ಲಾದ ಅನು ಎಂಬ ಬಾಲಕಿ ಮೋದಿ ಅವರ ತಾಯಿ ಹೀರಾಬೆನ್ ಅವರ ಕಲಾಕೃತಿ ಕೊಡುಗೆ ನೀಡಲು ನಿಂತಿದ್ದಳು. ರೋಡ್ ಶೋ ವೇಳೆ, ಕಲಾಕೃತಿ ಗಮನಿಸಿದ ನರೇಂದ್ರ ಮೋದಿಯವರು ಬೆಂಗಾವಲು ಪಡೆ ನಿಲ್ಲಿಸಿ, ಕಾರಿನಿಂದ ಇಳಿದು ಬಾಲಕಿಯ ಬಳಿಗೆ ಹೋಗಿ ‘ನಿಮ್ಮ ಹೆಸರೇನು?’ ಎಂದು ವಿಚಾರಿಸಿ, ಕಲಾಕೃತಿಯನ್ನು ಖುಷಿಯಿಂದ ಸ್ವೀಕರಿಸಿದರು.

‘ನಿಮ್ಮ ಮನೆಗೆ ಭೇಟಿ ನೀಡುತ್ತಿದ್ದೆ...’

ಸಂತೋಷಿ

ಕಲಬುರಗಿ: ‘ಆಯುಷ್ಮಾನ್ ಭಾರತ್ ಯೋಜನೆಯಿಂದ ತಮ್ಮ ತಾಯಿ ಸೇರಿ ಊರಿನ ಹಲವರಿಗೆ ವೈದ್ಯಕೀಯ ಸೌಲಭ್ಯ ಸಿಕ್ಕಿದೆ’ ಎಂದು ಸಂತಸ ವ್ಯಕ್ತಪಡಿಸಿದ ಮಹಿಳೆ ಸಂತೋಷಿ ಅವರಿಗೆ, ಪ್ರಧಾನಿ ಮೋದಿ ಅವರು, ‘ನಾನು ಕರ್ನಾಟಕದಲ್ಲಿದ್ದರೆ ನಿಮ್ಮ ಮನೆಗೆ ಭೇಟಿ ನೀಡುತ್ತಿದ್ದೆ’ ಎಂದರು.

ವರ್ಚುವಲ್ ವೇದಿಕೆ ಮೂಲಕ ಮಂಗಳವಾರ ಆಯೋಜಿಸಿದ್ದ ಗರೀಬ್ ಕಲ್ಯಾಣ ಸಮ್ಮೇಳನದ ಅಂಗವಾಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಕಿಣ್ಣಿ ಸಡಕ್ ಗ್ರಾಮದ ಸಂತೋಷಿ ಅವರೊಂದಿಗೆ ಪ್ರಧಾನಿ ಸಂವಾದ ನಡೆಸಿದರು.

‘ತಮ್ಮ ತಾಯಿಗೆ ಯೋಜನೆಯಡಿ ಉಚಿತ ಚಿಕಿತ್ಸೆ ಹಾಗೂ ಜನ ಔಷಧಿ ಕೇಂದ್ರದಲ್ಲಿ ಕೈಗೆಟುಕುವ ದರದಲ್ಲಿ ಔಷಧ ದೊರೆತ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಸಂತೋಷಿ ಕನ್ನಡದಲ್ಲಿ ಮಾತನಾಡಿದರು.

ಅಧಿಕಾರಿಯೊಬ್ಬರು ಅದನ್ನು ಹಿಂದಿಗೆ ಅನುವಾದಿಸಿದರು. ಮಹಿಳೆಯ ಮಾತಿಗೆ ಪ್ರತಿಕ್ರಿಯಿಸಿದ ಮೋದಿ, ‘ನಿಮ್ಮ ಮುಖದ ಭಾವನೆ ಸಂತಸದಲ್ಲಿರುವುದು ತೋರಿಸುತ್ತದೆ’ ಎಂದು ಹೇಳಿದರು. ‘ನಾನು ಪಕ್ಷದ ಕಾರ್ಯಕರ್ತನಾಗಿ ಕರ್ನಾಟಕದಲ್ಲಿದ್ದರೆ ನಿಮ್ಮ ಮನೆಗೆ ಬಂದು ನಿಮ್ಮ ಸಂತೋಷದಲ್ಲಿ ಭಾಗಿಯಾಗುತ್ತಿದ್ದೆ. ಚುನಾವಣೆಗೂ ನಿಮ್ಮನ್ನು ನಿಲ್ಲಿಸುತ್ತಿದ್ದೆ’ ಎಂದು ಮೋದಿ ಹೇಳಿದರು.

ಕೇಂದ್ರ ಪುರಸ್ಕೃತ ಯೋಜನೆಗಳ ಫಲಾನುಭವಿಗಳ ಜತೆ ಬೊಮ್ಮಾಯಿ ಸಂವಾದ

ಆಹಾರ ಧಾನ್ಯ ಚೆನ್ನಾಗಿರ್ತಾವ್ರೋ, ಇಲ್ಲವ್ರೋ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂಗನವಾಡಿಯಲ್ಲಿ ಕೊಡುವ ಆಹಾರ ಧಾನ್ಯ ಚೆನ್ನಾಗಿರ್ತಾವ್ರೋ, ಇಲ್ಲವ್ರೋ?

‘ಚೆನ್ನಾಗಿದೆ ಸರ್’.

‘ನೀ ನಿಜ ಹೇಳಮ್ಮ; ಚೆನ್ನಾಗಿರಲಿಲ್ಲ ಅಂದ್ರೆ ಸರಿಪಡಿಸೋಣ’

‘ಇಲ್ಲ; ಚೆನ್ನಾಗಿದೆ ಸರ್’

ಈ ರೀತಿ ‘ಪೋಷಣ್ ಅಭಿಯಾನ’ದ ಫಲಾನುಭವಿ ಕಾವ್ಯ ಅವರ ಜತೆ ಸಂವಾದ ನಡೆಸಿದ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ಕೇಂದ್ರ ಪುರಸ್ಕೃತ ಯೋಜನೆಗಳ ಫಲಾನುಭವಿಗಳ ಜತೆ ಅವರು ಸಂವಾದ ನಡೆಸಿದರು.

‘ಅಂಗನವಾಡಿಯಲ್ಲಿ ನೀಡುವ ಪೌಷ್ಟಿಕ ಆಹಾರದಿಂದ ಅನುಕೂಲವಾಗಿದೆ. ಗರ್ಭಿಣಿಯರಿಗೆ ಸೀಮಂತ ಹಾಗೂ ಮಕ್ಕಳಿಗೆ ಅನ್ನಪ್ರಾಶನಕ್ಕೂ ಬಳಸಲಾಗುತ್ತಿದೆ. ಕೋವಿಡ್ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮನೆಗೇ ಪೌಷ್ಟಿಕ ಆಹಾರಧಾನ್ಯಗಳನ್ನು ತಲುಪಿಸಿದ್ದರು’ ಎಂದು ಕಾವ್ಯಾ ನೆನಪಿಸಿಕೊಂಡರು.

ಇದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಆರೋಗ್ಯವಂತ ಮಕ್ಕಳಿಂದ ಸಶಕ್ತ ಭಾರತ ನಿರ್ಮಾಣ ಸಾಧ್ಯವೆಂದು ಮನಗಂಡು ಪ್ರಧಾನಿಯವರು ಈ ಕಾರ್ಯಕ್ರಮ ರೂಪಿಸಿದ್ದಾರೆ’ ಎಂದರು.

ಪ್ರಧಾನಮಂತ್ರಿ ಸ್ವನಿಧಿ ಫಲಾನುಭವಿ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದ ಲಕ್ಷ್ಮೀದೇವಿ ಮಾತನಾಡಿ, ‘ಕಳೆದ 18 ವರ್ಷಗಳಿಂದ ತರಕಾರಿ ವ್ಯಾಪಾರ ಮಾಡುತ್ತಿದ್ದು, ಪಿಎಂ ಸ್ವನಿಧಿ ಯೋಜನೆಯಡಿ ಮೊದಲಿಗೆ ಸಾಲ ಪಡೆದು ಹಿಂತಿರುಗಿಸಿದೆ. ಈಗ ₹20 ಸಾವಿರ ಸಾಲ ದೊರೆತಿದೆ. ಹಿಂದೆಲ್ಲ ವ್ಯಾಪಾರದಲ್ಲಿ ಗಳಿಸಿದ ಲಾಭ ಬಡ್ಡಿಗೆ ಸಾಲ ತುಂಬುವುದರಲ್ಲೇ ಸರಿ ಹೋಗುತ್ತಿತ್ತು. ಈಗ ಈ ಯೋಜನೆಯಿಂದ ನನಗೆ ಉಳಿತಾಯವಾಗುತ್ತಿದೆ. ನಿಯಮಿತವಾಗಿ ಕಂತು ತುಂಬುತ್ತಿದ್ದು, ಮುಂದಿನ ಹಂತದಲ್ಲಿ ₹50 ಸಾವಿರ ನೆರವು ದೊರಕಲಿದೆ’ ಎಂದು ಹೇಳಿದರು.

ಪಿಎಂ ಆವಾಸ್ ಯೋಜನೆಯ ಫಲಾನುಭವಿ ಸುಮತಿ, ಮಾತೃವಂದನ ಯೋಜನೆ ಫಲಾನುಭವಿ ಲಾವಣ್ಯ, ಸ್ವಚ್ಛಭಾರತ್ ಮಿಷನ್ ಫಲಾನುಭವಿ ಕೊಪ್ಪಳದ ಹುಲಿಗೆಮ್ಮ ಮೊದಲಾದವರು ತಮಗೆ ಆಗಿರುವ ಅನುಕೂಲದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಿಕ್ಕಬಳ್ಳಾಪುರದಲ್ಲಿ ತರಕಾರಿ ಮಾರುವ ಲಕ್ಷ್ಮೀದೇವಿ ಅವರ ಜತೆ ಸಂವಾದ ನಡೆಸಿದರು

ಜಮ್ಮು: ಹಿಂದೂ ಶಿಕ್ಷಕಿಗೆ ಗುಂಡಿಕ್ಕಿ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯ ಗೋಪಾಲ್‌ಪೋರಾ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ರಜನಿ ಬಾಲಾ ಅವರನ್ನು ಮಂಗಳವಾರ ಉಗ್ರರು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಹತ್ಯೆಯಾದ ಶಿಕ್ಷಕಿ ಜಮ್ಮುವಿನ ಸಾಂಬಾ ಜಿಲ್ಲೆಯಲ್ಲಿ ವಾಸವಿರುವ ರಾಜ್‌ಕುಮಾರ್ ಅವರ ಪತ್ನಿ ಎಂದು ತಿಳಿದುಬಂದಿದೆ.

ಈ ಕುರಿತು ಟ್ವೀಟ್ ಮೂಲಕ ಮಾಹಿತಿ ನೀಡಿರುವ ಕಾಶ್ಮೀರ ವಲಯ ಪೊಲೀಸರು, ‘ಗೋಪಾಲ್‌ಪೋರಾ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿಯನ್ನು ಉಗ್ರರು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಉಗ್ರರನ್ನು ಶೀಘ್ರವೇ ಪತ್ತೆ ಮಾಡಲಾಗುವುದು’ ಎಂದು ತಿಳಿಸಿದ್ದಾರೆ.

ಬುಡ್ಗಾಮ್ ಜಿಲ್ಲೆಯ ಚದೂರದಲ್ಲಿ ಟಿವಿ ಕಲಾವಿದೆ ಅಮ್ರೀನ್ ಭಟ್ ಅವರನ್ನು ಉಗ್ರರು ಗುಂಡಿಕ್ಕಿ ಕೊಂದ ಕೆಲವೇ ದಿನಗಳ ಅಂತರದಲ್ಲಿ ಈ ಘಟನೆ ನಡೆದಿದೆ.

ಶಿಕ್ಷಕಿ ರಜಿನಿ ಬಾಲಾ ಅವರ ಹತ್ಯೆ ಖಂಡಿಸಿ, ಜಮ್ಮು ಮತ್ತು ಶ್ರೀನಗರದ ವಿವಿಧೆಡೆ ಪ್ರತಿಭಟನೆ ನಡೆದವು.

ರಜನಿ ಹತ್ಯೆಯೂ ಸೇರಿ ಈ ವರ್ಷ ಜಮ್ಮು ಮತ್ತು ಕಾಶ್ಮೀರದ ಅಲ್ಪಸಂಖ್ಯಾತರ ಮೇಲೆ ನಡೆದ ನಾಲ್ಕನೇ ದಾಳಿ ಇದು. ಏಪ್ರಿಲ್ 13 ರಂದು ಕುಲ್ಗಾಮ್ ಜಿಲ್ಲೆಯ ಕಕ್ರಾನ್‌ನಲ್ಲಿ ಉಗ್ರರು ರಜಪೂತ ಸತೀಶ್ ಕುಮಾರ್ ಸಿಂಗ್ ಅವರನ್ನು ಗುಂಡಿಕ್ಕಿ ಕೊಂದಿದ್ದರು. ಏಪ್ರಿಲ್ 4ರಂದು ಬಾಲಕೃಷ್ಣನ್ ಭಟ್ ಎಂಬುವವರನ್ನೂ ಉಗ್ರರು ಕೊಂದಿದ್ದರು.

ಶಿಕ್ಷಕಿ ರಜನಿ ಸಾವಿನಿಂದಾಗಿ ದುಃಖತಪ್ತರಾದ ಸಂಬಂಧಿಕರು

ಪುಲ್ವಾಮಾ: ಇಬ್ಬರು ಜೈಷ್ ಉಗ್ರರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಅವಂತಿಪೊರಾದಲ್ಲಿ ಪಾಕಿಸ್ತಾನ ಮೂಲದ ಜೈಷ್-ಎ-ಮಹಮ್ಮದ್ ಭಯೋತ್ಪಾದಕ ಸಂಘಟನೆಯ ಇಬ್ಬರು ಸ್ಥಳೀಯ ಉಗ್ರರನ್ನು ಮಂಗಳವಾರ ಭದ್ರತಾ ಸಿಬ್ಬಂದಿ ಹತ್ಯೆ ಮಾಡಿದ್ದಾರೆ.

ಉಗ್ರರನ್ನು ಶಹೀದ್ ರಾಥರ್ ಮತ್ತು ಉಮರ್ ಯೂಸುಫ್ ಎಂದು ಗುರುತಿಸಲಾಗಿದೆ. ಉಗ್ರರು ಅಡಗಿರುವ ಖಚಿತ ಮಾಹಿತಿ ಮೇರೆಗೆ ಸೋಮವಾರ ತಡರಾತ್ರಿ ರಾಜ್‌ಪೊರಾ, ಅವಂತಿಪೊರಾ ಪ್ರದೇಶ ಸುತ್ತುವರೆದು ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಉಗ್ರರು ಮತ್ತು ಭದ್ರತಾ ಸಿಬ್ಬಂದಿ ನಡುವೆ ನಡೆದ ಗುಂಡಿನ ಕಾಳಗದಲ್ಲಿ ಇಬ್ಬರು ಉಗ್ರರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಸಕ್ತ ವರ್ಷ ಕಣಿವೆ ರಾಜ್ಯದಲ್ಲಿ 55 ಎನ್‌ಕೌಂಟರ್ ನಡೆದಿದ್ದು, ಪಾಕಿಸ್ತಾನದ 26 ಉಗ್ರರು ಸೇರಿ 88 ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

‘ವ್ಯಾಪಾರ: ಚೀನಾ ಈಗಲೂ ಭಾರತದ ಅಗ್ರ ಪಾಲುದಾರ’

ಬೀಜಿಂಗ್ (ಪಿಟಿಐ): ‘ಕಳೆದ ಆರ್ಥಿಕ ವರ್ಷದಲ್ಲಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ಚೀನಾ ಈಗಲೂ ಭಾರತದ ಅಗ್ರ ಪಾಲುದಾರ ದೇಶವಾಗಿದ್ದು, ಅಮೆರಿಕ ಅಲ್ಲ’ ಎಂದು ಚೀನಾ ಮಂಗಳವಾರ ಹೇಳಿದೆ.

ದೇಶದೊಂದಿಗಿನ ವ್ಯಾಪಾರಕ್ಕೆ ಸಂಬಂಧಿಸಿ ಚೀನಾವನ್ನು ಹಿಂದಿಕ್ಕಿ ಅಮೆರಿಕ ಮೊದಲ ಸ್ಥಾನದಲ್ಲಿದೆ ಎಂಬ ಭಾರತದ ಹೇಳಿಕೆಗೆ ಚೀನಾ ಈ ರೀತಿ ಪ್ರತಿಕ್ರಿಯಿಸಿದೆ.

‘ಇಂಥ ನಿರ್ಧಾರಕ್ಕೆ ಬರಲು ಭಾರತ ಸಿದ್ಧಪಡಿಸಿರುವ ಅಂಕಿ–ಅಂಶಗಳು ಹಾಗೂ ಉಭಯ ದೇಶಗಳ ನಡುವಿನ ವ್ಯಾಪಾರದ ಪ್ರಮಾಣವನ್ನು ಲೆಕ್ಕಹಾಕಲು ಅನುಸರಿಸಿದ ವಿಧಾನ ತಾರತಮ್ಯದಿಂದ ಕೂಡಿದೆ’ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಝೂವೊ ಲಿಜಿಯನ್ ಹೇಳಿದ್ದಾರೆ.

‘ಮೊದಲ ಬಾರಿಗೆ, 2021ರಲ್ಲಿ ಉಭಯ ದೇಶಗಳ ನಡುವಿನ ವಹಿವಾಟು ₹ 7.7 ಲಕ್ಷ ಕೋಟಿ ಗಡಿ ದಾಟಿತ್ತು’ ಎಂದು ಅವರು ಹೇಳಿದ್ದಾರೆ.

ರಷ್ಯಾದಿಂದ ತೈಲ ಆಮದು ನಿಷೇಧಿಸಿದ ಇ.ಯು

ಬ್ರುಸೆಲ್ಸ್ (ಎಪಿ/ರಾಯಿಟರ್ಸ್): ಮಹತ್ವದ ಬೆಳವಣಿಗೆಯಲ್ಲಿ, ಮುಂದಿನ ಆರು ತಿಂಗಳು ಕಾಲ ರಷ್ಯಾದಿಂದ ತೈಲ ಆಮದನ್ನು ಶೇ 90ರಷ್ಟು ಕಡಿತಗೊಳಿಸಲು ಐರೋಪ್ಯ ಒಕ್ಕೂಟ (ಇ.ಯು) ನಿರ್ಧರಿಸಿದೆ.

ಉಕ್ರೇನ್ ಮೇಲೆ ಯುದ್ಧ ಸಾರಿರುವ ರಷ್ಯಾಕ್ಕೆ ಪ್ರತ್ಯುತ್ತರ ನೀಡುವ ಉದ್ದೇಶದಿಂದ ಒಕ್ಕೂಟವು ಈ ನಿರ್ಧಾರಕ್ಕೆ ಬಂದಿದೆ ಎಂದು ವಿಶ್ಲೇಷಿಸಲಾಗುತ್ತಿದೆ

ಲಂಕಾಕ್ಕೆ 40,000 ಟನ್ ಡೀಸೆಲ್ ರವಾನೆ

ಕೊಲಂಬೊ(ಪಿಟಿಐ): ಆರ್ಥಿಕ ಸಂಕಷ್ಟ ಮತ್ತು ಸಾಲದ ಸುಳಿಯಲ್ಲಿ ಸಿಲುಕಿ ಇಂಧನ ಕೊರತೆ ಎದುರಿಸುತ್ತಿರುವ ಶ್ರೀಲಂಕಾದ ಸಹಾಯಕ್ಕೆ ಭಾರತ ಮತ್ತೊಮ್ಮೆ ಧಾವಿಸಿದ್ದು, 40,000 ಟನ್ ಡೀಸೆಲ್ ಅನ್ನು ಸೋಮವಾರ ರವಾನಿಸಿದೆ ಎಂದು ಭಾರತದ ಹೈ ಕಮಿಷನ್ ಹೇಳಿದೆ.

ನೇಪಾಳ: 22 ಶವ ಹೊರಕ್ಕೆ

ಕಠ್ಮಂಡು (ಪಿಟಿಐ/ರಾಯಿಟರ್ಸ್): ನೇಪಾಳದ ಮಸ್ತ್ಯಾಂಗ್ ಜಿಲ್ಲೆಯಲ್ಲಿ ಪತನಗೊಂಡಿದ್ದ ವಿಮಾನದ ಅವಶೇಷಗಳ ಬಳಿ ಕೊನೆಯ ಮೃತ ದೇಹವನ್ನು ಮಂಗಳವಾರ ಹೊರತೆಗೆಯಲಾಗಿದೆ.

ವಿಮಾನದಲ್ಲಿರುವ ಬ್ಲ್ಯಾಕ್‌ಬಾಕ್ಸ್‌ಅನ್ನು ಸಹ ಪತ್ತೆಹಚ್ಚಲಾಗಿದೆ ಎಂದು ನೇಪಾಳ ನಾಗರಿಕ ವಿಮಾನಯಾನ ಪ್ರಾಧಿಕಾರದ ಅಧಿಕಾರಿಗಳು ಹೇಳಿದ್ದಾರೆ. ‘ತಾರಾ ಏರ್ ಸಂಸ್ಥೆಯ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ನಾಲ್ವರು ಭಾರತೀಯರು ಸೇರಿದಂತೆ ಎಲ್ಲ 22 ಜನರು ಮೃತಪಟ್ಟಿರುವುದು ದೃಢಪಟ್ಟಂತಾಗಿದೆ. ಮೃತದೇಹಗಳನ್ನು ಸೇನಾನೆಲೆಗೆ ತರಲಾಗಿದೆ’ ಎಂದು ನೇಪಾಳ ನಾಗರಿಕ ವಿಮಾನಯಾನ ಪ್ರಾಧಿಕಾರದ (ಸಿಎಎಎನ್) ವಕ್ತಾರ ದೇವಚಂದ್ರ ಲಾಲ್ ಕರ್ನಾ ಹೇಳಿದ್ದಾರೆ.

ಪ್ಯಾಂಥರ್ಸ್ ಪಾರ್ಟಿ ಸ್ಥಾಪಕ ಭೀಮ್ ಸಿಂಗ್ ನಿಧನ

ಭೀಮ್ ಸಿಂಗ್

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಾಷ್ಟ್ರೀಯ ಪ್ಯಾಂಥರ್ಸ್ ಪಾರ್ಟಿಯ ಸ್ಥಾಪಕ ಭೀಮ್ ಸಿಂಗ್ ಮಂಗಳವಾರ ನಿಧನರಾದರು. ಅವರಿಗೆ 81 ವರ್ಷವಾಗಿತ್ತು. ಒಂದು ತಿಂಗಳಿನಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಇಲ್ಲಿನ ಜಿಎಂಸಿ ಆಸ್ಪತ್ರೆಗೆ ದಾಖಲಾಗಿದ್ದು, ಚಿಕಿತ್ಸೆಗೆ ಸ್ಪಂದಿಸದೇ ಅಲ್ಲಿಯೇ ಮೃತಪಟ್ಟರು. ಉದಂಪುರ್ ಜಿಲ್ಲೆಯ ಬುಗ್ಗೇರಿಯನ್ ಗ್ರಾಮದ ಅವರಿಗೆ ಪತ್ನಿ ಜೈಮಾಲಾ ಮತ್ತು ಪುತ್ರ ಅಂಕಿತ್ ಲವ್ ಇದ್ದಾರೆ.

ಮಾನವ ಹಕ್ಕುಗಳ ಹೋರಾಟಗಾರರಾಗಿದ್ದ ಸಿಂಗ್ ಲೇಖಕ, ಸುಪ್ರೀಂ ಕೋರ್ಟ್‌ನ ವಕೀಲರೂ ಆಗಿದ್ದರು. ಸುಪ್ರೀಂ ಕೋರ್ಟ್‌ನ ವಕೀಲರ ಸಂಘದ ಕಾರ್ಯಕಾರಿ ಸಮಿತಿಗೆ ಹಿರಿಯ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಉದಂಪುರ್ ಕ್ಷೇತ್ರದಿಂದ ಲೋಕಸಭೆಗೆ 1988ರಲ್ಲಿ ಸ್ಪರ್ಧಿಸಿದ್ದು, ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಸೋತಿದ್ದರು.

ರಾಜ್ಯಸಭೆ ಚುನಾವಣೆ: ಬಿಜೆಪಿಯಿಂದ ಹೆಚ್ಚುವರಿ ಅಭ್ಯರ್ಥಿಗಳು ಕಣಕ್ಕೆ, ಪಕ್ಷೇತರರಿಗೆ ಬೆಂಬಲ

'ಕೈ' ಗೆಲುವು ತಡೆಗೆ 'ಕಮಲ' ತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿರೋಧ ಪಕ್ಷಗಳ ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್‌ಗೆ ರಾಜ್ಯಸಭೆ ಚುನಾವಣೆಯಲ್ಲಿ ಗೆಲ್ಲುವ ಅವಕಾಶ ತಗ್ಗಿಸುವುದಕ್ಕಾಗಿ ಬಿಜೆಪಿ ವಿವಿಧ ಕಾರ್ಯತಂತ್ರಗಳನ್ನು ಅನುಸರಿಸಿದೆ. ಮಹಾರಾಷ್ಟ್ರ, ಕರ್ನಾಟಕದಲ್ಲಿ ಹೆಚ್ಚುವರಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಹರಿಯಾಣ ಮತ್ತು ರಾಜಸ್ಥಾನದಲ್ಲಿ ಪಕ್ಷೇತರ ಅಭ್ಯರ್ಥಿಗಳಿಗೆ ಬೆಂಬಲ ನೀಡಿದೆ. ಜೂನ್ 10ರಂದು ಮತದಾನ ನಡೆಯಲಿದೆ. ಈ ಚುನಾವಣೆಯಲ್ಲಿ ಶಾಸಕರನ್ನು ಖರೀದಿಸಲು ಬಿಜೆಪಿ ಮುಂದಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ಈ ರಾಜ್ಯಗಳಲ್ಲಿ ತನಗೆ ಗೆಲ್ಲುವ ಅವಕಾಶ ಇರುವುದಕ್ಕಿಂತ ಹೆಚ್ಚಿನ ಸ್ಥಾನಗಳಿಗೆ ಬಿಜೆಪಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಈ ಸ್ಥಾನಗಳನ್ನು ಗೆಲ್ಲುವ ಅವಕಾಶ ವಿರೋಧ ಪಕ್ಷಗಳಿಗೆ ಇದೆ. ಆದರೆ, ರಾಜಕೀಯ ತಂತ್ರಗಾರಿಕೆ ಮೂಲಕ ವಿರೋಧ ಪಕ್ಷಗಳ ಗೆಲುವನ್ನು ತಡೆಯಬಹುದು ಎಂಬ ಲೆಕ್ಕಾಚಾರದಲ್ಲಿ ಬಿಜೆಪಿ ಇದೆ.

ಒಟ್ಟು 55 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಬಿಜೆಪಿ 21 ಮತ್ತು ಕಾಂಗ್ರೆಸ್ 10 ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆ ಇದೆ.

ಕಾಂಗ್ರೆಸ್‌ನ ಮಾಜಿ ಮುಖಂಡ ವಿನೋದ್ ಶರ್ಮಾ ಅವರ ಮಗ, ಐಟಿವಿ ನೆಟ್‌ವರ್ಕ್‌ನ ವ್ಯವಸ್ಥಾಪಕ ನಿರ್ದೇಶಕ ಕಾರ್ತಿಕೇಯ ಶರ್ಮಾ ಅವರನ್ನು ಹರಿಯಾಣದಿಂದ ಕಣಕ್ಕೆ ಇಳಿಸಿರುವುದು ಅಚ್ಚರಿಗೆ ಕಾರಣವಾಗಿದೆ. ಹಾಗೆಯೇ, ಝೀ ಸಮೂಹದ ಮುಖ್ಯಸ್ಥ ಸುಭಾಷ್ ಚಂದ್ರ ಅವರನ್ನು ಹರಿಯಾಣದ ಬದಲು ರಾಜಸ್ಥಾನದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ಮಾಡಲಾಗಿದೆ. ಇವರಿಬ್ಬರಿಗೂ ಬಿಜೆಪಿ ಬೆಂಬಲ ಇದೆ. ಇದು ಕಾಂಗ್ರೆಸ್‌ನ ಗೆಲುವನ್ನು ತಡೆಯುವ ಯತ್ನ ಎನ್ನಲಾಗಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಜಯ ಮಾಕನ್ ಅವರನ್ನು ಹರಿಯಾಣದಿಂದ ಕಣಕ್ಕೆ ಇಳಿಸಲಾಗಿದೆ. ಇಲ್ಲಿ ಬಿಜೆಪಿ ಅಭ್ಯರ್ಥಿ ಕಿಶನ್ ಲಾಲ್ ಪನ್ವರ್. ಶರ್ಮಾ ಅವರು ಪಕ್ಷೇತರ ಅಭ್ಯರ್ಥಿ. ಗೆಲ್ಲಲು ಅಭ್ಯರ್ಥಿಗೆ 31 ಮತಗಳ ಅಗತ್ಯ ಇದೆ.

ಹರಿಯಾಣದಲ್ಲಿ ಇರುವ ಕಾಂಗ್ರೆಸ್ ಶಾಸಕರ ಸಂಖ್ಯೆ 31. ಆದರೆ, ಶಾಸಕ ಕುಲದೀಪ್ ಬಿಷ್ಣೋಯಿ ಅವರು ಅಸಮಾಧಾನಗೊಂಡಿದ್ದಾರೆ. ಅವರಿಗೆ 10ಕ್ಕೂ ಹೆಚ್ಚು ಶಾಸಕರ ಬೆಂಬಲ ಇದೆ ಎನ್ನಲಾಗಿದೆ. ಹೀಗಾಗಿ, ಕಾಂಗ್ರೆಸ್ ಸಂಕಷ್ಟಕ್ಕೆ ಒಳಗಾಗಬಹುದು. ಬಿಷ್ಣೋಯಿ ಅವರು ಮುಖ್ಯಮಂತ್ರಿ ಮನೋಹರ ಲಾಲ್ ಕಟ್ಟರ್ ಅವರನ್ನು ಕಳೆದ ವಾರ ಭೇಟಿಯಾಗಿದ್ದರು.

ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ತಮ್ಮಲ್ಲಿರುವ ಹೆಚ್ಚುವರಿ ಮತಗಳನ್ನು ಶರ್ಮಾ ಅವರಿಗೆ ವರ್ಗಾಯಿಸಬಹುದು. ಅದರ ಬಳಿಕವೂ ಶರ್ಮಾ ಅವರಿಗೆ ಐದು ಮತಗಳ ಅಗತ್ಯ ಇದೆ.

2014ರಲ್ಲಿ ಕಾಂಗ್ರೆಸ್‌ನಿಂದ ಉಚ್ಚಾಟನೆಗೊಂಡ ವಿನೋದ್ ಶರ್ಮಾ ಅವರಿಗೆ ಎಲ್ಲ ಪಕ್ಷಗಳಲ್ಲಿಯೂ ಹಿತೈಷಿಗಳಿದ್ದಾರೆ. ಅವರ ರಾಜಕೀಯ ಅನುಭವವು ಕಾರ್ತಿಕೇಯ ಅವರ ಗೆಲುವಿಗೆ ನೆರವಾಗಬಹುದು ಎನ್ನಲಾಗುತ್ತಿದೆ.

ರಣದೀಪ್ ಸಿಂಗ್ ಸುರ್ಜೇವಾಲಾ, ಮುಕುಲ್ ವಾಸ್ನಿಕ್ ಮತ್ತು ಪ್ರಮೋದ್ ತಿವಾರಿ ಅವರನ್ನು ಕಾಂಗ್ರೆಸ್, ರಾಜಸ್ಥಾನದಿಂದ ಕಣಕ್ಕೆ ಇಳಿಸಿದೆ. ಬಿಜೆಪಿ ಈ ರಾಜ್ಯದಲ್ಲಿ ತನ್ನ ಒಬ್ಬ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದೆ ಮತ್ತು ಪಕ್ಷೇತರ ಅಭ್ಯರ್ಥಿ ಸುಭಾಷ್ ಚಂದ್ರ ಅವರಿಗೆ ಬೆಂಬಲ ಘೋಷಿಸಿದೆ. ಆಯ್ಕೆಯಾಗಲು ಒಬ್ಬ ಅಭ್ಯರ್ಥಿ 41 ಮತಗಳನ್ನು ಪಡೆಯಬೇಕು. 126 ಬಿಜೆಪಿಯೇತರ ಶಾಸಕರು ಇರುವ ಕಾರಣ ಮೂವರು ಅಭ್ಯರ್ಥಿಗಳನ್ನು ಸುಲಭವಾಗಿ ರಾಜ್ಯಸಭೆಗೆ ಕಳುಹಿಸಬಹುದು ಎಂದು ಕಾಂಗ್ರೆಸ್ ಭಾವಿಸಿದೆ.

ಒಬ್ಬ ಅಭ್ಯರ್ಥಿಯನ್ನು ಆಯ್ಕೆ ಮಾಡಿ, ಉಳಿಯುವ ತನ್ನ ಹೆಚ್ಚುವರಿ 30 ಮತಗಳನ್ನು ಬಿಜೆಪಿಯು ಸುಭಾಷ್ ಚಂದ್ರ ಅವರಿಗೆ ನೀಡಬಹುದು. ಅಂತಹ ಸಂದರ್ಭ ಎದುರಾದರೆ, ಸುಭಾಷ್ ಚಂದ್ರ ಅವರು ಆಯ್ಕೆಯಾಗಲು ಇನ್ನೂ 11 ಮತಗಳ ಅಗತ್ಯ ಬೀಳುತ್ತದೆ. ಪಕ್ಷೇತರ ಮತ್ತು ಸಣ್ಣ-ಪುಟ್ಟ ಪಕ್ಷಗಳ 13 ಶಾಸಕರು ಸದನದಲ್ಲಿ ಇದ್ದು, ಅವರನ್ನು ಸೆಳೆಯಬಹುದು ಎಂದು ಬಿಜೆಪಿ ಯೋಜಿಸಿದೆ.

ಕಾಂಗ್ರೆಸ್ ಕಣಕ್ಕೆ ಇಳಿಸಿರುವ ಮೂವರು ಅಭ್ಯರ್ಥಿಗಳೂ ಹೊರ ರಾಜ್ಯದವರು. ಇದು ಕಾಂಗ್ರೆಸ್‌ಗೆ ಮುಳುವಾಗುವ ಸಾಧ್ಯತೆ ಇದೆ.

ಮಹಾರಾಷ್ಟ್ರದಿಂದ ಇಬ್ಬರನ್ನು ರಾಜ್ಯಸಭೆಗೆ ಕಳುಹಿಸಲು ಬೇಕಾದಷ್ಟು ಮತಗಳು ಬಿಜೆಪಿ ಬಳಿ ಇವೆ. ಆದರೆ, ಮೂವರು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಆಡಳಿತಾರೂಢ ಶಿವಸೇನಾವು ಒಬ್ಬ ಅಭ್ಯರ್ಥಿಯನ್ನು ರಾಜ್ಯಸಭೆಗೆ ಕಳುಹಿಸಬಹುದು ಮತ್ತು ಎರಡನೇ ಅಭ್ಯರ್ಥಿಯನ್ನು ಕಳುಹಿಸಲು ಅದಕ್ಕೆ ಮಿತ್ರಪಕ್ಷಗಳ ಬೆಂಬಲದ ಅವಶ್ಯಕತೆ ಇದೆ. ಆದರೆ ಬಿಜೆಪಿಯು, ಆಡಳಿತ ಮೈತ್ರಿಕೂಟದ ಶಾಸಕರನ್ನು ತನ್ನತ್ತ ಸೆಳೆದುಕೊಳ್ಳಲು ಯತ್ನಿಸುತ್ತಿದೆ ಎಂದು ಶಿವಸೇನಾದ ಸಂಜಯ್ ರಾವುತ್ ಆರೋಪಿಸಿದ್ದಾರೆ.

'ಮೂರು ಸ್ಥಾನ ಗೆದ್ದೇ ಗೆಲ್ಲುತ್ತೇವೆ'

'ನಾವು ಮೂರು ಸ್ಥಾನಗಳನ್ನು ಗೆದ್ದೇ ಗೆಲ್ಲುತ್ತೇವೆ' ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಆದರೆ ಬಿಜೆಪಿ ಇಂತಹ ಆಟವನ್ನೇಕೆ ಆಡುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ. 15 ವರ್ಷಗಳ ಹಿಂದೆಯೂ ಬಿಜೆಪಿಯು, ಪಕ್ಷೇತರ ಅಭ್ಯರ್ಥಿಗೆ ಬೆಂಬಲ ಘೋಷಿಸಿತ್ತು. ಆದರೆ ಪಕ್ಷೇತರ ಅಭ್ಯರ್ಥಿಗೆ ಒಂದೂ ಮತ ಬಾರದ ಕಾರಣ, ಬೆಂಬಲವನ್ನು ವಾಪಸ್ ಪಡೆದಿತ್ತು. ಈ ಬಾರಿ ಅವರು ಮತಗಳನ್ನು ಎಲ್ಲಿಂದ ತರುತ್ತಾರೆ? ಅವರು ಶಾಸಕರ ಖರೀದಿಯಲ್ಲಿ ತೊಡಗಿದ್ದಾರೆ. ಇದು ಒಳ್ಳೆಯ ಸಂಪ್ರದಾಯವಲ್ಲ' ಎಂದು ಗೆಹಲೋತ್ ಹೇಳಿದ್ದಾರೆ.

ಹಾಕಿ: ಭಾರತದ ಫೈನಲ್ ಕನಸು ಭಗ್ನ

ಏಷ್ಯಾಕಪ್: ಪ್ರಶಸ್ತಿ ಸುತ್ತಿಗೆ ದಕ್ಷಿಣ ಕೊರಿಯಾ– ಮಲೇಷ್ಯಾ

ಜಕಾರ್ತ, ಇಂಡೊನೇಷ್ಯಾ (ಪಿಟಿಐ): ಏಷ್ಯಾಕಪ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸುವ ಭಾರತ ಹಾಕಿ ತಂಡದ ಕನಸು ನನಸಾಗಲಿಲ್ಲ.

ಹಾಲಿ ಚಾಂಪಿಯನ್ ಭಾರತ ತಂಡವು ಮಂಗಳವಾರ, ಸೂಪರ್ 4 ಹಂತದ ಅಂತಿಮ ಹಣಾಹಣಿಯಲ್ಲಿ 4–4ರಿಂದ ದಕ್ಷಿಣ ಕೊರಿಯಾ ತಂಡದೊಂದಿಗೆ ಡ್ರಾ ಸಾಧಿಸಿತು.

ಇದಕ್ಕೂ ಮೊದಲು ನಡೆದ ಪಂದ್ಯದಲ್ಲಿ ಮಲೇಷ್ಯಾ ತಂಡವು 5–0ಯಿಂದ ಜಪಾನ್‌ಗೆ ಸೋಲುಣಿಸಿತು. ಇದರಿಂದಾಗಿ ಭಾರತ ತಂಡಕ್ಕೆ ಕೊರಿಯಾ ಎದುರು ಗೆಲ್ಲಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿತ್ತು.

ಮಲೇಷ್ಯಾ, ಭಾರತ ಮತ್ತು ದಕ್ಷಿಣ ಕೊರಿಯಾ ತಲಾ ಐದು ಪಾಯಿಂಟ್ ಗಳಿಸಿದವು. ಆದರೆ ಗೋಲು ಗಳಿಕೆಯಲ್ಲಿ ಭಾರತ ಹಿಂದೆ ಬಿದ್ದಿತು. ಮಲೇಷ್ಯಾ, ಕೊರಿಯಾ ಪ್ರಶಸ್ತಿ ಸುತ್ತು ಪ್ರವೇಶಿಸಿದವು.

ಭಾರತ ತಂಡದ ಪರ ನೀಲಂ ಸಂಜೀಪ್ ಕ್ಸೆಸ್ (9ನೇ ನಿಮಿಷ), ದಿಪ್ಸನ್ ಟರ್ಕಿ (21ನೇ ನಿ.), ಮಹೇಶ್ ಶೇಷೇಗೌಡ (22ನೇ ನಿ.) ಮತ್ತು ಶಕ್ತಿವೇಲ್ ಮರೀಶ್ವರನ್ (37ನೇ ನಿ.) ಕೈಚಳಕ ತೋರಿದರು. ದಕ್ಷಿಣ ಕೊರಿಯಾ ತಂಡಕ್ಕಾಗಿ ಜಾಂಗ್ ಜಾಂಗ್ಯೂನ್ (13ನೇ ನಿ.), ಜೀ ವೂ ಚಿಯೊನ್ (18ನೇ ನಿ.), ಕಿಮ್ ಜಾಂಗ್ ಹೂ (28ನೇ ನಿ.) ಮತ್ತು ಜುಂಗ್ ಮಂಜೆ (44ನೇ ನಿ.) ಗೋಲು ಹೊಡೆದರು.

ಬುಧವಾರ ಮೂರನೇ ಸ್ಥಾನಕ್ಕೆ ನಡೆಯುವ ಪಂದ್ಯದಲ್ಲಿ ಭಾರತ ತಂಡವು ಜಪಾನ್ ತಂಡವನ್ನು ಎದುರಿಸಲಿದೆ.

ಇಂದಿನ ಪಂದ್ಯಗಳು
ಮೂರನೇ ಸ್ಥಾನಕ್ಕೆ
ಭಾರತ–ಜಪಾನ್
ಪಂದ್ಯ ಆರಂಭ: ಮಧ್ಯಾಹ್ನ 2.30
ಫೈನಲ್
ಮಲೇಷ್ಯಾ–ದಕ್ಷಿಣ ಕೊರಿಯಾ
ಆರಂಭ: ಸಂಜೆ 5 ಗಂಟೆ

ರಣಜಿ ಕ್ರಿಕೆಟ್: ಕರ್ನಾಟಕ ತಂಡಕ್ಕೆ ಮನೀಷ್ ನಾಯಕ

ಪ್ರಜಾವಾಣಿ ವಾರ್ತೆ

ಮನೀಷ್ ಪಾಂಡೆ

ಬೆಂಗಳೂರು: ನಗರದ ಹೊರವಲಯದಲ್ಲಿರುವ ಆಲೂರು ಕ್ರಿಕೆಟ್ ಮೈದಾನದಲ್ಲಿ ನಡೆಯಲಿರುವ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್‌ನಲ್ಲಿ ಆಡಲಿರುವ ಕರ್ನಾಟಕ ತಂಡಕ್ಕೆ ಮನೀಷ್ ಪಾಂಡೆ ನಾಯಕತ್ವ ವಹಿಸುವರು.

ಜೂನ್ ಆರರಿಂದ ಕ್ವಾರ್ಟರ್‌ಫೈನಲ್ ಆರಂಭವಾಗಲಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಮಂಗಳವಾರ 20 ಆಟಗಾರರ ತಂಡವನ್ನು ಪ್ರಕಟಿಸಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿ ಆರಂಭಕ್ಕೂ ಮುನ್ನ ರಣಜಿ ಟೂರ್ನಿಯ ಗುಂಪು ಹಂತದ ಪಂದ್ಯಗಳನ್ನು ನಡೆಸಲಾಗಿತ್ತು. ಆದರಲ್ಲಿ ಕರ್ನಾಟಕ ತಂಡವು ಎಂಟರ ಘಟ್ಟಕ್ಕೆ ಅರ್ಹತೆ ಪಡೆದಿತ್ತು.

ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಪ್ರಕಟಿಸಿರುವ ತಂಡ ಇಂತಿದೆ: ಮನೀಷ್ ಪಾಂಡೆ (ನಾಯಕ), ಆರ್. ಸಮರ್ಥ್ (ಉಪನಾಯಕ), ಮಯಂಕ್ ಅಗರವಾಲ್, ದೇವದತ್ತ ಪಡಿಕ್ಕಲ್, ಕರುಣ್ ನಾಯರ್, ಕೆ.ವಿ. ಸಿದ್ಧಾರ್ಥ್, ಡಿ. ನಿಶ್ಚಲ್, ಶರತ್ ಶ್ರೀನಿವಾಸ್, ಬಿ.ಆರ್. ಶರತ್ (ವಿಕೆಟ್‌ಕೀಪರ್), ಶ್ರೇಯಸ್ ಗೋಪಾಲ್, ಕೃಷ್ಣಪ್ಪ ಗೌತಮ್, ಶುಭಾಂಗ್ ಹೆಗಡೆ, ಜೆ. ಸುಚಿತ್, ಕೆ.ಸಿ. ಕಾರ್ಯಪ್ಪ, ರೋನಿತ್ ಮೋರೆ, ವಿ. ಕೌಶಿಕ್, ವಿ. ವೈಶಾಖ, ಎಂ. ವೆಂಕಟೇಶ್, ವಿದ್ವತ್ ಕಾವೇರಪ್ಪ, ಕಿಶನ್ ಎಸ್ ಬೆದರೆ. ಯರೆ ಕೆ ಗೌಡ (ಮುಖ್ಯ ಕೋಚ್), ಎಸ್. ಅರವಿಂದ್ (ಬೌಲಿಂಗ್ ಕೋಚ್), ದೀಪಕ್ ಚೌಗಲೆ (ಫೀಲ್ಡಿಂಗ್ ಕೋಚ್), ಜಾಬ ಪ್ರಭು (ಫಿಸಿಯೊ), ಎ.ಟಿ. ರಾಜಾಮಣಿ ಪ್ರಭು (ಸ್ಟ್ರೆಂಥ್, ಕಂಡಿಷನಿಂಗ್ ಕೋಚ್), ಸಿ.ಎಂ. ಸೋಮಸುಂದರ್ (ಮ್ಯಾನೇಜರ್), ಅನುತೋಷ್ ಪೋಲ್ (ಮ್ಯಾನೇಜರ್), ಎಂ.ಎಸ್. ವಿನೋದಕುಮಾರ್ (ವಿಡಿಯೊ ವಿಶ್ಲೇಷಕ).

ಕ್ಯಾತನಹಳ್ಳಿಯಲ್ಲಿ ರಾಷ್ಟ್ರಮಟ್ಟದ ಕೊಕ್ಕೊ ನಾಳೆಯಿಂದ

ಮಂಡ್ಯ: ರೈತ ನಾಯಕ ದಿವಂಗತ ಕೆ.ಎಸ್.ಪುಟ್ಟಣ್ಣಯ್ಯ ಸ್ಮರಣಾರ್ಥ ಜೂನ್ 2ರಿಂದ ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿ ಗ್ರಾಮದ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಅಖಿಲ ಭಾರತ ಪುರುಷರ ಹೊನಲು– ಬೆಳಕಿನ ಕೊಕ್ಕೊ ಟೂರ್ನಿ ನಡೆಯಲಿದೆ.

ಭಾರತೀಯ ಕೊಕ್ಕೊ ಫೆಡರೇಷನ್, ರಾಜ್ಯ ಕೊಕ್ಕೊ ಸಂಸ್ಥೆ, ಜಿಲ್ಲಾ ಕೊಕ್ಕೊ ಸಂಸ್ಥೆ ಹಾಗೂ ಕ್ಯಾತನಹಳ್ಳಿ ಕ್ರೀಡಾ ಕ್ಲಬ್ ಸಹಯೋಗದಲ್ಲಿ ಟೂರ್ನಿ ನಡೆಯಲಿದೆ. 4ದಿವಸ ನಡೆಯುವ ಟೂರ್ನಿಯಲ್ಲಿ ದೇಶದ 11 ತಂಡಗಳು ಸ್ಪರ್ಧಿಸಲಿವೆ. ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ. ಮ್ಯಾಟ್ ಅಂಕಣದಲ್ಲಿ ಪಂದ್ಯ ನಡೆಯಲಿದ್ದು, ಯುಟ್ಯೂಬ್‌ನಲ್ಲಿ ನೇರ ಪ್ರಸಾರದ ವ್ಯವಸ್ಥೆ ಮಾಡಲಾಗಿದೆ. ಪ್ರಥಮ ಬಹುಮಾನ ₹1 ಲಕ್ಷ, ದ್ವಿತೀಯ ಬಹುಮಾನ ₹50 ಸಾವಿರ, ತೃತೀಯ ಬಹುಮಾನ ₹30 ಸಾವಿರ, 4ನೇ ಬಹುಮಾನ ₹20 ಸಾವಿರ ನೀಡಲಾಗುತ್ತದೆ. ವೈಯಕ್ತಿಕ ವಿಭಾಗದಲ್ಲಿ ಆಟಗಾರರಿಗೆ ಬಹುಮಾನ ವಿತರಿಸಲಾಗುತ್ತದೆ. ಜೂನ್ 2ರಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ಟೂರ್ನಿಗೆ ಚಾಲನೆ ನೀಡಲಿದ್ದಾರೆ.

ಷೇರುಪೇಟೆ ವಹಿವಾಟು

359



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,661
ಇಂದಿನ ಅಂತ್ಯ	16,584
▼	76
ದಿನದ ಕನಿಷ್ಠ	16690

ವಿನಿಮಯ ದರ

$ ಡಾಲರ್	77.71
£ ಪೌಂಡ್	97.89
€ ಯುರೊ	83.26
¥ ಯೆನ್ (100ಕ್ಕೆ)	60.37

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1510 (1525)
ಸೂರ್ಯಕಾಂತಿ (ರಿಫೈನ್ಡ್)	₹1810 (1830)
ಪಾಮೋಲಿನ್	₹1490 (1500)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1200
ಮಧ್ಯಮ	₹800-1000
ಸಣ್ಣ	₹400-600

ಮೂರು ದಿನಗಳ ಏರಿಕೆಗೆ ತಡೆ

ಮುಂಬೈ (ಪಿಟಿಐ): ಮೂರು ದಿನಗಳಿಂದ ಏರಿಕೆಯ ಹಾದಿಯಲ್ಲಿ ಇದ್ದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರ ಇಳಿಕೆ ದಾಖಲಿಸಿದವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 359 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 76 ಅಂಶ ಇಳಿಕೆ ಕಂಡಿತು.

ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವುದರ ಮೇಲೆ ಭಾಗಶಃ ನಿಷೇಧ ವಿಧಿಸಲು ಐರೋಪ್ಯ ಒಕ್ಕೂಟ ಒಪ್ಪಿದ ನಂತರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 120 ಡಾಲರ್ ಗಡಿ ದಾಟಿತು.

ಇದು ಕೂಡ ಮಾರುಕಟ್ಟೆಯ ಮೇಲೆ ಪ್ರಭಾವ ಬೀರಿತು.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 1.64ರಷ್ಟು ಜಾಸ್ತಿಯಾಗಿ ಪ್ರತಿ ಬ್ಯಾರೆಲ್‌ಗೆ 123.66 ಡಾಲರ್‌ಗೆ ಏರಿಕೆ ಕಂಡಿದೆ.

'ಜಿಡಿಪಿ ಅಂಕಿ-ಅಂಶ ಏನಿರುತ್ತದೆ ಎಂಬುದರ ಮೇಲೆ ಗಮನ ಇರಿಸಿದ್ದ ದೇಶಿ ಷೇರುಪೇಟೆಗಳು ಚೇತರಿಕೆಯನ್ನು ಕಾಯ್ದುಕೊಳ್ಳಲು ವಿಫಲವಾದವು. ತೈಲ ಬೆಲೆ ಹೆಚ್ಚಾಗಿದ್ದು ಜಾಗತಿಕ ಮಾರುಕಟ್ಟೆಯಲ್ಲಿ ಹಣದುಬ್ಬರ ನಿಯಂತ್ರಿಸಲು ಅಡ್ಡಿಯಾಗಲಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಅವರು ಹೇಳಿದ್ದಾರೆ.

'ಅಕ್ಕಿ ರಫ್ತು ನಿಷೇಧ ಇಲ್ಲ'

ನವದೆಹಲಿ (ಪಿಟಿಐ): ಬಾಸ್ಮತಿ ಅಥವಾ ಇತರ ಯಾವುದೇ ಅಕ್ಕಿಯ ರಫ್ತಿಗೆ ನಿರ್ಬಂಧ ವಿಧಿಸುವ ಅಥವಾ ರಫ್ತು ನಿಷೇಧಿಸುವ ಚಿಂತನೆ ಇಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ದೇಶದಲ್ಲಿ ಅಕ್ಕಿಯ ಪೂರೈಕೆಯು ಅಗತ್ಯಕ್ಕೆ ಅನುಗುಣವಾಗಿ ಇದೆ, ಅಕ್ಕಿಯ ಬೆಲೆ ಕೂಡ ನಿಯಂತ್ರಣದಲ್ಲಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೇಂದ್ರವು ಗೋಧಿ ರಫ್ತು ನಿಷೇಧಿಸಿ, ಸಕ್ಕರೆ ರಫ್ತಿನ ಮೇಲೆ ನಿರ್ಬಂಧ ವಿಧಿಸಿದ ನಂತರದಲ್ಲಿ ಅಕ್ಕಿ ರಫ್ತಿನ ಮೇಲೆಯೂ ಕೆಲವು ಮಿತಿಗಳನ್ನು ಹೇರಬಹುದು ಎಂದು ವರದಿಯಾಗಿತ್ತು.

'ಅಕ್ಕಿಯ ರಫ್ತು ನಿಯಂತ್ರಿಸುವ ಚಿಂತನೆ ಇಲ್ಲ. ಖಾಸಗಿ ವರ್ತಕರಲ್ಲಿಯೂ ಅಕ್ಕಿ ದಾಸ್ತಾನು ಸಾಕಷ್ಟಿದೆ. ನಮ್ಮ ಉಗ್ರಾಣಗಳಲ್ಲಿ ಕೂಡ ಅಕ್ಕಿಯ ದಾಸ್ತಾನು ಇದೆ' ಎಂದು ಅಧಿಕಾರಿ ಹೇಳಿದ್ದಾರೆ.

ವಿಮೆ ಪ್ರೀಮಿಯಂ ಮೊತ್ತ ಏರಿಕೆ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ (ಪಿಎಂಜೆಜೆಬಿವೈ) ಹಾಗೂ ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆಯ (ಪಿಎಂಎಸ್‌ಬಿವೈ) ಪ್ರೀಮಿಯಂ ಮೊತ್ತವನ್ನು ಕೇಂದ್ರ ಸರ್ಕಾರವು ಹೆಚ್ಚಿಸಿದೆ.

ಪಿಎಂಜೆಜೆಬಿವೈ ಯೋಜನೆಯ ವಾರ್ಷಿಕ ಪ್ರೀಮಿಯಂ ಮೊತ್ತವು ₹ 436ಕ್ಕೆ ಹೆಚ್ಚಳವಾಗಿದೆ. ಇದು ₹ 330 ಆಗಿತ್ತು. ಪಿಎಂಎಸ್‌ಬಿವೈ ಯೋಜನೆಯ ವಾರ್ಷಿಕ ಪ್ರೀಮಿಯಂ ಮೊತ್ತವನ್ನು ₹ 20ಕ್ಕೆ ಏರಿಕೆ ಮಾಡಲಾಗಿದೆ. ಇದು ಮೊದಲು ₹ 12 ಆಗಿತ್ತು. ಹೊಸ ದರವು ಜೂನ್ 1ರಿಂದ ಜಾರಿಗೆ ಬರಲಿದೆ.

ಕನಿಷ್ಠ ಮಟ್ಟಕ್ಕೆ ರೂಪಾಯಿ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಮಂಗಳವಾರ 17 ಪೈಸೆಯಷ್ಟು ಕುಸಿದಿದೆ. ಇದರಿಂದಾಗಿ ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟವಾದ 77.71ಕ್ಕೆ ತಲುಪಿದೆ. ಅಮೆರಿಕದಲ್ಲಿ ಬಾಂಡ್‌ಗಳ ಮೇಲಿನ ಗಳಿಕೆ ಹೆಚ್ಚಾಗುತ್ತಿರುವುದು, ಷೇರುಪೇಟೆಗಳಲ್ಲಿ ಕುಸಿತ, ಕಚ್ಚಾ ತೈಲ ಬೆಲೆ ಏರಿಕೆ, ವಿದೇಶಿ ವಿನಿಮಯದ ಹೊರಹರಿವು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾದವು ಎಂದು ತಜ್ಞರು ಹೇಳಿದ್ದಾರೆ.

ಆರು ಏರ್‌ಬ್ಯಾಗ್ ಕಡ್ಡಾಯ ನಿಯಮ

'ಕಾರು ಮಾರುಕಟ್ಟೆಗೆ ಪೆಟ್ಟು'

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳಲ್ಲಿ ಆರು ಏರ್‌ಬ್ಯಾಗ್‌ಗಳು ಕಡ್ಡಾಯವಾಗಿ ಇರಬೇಕು ಎಂಬ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರವು ಮರುಪರಿಶೀಲಿಸಬೇಕು ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿ ಆಗ್ರಹಿಸಿದೆ.

ಈ ನಿಯಮವನ್ನು ಜಾರಿಗೆ ತರುವುದರಿಂದ ಸಣ್ಣ ಕಾರುಗಳ ಮಾರುಕಟ್ಟೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗಲಿದೆ, ಮುಂದಿನ ದಿನಗಳಲ್ಲಿ ಆಟೊಮೊಬೈಲ್ ಉದ್ಯಮದಲ್ಲಿನ ಉದ್ಯೋಗಾವಕಾಶಗಳ ಮೇಲೆಯೂ ಪರಿಣಾಮ ಉಂಟಾಗಬಹುದು ಎಂದು ಕಂಪನಿ ಹೇಳಿದೆ.

ಗರಿಷ್ಠ ಎಂಟು ಜನ ಕೂರಬಹುದಾದ ವಾಹನಗಳಲ್ಲಿ ಆರು ಏರ್‌ಬ್ಯಾಗ್‌ಗಳು ಇರುವುದು ಕಡ್ಡಾಯ ಎಂಬ ನಿಯಮವನ್ನು ಅಕ್ಟೋಬರ್‌ನಿಂದ ಜಾರಿಗೆ ತರುವುದಾಗಿ ಕೇಂದ್ರ ರಸ್ತೆ ಸಾರಿಗೆ ಸಚಿವಾಲಯವು ಈ ಹಿಂದೆ ಹೇಳಿತ್ತು.

ಆದರೆ, 'ಆರಂಭಿಕ ಹಂತದ ಕಾರುಗಳ ಬೆಲೆಯು ಈಗಾಗಲೇ ಜಾಸ್ತಿಯಾಗಿದೆ. ಇದರಿಂದಾಗಿ ಸಣ್ಣ ಕಾರುಗಳ ಮಾರಾಟದ ಮೇಲೆ ದುಷ್ಪರಿಣಾಮ ಉಂಟಾಗಿದೆ. ಆರು ಏರ್‌ಬ್ಯಾಗ್‌ಗಳು ಇರುವುದು ಕಡ್ಡಾಯ ಎಂಬ ನಿಯಮ ಜಾರಿಗೆ ಬಂದರೆ ಬೆಲೆಯು ಇನ್ನಷ್ಟು ಜಾಸ್ತಿ ಆಗುತ್ತದೆ. ಆಗ ಸಣ್ಣ ಕಾರುಗಳ ಉದ್ಯಮ ಕುಗ್ಗುತ್ತದೆ' ಎಂದು ಮಾರುತಿ ಸುಜುಕಿ ಇಂಡಿಯಾ ಅಧ್ಯಕ್ಷ ಆರ್.ಸಿ. ಭಾರ್ಗವ ಅವರು ಹೇಳಿದ್ದಾರೆ.

₹ 25 ಸಾವಿರ
ಆರು ಏರ್‌ಬ್ಯಾಗ್ ಕಡ್ಡಾಯ ಎಂಬ ನಿಯಮ ಜಾರಿಗೆ ಬಂದರೆ ಸಣ್ಣ ಕಾರುಗಳ ಬೆಲೆಯಲ್ಲಿ ಆಗಬಹುದಾದ ಗರಿಷ್ಠ ಹೆಚ್ಚಳ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ

- **ಪ್ರಶ್ನೆ:** ನನ್ನ ವಯಸ್ಸು 78 ವರ್ಷ. ಸ್ವಯಾರ್ಜಿತ ಆಸ್ತಿಯು ನಗರ ಸಭೆಯ ವ್ಯಾಪ್ತಿಯಿಂದ ಸುಮಾರು 5.5 ಕಿ.ಮೀ. ದೂರದಲ್ಲಿದೆ. ಈ ಆಸ್ತಿ ಮಾರಿದರೆ ₹ 1.5–2 ಕೋಟಿ ಸಿಗಬಹುದು. ಈ ಹಣ ಯಾವ ವಿಧದಲ್ಲಿ ಹೂಡಿಕೆ ಮಾಡಿದರೆ ಹೆಚ್ಚು ಬಡ್ಡಿ ಬರುತ್ತದೆ? ಗರಿಷ್ಠ ಎಷ್ಟು ಹಣವನ್ನು ತೆರಿಗೆ ಬಾರದ ರೀತಿ ಹೂಡಿಕೆ ಮಾಡಬಹುದು? ಮೊಮ್ಮಕ್ಕಳ ವಿದ್ಯಾಭ್ಯಾಸಕ್ಕೆ ಠೇವಣಿ ಇಟ್ಟರೆ ಎಷ್ಟು ಮೊತ್ತಕ್ಕೆ ತೆರಿಗೆ ಬರುವುದಿಲ್ಲ?

ಉತ್ತರ: ಮನೆ, ಜಮೀನಿನಂತಹ ಆಸ್ತಿಗಳನ್ನು ಮಾರಾಟ ಮಾಡಿದಾಗ ಬಂಡವಾಳ ವೃದ್ಧಿ ತೆರಿಗೆ ಅನ್ವಯವಾಗುತ್ತದೆ. ಸ್ವಯಾರ್ಜಿತ ಜಮೀನನ್ನು ಮಾರಿದಾಗ ಬರುವ ಲಾಭದ ಮೇಲೆ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಅನ್ವಯಿಸುತ್ತದೆ. ನಿಮ್ಮ ಜಮೀನಿನ ಖರೀದಿ ಮೌಲ್ಯ ಹಾಗೂ ಖರೀದಿಸಿದ ವರ್ಷ ತಿಳಿಸಿಲ್ಲ. ಮೂರು ವರ್ಷಕ್ಕಿಂತ ಹಿಂದೆಯೇ ಖರೀದಿಸಿರುತ್ತೀರಿ ಎಂದು ಭಾವಿಸುವುದಾದರೆ, ಖರೀದಿ ವರ್ಷದ ಹಣದುಬ್ಬರ ಸೂಚ್ಯಂಕವನ್ನಾಧರಿಸಿ ಮಾರಾಟ ಆಗುವ ಜಮೀನಿನ ಪ್ರಸ್ತುತ ಬೆಲೆ ಮರು ಅಂದಾಜಿಸಲಾಗುತ್ತದೆ. ಮಾರಾಟದ ಬೆಲೆ ಇದಕ್ಕಿಂತ ಅಧಿಕ ಮೊತ್ತವಾಗಿದ್ದರೆ, ಆ ವ್ಯತ್ಯಾಸವನ್ನು ದೀರ್ಘಾವಧಿ ಬಂಡವಾಳ ವೃದ್ಧಿ ಎಂದೂ, ಮಾರಾಟ ಮಾಡಿದ ಬೆಲೆ ಅದಕ್ಕಿಂತ ಕಡಿಮೆ ಮೊತ್ತವಾಗಿದ್ದರೆ, ದೀರ್ಘಾವಧಿ ಬಂಡವಾಳ ನಷ್ಟ ಎಂದೂ ಪರಿಗಣಿಸಲಾಗುತ್ತದೆ. ತೆರಿಗೆಯು ಲಾಭದ ಶೇಕಡಾ 20ರ ಮೂಲ ದರದಲ್ಲಿರುತ್ತದೆ.

ನೀವು ಹೆಚ್ಚುವರಿಯಾಗಿ ಉಳಿತಾಯವಾಗುವ ಹಣವನ್ನು ನಾಮಿನಿ ದಾಖಲಿಸುವ ಮೂಲಕ ಅಂಚೆ ಕಚೇರಿಯಲ್ಲಿ ಹಿರಿಯ ನಾಗರಿಕರಿಗಿರುವ ಖಾತೆಗಳಲ್ಲಿ 5 ವರ್ಷದ ಅವಧಿಗೆ ₹ 15 ಲಕ್ಷಗಳ ತನಕ ಶೇಕಡ 7.4ರ ಬಡ್ಡಿದರದಲ್ಲಿ ಹೂಡಿಕೆ ಮಾಡಬಹುದು. ಮಾತ್ರವಲ್ಲದೆ ತಿಂಗಳ ಆದಾಯ ಯೋಜನೆಯಲ್ಲೂ ₹ 4.50 ಲಕ್ಷದ ತನಕ ಹೂಡಿಕೆ ಮಾಡಬಹುದು. ಇದರ ಬಡ್ಡಿ ಶೇ 6.6. ಆದರೆ ಇವಕ್ಕೆ ಒಟ್ಟಾಗಿ ಸೆಕ್ಷನ್ 80ಸಿ ಅಡಿ ₹ 1.5 ಲಕ್ಷದವರೆಗೆ ತೆರಿಗೆ ವಿನಾಯಿತಿ ಇದೆ. ಹೆಚ್ಚುವರಿ ಉಳಿದ ಹಣವನ್ನು ಬ್ಯಾಂಕ್ ಠೇವಣಿಗಳಲ್ಲಿ ಹೂಡಿಕೆ ಮಾಡುವ ಮೂಲಕ ತಿಂಗಳ ಬಡ್ಡಿ ಬರುವಂತೆ ನೋಡಿಕೊಳ್ಳಬಹುದು. ಮಕ್ಕಳ ಹೆಸರಲ್ಲಿ ಹೆತ್ತವರು ಹೂಡಿಕೆ ಮಾಡಿದರಷ್ಟೇ ಅವರಿಗೆ ತೆರಿಗೆ ಲಾಭ.

ಬಂಡವಾಳ ಆಸ್ತಿಯ ಮಾರಾಟದ ಮೇಲೆ ಬರುವ ಲಾಭಕ್ಕೆ ಸಂಬಂಧಿಸಿದಂತೆ ನಿಮ್ಮ ಉದ್ದೇಶವು ಪೂರ್ಣ ತೆರಿಗೆ ಉಳಿಸುವುದಾಗಿದ್ದರೆ, ಸೆಕ್ಷನ್ 54ಎಫ್ ಅಡಿಯಲ್ಲಿ ವಿನಾಯಿತಿ ಪಡೆಯಬಹುದು. ಈ ಸೆಕ್ಷನ್ ಅಡಿ ತೆರಿಗೆ ವಿನಾಯಿತಿ ಪಡೆಯಲು ನಿಮ್ಮ ಹೆಸರಲ್ಲೇ ಎರಡು ವರ್ಷದೊಳಗೆ ಮನೆ ಖರೀದಿ ಅಥವಾ ಮೂರು ವರ್ಷದೊಳಗೆ ಹೊಸ ಮನೆ ಕಟ್ಟಿಸಬೇಕು. ಈಗಿನ ಆಸ್ತಿ ಮಾರಾಟವಾದೊಡನೆ ವಿವರ ಸಲ್ಲಿಸುವ ಮೊದಲು ಬಂದ ನಿವ್ವಳ ಮಾರಾಟ ಮೊತ್ತವನ್ನು ಬಂಡವಾಳ ಲಾಭ ಉಳಿತಾಯ ಖಾತೆಯಲ್ಲಿ ಮೇಲಿನ ಅವಧಿಗೆ ಹೂಡಿಕೆಗೆ ಅವಕಾಶವಿದೆ. ಆದರೆ ಅದನ್ನು ಮೇಲಿನ ಅವಧಿಯೊಳಗೆ ಮನೆ ಖರೀದಿ ಅಥವಾ ನಿರ್ಮಾಣಕ್ಕೆ ಬಳಸಬೇಕು. ಸಂಪೂರ್ಣ ಮೊತ್ತವನ್ನು ಮನೆಗೆ ಬಳಸಿಕೊಂಡರೆ ಸಂಪೂರ್ಣ ತೆರಿಗೆ ವಿನಾಯಿತಿ ಇದೆ.

ಪರಶಿವಮೂರ್ತಿ, ಬೆಂಗಳೂರು

- **ಪ್ರಶ್ನೆ:** ನನ್ನ ಹೂಡಿಕೆಗಳು ಕೆಲವು ವಾರಗಳ ಹಿಂದೆ ಶೇಕಡ 10ರಷ್ಟು ಲಾಭದಲ್ಲಿದ್ದವು. ಇತ್ತೀಚೆಗೆ ಹೂಡಿಕೆಗಳು ನಷ್ಟದಲ್ಲಿವೆ. ಕೆಲವು ಷೇರುಗಳು ಲಾಭದಲ್ಲಿವೆ ಹಾಗೂ ಕೆಲವು ನಷ್ಟದಲ್ಲಿವೆ. ಒಟ್ಟು ₹ 8 ಲಕ್ಷ ಹೂಡಿಕೆ ಇದೆ. ಮುಂದುವರಿಯುವುದು ಹೇಗೆ? ಕಳೆದ ಒಂದು ವರ್ಷದಿಂದ ನಿಭಾಯಿಸುತ್ತಿದ್ದೇನೆ. ಈಗ ಒಟ್ಟಾರೆ ಲಾಭ ಏನೂ ಇಲ್ಲವಾಗಿದೆ. ಏನು ಮಾಡಲಿ?

ಉತ್ತರ: ಈಗ ಲಾಭದಲ್ಲಿರುವ ಷೇರುಗಳನ್ನು ನೀವು ಹಲವು ತಿಂಗಳ ಹಿಂದೆಯೇ ಖರೀದಿಸಿರಬಹುದು ಹಾಗೂ ನಷ್ಟದಲ್ಲಿರುವ ಷೇರುಗಳನ್ನು ಮಾರುಕಟ್ಟೆ ಮೇಲೇರಿದ್ದಾಗ ಖರೀದಿಸಿರಬಹುದು. ಯಾವುದೇ ಹೂಡಿಕೆಯ ನಿರ್ವಹಣೆಯಲ್ಲಿ ಉತ್ತಮ ಷೇರುಗಳ ಆಯ್ಕೆ ಮಾತ್ರವಲ್ಲದೆ, ಸಮಯೋಚಿತ ಖರೀದಿ ಹಾಗೂ ಮಾರಾಟವೂ ಮುಖ್ಯ. ಇದಕ್ಕಾಗಿ ನಾವು ನಮ್ಮ ಹೂಡಿಕೆಯ ಚೌಕಟ್ಟನ್ನು ಮೊದಲೇ ನಿರ್ಧರಿಸಬೇಕು. ಇದಕ್ಕಾಗಿ ಒಂದಿಷ್ಟು ಕ್ರಮಬದ್ಧ, ಶಿಸ್ತುಬದ್ಧ ವ್ಯವಹಾರ ಮಾನದಂಡ ರೂಪಿಸಿರಬೇಕು. ಹೂಡಿಕೆದಾರರು ತಮ್ಮ ಹೆಚ್ಚುವರಿ ಉಳಿತಾಯವನ್ನಷ್ಟೇ ಇಂತಹ ರಿಸ್ಕ್ ಇರುವ ಮಾರುಕಟ್ಟೆಯಲ್ಲಿ ತೊಡಗಿಸಬಹುದು. ಇಲ್ಲಿ ಲಾಭದಲ್ಲಿ ಒಂದಿಷ್ಟು ನಷ್ಟವಾಗುವುದು ಮಾತ್ರವಲ್ಲದೆ, ಅಸಲು ಮೊತ್ತವೂ ಕೆಲವೊಮ್ಮೆ ನಷ್ಟವಾಗಬಹುದು ಎಂಬುದನ್ನು ಹೂಡಿಕೆ ಮಾಡುವ ಮೊದಲು ಅರಿಯಬೇಕು.

ಹೂಡಿಕೆಗೂ ಮುನ್ನ ನೀವು ನಿಮ್ಮ ನಿರೀಕ್ಷೆಯ ಲಾಭದ ಪ್ರಮಾಣ, ಸ್ಟಾಪ್ ಲಾಸ್, ಹೆಚ್ಚುವರಿ ಹೂಡಿಕೆಯ ಅಗತ್ಯಕ್ಕೆ ತಕ್ಕ ತುರ್ತು ಬಂಡವಾಳದ ಅಗತ್ಯ ಬಂದಲ್ಲಿ ತೊಡಗಿಸಬಹುದಾದ ಮೊತ್ತವನ್ನೂ ನಿಮ್ಮ ಹೂಡಿಕೆ ಸಲಹೆಗಾರರಿಗೆ ಮಾಹಿತಿ ರೂಪದಲ್ಲಿ ಮೊದಲೇ ನೀಡಿ. ಇವೆಲ್ಲ ಸಮಯೋಚಿತ ನಿರ್ಧಾರ ಕೈಗೊಳ್ಳುವಲ್ಲಿ ಹಾಗೂ ನಿಮ್ಮ ಪೋರ್ಟ್‌ಫೋಲಿಯೊವನ್ನು ಪರಿಸ್ಥಿತಿಗನುಗುಣವಾಗಿ ಬದಲಾಯಿಸಲು ನೆರವಾಗುತ್ತದೆ. ಎಷ್ಟೇ ಹೂಡಿಕೆ ಮಾಡುವುದಿದ್ದರೂ ಒಂದೇ ಬಾರಿಯ ಹೂಡಿಕೆಗಿಂತ ಹಂತ ಹಂತದ ಹೂಡಿಕೆ ಅನೇಕ ಅಪಾಯವನ್ನು ಸಮತೋಲನದಲ್ಲಿಡಲು ನೆರವಾಗುತ್ತದೆ.

ಲಾಭದಲ್ಲಿರುವ ಷೇರುಗಳನ್ನು ಪ್ರಸ್ತುತ ಮಾರುಕಟ್ಟೆಯ ಪರಿಸ್ಥಿತಿ ನೋಡಿ ಹಾಗೂ ಕಂಪನಿಯ ಸದ್ಯದ ತ್ರೈಮಾಸಿಕ ವ್ಯವಹಾರ ಅವಲೋಕಿಸಿ ಹೂಡಿಕೆ ಮುಂದುವರಿಸಬೇಕೇ ಅಥವಾ ಲಾಭದೊಂದಿಗೆ ಹೊರಬರಬೇಕೆ ಎಂಬುದನ್ನು ತೀರ್ಮಾನಿಸಿ. ನಷ್ಟದಲ್ಲಿರುವ ಷೇರುಗಳನ್ನೂ ಅವಲೋಕಿಸಿ. ಭರವಸೆಯ ಕಂಪನಿಗಳಲ್ಲಷ್ಟೇ ಹೂಡಿಕೆ ಮುಂದುವರಿಸಿ. ಇಂತಹ ಅವಲೋಕನ ಕಂಪನಿಯ ತ್ರೈಮಾಸಿಕ ಫಲಿತಾಂಶ ಬಂದಾಗಲೆಲ್ಲ ನಡೆಯುತ್ತಿರಲಿ. ಯಾವುದೇ ಕಂಪನಿಯ ಆಡಳಿತ ಮಂಡಳಿ ತನ್ನ ವ್ಯವಹಾರದಲ್ಲಿ ಸ್ಪರ್ಧಾತ್ಮಕತೆ ಉಳಿಸಿಕೊಳ್ಳುವಲ್ಲಿ ಸಮರ್ಥವೇ ಎನ್ನುವುದನ್ನೂ ಅವಲೋಕಿಸಿ. ಇಂತಹ ಅವಲೋಕನವನ್ನು ಮೂರು ತಿಂಗಳಿಗಿಂತ ಅಧಿಕ ಅವಧಿಗೆ ಹೂಡಿಕೆ ಮಾಡುವ ಮುನ್ನ ಅಗತ್ಯವಾಗಿ ಕೈಗೊಳ್ಳಿ. ಮಾರುಕಟ್ಟೆ ಕೆಳಮುಖವಾಗಿ ಚಲಿಸುತ್ತಿರುವಾಗ ಪೋರ್ಟ್‌ಫೋಲಿಯೊದಲ್ಲಿನ ಲಾಭವನ್ನು ಕೈವಶ ಮಾಡಿಕೊಳ್ಳಲು ಅವಕಾಶ ಇರುತ್ತದೆ. ನಷ್ಟದಲ್ಲಿರುವ ಷೇರುಗಳ ಕಂಪನಿಗಳು ಉತ್ತಮ ವ್ಯವಹಾರ ಸಾಮರ್ಥ್ಯವನ್ನು ಹೊಂದಿದ್ದರೆ ಅಲ್ಲಿ ಹೆಚ್ಚಿನ ಹೂಡಿಕೆ ಮಾಡಲು ಸಹ ಅವಕಾಶ ಆಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in

ಮುಂಬೈ ಧಾರಣೆ

ಶೇಂಗಾ

31-5-2022

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10350-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಸೋಯಾ ಕಚ್ಚಾ	1475 (1490)
ಪಾಮ್ ವಾರದ ಡೆಲಿವರಿ	1488 (1498)
ಸೂರ್ಯಕಾಂತಿ ಎಣ್ಣೆ ಕಚ್ಚಾ	1760

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,950 (51,100)
ಬೆಳ್ಳಿ ಕೆ.ಜಿ 61,400 (62,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹495
12 ಮೊಟ್ಟೆಗೆ	₹66

ಮೈಸೂರು

100 ಮೊಟ್ಟೆಗೆ	₹497

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹171
ಆರ್‌ಎಸ್‌ಎಸ್-5	₹164
ಗುಡ್ ಲಾಟ್	₹1158

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-26000
2ನೇ ದರ್ಜೆ	₹10000-15000

ಕೊಬ್ಬರಿ ಧಾರಣೆ

ಪುತ್ತೂರು	₹4500-9000
ತುರುವೇಕೆರೆ	₹13500-13500

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಸಕಲೇಶಪುರ	
ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು	- 470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಭದ್ರಾವತಿ	
ರಾಶಿ	48199-50189
ಚನ್ನಗಿರಿ	
ರಾಶಿ	49409-50099
ಚಿತ್ರದುರ್ಗ	
ಆಪಿ	49919-50369
ಬೆಟ್ಟೆ	38739-39179
ಕೆಂಪುಗೋಟು	29609-30010
ರಾಶಿ	49429-49889
ಕಾರ್ಕಳ	
ಹೊಸತು	40000-45000
ಹಳತು	46000-54500
ಪುತ್ತೂರು	
ಕೋಕ	11000-26000
ಹೊಸತು	27500-45000
ಸಾಗರ	
ಬಿಳಿಗೋಟು	27370-28899
ಚಾಲಿ	36399-38403
ಕೋಕ	31299-34569
ಕೆಂಪುಗೋಟು	32699-34899
ರಾಶಿ	44009-49609
ಸಿಪ್ಪೆಗೋಟು	20560-21133
ಶಿವಮೊಗ್ಗ	
ಬೆಟ್ಟೆ	49009-53369
ಗೊರಬಲು	17000-37786
ರಾಶಿ	43869-50500
ಸರಕು	58199-80196
ಸಿದ್ದಾಪುರ	
ಬಿಳಿಗೋಟು	23699-32089
ಚಾಲಿ	35099-38289
ಕೋಕ	23299-30100
ಕೆಂಪುಗೋಟು	28199-37519
ರಾಶಿ	45509-48299
ತಟ್ಟಿಬೆಟ್ಟೆ	32199-43599
ಶಿರಸಿ	
ಬೆಟ್ಟೆ	28139-46099
ಬಿಳಿಗೋಟು	22199-31705
ಚಾಲಿ	35608-38681
ರಾಶಿ	43099-49099

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16,500	16,300	16300	-
ಎಸಿ	8,960	8,600	8,950	
ಆರ್‌ಪಿ	9600	9,900	10050	ಲಂಡನ್
ಆರ್‌ಸಿ	4700	4,400	4550	2105 ಡಾಲರ್

ಉದ್ಯೋಗ ವಾಣಿ

Bangalore Institute of Technology
K.R. Road, V. V Pura, Bangalore - 560 004.
Phone: 080-26613237, 26645865, www.bit-bangalore.edu.in
e-mail : principalbit4@gmail.com, principal@bit-bangalore.edu.in
Affiliated to VTU, Belagavi and Recognized by AICTE, New Delhi

Applications are invited for the following, Assistant Professor/Physical Education Directors from the eligible candidates as per AICTE norms.

1. **Electrical & Electronics Engg** with specialization of Power Electronics / High Voltage Engg / Control Systems / Digital Electronics.
2. **Computer Science & Engineering**
3. **Artificial Intelligence & Machine Learning**
4. **Mathematics**
5. **English**
6. **Physical Education Director** – Minimum 10 years of experience in PE & Sports, candidates should have evidence of organizing competitions and coaching camps at State/National/Inter-University level, etc.,
7. **Assistant Director of Physical Education** – Candidates should have represented/organised University/college at university /inter university /inter-collegiate or state or national championships etc.,

For Sl. No. 1 to 3 Ph.D is desirable and given preference.
For Sl. No. 4 to 7 Ph.D is mandatory.

Eligible candidate application with relevant document and a **DD for Rs.1000/- in favour of The Principal, BIT from Nationalized Bank only** should be reached on or **before 10 days from date of this advertisement to the Principal, BIT, K.R. Road, VV Pura, Bengaluru-560004**

-sd-
Sri. C. N. Balakrishna, President | Sri. Konappareddy T, General Secretary | Sri. R Prakash, Treasurer
Sri. M.Puttaswamy, Chairman, BIT | Dr.Aswath M.U , Principal, BIT

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಸೆಂಟರ್, ಮುಂಬೈ
ದೂರವಾಣಿ: 022-22820427; ಫ್ಯಾಕ್ಸ್: 022-22820411

ನಿಯಮಿತ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ನಿಯಮಿತ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಕ್ರ. ಸಂ.	ಹುದ್ದೆ	ಶ್ರೇಣಿ/ಸ್ಕೇಲ್	ಖಾಲಿ ಹುದ್ದೆ
1	ಎಜಿಎಮ್ (ಐಟಿ-ಟೆಕ್ ಆಪರೇಶನ್ಸ್)	SMGS-V	01
2	ಎಜಿಎಮ್ (ಐಟಿ-ಇನ್‌ಬೌಂಡ್ ಇಂಜೀನಿಯರ್)		01
3	ಎಜಿಎಮ್ (ಐಟಿ-ಔಟ್‌ಬೌಂಡ್ ಇಂಜೀನಿಯರ್)		01
4	ಎಜಿಎಮ್ (ಐಟಿ ಸೆಕ್ಯುರಿಟಿ ತಜ್ಞ)		01
5	ಮ್ಯಾನೇಜರ್ (ಐಟಿ ಸೆಕ್ಯುರಿಟಿ ತಜ್ಞ)	MMGS-III	02
6	ಡೆಪ್ಯುಟಿ ಮ್ಯಾನೇಜರ್ (ನೆಟ್‌ವರ್ಕ್ ಇಂಜೀನಿಯರ್)	MMGS-II	10
7	ಡೆಪ್ಯುಟಿ ಮ್ಯಾನೇಜರ್ (ಸ್ಟೈಟ್ ಇಂಜೀನಿಯರ್ ಕಮಾಂಡ್ ಸೆಂಟರ್)		10
8	ಡೆಪ್ಯುಟಿ ಮ್ಯಾನೇಜರ್ (ಸಂಖ್ಯಾಶಾಸ್ತ್ರಜ್ಞ)		06

ಅರ್ಹತೆಯ ಮಾನದಂಡಗಳು (ವಯಸ್ಸು, ವಿದ್ಯಾರ್ಹತೆ, ಅನುಭವ, ಕೆಲಸದ ಪ್ರೊಫೈಲ್ ಇತ್ಯಾದಿ), ಅವಶ್ಯಕ ಶುಲ್ಕಗಳು ಮತ್ತು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ಲಿಂಕ್ ಹಾಗೂ ಅರ್ಜಿ ಮೊತ್ತದ ಆನ್‌ಲೈನ್ ಶುಲ್ಕದ ಪಾವತಿಯೊಂದಿಗೆ ಇತರ ವಿವರಗಳು ಬ್ಯಾಂಕ್‌ನ https://bank.sbi/web/careers ಅಥವಾ https://www.sbi.co.in/web/careers ಈ ವೆಬ್‌ಸೈಟ್‌ನಲ್ಲಿ ಜಾಹೀರಾತು ನಂ. CRPD/SCO/2022-23/08 ಇದರಡಿಯಲ್ಲಿ ಉಪಲಬ್ಧವಿದೆ. ಅರ್ಜಿ ಸಲ್ಲಿಸುವ ಮತ್ತು ಶುಲ್ಕವನ್ನು ಪಾವತಿಸುವ ಮೊದಲು ಅಭ್ಯರ್ಥಿಗಳು ತಮ್ಮ ಅರ್ಹತೆ ಮತ್ತು ಇತರ ವಿವರಗಳನ್ನು ಖಾತ್ರಿಪಡಿಸುವ ವಿವರವಾದ ಜಾಹೀರಾತನ್ನು ಓದಿಕೊಳ್ಳಲು ಸೂಚಿಲಾಗಿದೆ.

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ:** 21.05.2022 **ರಿಂದ** 12.06.2022

ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: **"CONTACT US" —> "Post Your Query"** ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಸ್ಥಳ: ಮುಂಬೈ
ದಿನಾಂಕ: 21.05.2022
ಪ್ರಧಾನ ವ್ಯವಸ್ಥಾಪಕರು

ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್: ಇಳವೆನ್ನಿಲ್, ರಮಿತಾ, ಶ್ರೇಯಾ ಸಾಧನೆ

ಭಾರತ ಮಹಿಳೆಯರ ‘ಚಿನ್ನದ ಗುರಿ’

ನವದೆಹಲಿ (ಪಿಟಿಐ): ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನಲ್ಲಿ ಭಾರತ ಪದಕದ ಖಾತೆ ತೆರೆದಿದೆ. ಇಳವೆನ್ನಿಲ್ ವಾಳರಿವನ್, ರಮಿತಾ ಮತ್ತು ಶ್ರೇಯಾ ಅಗರವಾಲ್ ಅವರಿದ್ದ ಮಹಿಳಾ ತಂಡವು 10 ಮೀಟರ್ಸ್ ಏರ್ ರೈಫಲ್ ವಿಭಾಗದಲ್ಲಿ ಮಂಗಳವಾರ ಚಿನ್ನದ ಪದಕಕ್ಕೆ ಮುತ್ತಿಟ್ಟಿದೆ.

ಅಜರ್‌ಬೈಜಾನ್‌ನ ಬಾಕುವಿನಲ್ಲಿ ನಡೆಯುತ್ತಿರುವ ಟೂರ್ನಿಯ ಫೈನಲ್ ಹಣಾಹಣಿಯಲ್ಲಿ ಭಾರತದ ಶೂಟರ್‌ಗಳು 17–5ರಿಂದ ಡೆನ್ಮಾರ್ಕ್‌ನ ಅನ್ನಾ ನೆಲ್ಸನ್, ಎಮ್ಮಾ ಕೋಚ್ ಮತ್ತು ರಿಕ್ಕೆ ಮಾಂಗ್ ಇಬ್ಸೆನ್ ಅವರನ್ನು ಪರಾಭವಗೊಳಿಸಿದರು. ಪೋಲೆಂಡ್ ತಂಡವು ಕಂಚಿನ ಪದಕ ಗಳಿಸಿತು.

ಈ ಹಿಂದೆ ವಿಶ್ವ ಕ್ರಮಾಂಕದದಲ್ಲಿ ಅಗ್ರಸ್ಥಾನದಲ್ಲಿದ್ದ ಇಳವೆನ್ನಿಲ್, ರಮಿತಾ ಮತ್ತು ಶ್ರೇಯಾ ಸೋಮವಾರ ಎರಡು ಸುತ್ತುಗಳ ಅರ್ಹತಾ ಪಂದ್ಯಗಳ ಮೂಲಕ ಫೈನಲ್‌ಗೆ ಪ್ರವೇಶಿಸಿದ್ದರು. ಮೊದಲ ಸುತ್ತಿನಲ್ಲಿ 944.4 ಪಾಯಿಂಟ್ಸ್ ಗಳಿಸಿ ಮೊದಲ ಸ್ಥಾನ ಪಡೆದಿದ್ದ ತಂಡವು, ಎರಡನೇ ಸುತ್ತಿನಲ್ಲಿ ಡೆನ್ಮಾರ್ಕ್ ಎದುರು ಹಿನ್ನಡೆ ಅನುಭವಿಸಿ ಎರಡನೇ ಸ್ಥಾನ ಗಳಿಸಿತ್ತು. ಕಂಚಿನ ಪದಕದ ಸುತ್ತಿಗೆ ಪ್ರವೇಶಿಸಿದ್ದ ಭಾರತ ಪುರುಷರ ತಂಡವು ಕ್ರೊವೇಷ್ಯಾ ಎದುರು ನಿರಾಸೆ ಅನುಭವಿಸಿತು. ರುದ್ರಾಂಕ್ಷ್ ಪಾಟೀಲ್, ಪಾರ್ಥ್ ಮಖೀಜಾ ಮತ್ತು ಧನುಷ್ ಶ್ರೀಕಾಂತ್ ಅವರನ್ನೊಳಗೊಂಡ ತಂಡವು 10–16ರಿಂದ ಕ್ರೊವೇಷ್ಯಾ ಎದುರು ಸೋಲು ಕಂಡಿತು.

12 ಶೂಟರ್‌ಗಳನ್ನು ಒಳಗೊಂಡ ಭಾರತ ರೈಫಲ್ ತಂಡವು ಸದ್ಯ ಟೂರ್ನಿಯ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಎರಡು ಚಿನ್ನ ಸೇರಿದಂತೆ ಒಟ್ಟು ನಾಲ್ಕು ಪದಕಗಳನ್ನು ತನ್ನದಾಗಿಸಿಕೊಂಡಿರುವ ಸರ್ಬಿಯಾ ಅಗ್ರಸ್ಥಾನದಲ್ಲಿದೆ.

ಚಿನ್ನ ಜಯಿಸಿದ ಭಾರತದ ರಮಿತಾ, ಶ್ರೇಯಾ ಅಗರವಾಲ್ ಮತ್ತು ಇಳವೆನ್ನಿಲ್ ವಾಳರಿವನ್ ಸಂಭ್ರಮ– ಪಿಟಿಐ ಚಿತ್ರ

ಚೆಸ್: ಆನಂದ್‌ಗೆ ಮಣಿದ ಕಾರ್ಲ್‌ಸನ್

ವಿಶ್ವನಾಥನ್ ಆನಂದ್

ಸ್ಟಾವೆಂಜರ್, ನಾರ್ವೆ (ಪಿಟಿಐ): ಭಾರತದ ವಿಶ್ವನಾಥನ್ ಆನಂದ್ ಇಲ್ಲಿ ನಡೆದ ನಾರ್ವೆ ಬ್ಲಿಟ್ಜ್ ಚೆಸ್ ಟೂರ್ನಿಯಲ್ಲಿ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಸೋಲುಣಿಸಿದರು.

ಮಾಜಿ ವಿಶ್ವ ಚಾಂಪಿಯನ್ ಆನಂದ್, ಏಳನೇ ಸುತ್ತಿನಲ್ಲಿ ನಾರ್ವೆಯ ಕಾರ್ಲ್‌ಸನ್ ಎದುರು ಗೆದ್ದರೂ ನಾಲ್ಕನೇ ಸ್ಥಾನ ಗಳಿಸಿದರು.

ನೆದರ್ಲೆಂಡ್ಸ್‌ನ ಅನೀಶ್ ಗಿರಿ ಮತ್ತು ಫ್ರಾನ್ಸ್‌ನ ಮ್ಯಾಕ್ಸಿಮ್ ವಾಚಿರ್ ಲ್ಯಾಗ್ರೇವ್ ಎದುರು ಕ್ರಮವಾಗಿ ನಾಲ್ಕು ಮತ್ತು ಒಂಬತ್ತನೇ ಸುತ್ತುಗಳಲ್ಲಿ ಆನಂದ್ ಸೋತರು.

10 ಆಟಗಾರರು ಪಾಲ್ಗೊಂಡಿದ್ದ ಟೂರ್ನಿಯಲ್ಲಿ ಭಾರತದ ಆಟಗಾರ ಐದು ಪಾಯಿಂಟ್ಸ್ ಗಳಿಸಿದರು. 6.5 ಪಾಯಿಂಟ್ಸ್ ಕಲೆಹಾಕಿದ ಅಮೆರಿಕದ ವೇಸ್ಲಿ ಅಗ್ರಸ್ಥಾನ ಗಳಿಸಿದರು.

ಇಟಲಿ ತಂಡಕ್ಕೆ ಮೆಸ್ಸಿ ಸವಾಲು

ಲಂಡನ್: ಇಲ್ಲಿಯ ವೆಂಬ್ಲಿ ಕ್ರೀಡಾಂಗಣವು ಬುಧವಾರ ಅಪರೂಪದ ಫುಟ್‌ಬಾಲ್ ಪಂದ್ಯಕ್ಕೆ ವೇದಿಕೆಯಾಗಲಿದೆ.

2021ರ ಯುರೋಪಿಯನ್ ಫುಟ್‌ಬಾಲ್ ಚಾಂಪಿಯನ್ ಇಟಲಿ ಮತ್ತು ದಕ್ಷಿಣ ಅಮೆರಿಕ ಚಾಂಪಿಯನ್ ಅರ್ಜೆಂಟಿನಾ ತಂಡಗಳು ಇಲ್ಲಿ ನಡೆಯಲಿರುವ ಫೈನಲೀಸಿಮಾದಲ್ಲಿ ಮುಖಾಮುಖಿಯಾಗಲಿವೆ. ಅರ್ಜೆಂಟಿನಾದ ಲಯೊನೆಲ್ ಮೆಸ್ಸಿ ಈ ಪಂದ್ಯದ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಹೋದ ವರ್ಷದ ಕೊಪಾ ಅಮೆರಿಕ ಫೈನಲ್‌ನಲ್ಲಿ ಅರ್ಜೆಂಟಿನಾ ತಂಡವು ಬ್ರೆಜಿಲ್ ವಿರುದ್ಧ ಗೆದ್ದಿತ್ತು. 28 ವರ್ಷಗಳ ನಂತರ ಪ್ರಶಸ್ತಿ ಜಯಿಸಿತ್ತು. ನಾಯಕ ಲಯೊನೆಲ್ ಮೆಸ್ಸಿ ಟ್ರೋಫಿಗೆ ಮುತ್ತಿಕ್ಕಿದ್ದರು. ಯುರೋಪಿಯನ್ ಫುಟ್‌ಬಾಲ್ ಸಂಘಟಿಸುವ ಯುಇಎಫ್‌ಎ ಮತ್ತು ದಕ್ಷಿಣ ಅಮೆರಿಕ ಫುಟ್‌ಬಾಲ್ ಆಯೋಜಕ ಕಾನ್‌ಮೆಬಾಲ್ ಫೈನಲೀಸಿ ಮಾದಲ್ಲಿ ಸ್ಪರ್ಧಿಸಲು ಒಡಂಬಡಿಕೆ ಮಾಡಿಕೊಂಡಿವೆ. ಇದೇ ಕ್ರೀಡಾಂಗಣದಲ್ಲಿ ಇಟಲಿ ಯೂರೋಪಿಯನ್ ಚಾಂಪಿಯನ್ ಆಗಿತ್ತು.

ಚಾಂಪಿಯನ್ಸ್ ಲೀಗ್: ಬೆಂಜೆಮಾಗೆ ಗೌರವ

ಪ್ಯಾರಿಸ್ (ರಾಯಿಟರ್ಸ್): ರಿಯಲ್ ಮ್ಯಾಡ್ರಿಡ್ ಫುಟ್‌ಬಾಲ್ ತಂಡದ ಕರೀಂ ಬೆಂಜೆಮಾ ಅವರು ಚಾಂಪಿಯನ್ಸ್ ಲೀಗ್ ಋತುವಿನ ಆಟಗಾರ ಎನಿಸಿಕೊಂಡಿದ್ದಾರೆ. ಯುಇಎಫ್‌ಎ ಮಂಗಳವಾರ ಈ ವಿಷಯ ತಿಳಿಸಿದೆ.

ಫ್ರಾನ್ಸ್‌ನ ಬೆಂಜೆಮಾ ಈ ಬಾರಿಯ ಟೂರ್ನಿಯಲ್ಲಿ 12 ಪಂದ್ಯಗಳಿಂದ 15 ಗೋಲು ಗಳಿಸಿದ್ದರು.

ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಟಿಟಿ ತಂಡಗಳ ಆಯ್ಕೆ ಮಾಡಿದ ಸಿಒಎ

ಸಾಯ್ ಸಮ್ಮತಿಗೆ ಕಾದಿರುವ ಮಹಿಳಾ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಆಡಲಿರುವ ಭಾರತ ಟೇಬಲ್ ಟೆನಿಸ್ ತಂಡಗಳನ್ನು ಮಂಗಳವಾರ ಭಾರತ ಟೇಬಲ್ ಟೆನಿಸ್ ಫೆಡರೇಷನ್ ಆಡಳಿತ ಸಮಿತಿಯು ಪ್ರಕಟಿಸಿತು. ಮಹಿಳಾ ತಂಡವನ್ನು ಅಂತಿಮಗೊಳಿಸಲು ಪ್ರಸ್ತುತ ನಿಯಮವೊಂದು ತೊಡಕಾಗಿದೆ. ಅದಕ್ಕಾಗಿ ಭಾರತ ಕ್ರೀಡಾ ಪ್ರಾಧಿಕಾರವು ತಂಡವನ್ನು ಅಂತಿಮಗೊಳಿಸಲು ಅನುಮತಿ ನೀಡುವಂತೆ ಸಿಒಎಗೆ ಪ್ರಸ್ತಾವ ಸಲ್ಲಿಸಿದೆ.

ಅಂತರರಾಷ್ಟ್ರೀಯ ಆಟಗಾರ್ತಿ ಅರ್ಚನಾ ಕಾಮತ್ ಅವರಿಗೆ ತಂಡದಲ್ಲಿ ಸ್ಥಾನ ಲಭಿಸಿದೆ. ವಿಶ್ವ ಟಿಟಿ ರ‍್ಯಾಂಕಿಂಗ್‌ನ ಮಹಿಳೆಯರ ಡಬಲ್ಸ್‌ನಲ್ಲಿ ಅರ್ಚನಾ ಅವರು ಮಣಿಕಾ ಬಾತ್ರಾ ಅವರೊಂದಿಗೆ ನಾಲ್ಕನೇ ಸ್ಥಾನದಲ್ಲಿದ್ದಾರೆ. ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಈ ಜೋಡಿಗೆ ಅಗ್ರರ‍್ಯಾಂಕ್ ಲಭಿಸಲಿದೆ. ಪದಕ ಜಯಿಸುವ ನೆಚ್ಚಿನ ಜೋಡಿಯೂ ಇದಾಗಿದೆ. ಆದರೆ, ಸದ್ಯದ ನಿಯಮದಲ್ಲಿ ಅಂತರರಾಷ್ಟ್ರೀಯ ರ‍್ಯಾಂಕಿಂಗ್‌ನ ಶೇ 30ರಷ್ಟರ ಅರ್ಹತೆಯನ್ನು ಅವರು ಗಳಿಸಿದ್ದಾರೆ. ಆದರೆ ರಾಷ್ಟ್ರೀಯ ರ‍್ಯಾಂಕಿಂಗ್‌ನ ಶೇ 50ರಷ್ಟು ಅಂಕಗಳ ಅರ್ಹತಾ ಮಟ್ಟವನ್ನು ಅವರು ಗಳಿಸಿಲ್ಲ.

ಟಿಟಿಎಫ್‌ಐನಲ್ಲಿ ಆಡಳಿತ ಸುಧಾರಣೆ ಮತ್ತು ಕ್ರೀಡಾ ನೀತಿಯನ್ನು ಜಾರಿಗೊಳಿಸಲು ಕಳೆದ ಫೆಬ್ರುವರಿಯಲ್ಲಿ ದೆಹಲಿ ಹೈಕೋರ್ಟ್ ಸೂಚನೆ ಮೇರೆಗೆ ನಿವೃತ್ತ ನ್ಯಾಯಮೂರ್ತಿ ಗೀತಾ ಮಿತ್ತಲ್ ನೇತೃತ್ವದ ಸಮಿತಿ ನೇಮಕ ಮಾಡಲಾಗಿದೆ. ಮಂಗಳವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು ಈ ವಿಷಯ ತಿಳಿಸಿದರು.

ಅರ್ಚನಾ

‘ಪ್ರಕಾಶ್ ಪಡುಕೋಣೆ–ರಾಹುಲ್ ದ್ರಾವಿಡ್ ಅಕಾಡೆಮಿಯಲ್ಲಿ ಕಳೆದ ಒಂದು ವಾರದಿಂದ ರಾಷ್ಟ್ರೀಯ ಶಿಬಿರ ನಡೆಸಲಾಗಿದೆ. ಐವರು ಪರಿಣತರ ಆಯ್ಕೆ ಸಮಿತಿಯು ಪುರುಷರ ಮತ್ತು ಮಹಿಳೆಯರ ತಂಡಗಳನ್ನು ಆಯ್ಕೆ ಮಾಡಿದೆ. ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತಕ್ಕೆ ಹೆಚ್ಚು ಪದಕಗಳನ್ನು ಜಯಿಸುವ ಸಾಮರ್ಥ್ಯವಿದೆ. ಆದರೆ ಸದ್ಯ ಇರುವ ಆಯ್ಕೆ ನಿಯಮಾವಳಿಯ ಪ್ರಕಾರ ಅವರ ಆಯ್ಕೆಗೆ ತೊಡಕಾಗಿದೆ. ಆದರೆ ಭಾರತದ ಪದಕ ಗೆಲುವಿನ ದೃಷ್ಟಿಯಿಂದ ಆಟಗಾರ್ತಿಗೆ ಅವಕಾಶ ನೀಡಲು ಸಾಯ್‌ಗೆ ಪ್ರಸ್ತಾವ ನೀಡಲಾಗಿದೆ. ಬುಧವಾರ ಸಾಯ್ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು’ ಎಂದರು.

ತಂಡಗಳು: ಪುರುಷರು: ಸನಿಲ್ ಶೆಟ್ಟಿ, ಅಚಂತ ಶರತ್ ಕಮಲ್, ಜಿ. ಸತ್ಯನ್, ಹರ್ಮಿತ್ ದೇಸಾಯಿ. ಕಾಯ್ದಿಟ್ಟ ಆಟಗಾರ: ಮನುಷ್ ಶಾ. ಮಹಿಳೆಯರು: ಶ್ರೀಜಾ ಅಕುಲಾ, ರೀತ್ ರಿಷ್ಯಾ, ಮಣಿಕಾ ಬಾತ್ರಾ, ಅರ್ಚನಾ ಕಾಮತ್ ಮತ್ತು ದಿಯಾ ಚಿತಳೆ (ಕಾಯ್ದಿಟ್ಟವರು)

ಡಬಲ್ಸ್‌ಗೆ ಆದ್ಯತೆ

‘ಇಲ್ಲಿಯವರೆಗೂ ಭಾರತದಲ್ಲಿ ಡಬಲ್ಸ್ ವಿಭಾಗಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿಲ್ಲ. ರಾಷ್ಟ್ರೀಯ ರ‍್ಯಾಂಕಿಂಗ್‌ನಲ್ಲಿ ಡಬಲ್ಸ್ ಆಯೋಜನೆ ನಿರ್ಲಕ್ಷಿತವಾಗಿದೆ. ಇದರಿಂದಾಗಿ ಸಿಂಗಲ್ಸ್‌ನಲ್ಲಿ ಆಡಿದವರೇ ಡಬಲ್ಸ್, ಮಿಶ್ರ ಡಬಲ್ಸ್‌ನಲ್ಲಿಯೂ ಜೊತೆಯಾಗಿ ಆಡುತ್ತಿದ್ದಾರೆ. ಆದರೆ ಡಬಲ್ಸ್, ಮಿಶ್ರಡಬಲ್ಸ್ ವಿಭಾಗಗಳಲ್ಲಿ ಪ್ರತ್ಯೇಕ ತಂಡಗಳನ್ನು ಕಟ್ಟುವ ಕೆಲಸಕ್ಕೆ ಈಗ ಚಾಲನೆ ನೀಡಲಾಗುತ್ತಿದೆ. ಅದಕ್ಕಾಗಿ ಪ್ರತ್ಯೇಕ ಕೋಚ್, ಮೂಲಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಇದರಿಂದಾಗಿ ಹೆಚ್ಚು ಆಟಗಾರರಿಗೆ ಅವಕಾಶ ಸಿಗುವುದರಿಂದ ಬೆಂಚ್ ಶಕ್ತಿಯೂ ವೃದ್ಧಿಸಲಿದೆ’ ಎಂದು ಸಿಒಎ ಪ್ರತಿನಿಧಿ ಎಸ್.ಡಿ. ಮೌದ್ಗಿಲ್ ಹೇಳಿದರು.

ನಿಯಮವೇನು?

ಪ್ರಸ್ತುತ ಆಯ್ಕೆ ನಿಯಮಾವಳಿಯ ಪ್ರಕಾರ ಆಟಗಾರರ ರಾಷ್ಟ್ರೀಯ ರ‍್ಯಾಂಕಿಂಗ್‌ನಲ್ಲಿ ಶೇ 50, ಅಂತರರಾಷ್ಟ್ರೀಯ ರ‍್ಯಾಂಕಿಂಗ್‌ನಲ್ಲಿ ಶೇ 30 ಮತ್ತು ಆಯ್ಕೆಗಾರರ ವಿವೇಚನೆ ಕೋಟಾದಲ್ಲಿ ಶೇ 20ರಷ್ಟು ಅಂಕಗಳನ್ನು ನಿಗದಿಪಡಿಸಲಾಗಿದೆ. ಆದರೆ, ಅರ್ಚನಾ ಕಳೆದ ಋತುವಿನಲ್ಲಿ ಹೆಚ್ಚು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಭಾಗವಹಿಸಿದ್ದಾರೆ. ಪದಕ ಸಾಧನೆಯನ್ನೂ ಮಾಡಿದ್ದಾರೆ. ಆದರೆ ರಾಷ್ಟ್ರೀಯ ಟೂರ್ನಿಗಳಲ್ಲಿ ಹೆಚ್ಚು ಆಡಿಲ್ಲ. ಮುಂಬರುವ ಅಕ್ಟೋಬರ್ 1ರಿಂದ ಪರಿಷ್ಕೃತ ನಿಯಮವನ್ನು ಜಾರಿಮಾಡಲಾಗುತ್ತಿದೆ. ಅದರ ಪ್ರಕಾರ 40;40;20ರ ಮಾದರಿಯನ್ನು ಜಾರಿಗೊಳಿಸಲಾಗುತ್ತಿದೆ.

ಟಿಟಿಎಫ್‌ಐಗೆ ಪಂಚವಾರ್ಷಿಕ ಯೋಜನೆ

‘ಭಾರತದಲ್ಲಿ ಟೇಬಲ್ ಟೆನಿಸ್ ಕ್ರೀಡೆಯ ಪ್ರತಿಭೆಗಳಿಗೆ ಸೂಕ್ತ ಪ್ರೋತ್ಸಾಹ ನೀಡಲು ಪಂಚವಾರ್ಷಿಕ ಯೋಜನೆಯನ್ನು ರೂಪಿಸಲಾಗಿದೆ. ಅದಕ್ಕಾಗಿ ಫೆಡರೇಷನ್‌ನಲ್ಲಿ ಹಳಿ ತಪ್ಪಿರುವ ಆಡಳಿತವನ್ನು ಸರಿದಾರಿಗೆ ತರಲಾಗುತ್ತಿದೆ. ನಮ್ಮ ಸಮಿತಿಯು ಇಲ್ಲಿ ಶಾಶ್ವತವಾಗಿರುವುದಿಲ್ಲ. ಎಷ್ಟು ಸಾಧ್ಯವೋ ಅಷ್ಟು ಬೇಗ ಅರ್ಹ ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ಆಡಳಿತ ಸೂತ್ರ ವಹಿಸುವುದು ಉದ್ದೇಶ. ಅದಕ್ಕಾಗಿ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಲಾಗಿದೆ’ ಎಂದು ಗೀತಾ ಮಿತ್ತಲ್ ಸ್ಪಷ್ಟಪಡಿಸಿದರು.

ಗೀತಾ ಮಿತ್ತಲ್

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಸೆಮಿಗೆ ಮಾರ್ಟಿನಾ

ಮೆಡ್ವೆಡೆವ್‌ಗೆ ಆಘಾತ ನೀಡಿದ ಸಿಲಿಚ್

ಪ್ಯಾರಿಸ್ (ಎಎಫ್‌ಪಿ/ಪಿಟಿಐ): ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಅಮೆರಿಕ ಓಪನ್ ಚಾಂಪಿಯನ್ ಮೆಡ್ವೆಡೆವ್, ಪುರುಷರ ಸಿಂಗಲ್ಸ್ ವಿಭಾಗದ ನಾಲ್ಕನೇ ಸುತ್ತಿನ ಪಂದ್ಯದಲ್ಲಿ 2–6, 3–6, 2–6ರಿಂದ ಕ್ರೊವೇಷ್ಯಾದ ಮರಿನ್ ಸಿಲಿಚ್ ಎದುರು ಎಡವಿದರು. ಫಿಲಿಪ್ ಚಾಟ್ರಿಯರ್ ಅಂಗಣದಲ್ಲಿ ಸೋಮವಾರ ರಾತ್ರಿ 1 ತಾಸು 45 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಗೆದ್ದ ಸಿಲಿಚ್ ಕ್ವಾರ್ಟರ್‌ಫೈನಲ್ ತಲುಪಿದರು. ಮೆಡ್ವೆಡೆವ್, 20ನೇ ಶ್ರೇಯಾಂಕದ ಕ್ರೊವೇಷ್ಯಾ ಆಟಗಾರನ ಎದುರು ನಿರಾಸೆಗೆ ಒಳಗಾದರು. ಸಿಲಿಚ್ ಐದು ಬಾರಿ ರಷ್ಯಾ ಆಟಗಾರನ ಸರ್ವ್ ಬ್ರೇಕ್ ಮಾಡಿದರು.

ಕ್ವಾರ್ಟರ್‌ಫೈನಲ್‌ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ 6-4, 6-4, 4-6, 7-6 (9/7)ರಿಂದ ಸ್ಪೇನ್‌ನ ಕಾರ್ಲೋಸ್ ಅಲ್ಕಾರಾಸ್ ಎದುರು ಗೆದ್ದರು.

ಮಹಿಳಾ ಸಿಂಗಲ್ಸ್‌ನಲ್ಲಿ ಕೆನಡಾದ ಲೇಲಾ ಫರ್ನಾಂಡೀಸ್ ಅವರಿಗೆ 6-2, 6-7 (3/7), 6-3ರಿಂದ ಆಘಾತ ನೀಡಿದ ಇಟಲಿಯ ಮಾರ್ಟಿನಾ ಟ್ರೆವಿಸನ್ ಮೊದಲ ಬಾರಿ ಟೂರ್ನಿಯ ಸೆಮಿಫೈನಲ್ ತಲುಪಿದರು. ಅಮೆರಿಕದ ಕೊಕೊ ಗಫ್ 7-5, 6-2ರಿಂದ ತಮ್ಮದೇ ದೇಶದ ಸ್ಲೋನ್ ಸ್ಟಿಫನ್ಸ್ ಅವರನ್ನು ಮಣಿಸಿ ನಾಲ್ಕರ ಘಟ್ಟ ಪ್ರವೇಶಿಸಿದರು.

ಸಾನಿಯಾ ಜೋಡಿಗೆ ಸೋಲು: ಭಾರತದ ಸಾನಿಯಾ ಮಿರ್ಜಾ ಮತ್ತು ಜೆಕ್ ಗಣರಾಜ್ಯದ ಲೂಸಿಯಾ ಹ್ರದೆಕಾ ಮಹಿಳಾ ಡಬಲ್ಸ್ ಮೂರನೇ ಸುತ್ತಿನ ಪಂದ್ಯದಲ್ಲಿ 4–6, 3–6ರಿಂದ ಅಮೆರಿಕದ ಜೆಸ್ಸಿಕಾ ಪೆಗುಲಾ ಮತ್ತು ಕೊಕೊ ಗಫ್ ಎದುರು ಸೋತರು.

ಮಾರ್ಟಿನಾ ಟ್ರೆವಿಸನ್ ಆಟದ ಪರಿ– ಎಎಫ್‌ಪಿ ಚಿತ್ರ

ಸೆಮಿಫೈನಲ್‌ಗೆ ಬೋಪಣ್ಣ ಜೋಡಿ

ಭಾರತದ ರೋಹನ್ ಬೋಪಣ್ಣ ಮತ್ತು ನೆದರ್ಲೆಂಡ್ಸ್‌ನ ಮ್ಯಾಟ್‌ವೆ ಮಿಡಲ್‌ಕೂಪ್ ಜೋಡಿಯು ಟೂರ್ನಿಯ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟಿದೆ. ಇದರೊಂದಿಗೆ ಕನ್ನಡಿಗ ಬೋಪಣ್ಣ ಅವರು ಏಳು ವರ್ಷಗಳ ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಸೆಮಿಫೈನಲ್ ತಲುಪಿದರು.

ಸೋಮವಾರ ರಾತ್ರಿ ನಡೆದ ಪುರುಷರ ಡಬಲ್ಸ್ ಕ್ವಾರ್ಟರ್‌ಫೈನಲ್ ಜಿದ್ದಾಜಿದ್ದಿನ ಪಂದ್ಯದಲ್ಲಿ ಬೋಪಣ್ಣ– ಮಿಡಲ್‌ಕೂಪ್ 4-6, 6-4, 7-6 (3)ರಿಂದ ಬ್ರಿಟನ್‌ನ ಲಾಯ್ಡ್ ಗ್ಲಾಸ್‌ಪೂಲ್ ಮತ್ತು ಹೆನ್ರಿ ಹೆಲಿವೊವಾರ ಅವರನ್ನು ಮಣಿಸಿದರು. 2015ರ ವಿಂಬಲ್ಡನ್ ಟೂರ್ನಿಯಲ್ಲಿ ಬೋಪಣ್ಣ ಕೊನೆಯ ಬಾರಿ ಸೆಮಿಫೈನಲ್ ತಲುಪಿದ್ದರು.

ಬೈದ್ಯನಾಥ್
ಅಸಲಿ ಆಯುರ್ವೇದ
ಪ್ರಾಸ್ಟ್ ಏಡ್
ಟ್ಯಾಬ್ಲೆಟ್
ಮೂತ್ರ ಧಾವಂತ
ರಾತ್ರಿ ಪದೇ ಪದೇ ಎದ್ದೇಳುವುದು
ಹಿಂಜರಿಕೆ



Doctor's Consultation:8448444935
www.baidyanath.co



ACTIVA

ನಿಂತು ಸಾಗುವುದು ನಮಗೆ ತಿಳಿಯದು, ಸುಸ್ತು ಎನ್ನುವುದು ನಮಗಿಲ್ಲ, ಮುಂದೆ ಸಾಗುತ್ತಲೇ ಇರುತ್ತೇವೆ. ಅದೇ ಕಾರಣದಿಂದ ಇಂದು ನಮ್ಮ ದೇಶ ಮತ್ತೆ ತನ್ನ ಕಾಲ ಮೇಲೆ ನಿಲ್ಲುತ್ತಿದೆ. ಹಾಗಿದ್ದರೆ ಬನ್ನಿ ಇಂದು ನಾವೆಲ್ಲರೂ ಭಾರತದ ಎರಡು ಚಕ್ರಗಳಾಗಿ ಭಾರತ ಮೇಲೆ ಏಳುತ್ತಿರುವುದು ಮಾತ್ರವಲ್ಲ, ಮತ್ತೆ ಗಗನದೆತ್ತರದಲ್ಲಿ ಹಾರುತ್ತಿದೆ ಎನ್ನುವುದನ್ನು ತೋರಿಸೋಣ.

ನೀವು ಮತ್ತು Activa, ಭಾರತದ ಎರಡು ಚಕ್ರಗಳು.

ಗರಿಷ್ಠ ಕ್ಯಾಶ್‌ಬ್ಯಾಕ್	ಕಡಿಮೆ ಡೌನ್ ಪೇಮೆಂಟ್	ಬಡ್ಡಿ ದರ
₹5000# ವರೆಗೆ	₹5999*	8.99%*

ಡೀಲರ್ ವಿಚಾರಣೆಗಳಿಗಾಗಿ ವಾಟ್ಸ್‌ಆಪ್ ಮಾಡಿ 7230032200 ಅಥವಾ QR ಕೋಡ್ ಸ್ಕ್ಯಾನ್ ಮಾಡಿ

1. ಇಯರ್‌ಫೋನ್ ಕನೆಕ್ಟ್ ಮಾಡಿ
2. QR Code ಸ್ಕ್ಯಾನ್ ಮಾಡಿ
3. ವೀಡಿಯೋ ಆನಂದಿಸಿ

ಹೆಚ್ಚಿನ ಮಾಹಿತಿಗಾಗಿ 7230032200 ಗೆ ಮಿಸ್ ಕಾಲ್ ನೀಡಿ.

BOOK ONLINE NOW!
www.honda2wheelersindia.com
CLICK BOOK RELAX
Honda 2Wheelers
BOOK NOW

#ನಮೂದಿಸಿದ ಕ್ಯಾಶ್‌ಬ್ಯಾಕ್ ಕೊಡುಗೆಯು ಕನಿಷ್ಠ ವಹಿವಾಟು ರೂ. 30000 ಮೇಲೆ 5% ಆಗಿದ್ದು , ರೂ. 5000 ವರೆಗೆ ಇರುತ್ತದೆ ಮತ್ತು ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್‌ಗೆ ಕಾರ್ಡ್ ವಿತರಕರು/ಬ್ಯಾಂಕ್‌ಗಳ ನೀತಿ ಪ್ರಕಾರ ಆಯ್ದ ಕ್ರೆಡಿಟ್ ಕಾರ್ಡ್‌ಗಳ ಮೂಲಕ EMI ವಹಿವಾಟಿನ ಮೇಲೆ ಅನ್ವಯಿಸಲಾಗುತ್ತದೆ. ಕೊಡುಗೆ ಮಾನ್ಯತೆಯು 1 ಏಪ್ರಿಲ್ 2022 ರಿಂದ 30 ಜೂನ್ 2022 ರ ವರೆಗೆ ಇರುತ್ತದೆ. *ಹಣಕಾಸು ಸ್ಕೀಮ್ ಕೊಡುಗೆಗಳು ಏಕಪಕ್ಷೀಯ ವಿವೇಚನೆಗೆ ಒಳಪಟ್ಟು ಆಯ್ದ ಪ್ರೊಫೈಲ್‌ಗಳಿಗೆ ಆಯ್ದ ಮಾಡೆಲ್‌ಗಳ ಮೇಲೆ ಆಯ್ದ ಆದ್ಯತೆಯ ಹಣಕಾಸು ಪಾಲುದಾರರ ಮೂಲಕ ಲಭ್ಯವಿದೆ ಮತ್ತು ಇದು ಹಣಕಾಸು ಕಂಪನಿ ಪಾಲಿಸಿಗೆ ಒಳಪಟ್ಟಿದೆ. ಆಯ್ದ ಡೀಲರ್‌ಶಿಪ್‌ಗಳಲ್ಲಿ ಸ್ಕೀಮ್‌ಗಳು 30 ಜೂನ್ 2022 ರ ವರೆಗೆ ಮಾತ್ರ ಲಭ್ಯವಿದೆ ಮತ್ತು ಮೊದಲು ನೋಟಿಸ್ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದು. ಯಾವುದೇ ಎರಡು ಕೊಡುಗೆಗಳನ್ನು ಒಟ್ಟಾಗಿ ಸೇರಿಸಲಾಗದು. ಕ್ರಿಯಾಶೀಲ ಚಿತ್ರಣದಲ್ಲಿ ಬಳಸಿದ ವಿವಿಧ ವೃತ್ತಿಯ ಚಿತ್ರಗಳು ಪ್ರತಿನಿಧಿತ್ವದ ಉದ್ದೇಶಕ್ಕಾಗಿ ಮಾತ್ರವಾಗಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿ ಲಭ್ಯವಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಉತ್ಪನ್ನದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda2wheelersindia.com

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSAR ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 25320623, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397; **Haiku Honda - DOMLUR:** 49656565, 9342432156; **INDIRANAGAR:** 9343796289, 080 - 41133737; **Dhruvdesh Honda - MEKHRI CIRCLE:** 40500700, 9972237311; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda - RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 26574467/68, 9844502222; **BANSHANKARI:** 9844502444, 8722279009; **R.R. NAGAR:** 9964388333, 9071174800; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BANNERAGHATTA RD:** 08068818881; **BTM LAYOUT:** 7353252007; **KANAKAPURA RD:** 08068818881; **PUTTENAHALLI:** 08068818881; **GOTTIGERE:** 08068818881; **VFM Honda - KR PURAM:** 49499299, 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 080-45510000, 7259030091; **MARTHAHALLI:** 080-67166600, 7259030093; **VARTHUR RD:** 8105597877, 9686573013; **GUNJUR:** 9606450642, 9606450641; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9900018516;; **KGF:** 08153-266606, 9900092115; **MULBAGAL:** 9008941044; **SRINIVASAPUR:** 8495956515; **Namma Honda - CHIKKABALLAPUR:** 9606060610, 9900071211; **CHINTAMANI:** 9606060620, 9606060690; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SLN Honda - SHIDLAGATTA:** 9986160961; **Century Honda - TUMKUR:** 0816-2279979, 9972433799; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 0816-2279979, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030; **KANAKAPURA:** 9606036053; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 9731414444.

For Bulk/Institutional enquiries, please write us at: institutionalsales@honda2wheelersindia.com